WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಅಕ್ಟೋಬರ್ ೨೭, ೨೦೧೧ (ಕಾರ್ತೀಕ ೫, ಶಕ ವರ್ಷ ೧೯೩೩)	ಸಂಚಿಕೆ ೪೨

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ENERGY SECRETARIAT

Sub : Transfer of 10.4 MW wind power capacity in favour of M/s M.K. Agro Tech Private Limited – reg.

Read :1. Government Order No. DE 41 NCE 2006 dated 20-04-2006.

2. Government Order No. EN 400 NCE 2010 (1) dated 27-09-2010.
3. Government Order No. EN 148 NCE 2011 dated 23-03-2011.
4. Government Order No. EN 148 NCE 2011 dated 04-07-2011.
5. Letter No. KRED/08/M.K.A.(10.4 MW)-J.N.I./2011/2053 dated 12/15-07-2011 received from the Managing Director, Karnataka Renewable Energy Development Limited, Bangalore.

Preamble:

In the Government order read at (1) above, permission has been accorded for implementation of 84.84 MW capacity Wind Power Project at Dharwad and Gadag Districts to M/s J.N. Investments & Trading Co. Pvt. Ltd.

In the Government Order read at (2) above, sanction has been accorded for enhancement of wind power capacity from 6.93 MW (part capacity of 84.84 MW) to 8.00 MW at Adavisomapura, Kalasapura, Malasamudra villages of Gadag District in favour of M/s. J. N. Investments & trading Co. Pvt. Ltd.

In the Government Order read at (3) above, sanction has been accorded for enhancement of wind power capacity from 8.00 MW to 15.2 MW at Adavisomapura, Kalasapura, Malasamudra villages of Gadag District in favour of M/s J. N. Investments & Trading Co. Pvt. Ltd.

In the Government Order reat at (4) above, sanction has been accorded for enhancement of wind power capacity from 15.2 MW to 27.2 MW in favour of M/s J. N. Investments & Trading Co. Pvt. Ltd., at Adavisomapura, Kalasapura, Malasamudra villages of Gadag District.

In the letter read at (5) above, the Managing Director, Karnataka Renewable Energy Development Limited, Bangalore, has recommended to the Government for transfer of 10.4 MW wind power capacity in favour of M/s M. K. Agro Tech Private Limited from out of the enhanced capacity of 27.2 MW of M/s J. N. Investments & Trading Co. Pvt. Ltd. At Sambapur, Papanashi and Adavisomapura villages of Gadag District.

The proposal has been examined in detail and hence the following order :-

Government Order No. EN 310 NCE 2011, Bangalore, Dated 22nd July 2011.

Government accords approval for transfer of 10.4 MW wind power capacity in favour of M/s M. K. Agro Tech Private Limited from out of the enhanced capacity of 27.2 MW of M/s J. N. Investments & Trading Co. Pvt. Ltd. At Sambapur, Papanashi and Adavisomapura villages of Gadag District as shown below :

Village Name	Taluk/district	Survey No.	MW	No. of WTG's	Extent of land in Acres
Sambapur		69/3B			
Sambapur		70/2A/2			
Sambapur		70/2B			
Sambapur		56/IB			
Sambapur		57/1			
Sambapur		60/2		800 KWX 13 Nos.	
Sambapur	Gadag	57/4	10.4		Approximately 3.5 Acres per WTG
Sambapur		54/1			
Sambapur		77/1			
Papnasi		82/2			
Papnasi		82/4A/2			
Papnasi		93/1+2			
Adavisomapur		86/5			

1. M/s M. K. Agro Tech Private Limited shall execute an agreement with Government within 45 (Forty five) days from the date of issue of this Order.
2. Karnataka Power Transmission corporation Limited to accord power evacuation and grid synchronization approvals.
3. **Wheeling & Banking** agreement is assigned to HESCOM. HESCOM shall execute the Wheeling & Banking agreement with M/s M. K. Agro Tech Private Limited.
4. The Government reserves the right to Cancel/modify this Order**.**

The other terms and conditions of the Government Order read at (1) above shall **IPSO FACTO** applicable.

By Order and in the name of the Governor of Karnataka,
Suresh.B.Krishnappanavar
Under Secretary to Government,
Energy Department

PR. 1945

ಆರ್ಥಿಕ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಮಟ್ಟದ ಮೌಲ್ಯವರ್ಧಿತ ತೆರಿಗೆ ಸಲಹಾ ಸಮಿತಿಗೆ ಹೊಸ ಸದಸ್ಯರ ಸೇರ್ಪಡೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಆಇ 142 ವಾತೆಸಿ 2005, ದಿನಾಂಕ 30–10–2006.
2. ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು, ಇವರ ಪತ್ರ ಸಂಖ್ಯೆ : ವ್ಯಾಟ್/ಸಿಆರ್–11/2003–04, ದಿನಾಂಕ : 17–01–2007.
3. ವಾಣಿಜ್ಯ ತೆರಿಗೆ ಅಪರ ಆಯುಕ್ತರ ಪತ್ರ ಸಂಖ್ಯೆ : ವ್ಯಾಟ್/ಸಿಆರ್–1/2009–10, ದಿನಾಂಕ : 24–01–2011.
4. ಸರ್ಕಾರಿ ಆದೇಶ ಸಂಖ್ಯೆ : ಆಇ 222 ವಾತೆಸಿ 2010 ದಿನಾಂಕ : 26–11–2010.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ : (3) ರಲ್ಲಿನ ಆದೇಶದಲ್ಲಿ ರಾಜ್ಯ ಮಟ್ಟದ ಮೌಲ್ಯವರ್ಧಿತ ತೆರಿಗೆ ಸಲಹಾ ಸಮಿತಿಯನ್ನು ಪುನರ್ ರಚಿಸಲಾಗಿರುತ್ತದೆ.

ಕರ್ನಾಟಕ ಟ್ಯಾಕ್ಸ್ ಕನ್ಸಲ್‌ಟೆಂಟ್ಸ್ ಅಸೋಸಿಯೇಷನ್, ಅಧ್ಯಕ್ಷರು, ಬೆಂಗಳೂರು, ರಾಜ್ಯ ಮಟ್ಟದ ಮೌಲ್ಯವರ್ಧಿತ ತೆರಿಗೆ ಸಮಿತಿಯಲ್ಲಿ ಸದಸ್ಯರನ್ನಾಗಿ ನೇಮಿಸಲು ವಾಣಿಜ್ಯ ತೆರಿಗೆ ಆಯುಕ್ತರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (3)ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ವಾಣಿಜ್ಯ ತೆರಿಗೆ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಇ 222 ವಾತೆಸಿ 2010 ಬೆಂಗಳೂರು, ದಿನಾಂಕ : 26–07–2011

ಪ್ರಸ್ತಾವನೆಯಲ್ಲಿ ಹೇಳಿರುವ ಪ್ರಕರಣಗಳ ಹಿನ್ನೆಲೆಯಲ್ಲಿ ಸರ್ಕಾರವು, ಅಧ್ಯಕ್ಷರು, ಕರ್ನಾಟಕ ಟ್ಯಾಕ್ಸ್ ಕನ್ಸಲ್‌ಟೆಂಟ್ಸ್ ಅಸೋಸಿಯೇಷನ್ಸ್, ಬೆಂಗಳೂರು, ಇವರನ್ನು ಕರ್ನಾಟಕ ರಾಜ್ಯ ಮಟ್ಟದ ಮೌಲ್ಯವರ್ಧಿತ ತೆರಿಗೆ ಸಲಹಾ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ಆರ್. ಚಂದ್ರಶೇಖರಾರಾಧ್ಯ
ಪೀಠಾಧಿಕಾರಿ
ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ–2)

ಪಿ.ಆರ್. 1946

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ :

1. ದಿನಾಂಕ : 27–04–2011ರಂದು ಪ್ರಧಾನ ಕಾರ್ಯದರ್ಶಿಗಳು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿ.
2. ನಿರ್ದೇಶಕರು (ತಾಂತ್ರಿಕ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಪತ್ರ ಸಂಖ್ಯೆ: ವಿತಂಇ/ಧಾಪ್ರಾವಿಕೇಂ/2011/108, ದಿನಾಂಕ 27–06–2011.

ಪ್ರಸ್ತಾವನೆ :

ಮೇಲಿನ ಕ್ರ.ಸಂ. (1) ರಲ್ಲಿ ಓದಲಾದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 27–04–2011 ರಂದು ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಆದ್ಯತೆಯ ಮೇಲೆ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಪರಿಶೀಲನೆ ಮತ್ತು ನೇಮಕಾತಿ ಸಮಿತಿಯನ್ನು ರಚಿಸಬೇಕೆಂದು ತೀರ್ಮಾನಿಸಲಾಗಿದೆ.

ಮೇಲಿನ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ನಿರ್ದೇಶಕರು (ತಾಂತ್ರಿಕ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಪತ್ರದಲ್ಲಿ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಸಮಿತಿಯನ್ನು ರಚಿಸಲು ತಜ್ಞರ ಹೆಸರುಗಳನ್ನು ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಿಯಇ 92 ವಿತ್ರಮ 2011, ಬೆಂಗಳೂರು, ದಿನಾಂಕ : 19–07–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಪರಿಶೀಲನೆ ಮತ್ತು ನೇಮಕಾತಿ ಸಮಿತಿಯನ್ನು ಈ ಕೆಳಕಂಡ ಪರಿಣಿತರು ಮತ್ತು ತಜ್ಞರುಗಳನ್ನೊಳಗೊಂಡ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ರಚಿಸಲಾಗಿದೆ.

Sl. No.	Name	
1	Prof. P. Iyamperumal, Executive Director and DG, Tamilnadu Science and Technology Centre & Science City, Planetarium Campus, Gandhi Mandapam Road, Chennai-25	Chairman
2	Director National Council for Science Museum, Block-GN, Sector-V, Bidhan Nagar, Kolkata-700 091.	Member
3	Director Visveswaraya Industrial & Technological Museum, Kasturba Road, Bangalore-560 001	Member
4	Shri Vasudeva Bhat Former Director, Visveswaraya Industrial & Technological Museum, #305, Vibhav, 9th Cross, 5th Main, BEML Layout, Ist Stage, Basaveshwaranagar, Bangalore-560 079.	Member
5	Dr. A. Venugopalan Former Scientist, Bhabha Atomic Research Centre (BARC), 404-A, Mulund Surnata CHS, Darga Road, Amar Nagar, Mulund (W), Mumbai-400 082	Member
6	Prof. S. Umapathy Department of I.P.C., Indian Institute of Science, Bangalore-560 012	Member
7	Member Secretary Dharwad Regional Science Centre & Registrar, Karnataka University, Pavate Nagar, Dharwad.	Member Secretary

ಈ ನೇಮಕಾತಿ ಸಮಿತಿಯು ಪರಿಶೀಲನಾ ಸಮಿತಿಯಾಗಿಯೂ ಸಹ ಕಾರ್ಯನಿರ್ವಹಿಸಲಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಭಾನುಮತಿ

ಪೀಠಾಧಿಕಾರಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1921

ಸಹಕಾರ ಸಚಿವಾಲಯ

ವಿಷಯ : 2004–05ನೇ ಸಾಲಿನಿಂದ 2010–11ರ ವರೆಗೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಹಾಗೂ ನೇಕಾರರಿಗೆ ಮೀನುಗಾರರಿಗೆ ನೀಡಿದ ಬಡ್ಡಿ ಸಹಾಯಧನ ಕ್ಲೇಮುಗಳಿಗೆ ಸಂಬಂಧಿಸಿದಂತೆ ಅಂತಿಮ ಗಡುವು ನಿಗದಿಗೊಳಿಸುವ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ 107 ಸಿಎಲ್ಎಸ್ 2004, ದಿನಾಂಕ 10–12–2004
2. ಸರ್ಕಾರಿ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ 105 ಸಿಎಲ್ಎಸ್ 2004, ದಿನಾಂಕ 26–08–2005
3. ಸರ್ಕಾರಿ ಆದೇಶ ಸಂಖ್ಯೆ: ಸಿಓ 44 ಸಿಎಲ್ಎಸ್ 2006, ದಿನಾಂಕ 17–06–2006
4. ಸರ್ಕಾರಿ ಆದೇಶ ಸಂಖ್ಯೆ: ಸಿಓ 46 ಸಿಎಲ್ಎಸ್ 2006, ದಿನಾಂಕ 09–06–2006
5. ಸರ್ಕಾರಿ ಆದೇಶ ಸಂಖ್ಯೆ: ಸಿಓ 66 ಸಿಎಲ್ಎಸ್ 2008, ದಿನಾಂಕ 27–08–2008
6. ಸರ್ಕಾರಿ ಆದೇಶ ಸಂಖ್ಯೆ: ಸಿಓ 67 ಸಿಎಲ್ಎಸ್ 2008, ದಿನಾಂಕ 27–08–2008
7. ಸರ್ಕಾರಿ ಆದೇಶ ಸಂಖ್ಯೆ: ಸಿಓ 68 ಸಿಎಲ್ಎಸ್ 2008, ದಿನಾಂಕ 27–08–2008
8. ಸರ್ಕಾರಿ ಆದೇಶ ಸಂಖ್ಯೆ: ಸಿಓ 56 ಸಿಎಲ್ಎಸ್ 2009, ದಿನಾಂಕ 06–05–2009
9. ಸರ್ಕಾರಿ ಆದೇಶ ಸಂಖ್ಯೆ: ಸಿಓ 57 ಸಿಎಲ್ಎಸ್ 2009, ದಿನಾಂಕ 06–05–2009
10. ಸರ್ಕಾರಿ ಆದೇಶ ಸಂಖ್ಯೆ: ಸಿಓ 58 ಸಿಎಲ್ಎಸ್ 2009, ದಿನಾಂಕ 06–05–2009
11. ಸರ್ಕಾರಿ ಆದೇಶ ಸಂಖ್ಯೆ: ಸಿಓ 70 ಸಿಎಲ್ಎಸ್ 2010(ಪಿ), ದಿನಾಂಕ 16–03–2010
12. ಸರ್ಕಾರಿ ಆದೇಶ ಸಂಖ್ಯೆ: ಸಿಓ 69 ಸಿಎಲ್ಎಸ್ 2010, ದಿನಾಂಕ 22–04–2010
13. ಸರ್ಕಾರಿ ಆದೇಶ ಸಂಖ್ಯೆ: ಸಿಓ 71 ಸಿಎಲ್ಎಸ್ 2010, ದಿನಾಂಕ 22–04–2010
14. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಸಿಆರ್‌ಡಿ/4/ಕೆಆರ್‌ಎಫ್/2008–09, ದಿನಾಂಕ 13–06–2011.

ಪ್ರಸ್ತಾವನೆ :

ಮೇಲೆ ಓದಲಾದ ಆದೇಶಗಳ ಪ್ರಕಾರ ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮುಖಾಂತರ ನೀಡಿದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳು ಹಾಗೂ ನೇಕಾರರಿಗೆ ಮತ್ತು ಮೀನುಗಾರರಿಗೆ ನೀಡಿದ ಸಾಲಗಳಿಗೆ ವಿವಿಧ ದರಗಳಲ್ಲಿ ಅಂದರೆ ಶೇ. 6, ಶೇ. 4 ಮತ್ತು ಶೇ. 3ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತದೆ. ಈ ಯೋಜನೆಗಳಡಿಯಲ್ಲಿ ಪಡೆದ ಸಾಲಗಳಿಗೆ ಸರ್ಕಾರದ ಬಡ್ಡಿ ಸಹಾಯಧನವು ಸಾಲಗಾರರು ಸುಸ್ತಿಯಾದರೂ ಸಹ ಸರ್ಕಾರದ ಬದ್ಧತೆಯು ಸಾಲದ ಗಡುವಿನ ಅವಧಿಗೆ ಸೀಮಿತವಾಗಿರುತ್ತದೆಂದು ನಿಗದಿಗೊಳಿಸಲಾಗಿದೆ. ಇದರಿಂದಾಗಿ ಸಹಕಾರ ಸಂಸ್ಥೆಗಳು ವಸೂಲಾತಿಯನ್ನು ಯಾವ ಸಮಯದಲ್ಲೂ ಮಾಡಿದರೂ ಸಹ ಸರ್ಕಾರದ ಸಹಾಯಧನವು ಸಾಲದ ಗಡುವಿನ ಅವಧಿಗೆ ದೊರೆಯುತ್ತದೆಂದೂ ಭಾವಿಸಿ ಹಿಂದಿನ ಸಾಲಗಳ ವಸೂಲಾತಿಯಲ್ಲಿ ಕುಂಠಿತವಾಗಿ ಸುಸ್ತಿ ಸಾಲಗಳ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು ಸಹಕಾರ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

2011–12ನೇ ಸಾಲಿನಿಂದ ಈ ಅಂಶವನ್ನು ಗಮನಿಸಿ ಸರ್ಕಾರದ ಬಡ್ಡಿ ಸಹಾಯದ ಯೋಜನೆಯಡಿಯಲ್ಲಿ ಸಾಲಗಾರರು ನಿಗದಿತ ಅವಧಿಯಲ್ಲಿ ಮರುಪಾವತಿಸಿದರೆ ಮಾತ್ರ ಈ ಸೌಲಭ್ಯವು ದೊರಕುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ಈ ಕಾರಣಗಳಿಂದಾಗಿ ಸರ್ಕಾರವು 2010–11ನೇ ಸಾಲಿನವರೆಗೆ ಪಡೆದು ಸುಸ್ತಿಯಾದ ಸಾಲಗಳನ್ನು ಸೆಪ್ಟೆಂಬರ್ 2011ರ ಒಳಗಾಗಿ ಮರುಪಾವತಿಸಿದಲ್ಲಿ ಮಾತ್ರ ಸರ್ಕಾರವು ನೀಡಿದ ಹಿಂದಿನ ವರ್ಷಗಳ ಎಲ್ಲಾ ಬಡ್ಡಿ ಸಹಾಯಧನದ ಯೋಜನೆಗಳಲ್ಲಿ ನೀಡಬೇಕಾದ ಸೌಲಭ್ಯವನ್ನು ಪಡೆಯಲು ಅರ್ಹರಾಗುತ್ತಾರೆಂದು ಹಾಗೂ ಈ ಅವಧಿಯೊಳಗೆ ಮರುಪಾವತಿ ಮಾಡದೇ ಸುಸ್ತಿದಾರರಾಗಿ ಮುಂದುವರೆದಲ್ಲಿ ಸರ್ಕಾರದ ಈ ಸೌಲಭ್ಯವು ದೊರೆಯುವುದಿಲ್ಲವೆಂದು ನಿರ್ಣಯಿಸಲಾಗಿದೆ.

ಆದುದರಿಂದ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಓ 129 ಸಿಎಲ್ಎಸ್ 2011, ಬೆಂಗಳೂರು, ದಿನಾಂಕ : 01–07–2011

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು 2004–05ನೇ ಸಾಲಿನಿಂದ 2010–11ನೇ ಸಾಲಿನವರೆಗೆ ಅಲ್ಪಾವಧಿ, ಮಾಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳಿಗೆ ನೇಕಾರಿಕೆ ಮತ್ತು ಮೀನುಗಾರಿಕೆ ಸಾಲಗಳಿಗೆ ಉಲ್ಲೇಖದಲ್ಲಿ ನಮೂದಿಸಿರುವ ಸರ್ಕಾರದ ಆದೇಶಗಳ ಮೇರೆಗೆ ನೀಡಿದ ಬಡ್ಡಿ ಸಹಾಯ ಧನದ ಸೌಲಭ್ಯವನ್ನು ಪಡೆಯಲು ದಿನಾಂಕ 30–09–2011ರ ಅಂತಿಮ ದಿನಾಂಕವೆಂದು ನಿಗದಿಪಡಿಸಲಾಗಿದೆ. ತದನಂತರ ಮರುಪಾವತಿಸಿದ ಸುಸ್ತಿ ಸಾಲಗಳಿಗೆ ಸಹಕಾರಿ ಸಂಘಗಳು/ಬ್ಯಾಂಕುಗಳು ವಿಧಿಸುವ ಸಾಮಾನ್ಯ ಬಡ್ಡಿ ದರಗಳು ಸಾಲ ಪಡೆದ ದಿನದಿಂದ ಅನ್ವಯವಾಗುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ.ಆರ್. 1922

ಇಂಧನ ಸಚಿವಾಲಯ

ವಿಷಯ : M/s KGK Power Pvt. Ltd. ಇವರಿಗೆ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಮುಂಡಾಜೆ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/SH-688/Mundaje/11, ದಿನಾಂಕ 29–12–2010/01–01–2011.

2) ದಿನಾಂಕ 25–01–2011ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನಿವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s KGK Power Pvt. Ltd. ಇವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಮುಂಡಾಜೆ ಗ್ರಾಮದ ಬಳಿ ಮುಂಡಾಜೆ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಮುಂಡಾಜೆ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s KGK Power Pvt. Ltd. ಇವರಿಗೆ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ : ಇಎನ್ 263 ಎನ್‌ಸಿಇ 2009, ಬೆಂಗಳೂರು, ದಿನಾಂಕ : 29–07–2011

M/s KGK Power Pvt. Ltd. ಇವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಮುಂಡಾಜೆ ಗ್ರಾಮದ ಬಳಿ ಮುಂಡಾಜೆ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಮುಂಡಾಜೆ ಕಿರು ಜಲ ವಿದ್ಯುತ್ ಯೋಜನೆಯನ್ನು (Weir Latitude: $13^0$02'4.59"-N Longitude: $75^0$23'25"-E Power House-Latitude: $13^0$01'.54.75"-N, Longitude: $75^0$22'58.33"-E) ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:

1. ಟ್ರಾನ್ಸ್‌ಮಿಷನ್ ಲೈನ್ ಯೋಜನೆಯ Evacuation ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಸಹಮತಿಯನ್ನು ಅವಶ್ಯಕತೆ ಇದ್ದಲ್ಲಿ ಪಡೆಯತಕ್ಕದ್ದು.

1(ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು

(ಆ)ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ)ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣಾ ಶುಲ್ಕವನ್ನು ತುಂಬುವುದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಷಿಯಲ್ ಕ್ಲೋಷರನ್ನು ಸಾಧಿಸತಕ್ಕದ್ದು.

4. ಫೈನಾನ್ಷಿಯಲ್ ಕ್ಲೋಷರನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.
9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ. ಆರ್. 1923

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಸಿ. ಮೃತ್ಯುಂಜಯಸ್ವಾಮಿ, ಮುಖ್ಯ ಇಂಜಿನಿಯರ್, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

ಓದಲಾಗಿದೆ : ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ/(ಜಿ)/ಸಿಟಿ/ಕ್ರೈಂ.28/2011, ದಿನಾಂಕ 03–08–2011.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 07 ಇಮುವಿ 2011, ಬೆಂಗಳೂರು, ದಿನಾಂಕ : 03–08–2011

ಶ್ರೀ ಸಿ. ಮೃತ್ಯುಂಜಯಸ್ವಾಮಿ, ಮುಖ್ಯ ಇಂಜಿನಿಯರ್, ಪ್ರಸ್ತುತ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅವರು ತಮ್ಮ ಸೇವಾವಧಿಯಲ್ಲಿ ಅಕ್ರಮವಾಗಿ ಅಪಾರ ಪ್ರಮಾಣದ ಆಸ್ತಿ ಪಾಸ್ತಿಗಳನ್ನು ಗಳಿಸಿದ್ದಾರೆಂಬ ಮಾಹಿತಿಯ ಮೇರೆಗೆ ಕರ್ನಾಟಕ ಲೋಕಾಯುಕ್ತದ ಪೋಲೀಸರು ದಿನಾಂಕ 22–07–2011 ರಂದು ಬೆಂಗಳೂರು ನಗರ, ಪದ್ಮನಾಭ ನಗರ, ಮುನೇಶ್ವರ ನಗರ, 2ನೇ ಮುಖ್ಯರಸ್ತೆ, ಮನೆ ನಂ. 7ರ 1ನೇ ಮಹಡಿಯ ಮನೆಯನ್ನು ಶೋಧಿಸಲಾಗಿ ಅಧಿಕಾರಿಯು ಅಪಾರ ಪ್ರಮಾಣದ ಸ್ಥಿರಾಸ್ತಿ, ಚಿನ್ನ, ಬೆಳ್ಳಿ, ವಾಹನಗಳು, ಜಮೀನು ಮತ್ತು ಇವುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪತ್ತೆ ಮಾಡಿರುವುದರಿಂದಲೂ;

ಶ್ರೀ ಸಿ. ಮೃತ್ಯುಂಜಯಸ್ವಾಮಿ, ಮುಖ್ಯ ಇಂಜಿನಿಯರ್, ಪ್ರಸ್ತುತ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅವರು ತಮ್ಮ ಆದಾಯದ ಬಲ್ಲ ಮೂಲಗಳಿಗಿಂತಲೂ ಹೆಚ್ಚಿನ ಆಸ್ತಿ ಪಾಸ್ತಿಗಳನ್ನು ಹೊಂದಿದ್ದು, ಇವರ ವಿರುದ್ಧ ವಿವರವಾದ ತನಿಖೆ ಅಗತ್ಯವಿದ್ದು, ತನಿಖೆಯನ್ನು ಕಾಯ್ದಿಟ್ಟು ಅವರನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವುದು ಅವಶ್ಯವೆಂದು ಕಂಡುಬಂದಿರುವುದರಿಂದಲೂ;

ಶ್ರೀ ಸಿ. ಮೃತ್ಯುಂಜಯಸ್ವಾಮಿ, ಮುಖ್ಯ ಇಂಜಿನಿಯರ್, ಪ್ರಸ್ತುತ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ದಿನಾಂಕ 22–07–2011 ರಿಂದ 48 ಗಂಟೆಗಳಿಗೂ ಹೆಚ್ಚು ಕಾಲ ನ್ಯಾಯಾಂಗ ಬಂಧನದಲ್ಲಿದ್ದುದರಿಂದ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಯ ನಿಯಮ 10(2)(ಎ) ರನ್ವಯ ಅಂದಿನಿಂದಲೇ ಅಮಾನತ್ತಿನಲ್ಲಿದ್ದಂತೆ ಪರಿಗಣಿಸಬೇಕಾಗಿರುವುದರಿಂದಲೂ;

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಅಅ)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಶ್ರೀ ಸಿ. ಮೃತ್ಯುಂಜಯಸ್ವಾಮಿ, ಮುಖ್ಯ ಇಂಜಿನಿಯರ್, ಪ್ರಸ್ತುತ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅವರ ವಿರುದ್ಧ ಲೋಕಾಯುಕ್ತ ತನಿಖೆಯನ್ನು ಕಾಯ್ದಿಟ್ಟು ದಿನಾಂಕ 22–07–2011 ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರನ್ನು ಈ ಮೂಲಕ ಸೇವೆಯಿಂದ ಅಮಾನತ್ತಿನಲ್ಲಿಡುತ್ತದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಸಿ. ಮೃತ್ಯುಂಜಯಸ್ವಾಮಿ, ಮುಖ್ಯ ಇಂಜಿನಿಯರ್, ಪ್ರಸ್ತುತ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅವರು ಕೆ.ಸಿ.ಎಸ್.ಆರ್. ನಿಯಮ 98 ರನ್ವಯ ಜೀವನಾಧಾರ ಭತ್ಯೆಯನ್ನು ಪಡೆಯುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಸಿ. ಮೃತ್ಯುಂಜಯಸ್ವಾಮಿ, ಮುಖ್ಯ ಇಂಜಿನಿಯರ್, ಪ್ರಸ್ತುತ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅವರು ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿಯಿಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಶ್ರೀ ಸಿ. ಮೃತ್ಯುಂಜಯಸ್ವಾಮಿ, ಮುಖ್ಯ ಇಂಜಿನಿಯರ್, ಪ್ರಸ್ತುತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅವರ ಸ್ಥಾನಕ್ಕೆ ತಾತ್ಕಾಲಿಕವಾಗಿ ಬದಲಿ ವ್ಯವಸ್ಥೆಯನ್ನು ಮಾಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರು ಕ್ರಮವನ್ನು ಕೈಗೊಳ್ಳುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ. ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಸೇವೆಗಳು–3)

ಪಿ.ಆರ್. 1924

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಸಿ. ಚಂದ್ರಯ್ಯ, ನಿವೃತ್ತ ಉಪ ಕಾರ್ಯದರ್ಶಿ, ಇವರ ವಿರುದ್ಧದ ಇಲಾಖಾ ವಿಚಾರಣೆ ಬಗ್ಗೆ.

ಓದಲಾಗಿದೆ : 1)ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 19 ಸೇಇವಿ 2010, ದಿನಾಂಕ 6–6–2011

2) ಶ್ರೀ ಕೆ. ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರ ಪತ್ರ ದಿನಾಂಕ 15–6–2011

3) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಆಸು–ರಾ.ವಿ.ವೇ–2) ಇವರ ಪತ್ರ ದಿನಾಂಕ 24–6–2011

ಪ್ರಸ್ತಾವನೆ :

ಶ್ರೀ ಸಿ. ಚಂದ್ರಯ್ಯ, ನಿವೃತ್ತ ಉಪ ಕಾರ್ಯದರ್ಶಿ, ಇವರು ಈ ಹಿಂದೆ ಸಿಆಸು ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ 12ನೇ ಹಣಕಾಸು ಆಯೋಗದ ಸಹಾಯಧನದ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ವಿಷಯಕ್ಕೆ ಸಂಬಂಧಪಟ್ಟಂತೆ ಕಡತ ಸಂಖ್ಯೆ ಸಿಆಸುಇ 31 ಅಸಪ 2009, ದಿನಾಂಕ 22–1–2010ರ ಆದೇಶದಲ್ಲಿ ಸರ್ಕಾರದ ವಿವಿಧ ಇಲಾಖೆಗಳ/ಕಛೇರಿಗಳಿಗೆ 12ನೇ ಹಣಕಾಸು ಆಯೋಗದ ಸಹಾಯಧನದ ಅಡಿಯಲ್ಲಿ 2009–10ನೇ ಸಾಲಿನಲ್ಲಿ ಕಛೇರಿ ಆಧುನೀಕರಣಕ್ಕಾಗಿ ಒಟ್ಟು ರೂ. 1,89,08,000–00 ಗಳ ಅನುದಾನವನ್ನು ಮಂಜೂರು ಮಾಡಿದ್ದು, ಸದರಿ ಆದೇಶದ ಪುಟ ಸಂಖ್ಯೆ 4, ಕ್ರಮ ಸಂಖ್ಯೆ 4ರಲ್ಲಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಇಲಾಖೆಯ ಕಾರ್ಯಯೋಜನೆ ಹಾಗೂ ತರಬೇತಿ ಕೇಂದ್ರಗಳಿಗೆ ಸರ್ವೆ ಉಪಕರಣಗಳ ಖರೀದಿ ಬಗ್ಗೆ "Electronic Digital total station with std accessories make SOKKIA, Model:SET 510 & KPS 11 PT Single tilting range pole prism with the accessories for the above said total station (3 prism for each Digital Station) ಒಟ್ಟು ರೂ. 66,58,000/– ಗಳನ್ನು ಮಂಜೂರು ಮಾಡಲಾಗಿದೆ. ಈ ಸರ್ಕಾರದ ಆದೇಶದ ಪ್ರತಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ)ಯವರ ಕಛೇರಿಯಲ್ಲಿ ದಿನಾಂಕ 25–1–2010 ರಂದು ಸ್ವೀಕರಿಸಲಾಗಿದೆ. ಅದಲ್ಲದೇ, ಇದೇ ಆದೇಶದ ಇನ್ನೊಂದು ಪ್ರತಿ ದಿನಾಂಕ 9–2–2010 ರಂದು ಸ್ವೀಕರಿಸಲಾಗಿದೆ ಎಂದು ವರದಿ ಮಾಡುತ್ತಾ ದಿನಾಂಕ 25–1–2010 ರಂದು ಸ್ವೀಕೃತವಾದ ಮೂಲ ಪ್ರತಿಯಲ್ಲಿ ಸರ್ವೆ ಉಪಕರಣಗಳನ್ನು ಮೆ॥ ಎನ್‌ಟೆಕ್ ಡಿಸಿಮ್ಯಾಪ್ ಸಿಸ್ಟಮ್ಸ್, ಬೆಂಗಳೂರು. ಇವರಿಂದಲೇ ಖರೀದಿಸಬೇಕೆಂದು ನಿರ್ದೇಶಿಸಲಾಗಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ 9–2–2010 ರಂದು ಸ್ವೀಕರಿಸಲಾದ ಮೂಲ ಪ್ರತಿಯಲ್ಲಿ ಮೆ॥ ಎನ್‌ಟೆಕ್ ಡಿಸಿಮ್ಯಾಪ್ ಸಿಸ್ಟಮ್ಸ್, ಬೆಂಗಳೂರು ಸಂಸ್ಥೆಯಿಂದಲೇ ಖರೀದಿಸಬೇಕೆಂಬ ಬಗ್ಗೆ ಪ್ರಸ್ತಾಪವಿರುವುದಿಲ್ಲ. ಸರ್ಕಾರದ ದಿನಾಂಕ 22–1–2010 ರ ಆದೇಶದ ಎರಡೂ ಮೂಲ ಪ್ರತಿಗಳನ್ನು ಗಮನಿಸಲಾಗಿ/ಪರಿಶೀಲಿಸಲಾಗಿ ಆದೇಶದ 4ನೇ ಪುಟದ ಕ್ರಮ ಸಂ. 4 ರಲ್ಲಿ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಸಂಸ್ಥೆಯ ಹೆಸರನ್ನು ಹೆಚ್ಚಿಗೆ ಸೇರಿಸಿ ನಮೂದಿಸಿ ವ್ಯತ್ಯಾಸವನ್ನುಂಟು ಮಾಡಿ ದಿನಾಂಕ 22–1–2010ರ ಸರ್ಕಾರದ ಆದೇಶವನ್ನು ದುರುದ್ದೇಶದಿಂದ ದುರ್ಲಾಭ ಪಡೆಯಲು ತಿದ್ದುಪಡಿ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಹಾಗೂ ಈ ಘಟನೆಯಲ್ಲಿ ಅಧಿಕಾರಿಯವರು ಭಾಗಿಯಾಗಿರಬಹುದೆಂದು ಕಂಡು ಬಂದಿದ್ದರಿಂದ ಶ್ರೀ ಸಿ. ಚಂದ್ರಯ್ಯ ಇವರಿಗೆ ಆರೋಪಗಳಲ್ಲಿನ ಸತ್ಯಾಸತ್ಯತೆಯನ್ನು ತಿಳಿಯುವ ದೃಷ್ಟಿಯಿಂದ ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮ 11 ಮತ್ತು 11–ಎ ರೊಡನೆ ಓದಿಕೊಂಡಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 214 ರಂತೆ ಶ್ರೀ ಕೆ. ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮ 11 (5) (ಸಿ) ಅನ್ವಯ ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ರಾಜಕೀಯ ವಿಶ್ರಾಂತಿ ವೇತನ–2) ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿತ್ತು.

ಮೇಲೆ ಕ್ರ.ಸಂ. 2 ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಕೆ. ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರು ಪ್ರಸ್ತುತ ಮಂಗಳೂರಿನ ಖಾಯಂ ಜನತಾ ನ್ಯಾಯಾಲಯದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸದರಿ ಇಲಾಖಾ ವಿಚಾರಣೆಯ ವಿಚಾರಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದಾರೆ. ಮೇಲೆ ಕ್ರ.ಸಂ. (3)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ ಸಿ.ಆ.ಸು. ಇಲಾಖೆ (ರಾಜಕೀಯ ವಿಶ್ರಾಂತಿ ವೇತನ–2) ಇವರು ತಮಗೆ ಅಧಿಕ ಕಾರ್ಯ ಒತ್ತಡದಿಂದಾಗಿ ಮಂಡನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವುದು ಕಷ್ಟವಾಗಿರುವುದರಿಂದ ಅವರ ಬದಲಿಗೆ ಬೇರೆ ಮಂಡನಾಧಿಕಾರಿಯನ್ನು ನೇಮಿಸಲು ಕೋರಿದ್ದಾರೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 19 ಸೇಇವಿ 2010, ಬೆಂಗಳೂರು, ದಿನಾಂಕ : 01–08–2011

ಶ್ರೀ ಸಿ. ಚಂದ್ರಯ್ಯ, ನಿವೃತ್ತ ಉಪ ಕಾರ್ಯದರ್ಶಿ, ಇವರ ವಿರುದ್ಧ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ದಿನಾಂಕ 6–6–2011ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರ ನಿಯಮ 11 ಮತ್ತು 11 (ಎ) ರೊಡನೆ ಓದಿಕೊಂಡಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 214ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ವಿಚಾರಣಾಧಿಕಾರಿಯಾಗಿ ನೇಮಿಸಿದ್ದ ಶ್ರೀ ಕೆ. ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ನ್ಯಾಯಾಧೀಶರ "ಬದಲಾಗಿ" ಶ್ರೀ ಎಂ. ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಇದೇ ನಿಯಮಾವಳಿಗಳ ನಿಯಮ 11 (5) (ಸಿ) ಅನ್ವಯ ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ರಾಜಕೀಯ ವಿಶ್ರಾಂತಿ ವೇತನ–2) ಇವರ ಬದಲಿಗೆ ಶ್ರೀ ಅಬ್ದುಲ್ ರೆಹಮಾನ್, ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಆ.ಸು.) ಕರ್ನಾಟಕ ಸರ್ಕಾರದ ಸಚಿವಾಲಯ ಅವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶಿಸಿದೆ.

ವಿಚಾರಣಾಧಿಕಾರಿಗಳು ಆಪಾದಿತರ ಮೇಲಿನ ಆರೋಪಗಳಿಗೆ ವಿಚಾರಣೆಯನ್ನು ನಡೆಸಿ ಆರೋಪ ಸಾಬೀತಾಗಿರುವ ಅಥವಾ ಸಾಬೀತಾಗದೇ ಇರುವ ಅಭಿಪ್ರಾಯಗಳನ್ನು ಒಳಗೊಂಡ ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರಿಯಾದ ಸರ್ಕಾರಕ್ಕೆ 3 ತಿಂಗಳುಗಳ ಒಳಗಾಗಿ ಸಲ್ಲಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ. ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸು ಇಲಾಖೆ (ಸೇವೆಗಳು–3)

ಪಿ.ಆರ್. 1925

PERSONNEL AND ADMINISTRATIVE REFORMS SECRETARIAT

CORRIGENDUM

NO. DPAR 18 SeVuNya 2011, BANGALORE, DATED : 23-7-2011

The words "Arbitrators" appearing in the order portion of the G.O. No. DPAR 18 SeVuNya 2011 (P) in condition number (c) is deleted and it may deemed to have always been deleted.

By Order and in the name of the Governor of Karnataka,

K.P. MOHANRAJ

Deputy Secretary to Government,

DPAR (Services).

P.R. No. 1926

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ನಅಇ 105 ಬೆಂಭೂಸ್ವಾ 2008, ಬೆಂಗಳೂರು, ದಿನಾಂಕ : 25–7–2011.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಡಾ: ಕೆ.ಶಿವರಾಮಕಾರಂತ ಬಡಾವಣೆಗೆ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಪರಿಹಾರವನ್ನಾಗಿ ನಗದು ಬದಲಾಗಿ ಅಭಿವೃದ್ಧಿಗೊಳಿಸಿರುವ ನಿವೇಶನಗಳನ್ನು ನೀಡುವ ಹೊಸ ನೀತಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ : ನಅಇ 105 ಬೆಂಭೂಸ್ವಾ 2008, ದಿನಾಂಕ : 3–11–2008 ರ ಆದೇಶದಲ್ಲಿನ ಕ್ರಮ ಸಂಖ್ಯೆ : 3 ರಲ್ಲಿ **"** ಭೂಮಾಲೀಕರ ಕೋರಿಕೆಯಂತೆ ಭಾಗಶಃ ಪರಿಹಾರಧನ ಮತ್ತು ಅಭಿವೃದ್ಧಿಪಡಿಸಿದ ನಿವೇಶನ ಎರಡನ್ನೂ ಪಡೆಯಲು ಅರ್ಹರಿರುತ್ತಾರೆ**"** ಎಂದು ಇರುವುದನ್ನು ದಿನಾಂಕ : 3–11–2008 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಬದಲಾಯಿಸಿ ಈ ಕೆಳಕಂಡಂತೆ ಮಾರ್ಪಡಿಸಿ ಆದೇಶಿಸಲಾಗಿದೆ :–

"ಹೊಸ ಪರಿಹಾರ ನೀತಿಯಡಿ ಅಭಿವೃದ್ಧಿಪಡಿಸಿದ ಪ್ರದೇಶವನ್ನು ಪರಿಹಾರವನ್ನಾಗಿ ಪಡೆದ ಭೂಮಾಲೀಕರುಗಳು ಪ್ರೋತ್ಸಾಹದಾಯಕ ಯೋಜನೆಯಡಿ ನಿವೇಶನಗಳನ್ನು ಪಡೆಯಲು ಅರ್ಹರಿರುವುದಿಲ್ಲವೆಂದು ಹಾಗೂ ಭೂಸ್ವಾಧೀನ ಕಾಯ್ದೆ 1894 ರ ಕಲಂ 18 ರಡಿ ಹೆಚ್ಚಿನ ಪರಿಹಾರ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ**"**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಪ್ರೇಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್.ನಂ. 1927

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ : ಶಿಇ/115/ಯೋಯೋಕ/2011, ಬೆಂಗಳೂರು, ದಿನಾಂಕ : 20–7–2011.

ವಿಷಯ : ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಿರುವ ಆದೇಶಕ್ಕೆ ತಿದ್ದುಪಡಿ ಕುರಿತು.

ಉಲ್ಲೇಖ : ಸರ್ಕಾರದ ಆದೇಶ ಸಂ : ಇಡಿ 135 ಯೋಯೋಕ 2010, ದಿನಾಂಕ : 2–7–2010.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಲ್ಲಿನ ಷರತ್ತುಗಳಲ್ಲಿನ 5ನೇ ಷರತ್ತಿನಲ್ಲಿ 250 (ಕಲಾ ಮತ್ತು ಆಂಗ್ಲ) ಎಂಬುದಕ್ಕೆ ಬದಲಾಗಿ 250 (ಆಂಗ್ಲ ಮಾತ್ರ) ಎಂದು ತಿದ್ದಿ ಓದಿಕೊಳ್ಳತಕ್ಕದ್ದು. ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ.ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ಯೋಜನೆ).

ಪಿ.ಆರ್.ನಂ. 1928

HORTICULTURE SECRETARIAT

Sub : Implementation of "Scheme for Integrated Farming in Coconut for Productivity/Improvement with Coconut Development Board Assistance (100% CDB)"-Refunding unspent balance reg.

Read :
1. Directorate of Cashewnut and Cocoa Development letter No. CO.10/D03/05-06, dated 19-7-2010.
2. CDB letter No. 1272/2007/ Kar-Tech dated 29-11-2010.
3. CDB letter No. 0102(31)/TMOC-Mkg-2006 dated 30-9-2010.
4. G.O. No. AHD 53 HPP 2009, dated 17-8-2009.
5. Director of Horticulture letter No. ತೋಇ/ತೋಬೆ/ಸತೋಅ–2/la/2010-11, dated : 7-5-2011.

Preamble:

1. Coconut Development Board and Directorate of Cashewnut and Cocoa Development, Government of India have requested the Department of Horticulture to refund the unspent balance under different schemes over years as detailed below :

Sl. No.	Particulars	Unspent Balance in Rs.	Remarks
1	The project for establishment of Demonstration-cum-training center for coconut products at Javaranahalli, Mandya district.	21,89,000	Coconut Development Board has withdrawn the installation of virgin coconut oil unit and has requested to refund the balance of Rs. 21,89,000 by way of Demand Draft drawn in favour of the Chairman, Coconut Development Board payable at Ernakulam vide CDB letter read at (2) above.
2	Installation of farm level copra dryers	4,20,000	The scheme provides for 25% subsidy subject to a maximum of Rs. 10,000/unit for establishing farm level copra dryers. However, the actual cost of the dryer workout to be nearly Rs. 50,000 and hence, the scheme has not been attractive. CDB in its letter read at (3) above has requested to refund the unspent balance.
3	Cashew and Cocoa Development Programme	11,818	An unspent balance to the tune of Rs. 11,818/- has remained with Director of Horticulture and the Directorate of Cashewnut and Cocoa Development, Kochi has informed the Internal Audit Party as well as the AG's audit are raising objections regarding the non settlement of the release made for the previous years and Rs. 11,818 may be refunded in the form of Demand Draft drawn in favour of Director, Directorate of Cashewnut and Cocoa Development, Kochi vide letter read at (1) above.
	Total	26,20,818	

2. The Director of Horticulture vide letter read at (5) above has requested to permit to refund the said amount to the concerned institutions and to meet the same from. Out of the allocation made under the Head of Account 2401-00-108-2-35-100 during 2011-12.

3. This has been examined and hence this Order.

GOVERNMENT ORDER NO. AHD 208 HPP 2011, BANGALORE, DATED 26-7-2011.

Government is pleased to permit the Director of Horticulture to draw a sum of Rs. 26,20,818/- (Rupees Twenty Six Lakhs Twenty Thousand Eight Hundred and Eighteen Only) and refund the same in favour of Coconut Development Board and Directorate of Cashewnut and Cocoa Development as detailed below ;

1	Chairman, Coconut Development Board	(a)	21,89,000
		(b)	4,20,000
		Total	26,09,000
2	Director, Directorate of Cashewnut and Cocoa Development		11,818
	Grand Total		26,20,818

2. The expenditure may be met out of the allocation during 2011-12 under the Head of Account 2401-00-108-2-35-100 (Financial Assistance/Relief) for the said purpose for which Rs. 26,20,818/- has been released herewith.

3. This order issues with the concurrence of Finance Department vide its Note ಆಇ 34 ವೆ:4/2011, dated 27-6-2011 and of Internal Financial Advisor, Agriculture and Horticulture Department vide its Note No. ಕೃತೋಇ 25 ಆಂಆಸ 2011, dated 19-7-2011

By Order and in the name of the Governor of Karnataka,

B.C. PRAKASH

Under Secretary to Government,

Horticulture Department.

P.R. No. 1929

ಕಂದಾಯ ಸಚಿವಾಲಯ

ವಿಷಯ : 2011ನೇ ಸಾಲಿನಲ್ಲಿ ರಾಜ್ಯದಲ್ಲಿ ಭಾರಿ ಮಳೆಯಿಂದ ಆಗಿರುವ ಹಾನಿಗಳಿಗೆ ತುರ್ತು ಪರಿಹಾರ ಕ್ರಮ ಕೈಗೊಳ್ಳಲು, ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳಿಂದ ಬಂದಿರುವ ಬೇಡಿಕೆ ಪತ್ರಗಳು.

ಪ್ರಸ್ತಾವನೆ :

2011 ನೇ ಸಾಲಿನಲ್ಲಿ ಮುಂಗಾರು ಮಳೆಯಿಂದ, ರಾಜ್ಯದಲ್ಲಿ ಉಂಟಾಗಿರುವ ಹಾನಿಗಳಿಗೆ ಜಿಲ್ಲಾಧಿಕಾರಿಗಳು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮುಂಗಾರು ಮಳೆಯಿಂದ ರಾಜ್ಯದಲ್ಲಿ ಉಂಟಾಗಿರುವ ಹಾನಿಗಳಿಗೆ ಹಾಗೂ ಕುಡಿಯುವ ನೀರಿನ ಪೂರೈಕೆಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 190 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ : 21–7–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂಗಾರು ಮಳೆಯಿಂದ ರಾಜ್ಯದಲ್ಲಿ ಉಂಟಾಗಿರುವ ಹಾನಿಗಳಿಗೆ ಹಾಗೂ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು, ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ಬಿಡುಗಡೆ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)
1	ಬಳ್ಳಾರಿ	75.00
2	ಬಿಜಾಪುರ	100.00
3	ಚಿಕ್ಕಬಳ್ಳಾಪುರ	50.00
4	ಚಿತ್ರದುರ್ಗ	100.00
5	ಗದಗ್	100.00
6	ಮಡಿಕೇರಿ	100.00
7	ರಾಯಚೂರು	75.00
8	ರಾಮನಗರ	50.00
9	ತುಮಕೂರು	50.00
10	ಉಡುಪಿ	100.00
11	ದಕ್ಷಿಣ ಕನ್ನಡ	100.00
12	ಉತ್ತರ ಕನ್ನಡ	100.00
	ಒಟ್ಟು	1000.00

(ರೂ. ಒಂದು ಸಾವಿರ ಲಕ್ಷಗಳು ಮಾತ್ರ)

1. ಮೇಲಿನಂತೆ ಬಿಡುಗಡೆ ಮಾಡಿದ ಹಣವನ್ನು ಈ ಕೆಳಕಂಡಂತೆ ಆದ್ಯತೆಯ ಮೇರೆಗೆ ಉಪಯೋಗಿಸುವುದು.
   - ಅ) ಮಾನವ / ಪ್ರಾಣಿ ಜೀವಹಾನಿ.
   - ಆ) ಮನೆ ಹಾನಿ
   - ಇ) ಬೆಳೆ ಹಾನಿ
   - ಈ) ಕುಡಿಯುವ ನೀರಿನ ವ್ಯವಸ್ಥೆ
   - ಉ) ಜಾನುವಾರುಗಳ ಸಂರಕ್ಷಣೆ
   - ಊ) ಹಾನಿಗೊಳಗಾದ ಮೂಲಭೂತ ಸೌಕರ್ಯಗಳಿಗೆ ತುರ್ತು ರಿಪೇರಿ.
2. ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು.
3. ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್ / ಎನ್‌ಸಿಸಿಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.
4. ಪ್ರಕೃತಿ ವಿಕೋಪದಿಂದ ಆದಂತಹ ವಿಪತ್ತು ಹಾನಿಗೆ ಮಾತ್ರ ಪರಿಹಾರ ನೀಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯಿಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು 2011–12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245–02–110–0–01–100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ. ಆ.ಇ 628 ವೆಚ್ಚ–7/ 2011, ದಿನಾಂಕ : 19–7–2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಎಸ್. ಮದ್ಭಾವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.ನಂ. 1930 ಕಂದಾಯ ಇಲಾಖೆ. (ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2).

ಒಳಾಡಳಿತ ಸಚಿವಾಲಯ

ವಿಷಯ : ಮಂಗಳೂರು ನಗರದ ನವಮಂಗಳೂರು ಬಂದರು ಪಣಂಬೂರಿನಲ್ಲಿರುವ ವಿದೇಶಿ ನೋಂದಣಿ ಕಛೇರಿಯನ್ನು ಹಾಗೂ ಬಜಪೆ ವಿಮಾನ ನಿಲ್ದಾಣ ಇಮ್ಮಿಗ್ರೇಷನ್ ಕಛೇರಿಯನ್ನು ಪೊಲೀಸ್ ಕಮಿಷನರ್, ಮಂಗಳೂರು ನಗರ ಇವರ ಅಧೀನಕ್ಕೆ ಒಳಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶದ ಸಂಖ್ಯೆ : ಹೆಚ್‌ಟಿಡಿ 254 ಪಿಒಪಿ 2001, ದಿನಾಂಕ : 14–3–2002.
2. ಸರ್ಕಾರದ ಆದೇಶದ ಸಂಖ್ಯೆ : ಹೆಚ್‌ಡಿ 246 ಪಿಒಪಿ 2007, ದಿನಾಂಕ : 25–1–2010.
3. ಸರ್ಕಾರದ ಅಧಿಸೂಚನೆ ಸಂಖ್ಯೆ : ಹೆಚ್‌ಡಿ 136 ಪಿಒಪಿ 2010, ದಿನಾಂಕ : 5–6–2010.
4. ಸರ್ಕಾರದ ಆದೇಶದ ಸಂಖ್ಯೆ : ಹೆಚ್‌ಡಿ 138 ಪಿಒಪಿ 2010, ದಿನಾಂಕ : 9–7–2010.
5. ಮಹಾನಿರ್ದೇಶಕರು ಹಾಗೂ ಆರಕ್ಷಕ ಮಹಾನಿರೀಕ್ಷಕರು, ಕರ್ನಾಟಕ ಇವರ ಪತ್ರ ಸಂಖ್ಯೆ : ಆರ್.ಎಲ್.ಎನ್ (4)47ಬಿ/2000–01, ದಿನಾಂಕ : 20–9–2010.

ಪ್ರಸ್ತಾವನೆ :

ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, ರಾಜ್ಯ ಗುಪ್ತವಾರ್ತೆ, ಬೆಂಗಳೂರು ಇವರ ನಿಯಂತ್ರಣದಲ್ಲಿದ್ದ ನವ ಮಂಗಳೂರು ಬಂದರು ಘಟಕ, ಮಂಗಳೂರು, ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಂತಹ ಒಬ್ಬ ಪೊಲೀಸ್ ಇನ್‌ಸ್ಪೆಕ್ಟರ್, ಒಬ್ಬ ಸಬ್ ಇನ್‌ಸ್ಪೆಕ್ಟರ್, ಒಬ್ಬ ಹೆಡ್ ಕಾನ್‌ಸ್ಟೇಬಲ್ ಮತ್ತು ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಇವರುಗಳನ್ನು ದಿನಾಂಕ : 14–3–2002 ರಿಂದ ಜಾರಿಗೆ ಬರುವಂತೆ ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಇವರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸಲು ಆದೇಶಿಸಲಾಗಿತ್ತು.

ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಹಾನಗರದಲ್ಲಿ ದಿನಾಂಕ : 25–1–2010 ರಿಂದ ಜಾರಿಗೆ ಬರುವಂತೆ ಪೊಲೀಸ್ ಕಮಿಷನರೇಟ್ ಅನ್ನು ಉಪ ಪೊಲೀಸ್ ಮಹಾ ನಿರೀಕ್ಷಕರ ನೇತೃತ್ವದಲ್ಲಿ ಅದರಲ್ಲಿ ಸೂಚಿಸಿದ ಷರತ್ತುಗಳ ಮೇಲೆ ಸ್ಥಾಪಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಮೇಲೆ ಕ್ರ.ಸಂ. (3) ರಲ್ಲಿ ಓದಲಾದ ಸರ್ಕಾರಿ ಅಧಿಸೂಚನೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಿಂದ 17 ಪೊಲೀಸ್ ಠಾಣೆಗಳು ಮಂಗಳೂರು ನಗರದ ಪೊಲೀಸ್ ಕಮೀಷನರ್ ಇವರ ವ್ಯಾಪ್ತಿಗೊಳಪಟ್ಟಿರುತ್ತದೆ. ಅವುಗಳಲ್ಲಿ, ಪಣಂಬೂರು ಪೊಲೀಸ್ ಠಾಣೆಯು ಒಂದಾಗಿದ್ದು, ಈ ಠಾಣೆ ವ್ಯಾಪ್ತಿಗೆ ಒಳಪಡುವ ನವ ಮಂಗಳೂರು ಬಂದರಿನ ವಿದೇಶಿ ನೋಂದಣಿ ಘಟಕವು ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಅಧೀಕ್ಷಕರ ಆಡಳಿತ ನಿಯಂತ್ರಣದಲ್ಲಿರುತ್ತದೆ.

ಮೇಲೆ ಕ್ರ.ಸಂ. (5) ರಲ್ಲಿ ಓದಲಾದ ಪತ್ರದಲ್ಲಿ, ಮಹಾನಿರ್ದೇಶಕರು ಹಾಗೂ ಆರಕ್ಷಕ ಮಹಾನಿರೀಕ್ಷಕರು, ಬೆಂಗಳೂರು ಇವರು ಹಡಗುಗಳ ಆಗಮನ ಮತ್ತು ನಿರ್ಗಮನ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿರುವ ನವಮಂಗಳೂರು ಬಂದರಿನ ವಿದೇಶಿ ನೋಂದಣಿ ಘಟಕವನ್ನು ಹಾಗೂ ಸಿಬ್ಬಂದಿಗಳನ್ನು ಪ್ರಸ್ತುತ ಇರುವ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕದಿಂದ ಬೇರ್ಪಡಿಸಿ, ಮಂಗಳೂರು ನಗರದ ಪೊಲೀಸ್ ಆಯುಕ್ತರ ವ್ಯಾಪ್ತಿಗೆ ಒಳಪಡಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಇದಲ್ಲದೆ, ಬಜ್ಪೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಮಂಗಳೂರು ಕಮಿಷನರ್ ವ್ಯಾಪ್ತಿಗೆ ಒಳಪಡುವ ಬಜ್ಪೆ ಠಾಣಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಹಿನ್ನೆಲೆಯಲ್ಲಿ, ನವಮಂಗಳೂರು ಬಂದರಿನ ವಿದೇಶಿ ನೋಂದಣಿ ಘಟಕವನ್ನು ಮತ್ತು ಸಿಬ್ಬಂದಿಯನ್ನು ಹಾಗೂ ಪ್ರಸ್ತುತ ತಾತ್ಕಾಲಿಕ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಜ್ಪೆ ವಿಮಾಣ ನಿಲ್ದಾಣ ಇಮಿಗ್ರೇಷನ್ ಕಛೇರಿಯನ್ನು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕದಿಂದ ಬೇರ್ಪಡಿಸಿ, ಮಂಗಳೂರು ನಗರ ಪೊಲೀಸ್ ಕಮಿಷನರ್ ಆಡಳಿತ ವ್ಯಾಪ್ತಿಗೆ ಒಳಪಡಿಸುವುದು ಅಗತ್ಯವಾಗಿರುತ್ತದೆ ಎಂದು ತಿಳಿಸಿ ಈ ಬಗ್ಗೆ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 01 ಪಿಎಂಎಸ್ 2011, ಬೆಂಗಳೂರು, ದಿನಾಂಕ : 25–7–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನವಮಂಗಳೂರು ಬಂದರಿನ ವಿದೇಶಿ ನೋಂದಣಿ ಘಟಕವನ್ನು ಮತ್ತು ಸಿಬ್ಬಂದಿಯನ್ನು ಹಾಗೂ ಪ್ರಸ್ತುತ ತಾತ್ಕಾಲಿಕ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಜಪೆ ವಿಮಾಣ ನಿಲ್ದಾಣ ಇಮಿಗ್ರೇಷನ್ ಕಛೇರಿಯನ್ನು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕದಿಂದ ಬೇರ್ಪಡಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮಂಗಳೂರು ನಗರ ಪೊಲೀಸ್ ಕಮಿಷನರ್ ಆಡಳಿತ ವ್ಯಾಪ್ತಿಗೆ ಒಳಪಡಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ.

(ರಹದಾರಿ ಮತ್ತು ವಿದೇಶಿಯರು).

ಪಿ.ಆರ್.ನಂ. 1931

ಕಂದಾಯ ಸಚಿವಾಲಯ

ವಿಷಯ : ಶ್ರೀಮತಿ ಆಶಾ ಪರ್ವೀನ್, ಹಿಂದಿನ ತಹಶೀಲ್ದಾರ್, ದೇವನಹಳ್ಳಿ ಮತ್ತು ಇತರರ ಅಮಾನತ್ತಿನ ಅವಧಿಯಲ್ಲಿ 6 ತಿಂಗಳ ನಂತರದ ಅವಧಿಗೆ ಕೆ.ಸಿ.ಎಸ್. ನಿಯಮ 98(1) ರನ್ವಯ ಜೀನನಾಧಾರ ಭತ್ಯೆಯನ್ನು ಶೇ 75 ರಷ್ಟಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಕಂಇ 24 ಎಡಿಇ 2010, ದಿನಾಂಕ : 22–7–2010.
2. ಸರ್ಕಾರದ ಆದೇಶ ಸಂಖ್ಯೆ : ಕಂಇ 24 ಎಡಿಇ 2010, ದಿನಾಂಕ : 26–4–2011.
3. ಅಮಾನತ್ತುಗೊಂಡ ಮನವಿದಾರರ ದಿನಾಂಕ : 1–5–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿಯ ಸೋಮತ್ತನಹಳ್ಳಿ ಗ್ರಾಮದ ಸರ್ಕಾರಿ ಜಮೀನು ಸ.ನಂ. 148 ರಲ್ಲಿ ಶ್ರೀ ಕೃಷ್ಣಪ್ಪ ಬಿನ್ ಮಾರಪ್ಪ ಮತ್ತು ಶ್ರೀಮತಿ ನಾರಾಯಣಮ್ಮ ಕೋಂ ಮುನಿಶ್ಯಾಮಪ್ಪ ಇವರಿಗೆ ಅಕ್ರಮವಾಗಿ ಸಾಗುವಳಿ ಚೀಟಿ ನೀಡಿ ಹಕ್ಕು ದಾಖಲೆ ಮಾಡಿರುವುದು ಹಾಗೂ ದೇವನಹಳ್ಳಿ ತಾಲ್ಲೂಕು ಕುಂದಾಣ ಹೋಬಳಿ ತೈಲಗೆರೆ ಗ್ರಾಮದ ಸರ್ಕಾರಿ ಜಮೀನು ಸ.ನಂ. 105 ರಲ್ಲಿ 3.02 ಎಕರೆ ಖಾತೆ ಮಾಡಿರುವುದರಿಂದ ಈ ಕೆಳಕಂಡ ಅಧಿಕಾರಿ ಮತ್ತು ನೌಕರರನ್ನು ಸಿಸಿಎ ನಿಯಮ 10(1) (ಡಿ) & (3) ರನ್ವಯ ವಿಚಾರಣೆ ಬಾಕಿ ಇರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

1. ಶ್ರೀಮತಿ ಆಶಾ ಪರ್ವೀನ್, ಹಿಂದಿನ ತಹಶೀಲ್ದಾರ್, ದೇವನಹಳ್ಳಿ ಹಾಲಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ, ಬೆಂಗಳೂರು.
2. ಶ್ರೀ ನಾರಾಯಣಪ್ಪ, ಹಾಲಿ ಉಪ ತಹಶೀಲ್ದಾರ್, ಚನ್ನರಾಯಪಟ್ಟಣ ಹೋಬಳಿ.
3. ಶ್ರೀ ವೆಂಕಟಸ್ವಾಮಿ, ಪ್ರ.ದ.ಸ. ವಿಷಯ ನಿರ್ವಾಹಕರು, ಹಾಲಿ ತಾಲ್ಲೂಕು ಕಛೇರಿ, ದೇವನಹಳ್ಳಿ ತಾಲ್ಲೂಕು.
4. ಶ್ರೀ ವಿ.ಜಿ. ಅಂಗಡಿ, ಹಾಲಿ ಆರ್.ಆರ್. ಶಿರಸ್ತೇದಾರ್ ತಾಲ್ಲೂಕು ಕಛೇರಿ, ದೇವನಹಳ್ಳಿ.
5. ಶ್ರೀ ಪಿ.ಎನ್. ಗೋಪಾಲಕೃಷ್ಣ, ಹಾಲಿ ರಾಜಸ್ವ ನಿರೀಕ್ಷಕರು, ಕುಂದಾಣ.
6. ಶ್ರೀ ಜಿ. ರಾಮಯ್ಯ, ಹಾಲಿ ಗ್ರಾಮಲೆಕ್ಕಿಗರು, ಕಾರಹಳ್ಳಿ ವೃತ್ತ.
7. ಶ್ರೀ ಎಂ. ಗೋವಿಂದಯ್ಯ, ತಾಲ್ಲೂಕು ಮೋಜಣಿದಾರರು ಹಾಲಿ ತಾಲ್ಲೂಕು, ಸರ್ವೇಯರ್, ತಾಲ್ಲೂಕು ಕಛೇರಿ, ದೇವನಹಳ್ಳಿ. ಅಮಾನತ್ತಿನ ಅವಧಿಯಲ್ಲಿ ಅಧಿಕಾರಿ/ನೌಕರರು ನಿಯಮಾನುಸಾರ 501 ಜೀವನಾಧಾರ ಭತ್ಯೆ ಪಡೆಯುತ್ತಿರುತ್ತಾರೆ.

ಓದಲಾದ ಕ್ರ.ಸಂ. (2) ರಲ್ಲಿ ದಿನಾಂಕ : 26–4–2011 ರಲ್ಲಿ ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳು ಮತ್ತು ಮಂಡನಾಧಿಕಾರಿಗಳನ್ನು ನೇಮಿಸಲಾಗಿದೆ.

ಓದಲಾದ ಕ್ರ.ಸಂ. (3) ರಲ್ಲಿ ಮೇಲ್ಕಂಡ ಅಮಾನತ್ತಿನಲ್ಲಿ ಅಧಿಕಾರಿ/ನೌಕರರ ಮನವಿಯಲ್ಲಿ 6 ತಿಂಗಳಿಗಿಂತ ಹೆಚ್ಚಾಗಿರುತ್ತದೆ. ಅಂದರೆ ದಿನಾಂಕ : 22–7–2010 ರಿಂದ 21–1–2011 ಕ್ಕೆ 6 ತಿಂಗಳ ಅವಧಿ ಪೂರ್ಣಗೊಂಡಿರುತ್ತದೆ. ಆದ್ದರಿಂದ ನಂತರದ ಅವಧಿಗೆ ಅಂದರೆ 22–1–2011ರ ನಂತರದ ಅವಧಿಗೆ ಕೆ.ಸಿ.ಎಸ್.ಆರ್. ನಿಯಮ 98(1) ರನ್ವಯ ಜೀವನಾಧಾರ ಭತ್ಯೆಯನ್ನು ಶೇ. 75 ರಷ್ಟು ಹೆಚ್ಚಿಸಲು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 24 ಎಡಿಇ 2010 (ಭಾ), ಬೆಂಗಳೂರು, ದಿನಾಂಕ : 22–7–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಧಿಕಾರಿ/ನೌಕರರಿಗೆ ದಿನಾಂಕ : 22–1–2011ರ ನಂತರದ ಅಮಾನತ್ತಿನ ಅವಧಿಗೆ ಕೆ.ಸಿ.ಎಸ್.ಆರ್. ನಿಯಮ 98(1) ರನ್ವಯ ಜೀವನಾಧಾರ ಭತ್ಯೆಯನ್ನು ಶೇ. 75 ರಷ್ಟನ್ನು ಮಂಜೂರು ಮಾಡಿ ಆದೇಶಿಸಿದೆ.

1. ಶ್ರೀಮತಿ ಆಶಾ ಪರ್ವೀನ್, ಹಿಂದಿನ ತಹಶೀಲ್ದಾರ್, ದೇವನಹಳ್ಳಿ ಹಾಲಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ, ಬೆಂಗಳೂರು.
2. ಶ್ರೀ ನಾರಾಯಣಪ್ಪ, ಹಾಲಿ ಉಪ ತಹಶೀಲ್ದಾರ್, ಚನ್ನರಾಯಪಟ್ಟಣ ಹೋಬಳಿ.
3. ಶ್ರೀ ವೆಂಕಟಸ್ವಾಮಿ, ಪ್ರ.ದ.ಸ. ವಿಷಯ ನಿರ್ವಾಹಕರು, ಹಾಲಿ ತಾಲ್ಲೂಕು ಕಛೇರಿ, ದೇವನಹಳ್ಳಿ ತಾಲ್ಲೂಕು.
4. ಶ್ರೀ ವಿ.ಜಿ. ಅಂಗಡಿ, ಹಾಲಿ ಆರ್.ಆರ್. ಶಿರಸ್ತೇದಾರ್ ತಾಲ್ಲೂಕು ಕಛೇರಿ, ದೇವನಹಳ್ಳಿ.
5. ಶ್ರೀ ಪಿ.ಎನ್. ಗೋಪಾಲಕೃಷ್ಣ, ಹಾಲಿ ರಾಜಸ್ವ ನಿರೀಕ್ಷಕರು, ಕುಂದಾಣ.
6. ಶ್ರೀ ಜಿ. ರಾಮಯ್ಯ, ಹಾಲಿ ಗ್ರಾಮಲೆಕ್ಕಿಗರು, ಕಾರಹಳ್ಳಿ ವೃತ್ತ.
7. ಶ್ರೀ ಎಂ. ಗೋವಿಂದಯ್ಯ, ತಾಲ್ಲೂಕು ಮೋಜಣಿದಾರರು ಹಾಲಿ ತಾಲ್ಲೂಕು, ಸರ್ವೇಯರ್, ತಾಲ್ಲೂಕು ಕಛೇರಿ, ದೇವನಹಳ್ಳಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.ನಂ. 1932 ಕಂದಾಯ ಇಲಾಖೆ. (ಸೇವೆಗಳು–3).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಚಿಕ್ಕರಾಜು ಸರ್ಕಾರದ ಅಧೀನ ಕಾರ್ಯದರ್ಶಿ ಹಾಗೂ ಶ್ರೀ ಡಿ. ಧನಂಜಯ, ಸಹಾಯಕರು ರವರ ವಿರುದ್ಧ ಇಲಾಖಾ ವಿಚಾರಣೆ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : (1) ನೋಟೀಸ್ ಸಂಖ್ಯೆ: ಸಿಆಸುಇ 211 ಸೇಇವಿ 2007 ಮತ್ತು ಸಿಆಸುಇ 211 ಸೇಇವಿ 2007 (1), ದಿನಾಂಕ: 26–05–2008.

(2) ಶ್ರೀ ಬಿ. ಚಿಕ್ಕರಾಜು, ಅಧೀನ ಕಾರ್ಯದರ್ಶಿ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ: 22–7–2008.

(3) ಶ್ರೀ ಡಿ. ಧನಂಜಯ, ಸಹಾಯಕ ಇವರ ಪ್ರತಿ ರಕ್ಷಣಾ ಹೇಳಿಕೆ ದಿನಾಂಕ: 25–8–2008.

(4) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 211 ಸೇಇವಿ 2007, ದಿನಾಂಕ: 27–11–2008.

(5) ವಿಚಾರಣಾಧಿಕಾರಿ ಹಾಗೂ ನಿವೃತ್ತ ನ್ಯಾಯಾಧೀಶರು, ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 11/10/2010.

(6) ಕಂದಾಯ ಇಲಾಖೆಯ ಅ.ಟಿ. ಸಂಖ್ಯೆ ಕಂಇ 19 ಎಲ್‌ಆರ್‌ಎ 2009, ದಿನಾಂಕ: 11–04–2011.

ಪ್ರಸ್ತಾವನೆ:

ಶ್ರೀ ಚಿಕ್ಕರಾಜು, ಸರ್ಕಾರದ ಅಧೀನ ಕಾರ್ಯದರ್ಶಿ, ಹಾಗೂ ಶ್ರೀ ಡಿ. ಧನಂಜಯ, ಸಹಾಯಕರು, ಇವರುಗಳು ಕಂದಾಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಜಮೀನು ಖರೀದಿಸಲು ಅನುಮತಿ ನೀಡಿದ ಅವಧಿಯನ್ನು ವಿಸ್ತರಿಸಲು ಕೋರಿ ಬಂದ ಅರ್ಜಿಯನ್ನು ವಿಲೇವಾರಿ ಮಾಡಲು ಅಕ್ರಮ ಸಂಭಾವನೆ ಕೇಳಿದ ಭೂಸುಧಾರಣೆ ಕಾಯಿದೆ ಸಡಿಲಿಸಿ ಜಮೀನು ಖರೀದಿಸಲು ಅನುಮತಿ ನೀಡಲು ಅಕ್ರಮ ಸಂಭಾವನೆ ಕೇಳಿ ಹಾಗೂ ಅನಗತ್ಯ ವಿಳಂಬ ಮಾಡಿದ ಆರೋಪಗಳಿಗಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ಮತ್ತು 11 (ಎ) ರ ಅನ್ವಯ ದಿನಾಂಕ: 26–05–2008 ರಂದು ನೋಟೀಸು ಜಾರಿಗೊಳಿಸಲಾಯಿತು. ಆಪಾದಿತ ಅಧಿಕಾರಿ ನೌಕರರ ಉಲ್ಲೇಖ 2 ಮತ್ತು 3 ರ ಮನವಿಗಳಲ್ಲಿ ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದಾರೆ. ಅಧಿಕಾರಿ ನೌಕರರ ಪ್ರತಿರಕ್ಷಣಾ ಹೇಳಿಕೆಯನ್ನು ಪರಿಶೀಲಿಸಿ, ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯುವ ಕಾರಣದಿಂದಾಗಿ ಉಲ್ಲೇಖ (4) ರ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ 5 ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾಧಿಕಾರಿಯವರು ವಿಚಾರಣಾ ವರದಿ ಸಲ್ಲಿಸಿದ್ದು, ವಿಚಾರಣಾಧಿಕಾರಿಯವರು ನೀಡಿರುವ ವಿಚಾರಣಾ ವರದಿಯಲ್ಲಿ ಶ್ರೀ ಚಿಕ್ಕರಾಜು, ಅಧೀನ ಕಾರ್ಯದರ್ಶಿ, ಇವರ ವಿರುದ್ಧ ಮಾಡಿರುವ 4 ಆರೋಪಗಳು ಹಾಗೂ ಶ್ರೀ ಧನಂಜಯ, ಸಹಾಯಕ ಇವರ ವಿರುದ್ಧ ಮಾಡಿರುವ ಆರೋಪವು ಸಾಬೀತಾಗಿಲ್ಲವೆಂದು ವರದಿ ನೀಡಲಾಗಿದೆ. ವಿಚಾರಣಾಧಿಕಾರಿಗಳು ನೀಡಿರುವ ವರದಿಯಲ್ಲಿ ಆರೋಪಗಳು ಸಾಬೀತಾಗಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ ವಿಚಾರಣಾಧಿಕಾರಿಯವರ ಅಭಿಪ್ರಾಯವನ್ನು ಒಪ್ಪಬಹುದೆಂದು ಕಂದಾಯ ಇಲಾಖೆಯು ಮೇಲೆ ಕ್ರಮ ಸಂಖ್ಯೆ 6 ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಅಭಿಪ್ರಾಯ ನೀಡಿದೆ. ಪ್ರಕರಣದಲ್ಲಿ ವಿಚಾರಣಾಧಿಕಾರಿಯ ವರದಿ ಮತ್ತು ತತ್ಸಂಬಂಧ ವಾಸ್ತವಾಂಶಗಳನ್ನು ಪರಿಶೀಲಿಸಿದ ಸರ್ಕಾರವು ವಿಚಾರಣಾ ವರದಿಯನ್ನು ಒಪ್ಪಿಕೊಂಡು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 211 ಸೇಇವಿ 2007, ಬೆಂಗಳೂರು, ದಿ: 29–07–2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಶ್ರೀ ಬಿ. ಚಿಕ್ಕರಾಜು, ಸರ್ಕಾರದ ಅಧೀನ ಕಾರ್ಯದರ್ಶಿ, ಹಾಗೂ ಶ್ರೀ ಡಿ. ಧನಂಜಯ, ಸಹಾಯಕರು ಇವರುಗಳ ವಿರುದ್ಧ ದಿನಾಂಕ: 27–06–2008 ರ ನೋಟೀಸ್‌ನಲ್ಲಿ ನೀಡಲಾದ ದೋಷಾರೋಪಣೆಗಳಿಂದ ಅಧಿಕಾರಿ/ನೌಕರರನ್ನು ದೋಷ ಮುಕ್ತರನ್ನಾಗಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು–3)

ಪಿ.ಆರ್. 1934

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಟಿ. ಅಶೋಕ್, ಸರ್ಕಾರದ ಅಧೀನ ಕಾರ್ಯದರ್ಶಿ ಮತ್ತು ಶ್ರೀ ದೇವರಾಜ್, ಶಾಖಾಧಿಕಾರಿ ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ – ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯವರನ್ನು ನೇಮಿಸುವ ಬಗ್ಗೆ – ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : (1) ಆದೇಶ ಸಂಖ್ಯೆ ಸಿಆಸುಇ 6 ಸೇಇವಿ 2008, ದಿನಾಂಕ: 16–09–2010.

(2) ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ಪತ್ರ ದಿನಾಂಕ: 26–5–2011.

(3) ಅಧೀನ ಕಾರ್ಯದರ್ಶಿ (ವೆಚ್ಚ–5) ಇವರ ಟಿಪ್ಪಣಿ ದಿನಾಂಕ 28–5–2011.

ಪ್ರಸ್ತಾವನೆ:

ಶ್ರೀ ಟಿ. ಅಶೋಕ್, ಸರ್ಕಾರದ ಅಧೀನ ಕಾರ್ಯದರ್ಶಿ ಮತ್ತು ಶ್ರೀ ದೇವರಾಜ್, ಶಾಖಾಧಿಕಾರಿ ಇವರುಗಳು ಈ ಹಿಂದೆ ಆರ್ಥಿಕ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಪಟ್ಟ ಪ್ರಕರಣದಲ್ಲಿ ಆರ್ಥಿಕ ಇಲಾಖೆಯಲ್ಲಿ ತಮ್ಮ ಮೇಲಾಧಿಕಾರಿಗಳು ತೆಗೆದುಕೊಂಡ ತೀರ್ಮಾನಕ್ಕೆ ವ್ಯತಿರಿಕ್ತವಾಗಿ ಹಾಗೂ ಆಡಳಿತ ಇಲಾಖೆಯ ಪ್ರಸ್ತಾವನೆಗೆ ಅನುಕೂಲಕರವಾಗುವ ರೀತಿಯಲ್ಲಿ ಸರ್ಕಾರಿ

ವೈಮಾನಿಕ ತರಬೇತಿ ಸಂಸ್ಥೆಯ ನಿರ್ವಹಣೆಯನ್ನು ಸಹಗುತ್ತಿಗೆಗೆ ನೀಡುವ ವಿಚಾರದಲ್ಲಿ ಅಭಿಪ್ರಾಯ ನೀಡಿದ ಆರೋಪಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮ 11(2) ಮತ್ತು 11(5)ಸಿ ಅನ್ವಯ ಇಲಾಖಾ ವಿಚಾರಣೆಯನ್ನು ನಡೆಸಲು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–5) ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಮತ್ತು ವಿಚಾರಣಾಧಿಕಾರಿಗಳು ಪ್ರಕರಣದ ವಿಚಾರಣೆಯು ಇನ್ನೂ ಪ್ರಾರಂಭವಾಗಿಲ್ಲದ ಕಾರಣ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 6 ಸೇಇವಿ 2010, ದಿನಾಂಕ 28–4–2011ರ ಅನ್ವಯ ವಿಚಾರಣಾಧಿಕಾರಿಯ ಸಂಭಾವನೆಯನ್ನು ರೂ. 15,000 ಗಳಿಗೆ ಹೆಚ್ಚಿಸಿರುವುದರಿಂದ ಸಂಭಾವನೆಯನ್ನು ಹೆಚ್ಚಿಸದಿದ್ದಲ್ಲಿ ಮೊದಲಿನ ಸಂಭಾವನೆಗೆ ಕಾರ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ತಮಗೆ ಸಂಭಾವನೆಯನ್ನು ಈಗಿನ ದರದಂತೆ ಪಾವತಿಸಲು ಹೊಸದಾಗಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಮೇಲೆ (3)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–5) ಇವರು ಯುವಜನಸೇವಾ ಇಲಾಖೆಯ ವಿಷಯವನ್ನು ಅಧೀನ ಕಾರ್ಯದರ್ಶಿ, ವೆಚ್ಚ–5ರ ಬದಲಾಗಿ ಅಧೀನ ಕಾರ್ಯದರ್ಶಿ, ವೆಚ್ಚ–7 ಮತ್ತು 8 ಇವರು ನಿರ್ವಹಿಸುತ್ತಿರುವುದರಿಂದ, ಅಧೀನ ಕಾರ್ಯದರ್ಶಿ, ವೆಚ್ಚ–7 ಮತ್ತು 8 ಇವರನ್ನು ಮಂಡನಾಧಿಕಾರಿಯಾಗಿ ನೇಮಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಸೇಇವಿ 2008, ಬೆಂಗಳೂರು, ದಿನಾಂಕ 29ನೇ ಜುಲೈ 2011

ಶ್ರೀ ಟಿ. ಅಶೋಕ್, ಹಿಂದಿನ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಪ್ರಸ್ತುತ ಅಧೀನ ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ ಮತ್ತು ಶ್ರೀ ದೇವರಾಜ್, ಹಿಂದಿನ ಶಾಖಾಧಿಕಾರಿ, ಆರ್ಥಿಕ ಇಲಾಖೆ ಪ್ರಸ್ತುತ ಶಾಖಾಧಿಕಾರಿ, ಸಾರಿಗೆ ಇಲಾಖೆ ಇವರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ದಿನಾಂಕ 16–9–2010ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11 ಮತ್ತು 13 ರನ್ವಯ ಜಂಟಿ ಇಲಾಖಾ ವಿಚಾರಣೆ ನಡೆಸಲು ನಿಯಮ 11(2)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ವಿಚಾರಣಾಧಿಕಾರಿಯಾಗಿ ನೇಮಿಸಿದ್ದ ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರ ಬದಲಿಗೆ ಶ್ರೀ ಎಸ್.ವೈ. ಕುಂಬಾರ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಅವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಇದೇ ನಿಯಮಾವಳಿಗಳ ನಿಯಮ 11(5)(ಸಿ) ಅನ್ವಯ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–5) ಇವರ ಬದಲಿಗೆ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–7 ಮತ್ತು 8) ಅವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶಿಸಿದೆ.

ವಿಚಾರಣಾಧಿಕಾರಿಗಳು ಆಪಾದಿತರ ಮೇಲಿನ ಆರೋಪಗಳಿಗೆ ವಿಚಾರಣೆಯನ್ನು ನಡೆಸಿ ಆರೋಪ ಸಾಬೀತಾಗಿರುವ ಅಥವಾ ಸಾಬೀತಾಗದೇ ಇರುವ ಅಭಿಪ್ರಾಯಗಳನ್ನು ಒಳಗೊಂಡ ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರಿಯಾದ ಸರ್ಕಾರಕ್ಕೆ 3 ತಿಂಗಳುಗಳ ಒಳಗಾಗಿ ಸಲ್ಲಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು–3)

ಪಿ.ಆರ್. 1935

PERSONNEL AND ADMINISTRATIVE REFORMS SECRETARIAT

Sub : Deputation of IAS officers for Phase-V Mid-career Training Programme-Reg.

Read: D.O. letter No. T16013/1/2011, dated 27-3-2011 of the Joint Director, LBSNAA, Mussoorie.

Government Order No. DPAR 71 SIS 2011, Bangalore, Dated 03-08-2011

Sanction is accorded for the deputation of following IAS officers for the Phase-V mandatory Mid-Career Training Programme to be held from 09-10-2011 to 11-11-2011 at Lal Bahadur Shastri National Academy for Administration, Mussoorie.

Sl. No.	Name and Designation of officers deputed for training	Sl.No.	Name & Designation of officers deputed for training
1	Sri M.N. Vijayakumar, IAS (KN 81) Officer on Special Duty & Ex-Officio Principal Secretary to Government, (Departmental Enquiry Manual), Department of Personnel & Administrative Reforms, Bangalore	2	Smt. K. Ratna Prabha, IAS (KN 81) waiting for posting
3	Dr K.P. Krishnan, IAS (KN 83) Secretary, Economic Advisory Council to the Prime Minister, New Delhi	4	Sri T.M. Vijay Bhaskar, IAS (KN 83) Joint Secretary, Government of India, Ministry of Panchayatraj, New Delhi
5	Sri R. Sridharan, IAS (KN 83) Executive Director (Vigilance) Food Corporation of India (FCI), New Delhi	6	Sri M. Madan Gopal, IAS (KN 84) Managing Director, Karnataka State Financial Corporation, Bangalore

The period of deputation and the time reasonably required for to and fro journey shall be treated as on duty for all purposes and the officers are entitled to draw TA/DA advances as per rules subject to adjustment in the final bill. The expenditure shall be met by the same head of account from which pay and allowances of the officers are being drawn at present, subject to the reimbursement if any from Government of India.

By Order and in the name of the Governor of Karnataka

N. Srinivasa Murthy

P.R. 1936

Under Secretary to Government

DP & AR (Services-I)

ಜಲ ಸಂಪನ್ಮೂಲ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ಸನೀಇ 02 ನಯೋಕಾ 2005, ಬೆಂಗಳೂರು, ದಿನಾಂಕ: 22.07.2011

ಕಡತ ಸಂಖ್ಯೆ:ಸನೀಇ 02 ನಯೋಕಾ 2005, ದಿನಾಂಕ 06–06–2011 ರಂದು ಹೊರಡಿಸಲಾದ ಸರ್ಕಾರಿ ಆದೇಶದ ಭಾಗದಲ್ಲಿ "ಈ ಕಾಮಗಾರಿಯನ್ನು ಲೆಕ್ಕ ಶೀರ್ಷಿಕೆ "4702–00–101–5–01–139–ಅಣೆಕಟ್ಟು ಮತ್ತು ಪಿಕಪ್ (ಪ್ರಧಾನ ಕಾಮಗಾರಿಗಳು)" ಅಡಿ ಒದಗಿಸಲಾಗಿರುವ ಅನುದಾನದಿಂದ ಕೈಗೊಳ್ಳುವುದು" ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿ.ಆರ್. 1937

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಂದಾಯ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ಕಂಇ 4 ಮುತಬ 2010, ಬೆಂಗಳೂರು, ದಿನಾಂಕ: 15.07.2011

ಸರ್ಕಾರದ ಆದೇಶ ಸಂಖ್ಯೆ: ಕಂಇ 4 ಮುತಬ 2010 ದಿನಾಂಕ 14.9.2010ರ ಆದೇಶ ಭಾಗದಲ್ಲಿ ನಮೂದಿಸಿರುವ "ರಾಜ್ಯದಲ್ಲಿ ವಾರ್ಷಿಕವಾಗಿ ರೂ. 5,999/– ಕ್ಕಿಂತ ಕಡಿಮೆ ತಸ್ತೀಕ್ ಮೊತ್ತ ನಿಗದಿಪಡಿಸಿರುವ ಧಾರ್ಮಿಕ ಮತ್ತು ಧರ್ಮಾದಾಯ ಸಂಸ್ಥೆಗಳಿಗೆ ವಾರ್ಷಿಕವಾಗಿ ಕನಿಷ್ಠ ರೂ. 6,000/– ಗಳ ತಸ್ತೀಕ್ ಮೊತ್ತವನ್ನು ನೀಡುತ್ತಿದ್ದು, ಈ ಮೊತ್ತವನ್ನು ವಾರ್ಷಿಕವಾಗಿ ರೂ. 12,000/–(ಹನ್ನೆರಡು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಹೆಚ್ಚಿಸಿ" ಎಂಬ ಪದಗಳ ಮುಂದೆ "ಹಾಗೂ ರಾಜ್ಯದಲ್ಲಿ ವಾರ್ಷಿಕವಾಗಿ ರೂ. 6,000/–ಕ್ಕಿಂತ ಹೆಚ್ಚು ಮತ್ತು 11,999/– ಕ್ಕಿಂತ ಕಡಿಮೆ ತಸ್ತೀಕ್ ಮೊತ್ತ ನಿಗದಿಪಡಿಸಿರುವ ಧಾರ್ಮಿಕ ಮತ್ತು ಧರ್ಮಾದಾಯ ಸಂಸ್ಥೆಗಳಿಗೆ ವಾರ್ಷಿಕವಾಗಿ ರೂ. 12,000/–(ಹನ್ನೆರಡು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಹೆಚ್ಚಿಸಿ ಈ ತಸ್ತೀಕ್ ಮೊತ್ತವನ್ನು ಆದೇಶ ಹೊರಡಿಸಿದ ದಿನಾಂಕದಿಂದ ಮಾತ್ರ ದೇವಸ್ಥಾನಗಳಿಗೆ ಪಾವತಿಸಲು ಧಾರ್ಮಿಕ ದತ್ತಿ ಆಯುಕ್ತರಿಗೆ ಅನುಮತಿ ನೀಡಿ ಆದೇಶಿಸಿದೆ "ಎಂಬ ಪದಗಳನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ಈ ಸೇರ್ಪಡೆ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 370 ವೆಚ್ಚ–7/2011 ದಿ: 29.6.2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಸ್.ಪ್ರಭಾಕರ

ಪಿ.ಆರ್. 1938

ಸರ್ಕಾರದ ಕಾರ್ಯದರ್ಶಿ,

ಕಂದಾಯ ಇಲಾಖೆ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2011–12ನೇ ಸಾಲಿಗೆ ಇಲಾಖೆಯ ಅಂಗ ಸಂಸ್ಥೆಗಳ ಕಾರ್ಯ ಚಟುವಟಿಕೆ ಮತ್ತು ಆಡಳಿತ ನಿರ್ವಹಣೆಗಾಗಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ವಿಯಇ 189 ವಿತ್ರಮ 2010, ದಿನಾಂಕ: 19–03–2011.
2) ಸರ್ಕಾರಿ ಆದೇಶ ಸಂಖ್ಯೆ: ವಿಯಇ 50 ವಿತ್ರಮ 2011, ದಿನಾಂಕ: 13–04–2011.
3) ಕಾರ್ಯನಿರ್ವಾಹಕ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಬೆಂಗಳೂರು. ಇವರ ಪತ್ರ ಸಂ: 3.1/ಗ್ರಾಂಟ್ಸ್/ಜಿಒಕೆ/390, ದಿ: 05–07–2011.
4) ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು. ಇವರ ಪತ್ರ ಸಂಖ್ಯೆ:ಕರಾವಿಪ/2.1/G/GOK/11–12/7987, ದಿನಾಂಕ: 06.07.2011.
5) ಆಡಳಿತಗಾರರು, ಜವಾಹರ್‌ಲಾಲ್ ನೆಹರು ತಾರಾಲಯ, ಬೆಂಗಳೂರು. ಇವರ ಪತ್ರ ಸಂಖ್ಯೆ ಡಿಪಿ/ಇಎಸ್‌ಟಿ/058/2011–12, ದಿನಾಂಕ: 28–06–2011.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಂದುವರಿಸಿ, 2011–12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3425–60–200–0–01(101)(ಯೋ) ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯಾನುದಾನವಾಗಿ ಒಟ್ಟು ರೂ. 500.00 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗಿದ್ದು, ಇದರ ಪೈಕಿ ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಮೊದಲನೇ ಕಂತನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (3)ರಲ್ಲಿನ ಪತ್ರದಲ್ಲಿ ಕಾರ್ಯನಿರ್ವಾಹಕ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಬೆಂಗಳೂರು. ಇವರು 2011–12ನೇ ಸಾಲಿನಲ್ಲಿ ಕೇಂದ್ರದ ಕಾರ್ಯಚಟುವಟಿಕೆ ಮತ್ತು ಆಡಳಿತ ನಿರ್ವಹಣೆಗಾಗಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಮೇಲೆ ಓದಲಾದ (4)ರಲ್ಲಿನ ಪತ್ರದಲ್ಲಿ ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು. ಇವರು 2011–12ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ವೈಜ್ಞಾನಿಕ ಕಾರ್ಯಚಟುವಟಿಕೆ ಮತ್ತು ಆಡಳಿತ ನಿರ್ವಹಣೆಗಾಗಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಮೇಲೆ ಓದಲಾದ (5)ರಲ್ಲಿನ ಪತ್ರದಲ್ಲಿ ಆಡಳಿತಾಧಿಕಾರಿ, ಜವಾಹರ್‌ಲಾಲ್ ನೆಹರು ತಾರಾಲಯ, ಇವರು 2011–12ನೇ ಸಾಲಿನಲ್ಲಿ ತಾರಾಲಯದ ಕಾರ್ಯಚಟುವಟಿಕೆ ಮತ್ತು ಆಡಳಿತ ನಿರ್ವಹಣೆಗಾಗಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 50 ವಿತ್ರಮ 2011, ಬೆಂಗಳೂರು, ದಿನಾಂಕ: 12–07–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯಾನುದಾನವಾಗಿ ಕಾಯ್ದಿರಿಸಿರುವ ರೂ. 500.00 ಲಕ್ಷಗಳಲ್ಲಿ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಕೆಳಕಂಡ ಸಂಸ್ಥೆಗಳು ಹಮ್ಮಿಕೊಂಡಿರುವ ಕಾರ್ಯಚಟುವಟಿಕೆ ಮತ್ತು ಆಡಳಿತ ನಿರ್ವಹಣೆಗಾಗಿ ಎರಡನೇ ಕಂತಿನ ಅನುದಾನವನ್ನು ಲೆಕ್ಕ ಶೀರ್ಷಿಕೆ 3425–60–200–0–01 (101) (ಯೋ) ಇದರಡಿ ಒಟ್ಟಾರೆ ರೂ. 42.50 ಲಕ್ಷ (ರೂಪಾಯಿ ನಲವತ್ತೆರಡು ಲಕ್ಷ ಐವತ್ತು ಸಾವಿರಗಳು ಮಾತ್ರ)ಗಳನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮಂಜೂರು ಮಾಡಿದೆ.

ರೂ.ಲಕ್ಷಗಳಲ್ಲಿ

1	ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ	14.00
2	ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು	13.50
3	ನಿರ್ದೇಶಕರು, ಜವಾಹರ್‌ಲಾಲ್ ನೆಹರು ತಾರಾಲಯ	15.00
	ಒಟ್ಟು	42.50

1) ಈ ಹಣವನ್ನು 2011–12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 3425–60–200–0–01 (101) (ಯೋ) ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯಾನುದಾನ ಇದರಡಿಯಲ್ಲಿ ಭರಿಸತಕ್ಕದ್ದು.
2) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮೇಲಿನ 4 ಸಂಸ್ಥೆಗಳು ಸ್ವೀಕೃತ ರಶೀದಿಯಲ್ಲಿ ಹಣವನ್ನು ಸರ್ಕಾರದ ಅಧೀನ ಕಾರ್ಯದರ್ಶಿಯವರ ಮೇಲು ರುಜುವಿನೊಂದಿಗೆ ಹಣ ಸೆಳೆಯಬಹುದು.
3) ಬಿಡುಗಡೆ ಮಾಡಿರುವ ಅನುದಾನವನ್ನು ಖರ್ಚು ಮಾಡಿದ ಬಗ್ಗೆ ಉಪಯೋಗತಾ ಪ್ರಮಾಣ ಪತ್ರ ಹಾಗೂ ಆಡಿಟ್ ಆದ ಲೆಕ್ಕಪತ್ರಗಳನ್ನು ಕೂಡಲೇ ಸಲ್ಲಿಸತಕ್ಕದ್ದು.
4) ಬಿಡುಗಡೆ ಮಾಡಿದ ಹಣವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಮಾತ್ರ ಉಪಯೋಗಿಸತಕ್ಕದ್ದು, ಹಾಗೂ ಈ ಹಣವನ್ನು ಬೇರೆ ಯೋಜನೆಗೆ/ಕಾರ್ಯಕ್ರಮಗಳಿಗೆ ಸರ್ಕಾರದ ಅನುಮತಿ ಇಲ್ಲದೆ ವರ್ಗಾಯಿಸಬಾರದು.
5) ಉದ್ದೇಶಿತ ಕಾರ್ಯಕ್ರಮಕ್ಕೆ ಖರ್ಚಾಗದ ಬಾಬ್ತು ಅನುದಾನವನ್ನು ಉಳಿಸಿಕೊಂಡು ಅದನ್ನು ಸರ್ಕಾರದ ಗಮನಕ್ಕೆ ತರದೇ ಇದ್ದದ್ದು ಕಂಡು ಬಂದಲ್ಲಿ ಸದರಿ ಮೊತ್ತಕ್ಕೆ ಸರಳ ಬಡ್ಡಿಯೊಂದಿಗೆ ಸರ್ಕಾರಕ್ಕೆ ಪಾವತಿಸಿಕೊಳ್ಳಲು ಕ್ರಮಕೈಗೊಳ್ಳಲಾಗುವುದು.
6) ಅನುದಾನವನ್ನು ಬಳಸದೇ ಬ್ಯಾಂಕಿನಲ್ಲಿ ಠೇವಣಿ ಮಾಡಿದ ಪಕ್ಷದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ಉಕ್ಕವಾದಲ್ಲಿ ಅಂತಹ ಠೇವಣಿ ಮೊತ್ತಕ್ಕೆ ದೊರೆಯುವ ಬಡ್ಡಿಯೊಂದಿಗೆ ಹಿಂದಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.
7) ಉದ್ದೇಶಿತ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದಂತಹ ಅನುದಾನದ ಲೆಕ್ಕಪತ್ರಗಳನ್ನು ಮಂಜೂರು ಮಾಡುವ ಅಧಿಕಾರಿಯು ಸಮೀಕ್ಷೆಗಾಗಿ ಕೋರಿದ್ದಲ್ಲಿ ತಪ್ಪದೇ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಆಇ 1 ಟಿಎಫ್‌ಪಿ 2008, ದಿನಾಂಕ: 16–05–2008ರಡಿ ಇಲಾಖಾ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಭಾನುಮತಿ

ಪೀಠಾಧಿಕಾರಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1939

ಕಂದಾಯ ಸಚಿವಾಲಯ

ವಿಷಯ : ಜೇವರ್ಗಿ ತಾಲ್ಲೂಕು ಕೇಂದ್ರದಲ್ಲಿ ನಿರ್ಮಿಸುತ್ತಿರುವ ಮಿನಿ ವಿಧಾನಸೌಧ ಕಟ್ಟಡದ ಹೆಚ್ಚುವರಿ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ ಕಂಇ 97 ಡಬ್ಲ್ಯೂಬಿಆರ್ 2007, ದಿನಾಂಕ: 18-08-2009.

2 ಪತ್ರ ಸಂಖ್ಯೆ ಉನಿ/ಕಗ್ರಾಮೂಸೌಅನಿ/ಮಿನಿ ವಿಧಾನಸೌಧ-142/2011-12/289, ದಿನಾಂಕ: 04-07-2011.

ಪ್ರಸ್ತಾವನೆ:

ಜೇವರ್ಗಿ ತಾಲ್ಲೂಕು ಕೇಂದ್ರದಲ್ಲಿ ರೂ. 348.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಮಿನಿ ವಿಧಾನಸೌಧ 2ನೇ ಹಂತದ ಪರಿಷ್ಕೃತ ಕಾಮಗಾರಿಯ ಅಂದಾಜಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು.

ಉಪ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಯಾದಗಿರಿರವರು ಮೇಲೆ (2)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಜೇವರ್ಗಿ ಪಟ್ಟಣದಲ್ಲಿ ಮಿನಿ ವಿಧಾನಸೌಧ 2ನೇ ಹಂತದ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ ಎಂದು ಈ ಕಟ್ಟಡಕ್ಕೆ ಹೆಚ್ಚುವರಿಯಾಗಿ ಆವರಣ ಗೋಡೆ, ಒಳರಸ್ತೆ, ಉದ್ಯಾನವನ ಹಾಗೂ ಹೊರ ವಿನ್ಯಾಸಕ್ಕಾಗಿ ಗ್ರಾನೈಟ್ ಕ್ಲ್ಯಾಡಿಂಗ್ ಕಾಮಗಾರಿಗಳ ಅವಶ್ಯಕತೆಯಿದೆ ಎಂದು ವರದಿ ಮಾಡುತ್ತಾ ಆ ಕಾಮಗಾರಿಗಳಿಗಾಗಿ ರೂ. 65.00 ಲಕ್ಷಗಳ ಸವಿವರ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ಸಲ್ಲಿಸುತ್ತಾ ಆಡಳಿತಾತ್ಮಕ ಅನುಮೋದನೆ ನೀಡುವುದರೊಂದಿಗೆ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ಎಲ್ಲಾ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಜೇವರ್ಗಿ ತಾಲ್ಲೂಕು ಕೇಂದ್ರದಲ್ಲಿ ನಿರ್ಮಾಣ ಮಾಡುತ್ತಿರುವ ಮಿನಿ ವಿಧಾನಸೌಧ 2ನೇ ಹಂತದ ಕಟ್ಟಡ ಕಾಮಗಾರಿಯ ರೂ. 65.00 ಲಕ್ಷಗಳ ಹೆಚ್ಚುವರಿ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 97 ಡಬ್ಲ್ಯೂಬಿಆರ್ 2007, ಬೆಂಗಳೂರು, ದಿನಾಂಕ: 23-07-2011

ಜೇವರ್ಗಿ ಪಟ್ಟಣದಲ್ಲಿ ನಿರ್ಮಿಸುತ್ತಿರುವ ಮಿನಿ ವಿಧಾನಸೌಧ 2ನೇ ಹಂತದ ಕಟ್ಟಡದ ಕಾಮಗಾರಿಗೆ ಒಳರಸ್ತೆ, ಸಿಡಿ ಕಾಮಗಾರಿ ಮತ್ತು ಲ್ಯಾಂಡ್ ಸ್ಕೇಪಿಂಗ್ ಹಾಗೂ ಆವರಣ ಗೋಡೆ ಕಾಮಗಾರಿಗಳ ರೂ. 65.00 ಲಕ್ಷ (ರೂಪಾಯಿ ಅರವತ್ತೈದು ಲಕ್ಷಗಳು ಮಾತ್ರ)ಗಳ ಹೆಚ್ಚುವರಿ ಕಾಮಗಾರಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಇದಕ್ಕೆ ತಗಲುವ ವೆಚ್ಚವನ್ನು 2011-12ನೇ ಸಾಲಿನ 4059-80-051-0-30-386 (ಯೋಜನೆ) ಲೆಕ್ಕಶೀರ್ಷಿಕೆ ಅಡಿಯಲ್ಲಿ ಭರಿಸತಕ್ಕದ್ದು.

ಸಕ್ಷಮ ಪ್ರಾಧಿಕಾರವು ಸದರಿ ಕಟ್ಟಡ ಕಾಮಗಾರಿಯ ಗುಣಮಟ್ಟ ಕಾಯ್ದುಕೊಳ್ಳುವಿಕೆಯನ್ನು ಕಾಲಕಾಲಕ್ಕೆ ಖಾತರಿಪಡಿಸಿಕೊಳ್ಳತಕ್ಕದ್ದು.

ಈ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000 ಪ್ರಕಾರ ಮಾಡತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಯುವಜನ ಸೇವಾ ಮತ್ತು ಕಂದಾಯ ಇಲಾಖೆರವರ ಅನಧಿಕೃತ ಟಿಪ್ಪಣಿ ಸಂಖ್ಯೆ ಕಂಇ 35848 ಐಎಫ್ಎ 2011, ದಿನಾಂಕ 16-7-2011ರಲ್ಲಿ ನೀಡಿರುವ ಸಹಮತಿಯೊಂದಿಗೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ 10-07-1996ರ ಪ್ರತ್ಯಾಯೋಜಿತ ಅಧಿಕಾರಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ಶ್ರೀರಾಮರೆಡ್ಡಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣಾ ಕೋಶ)

ಪಿ.ಆರ್. 1941

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಮಾಳವಾಡ-ಕಪೋಲಿ ಗ್ರಾಮದ ಹತ್ತಿರ ಪಂಡರಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-1/2011-12/3717 ದಿನಾಂಕ: 11-07-2011.

2. ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2010 ದಿನಾಂಕ: 27-11-2010.

ಪ್ರಸ್ತಾವನೆ:

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಮಾಳವಾಡ-ಕಪೋಲಿ ಗ್ರಾಮದ ಹತ್ತಿರ ಪಂಡರಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	16-05-2011
ಸಂಯುಕ್ತ ಕರ್ನಾಟಕ ದಿನಪತ್ರಿಕೆ	18-05-2011
ವಿಜಯ ಕರ್ನಾಟಕ ದಿನಪತ್ರಿಕೆ	18-05-2011
ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನಪತ್ರಿಕೆ	18-05-2011

ಈ ಟೆಂಡರ್ ಪ್ರಕಟಣೆಗೆ ಸ್ವಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಒಬ್ಬರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ : 22–06–2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 69,81,128/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 72,66,004/–

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ರಾಜು ಡಿ. ಪದ್ಮಣ್ಣನವರ್ ಪ್ರಥಮ ದರ್ಜೆ ಗುತ್ತಿಗೆದಾರರು	86,43,702/–	23.82 ಹೆಚ್ಚು	18.96 ಹೆಚ್ಚು

ಮೇಲ್ಕಂಡಂತೆ ಶ್ರೀ ರಾಜು ಡಿ. ಪದ್ಮಣ್ಣನವರ್, ಪ್ರಥಮ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 18.96 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19–07–2011 ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 72,66,004/–ಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 81,37,925/– ಗಳನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 58 ಅಪಿಬಂ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 22ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಮಾಳವಾಡ–ಕಪೋಲಿ ಗ್ರಾಮದ ಹತ್ತಿರ ಪಂಡರಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 72,66,004/–ಗಳ ಮೇಲೆ ಶೇಕಡ 12.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 81,37,925/–ಗಳಿಗೆ (ರೂ. ಎಂಬೊತ್ತೊಂದು ಲಕ್ಷ ಮುವತ್ತೇಳು ಸಾವಿರದ ಒಂಬೈನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ) ಶ್ರೀ ರಾಜು ಡಿ. ಪದ್ಮಣ್ಣನವರ್ ಪ್ರಥಮ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯನ್ನು ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿಆರ್.ನಂ. 1947

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ನಂದಿಕುರಳಿ (ನಸಲಾಪುರ) ಗ್ರಾಮದ ಹತ್ತಿರ ಕರಕನಾಳ ಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ–1/2011–12/3270 ದಿನಾಂಕ: 20–06–2011.
2. ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಮಸಾವಿ 2009 ಭಾಗ–1 (3) ದಿನಾಂಕ: 28–02–2009.

ಪ್ರಸ್ತಾವನೆ:

ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ನಂದಿಕುರಳಿ (ನಸಲಾಪುರ) ಗ್ರಾಮದ ಹತ್ತಿರ ಕರಕನಾಳ ಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	08–04–2011
ಜಿಲ್ಲಾ ಟೆಂಡರ್ ಬುಲೆಟಿನ್	11–04–2011
ಸಂಯುಕ್ತ ಕರ್ನಾಟಕ ದಿನಪತ್ರಿಕೆ	13–04–2011
ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಆಂಗ್ಲ ದಿನಪತ್ರಿಕೆ	13–04–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು, ಇವರು ಅರ್ಹತೆ ಹೊಂದಿರುತ್ತಾರೆ, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ : 26–05–2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 1,43,01,802/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 1,77,39,852/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಜಯಶೀಲ ನಾರಾಯಣ ಶೆಟ್ಟಿ ಪ್ರಥಮ ದರ್ಜೆ ಗುತ್ತಿಗೆದಾರರು	2,00,11,461/–	39.92 ಹೆಚ್ಚು	12.805 ಹೆಚ್ಚು

ಮೇಲ್ಕಂಡಂತೆ ಶ್ರೀ ಜಯಶೀಲ ನಾರಾಯಣ ಶೆಟ್ಟಿ, ಪ್ರಥಮ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 12.805 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19–07–2011 ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 12.50 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,77,39,852/–ಗಳ ಮೇಲೆ ಶೇ. 12.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,99,57,334/– ಗಳನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 52 ಅಪಿಬಂ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 22ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ನಂದಿಕುರಳಿ (ನಸಲಾಪುರ) ಗ್ರಾಮದ ಹತ್ತಿರ ಕರಕನಾಳ ಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 1,77,39,852/–ಗಳ ಮೇಲೆ ಶೇಕಡ 12.50ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,99,57,334/–ಗಳಿಗೆ (ರೂ. ಒಂದು ಕೋಟಿ ತೊಂಬೊತ್ತೊಂಬತ್ತು ಲಕ್ಷದ ಐವತ್ತೇಳು ಸಾವಿರದ ಮುನ್ನೂರ ಮೂವತ್ತನಾಲ್ಕು ರೂಪಾಯಿಗಳು ಮಾತ್ರ) ಶ್ರೀ ಜಯಶೀಲ ನಾರಾಯಣ ಶೆಟ್ಟಿ, ಪ್ರಥಮ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿಆರ್.ನಂ. 1948

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಅಸೋಗಾ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ–1/2011–12/3716 ದಿನಾಂಕ: 11–07–2011.
2. ಸರ್ಕಾರದ ಆದೇಶ ಸಂಖ್ಯೆ: ಸನೀಇ 06 ನಯೋಕಾ 2009 ದಿನಾಂಕ: 06–01–2010.

ಪ್ರಸ್ತಾವನೆ:

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಅಸೋಗಾ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	23–05–2011
ಸಂಯುಕ್ತ ಕರ್ನಾಟಕ ದಿನಪತ್ರಿಕೆ	22–05–2011
ವಿಜಯ ಕರ್ನಾಟಕ ದಿನಪತ್ರಿಕೆ	22–05–2011
ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನಪತ್ರಿಕೆ	23–05–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು, ಅವರು ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ : 22–06–2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 70,37,258/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 85,09,455/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಎಂ. ರಾಜಗೋಪಾಲ ರೆಡ್ಡಿ ಪ್ರಥಮ ದರ್ಜೆ ಗುತ್ತಿಗೆದಾರರು	1,00,38,616/–	42.65 ಹೆಚ್ಚು	17.97 ಹೆಚ್ಚು

ಮೇಲ್ಕಂಡಂತೆ ಶ್ರೀ ಎಂ. ರಾಜಗೋಪಾಲ ರೆಡ್ಡಿ, ಪ್ರಥಮ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 17.97 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19–07–2011 ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 85,09,455/–ಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 95,30,590/– ಗಳನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 60 ಅಪಿಬಂ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 22ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಅಸೋಗಾ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 85,09,455/–ಗಳ ಮೇಲೆ ಶೇಕಡ 12.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 95,30,590/–ಗಳಿಗೆ (ರೂ. ತೊಂಬತ್ತೈದು ಲಕ್ಷದ ಮೂವತ್ತು ಸಾವಿರದ ಐನೂರ ತೊಂಬತ್ತು ರೂಪಾಯಿಗಳು ಮಾತ್ರ) ಶ್ರೀ ಎಂ. ರಾಜಗೋಪಾಲ ರೆಡ್ಡಿ, ಪ್ರಥಮ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯನ್ನು ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿಆರ್.ನಂ. 1949

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಸಾತನಾಳ ಮಾಂಜರ ಪೈ ಗ್ರಾಮದ ಹತ್ತಿರ ಪಂಡರಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :

1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವ/ಬಿಜೆಪಿ/ಎಇ–1/2011-12/3723 ದಿನಾಂಕ: 11–07–2011.
2. ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2010 ದಿನಾಂಕ: 27–11–2010.

ಪ್ರಸ್ತಾವನೆ:

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಸಾತನಾಳ ಮಾಂಜರ ಪೈ ಗ್ರಾಮದ ಹತ್ತಿರ ಪಂಡರಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	16–05–2011
ಸಂಯುಕ್ತ ಕರ್ನಾಟಕ ದಿನಪತ್ರಿಕೆ	18–05–2011
ವಿಜಯ ಕರ್ನಾಟಕ ದಿನಪತ್ರಿಕೆ	18–05–2011
ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನಪತ್ರಿಕೆ	18–05–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಈ ಪೈಕಿ ಒಬ್ಬರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ : 22–06–2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 83,72,089/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 87,40,248/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಚನ್ನಪ್ಪ ಎಂ. ನರಸಣ್ಣವರ ಪ್ರಥಮ ದರ್ಜೆ ಗುತ್ತಿಗೆದಾರರು	1,03,77,874/–	23.96 ಹೆಚ್ಚು	18.74 ಹೆಚ್ಚು

ಮೇಲ್ಕಂಡಂತೆ ಶ್ರೀ ಚನ್ನಪ್ಪ ಎಂ. ನರಸಣ್ಣವರ, ಪ್ರಥಮ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 18.74 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19–07–2011 ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 87,40,248/–ಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 97,89,078/– ಗಳನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 59 ಅಪಿಬಂ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 22ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಸಾತನಾಳ ಮಾಂಜರ ಪೈ ಗ್ರಾಮದ ಹತ್ತಿರ ಪಂಡರಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 87,40,248/–ಗಳ ಮೇಲೆ ಶೇಕಡ 12.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 97,89,078/–ಗಳಿಗೆ (ರೂ. ತೊಂಬತ್ತೇಳು ಲಕ್ಷದ ಎಂಬತ್ತೊಂಬತ್ತು ಸಾವಿರದ ಎಪ್ಪತ್ತೆಂಟು ರೂಪಾಯಿಗಳು ಮಾತ್ರ) ಶ್ರೀ ಚನ್ನಪ್ಪ ಎಂ. ನರಸಣ್ಣವರ, ಪ್ರಥಮ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿಆರ್.ನಂ. 1950

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕಿನ ಮುಗಳೊಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :

1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ–6/2011–12/3389 ದಿನಾಂಕ: 24–06–2011.
2. ಸರ್ಕಾರದ ಆದೇಶ ಸಂಖ್ಯೆ: ಸನೀಇ 59 ಏನೀಯೋ 2008 ದಿನಾಂಕ: 17–01–2009.

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕಿನ ಮುಗಳೊಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	04–03–2011
ಕನ್ನಡ ಪ್ರಭ ದಿನಪತ್ರಿಕೆ	05–03–2011
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	04–03–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು, ಇವರು ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ : 09–05–2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 12,70,22,077/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 13,30,24,832/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಕೆ. ದೊಡ್ಡ ಹನುಮಂತಪ್ಪ ಪ್ರಥಮ ದರ್ಜೆ ಗುತ್ತಿಗೆದಾರರು	18,80,11,346/–	48.01 ಹೆಚ್ಚು	41.34 ಹೆಚ್ಚು

ಮೇಲ್ಕಂಡಂತೆ ಶ್ರೀ ಕೆ. ದೊಡ್ಡ ಹನುಮಂತಪ್ಪ, ಪ್ರಥಮ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 41.34 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19–07–2011 ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 16.50 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 13,30,24,832/–ಗಳ ಮೇಲೆ ಶೇ. 16.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 15,49,73,929/– ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 26 ಏನೀಯೋ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 22ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕಿನ ಮುಗಳೊಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 13,30,24,832/–ಗಳ ಮೇಲೆ ಶೇಕಡ 16.50ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 15,49,73,929/–ಗಳಿಗೆ (ರೂ. ಹದಿನೈದು ಕೋಟಿ ನಲವತ್ತೊಂಬತ್ತು ಲಕ್ಷದ ಎಪ್ಪತ್ತಮೂರು ಸಾವಿರದ ಒಂಬತ್ತು ನೂರ ಇಪ್ಪತ್ತೊಂಬತ್ತು ರೂಪಾಯಿಗಳು ಮಾತ್ರ) ಶ್ರೀ ಕೆ. ದೊಡ್ಡ ಹನುಮಂತಪ್ಪ, ಪ್ರಥಮ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿಆರ್.ನಂ. 1951

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಈಳಿಗನೂರು ಏತ ನೀರಾವರಿ ಯೋಜನೆಯ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :

1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವ/ತಾ.ಸ.–3/ಸ.ಇಂ–7/ಈಳಿಗನೂರು/2011–12/3903 ದಿನಾಂಕ: 22–07–2011.
2. ಸರ್ಕಾರದ ಆದೇಶ ಸಂಖ್ಯೆ: ಸನೀಇ 60 ಏನೀಯೋ 2010 ದಿನಾಂಕ: 26–11–2010.

ಪ್ರಸ್ತಾವನೆ:

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಈಳಿಗನೂರು ಏತ ನೀರಾವರಿ ಯೋಜನೆಯ ನಿರ್ಮಾಣ ಕಾಮಗಾರಿ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ,

ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ವಿಶೇಷ ಘಟಕ ಯೋಜನೆಯಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಕುಷ್ಟಗಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ 2ನೇ ಬಾರಿಗೆ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	20-05-2011
ವಿಜಯ ಕರ್ನಾಟಕ ದಿನಪತ್ರಿಕೆ	26-05-2011

ಮೊದಲನೆ ಬಾರಿ ಕರೆದ ಟೆಂಡರ್ ಕರೆಗೆ ಸ್ವೀಕೃತವಾದ ಟೆಂಡರ್ ದರಗಳು ಅತಿ ಹೆಚ್ಚಿದ್ದರಿಂದ ವಜಾ ಮಾಡಲಾಗಿದೆ ಎಂದು ವರದಿಯಾಗಿದೆ. ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಈ ಪೈಕಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ : 05-07-2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 2,71,98,349/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 2,86,46,771/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ
1	ಶ್ರೀ ಯರಲಗಡ್ಡ ಪಿಚ್ಚೇಶ್ವರ ರಾವ್, ಶ್ರೀನಿವಾಸ ಕನ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈವೇಟ್ ಲಿ.,	3,28,59,213	20.81 ಹೆಚ್ಚು	14.70 ಹೆಚ್ಚು

ಮೇಲ್ಕಂಡಂತೆ ಶ್ರೀ ಯರಲಗಡ್ಡ ಪಿಚ್ಚೇಶ್ವರ ರಾವ್, ಶ್ರೀನಿವಾಸ ಕನ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈವೇಟ್ ಲಿ., ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 14.70 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 23-07-2011 ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 14.70 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 2,86,46,771/-ಗಳ ಮೇಲೆ ಶೇ. 13.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 3,23,70,851/- ಗಳನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 28 ಏನೀಯೋ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 23ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಈಳಿಗನೂರು ಏತ ನೀರಾವರಿ ಯೋಜನೆಯ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,86,46,771/-ಗಳ ಮೇಲೆ ಶೇಕಡ 13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 3,23,70,851/-ಗಳಿಗೆ (ರೂ. ಮೂರು ಕೋಟಿ ಇಪ್ಪತ್ತಮೂರು ಲಕ್ಷದ ಎಪ್ಪತ್ತು ಸಾವಿರದ ಎಂಟು ನೂರ ಐವತ್ತೊಂದು ರೂಪಾಯಿಗಳು ಮಾತ್ರ) ಶ್ರೀ ಯರಲಗಡ್ಡ ಪಿಚ್ಚೇಶ್ವರ ರಾವ್, ಶ್ರೀನಿವಾಸ ಕನ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈವೇಟ್ ಲಿ., ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿಆರ್.ನಂ. 1952

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಡಣಾನಾಯಕನ ಕೆರೆಗೆ ನೀರನ್ನು ತುಂಬಿಸಲು ತುಂಗಭದ್ರಾ ನದಿಯಿಂದ ನಿರ್ಮಿಸಲಾಗುತ್ತಿರುವ ಏತ ನೀರಾವರಿ ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರರವರ ಪತ್ರದ ಕ್ರಮಾಂಕ:ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ–12/2011–12/3703, ದಿನಾಂಕ: 11/07/2011.

2. ಸರ್ಕಾರದ ಆದೇಶ ಸಂಖ್ಯೆ : ಸನೀಇ 17 ಏನೀಯೋ 2006, ದಿ: 16/12/2006.

ಪ್ರಸ್ತಾವನೆ :

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಡಣಾನಾಯಕನ ಕೆರೆಗೆ ನೀರನ್ನು ತುಂಬಿಸಲು ತುಂಗಭದ್ರಾ ನದಿಯಿಂದ ನಿರ್ಮಿಸಲಾಗುತ್ತಿರುವ ಏತ ನೀರಾವರಿ ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯ ಅಂದಾಜಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರವರು ಅನುಮೋದನೆ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮೊದಲೆರಡು ಬಾರಿ ಕರೆದ ಟೆಂಡರ್ ಪ್ರಕಟಣೆಗೆ ಯಾವುದೇ ಅರ್ಹ ಟೆಂಡರ್‌ಗಳು ಸ್ವೀಕೃತವಾಗಿರುವುದಿಲ್ಲ. ನಂತರ ಬಳ್ಳಾರಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	16/05/2011
ವಿಜಯ ಕರ್ನಾಟಕ ದಿನಪತ್ರಿಕೆ	13/05/2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು, ಇವರು ಅರ್ಹತೆ ಹೊಂದಿದ್ದು, ಇವರ ಟೆಂಡರನ್ನು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 8,29,070/–
ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಹುಲುಗಪ್ಪ, ಒಂದನೇ ದರ್ಜೆಗುತ್ತಿಗೆದಾರರು	10,28,200/–	24.018 ಹೆಚ್ಚು

ಮೇಲ್ಕಂಡಂತೆ ಶ್ರೀ ಹುಲುಗಪ್ಪ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.018 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19/07/2011 ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 14.50 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರ್‌ನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 8,29,070/– ಗಳ ಮೇಲೆ ಶೇ. 13.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 9,36,849/– ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 27 ಏನೀಯೋ (ತಾಂತ್ರಿಕ) 2011, ಬೆಂಗಳೂರು, ದಿನಾಂಕ : 22/07/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಡಣಾನಾಯಕನ ಕೆರೆಗೆ ನೀರನ್ನು ತುಂಬಿಸಲು ತುಂಗಭದ್ರಾ ನದಿಯಿಂದ ನಿರ್ಮಿಸಲಾಗುತ್ತಿರುವ ಏತ ನೀರಾವರಿ ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 8,29,070/– ಗಳ ಮೇಲೆ ಶೇ. 13.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 9,36,849/– (ಒಂಭತ್ತು ಲಕ್ಷದ ಮೂವತ್ತಾರು ಸಾವಿರದ ಎಂಟು ನೂರ ನಾಲ್ವತ್ತೊಂಭತ್ತು ರೂಪಾಯಿಗಳು ಮಾತ್ರ) ಶ್ರೀ ಹುಲುಗಪ್ಪ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1) ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

2) ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1953 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ತಿದ್ದುಪಡಿ

ವಿಷಯ : ಜಲ ಸಂಪನ್ಮೂಲ ಇಲಾಖಾ ವ್ಯಾಪ್ತಿಯಲ್ಲಿ ಬರುವ ಭಾರಿ ಮತ್ತು ಸಣ್ಣ ಅಣೆಕಟ್ಟುಗಳ ತಪಾಸಣೆಯನ್ನು ಕೈಗೊಳ್ಳಲು ರಚಿಸಲಾಗಿರುವ ಕರ್ತವ್ಯದಲ್ಲಿರುವ ಅಧಿಕಾರಿಗಳ ತಂಡಗಳ ಮುಖ್ಯಸ್ಥರನ್ನು ನೇಮಿಸುವ ಬಗ್ಗೆ

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 35 ಇಂಸಂಕೇ 2004 ಬೆಂಗಳೂರು, ದಿನಾಂಕ: 23-01-07

2. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 22 ಅಭಯೋ 2006 ಬೆಂಗಳೂರು, ದಿನಾಂಕ: 4-12-06

3. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 18 ಅಭಯೋ 2006 ಬೆಂಗಳೂರು, ದಿನಾಂಕ: 28-5-07

4. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 01 ಅಭಯೋ 2008 ಬೆಂಗಳೂರು, ದಿನಾಂಕ: 13-10-2010

5. ಡಾ. ವೈ.ಕೆ. ಮೂರ್ತಿ, ಅಧ್ಯಕ್ಷರು, ಡಿ.ಎಸ್.ಆರ್.ಪಿ. ರವರ ಪತ್ರ ದಿ. 14-1-11.

ಮೇಲೆ ಓದಲಾದ ಕ್ರಮಸಂಖ್ಯೆ (1) ರಲ್ಲಿ , ರಾಜ್ಯ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿಯನ್ನು ಪುನರ್ ರಚಿಸಿ ಸರ್ಕಾರದ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (2) ಹಾಗೂ (3)ರಲ್ಲಿ ಕ್ರಮವಾಗಿ ರಾಜ್ಯದ ಬೃಹತ್/ಮಾಧ್ಯಮ ಹಾಗೂ ಸಣ್ಣ ಅಣೆಕಟ್ಟುಗಳ ಪರಿವೀಕ್ಷಣೆಗಾಗಿ ಕರ್ತವ್ಯನಿರತ ಅಧಿಕಾರಿಗಳನ್ನೊಳಗೊಂಡ 4 ತಂಡಗಳನ್ನು ರಚಿಸಿ, ಸದರಿ ತಂಡಗಳ ಸಲಹೆಗಾರರನ್ನಾಗಿ ರಾಜ್ಯ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿಯ ಸದಸ್ಯರಾದ ಶ್ರೀ ಎಸ್.ಬಿ. ಕೊಯಮತ್ತೂರು, ಶ್ರೀ ಎಂ.ಬಿ. ಪರಪ್ಪಗೌಡರ್, ಹಾಗೂ ಶ್ರೀ ವೈ.ಎಸ್. ಕಾಂಬ್ಳೆ, ರವರುಗಳನ್ನು ನೇಮಿಸಿ ಆದೇಶವನ್ನು ಹೊರಡಿಸಲಾಗಿದೆ. ಶ್ರೀ ವೈ.ಎಸ್. ಕಾಂಬ್ಳೆ, ರವರ ನಿಧನದಿಂದಾಗಿ ಮೇಲೆ ಓದಲಾದ ಕ್ರಮಸಂಖ್ಯೆ (4) ರಲ್ಲಿ, ಶ್ರೀ ಎಂ.ಎಸ್. ರಾಮರಾವ್, ಮು.ಅ. (ನಿ) ಕೆಪಿಸಿಎಲ್, ರವರನ್ನು ಶ್ರೀ ವೈ.ಎಸ್. ಕಾಂಬ್ಳೆ, ರವರ ಸ್ಥಾನದಲ್ಲಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (5)ರಲ್ಲಿ, ರಾಜ್ಯ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿಯ ಅಧ್ಯಕ್ಷರಾದ ವೈ.ಕೆ. ಮೂರ್ತಿ ರವರು, ಅಣೆಕಟ್ಟು ಪರಿವೀಕ್ಷಣೆ ಕಾರ್ಯಕ್ರಮಗಳಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ತಂಡಗಳ ಮುಖ್ಯಸ್ಥರನ್ನಾಗಿ, ಪರಿವೀಕ್ಷಣೆಗೆ ಒಳಪಡಿಸಲ್ಪಡುವ ಅಣೆಕಟ್ಟುಗಳ ಮುಖ್ಯ ಅಭಿಯಂತರರನ್ನೇ ನೇಮಿಸುವಂತೆ ಸಲಹೆ ನೀಡಿರುತ್ತಾರೆ. ಸದರಿ ಸಲಹೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (2) ಹಾಗೂ (3) ರಲ್ಲಿನ ಸರ್ಕಾರದ ಆದೇಶಗಳಿಗೆ ಈ ಕೆಳಕಂಡ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಜಸಂಇ 01 ಅಭಯೋ 2008 ಬೆಂಗಳೂರು, ದಿನಾಂಕ : 25/07/2011

ಸರ್ಕಾರದ ಆದೇಶ ಸಂಖ್ಯೆ ಜಸಂಇ 22 ಅಭಯೋ 2006 ಬೆಂಗಳೂರು, ದಿ: 04-12-06 ಹಾಗೂ ಜಸಂಇ 18 ಅಭಯೋ 2006 ಬೆಂಗಳೂರು, ದಿ: 28-05-07 ರಲ್ಲಿ ರಚಿಸಲಾಗಿರುವ ಅಣೆಕಟ್ಟು ಸುರಕ್ಷತಾ ಪರಿಶೀಲನಾ ತಂಡಗಳ ಪರಿವೀಕ್ಷಣೆ ಕಾರ್ಯಕ್ರಮಗಳಲ್ಲಿ, ಪರಿವೀಕ್ಷಣೆಗೆ ಒಳಪಡಿಸಲ್ಪಡುವ ಅಣೆಕಟ್ಟೆಗೆ ಸಂಬಂಧಪಟ್ಟ ವಲಯದ ಮುಖ್ಯ ಅಭಿಯಂತರರನ್ನೇ ತಂಡಗಳ ಮುಖ್ಯಸ್ಥರನ್ನಾಗಿ ಈ ಮೂಲಕ ನೇಮಿಸಲಾಗಿದೆ. ಇನ್ನುಳಿದಂತೆ ಮೇಲೆ ಓದಲಾದ ಸರ್ಕಾರದ ಆದೇಶಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪ್ರದೀಪ್ ಮಿತ್ರ ಮಂಜುನಾಥ್

ಸರ್ಕಾರದ ಉಪ ಕಾರ್ಯದರ್ಶಿ (ಕೃಭಾಜನಿ)

ಜಲಸಂಪನ್ಮೂಲ ಇಲಾಖೆ

ಪಿ.ಆರ್. 1954

ENERGY SECRETARIAT

ADDENDUM

No. EN 81 PPC 2010 Bangalore, Dated ; 31-03-2011.

In the Government Order No. EN 81 PPC 2010 dated 15-03-2011 after para 2 of the order portion, the following shall be included as para-3.

"The Principal Accountant General (A&E), Karnataka, Bangalore is requested to carryout necessary adjustments in the books of Accounts of the State for the financial year 2010-11 by debit to "4801-01-190-0-01-211 (plan) – Investment in Power Utilities per contra credit to "4801-01-800-0-90- deduct receipts & payments on Capital account".

This addendum issued with the concurrence of the Finance Department, Government of Karnataka vide U.O. Note No. FD 1003 Exp-I/2011 dated 31-03-2011.

By Order and in the name of the Governor of Karnataka,

Suresh B. Krishnappanavar

Under Secretary to Government

Energy Department.

P.R. 1955

FOREST, ECOLOGY & ENVIRONMENT SECRETARIAT

ADDENDUM

No. FEE 25 ENG 2008 (P-1), Bangalore, Dated ; 13-07-2011.

The following sub-para (c) shall be inserted after sub-para (b) in the operative portion of the Government Order No. FEE 25 ENG 2008 dated 04-02-2009 (unique No. 35).

" (c) In the case of mining of sea shell, silica sand and moulding sand:-

The Environment Protection Fee for mining of sea shell, silica sand and moulding sand in the non-forest areas leased for mining activity shall be payable at the rate of Rs. 28,000 per Hectare in three equal annual instalments considering their low economic returns".

By Order and in the name of the Governor of Karnataka,

B. Manohar

Under Secretary to Government

P.R. 1956 Forest, Ecology & Envirnoment Department.

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಇಡಿ 13 ಎಂಎಂಎಸ್ 2011 ಬೆಂಗಳೂರು, ದಿನಾಂಕ: 10–06–2011

ವಿಷಯ : ಅಕ್ಷರ ದಾಸೋಹ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ರಾಜ್ಯ ಮಟ್ಟದ ಚಾಲನಾ ಮತ್ತು ಪರಾಮರ್ಶೆ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಇಡಿ 47 ಎಂಎಂಎಸ್ 2008, ದಿನಾಂಕ: 13–01–2009.

ಸರ್ಕಾರದ ಆದೇಶ ಸಂಖ್ಯೆ: ಇಡಿ 47 ಎಂಎಂಎಸ್ 2008, ದಿನಾಂಕ: 13–01–2009ರ ಆದೇಶದ ಭಾಗದಲ್ಲಿ ಕ್ರಮ ಸಂಖ್ಯೆ: 19ರಲ್ಲಿನ ಶ್ರೀ ಸಿ.ಹೆಚ್. ವಿಜಯಶಂಕರ್, ಲೋಕಸಭಾ ಸದಸ್ಯರು, ಮೈಸೂರು ಇವರ ಬದಲಿಗೆ ಶ್ರೀ ನಳೀನ ಕುಮಾರ ಕಟೀಲ್, ಮಾನ್ಯ ಲೋಕಸಭಾ ಸದಸ್ಯರು ಹಾಗೂ ಕ್ರಮ ಸಂಖ್ಯೆ: 20ರಲ್ಲಿ ಶ್ರೀ ವಿಠಲ ಕಟಕಗೊಂಡ, ಶಾಸಕರು, ನಾಗಠಾನ, ಬಿಜಾಪುರ ಜಿಲ್ಲೆ ಇವರ ಬದಲಿಗೆ ಶ್ರೀ ಶಂಕರಪ್ಪ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರನ್ನು ನಾಮಕರಣ ಮಾಡಿ ಉಳಿದ ಸದಸ್ಯರು ಹಾಗೆಯೇ ಮುಂದುವರೆಯುವರು.

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಪಿಆರ್.ನಂ. 1957 ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಯೋಜನೆ).

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 276 ಎನ್‌ಸಿಇ 2010 ಬೆಂಗಳೂರು, ದಿನಾಂಕ: 29–06–2011

ಸರ್ಕಾರಿ ಆದೇಶ ಸಂಖ್ಯೆ: ಇಎನ್ 498 ಎನ್‌ಸಿಇ 2010 ದಿನಾಂಕ: 21–02–2011ರ ಆದೇಶ ಭಾಗದಲ್ಲಿ ಮೆ: NSL Sugars Ltd. Unit-II ಇವರಿಗೆ ಗುಲ್ಬರ್ಗಾ ಜಿಲ್ಲೆಯ, ಆಳಂದ ತಾಲ್ಲೂಕಿನ, ಭೂಸನೂರ್ ಎಂಬಲ್ಲಿ 34 ಮೆ.ವ್ಯಾ. (Gross) ಮತ್ತು 26 ಮೆ.ವ್ಯಾ. (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಎಂದು ನಮೂದಿಸಿರುವುದನ್ನು

ಮೆ: NSL Sugars Ltd. Unit-II ಇವರಿಗೆ ಗುಲ್ಬರ್ಗಾ ಜಿಲ್ಲೆಯ, ಆಳಂದ ತಾಲ್ಲೂಕಿನ ಭೂಸನೂರ್ ಎಂಬಲ್ಲಿ 34 ಮೆ.ವ್ಯಾ. (Gross) ಮತ್ತು 32 ಮೆ.ವ್ಯಾ. (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಎಂದು ತಿದ್ದುಪಡಿಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಪಿಆರ್.ನಂ. 1958 ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಮಮಇ 103 ಮಭಾಬ 2010 ಬೆಂಗಳೂರು, ದಿನಾಂಕ: 23–06–2011

ಸರ್ಕಾರದ ಆದೇಶ ಸಂಖ್ಯೆ: ಮಮಇ 103 ಮಭಾಬ 2010(2), ದಿನಾಂಕ: 07–09–2010ರ ಆದೇಶ ಭಾಗದ 6ನೇ ಸಾಲಿನಲ್ಲಿ "ಒಳಗಾದ ಬಾಲಕಿಯರ ಬಾಲಮಂದಿರವನ್ನಾಗಿ" ನಂತರ "ಹುದ್ದೆಗಳ ಸಹಿತ" ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ–1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿಆರ್.ನಂ. 1959

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಒಇ 77 ಪಿಪಿಇ 2011 ಬೆಂಗಳೂರು, ದಿನಾಂಕ: 26–07–2011

ಸರ್ಕಾರದ ಆದೇಶ ಸಂಖ್ಯೆ: ಒಇ 194 ಪಿಪಿಇ 2009, ದಿನಾಂಕ: 23ನೇ ಆಗಸ್ಟ್ 2010ರ ಆದೇಶದ ಭಾಗದಲ್ಲಿ

1) "ಚಾಮರಾಜನಗರ ಜಿಲ್ಲೆಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಸೃಜಿಸಲಾಗಿರುವ ಹುದ್ದೆಗಳು" ಎಂಬುದರ ಕೆಳಗೆ

"3 ಶೀಘ್ರಲಿಪಿಗಾರರ/ಬೆರಳಚ್ಚುಗಾರ 01

ಎಂಬುದಾಗಿ ಇರುವುದನ್ನು

3 ಶೀಘ್ರಲಿಪಿಗಾರರ 01

ಎಂದೂ,

2) "ಚಾಮರಾಜನಗರ ಆರಕ್ಷಕ ಅಧೀಕ್ಷಕರ ಕಛೇರಿಗೆ ಹೊಂದಿಕೊಂಡಂತೆ ಸೃಜಿಸಲಾಗಿರುವ ಹುದ್ದೆಗಳು" ಎಂಬುದರ ಕೆಳಗೆ

"2 ಶೀಘ್ರಲಿಪಿಗಾರರ/ಬೆರಳಚ್ಚುಗಾರ 01

ಎಂಬುದಾಗಿ ಇರುವುದನ್ನು

2 ಶೀಘ್ರಲಿಪಿಗಾರರ 01

ಎಂದೂ ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದು. ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ: ಒಇ 194 ಪಿಪಿಇ 2009, ದಿನಾಂಕ: 23ನೇ ಆಗಸ್ಟ್ 2010ರಲ್ಲಿ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ)

ಪಿಆರ್.ನಂ. 1960

INFRASTRUCTURE DEVELOPMENT SECRETARIAT

CORRIGENDUM

No. IDD / 29/ IDM/2010, Bangalore, Dated 13-07-2011

Ref : G.O. No. IDD / 29/ IDM/2010, Dated 31-03-2011

In the order portion of the Government Order at reference above, for the words "Rs. 37.00 crores (Rupees Thirty Seven Crores only) the words Rs.33.00 crores (Rupees Thirty three crores only) and to surrender Rs. 4.00 crores shall be substituted. Except the above other things remains unchanged.

By Order and in the name of the Governor of Karnataka,
R. Shivalingaiah,
Under Secretary to Government,
Infrastructure Development Department.

PR No. 1961

COMMERCE AND INDUSTRIES SECRETARIAT

CORRIGENDUM

No. CI /110/SPI/2011, Bangalore, Dated 06-07-2011

Sub: M/s. R.M. Steels Ltd., to establish a "Integrated Steel Plant – 5.0. MTPA & 360 MW Captive Power Plant" – Extension of time to implement the project.

Read: G. O. No : CI 173 SPI 2010, dated 16-07-2010.

In Government Order read above, in the order portion, after the words "G.O. read at (1) above by", the following words "two years i.e., upto June 2012" shall be inserted in place of "one year (i.e., upto June 2011)".

Other matters remain the same as in the G.O. read above.

By Order and in the name of the Governor of Karnataka,
A.V. Srinivasa Dikshit,
Desk Officer (Technical Cell),
Commerce & Industries Department.

PR No. 1962

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಸೇರ್ಪಡೆ

ಸಂಖ್ಯೆ : ಅಪಜೀ 25 ಇಎನ್‌ಜಿ 2008 (ಭಾಗ-1), ಬೆಂಗಳೂರು, ದಿನಾಂಕ 13-07-2011.

ಸರ್ಕಾರಿ ಆದೇಶದ ಸಂಖ್ಯೆ : ಅಪಜೀ 25 ಇಎನ್‌ಜಿ 2008, ದಿನಾಂಕ 04-02-2009 (ಯೂನಿಕ್ ಸಂಖ್ಯೆ : 35)ರ ಆದೇಶದ ಭಾಗದ ಉಪಕಂಡಿಕೆ(ಅ)ದ ನಂತರ ಕೆಳಕಂಡ ಉಪಕಂಡಿಕೆ (ಇ) ಸೇರ್ಪಡೆ ಗೊಳಿಸತಕ್ಕದ್ದು.

"(ಇ) ಕಪ್ಪೆಚಿಪ್ಪು, ಸಿಲಿಕಾ ಸ್ಯಾಂಡ್ ಮತ್ತು ಮೌಲ್ಡಿಂಗ್ ಸ್ಯಾಂಡ್‌ಗಳ ಗಣಿಗಾರಿಕೆಗೆ ಸಂಬಂಧಪಟ್ಟಂತೆ:-

ಗಣಿಗಾರಿಕೆಗಾಗಿ ಗುತ್ತಿಗೆ ಮೇಲೆ ನೀಡಲ್ಪಡುವ ಅರಣ್ಯೇತರ ಪ್ರದೇಶದಲ್ಲಿ ಕೈಗೊಳ್ಳಲಾಗುವ ಕಪ್ಪೆಚಿಪ್ಪು, ಸಿಲಿಕಾ ಸ್ಯಾಂಡ್ ಮತ್ತು ಮೌಲ್ಡಿಂಗ್ ಸ್ಯಾಂಡ್‌ಗಳ ಅಲ್ಪ ಆರ್ಥಿಕ ಗಳಿಕೆಯ ಕಾರಣದಿಂದ ಪ್ರತಿ ಹೆಕ್ಟೇರ್‌ಗೆ ರೂ. 28,000/- ದಂತೆ ಮೂರು ಸಮ ವಾರ್ಷಿಕ ಕಂತುಗಳಲ್ಲಿ ಪರಿಸರ ಸಂರಕ್ಷಣಾ ಶುಲ್ಕವನ್ನು ಪಾವತಿಸತಕ್ಕದ್ದು".

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಮನೋಹರ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್.ನಂ. 1963

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಏರೋಸ್ಪೇಸ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಬಂಡವಾಳ ಹೂಡುವ ಮೆ: ಡೈನಾಮ್ಯಾಟಿಕ್ ಟೆಕ್ನಾಲಜೀಸ್ ಲಿ., ಕೆ.ಐ.ಎ.ಡಿ.ಬಿ ಏರೋಸ್ಪೇಸ್ ಇಂಡಸ್ಟ್ರಿಯಲ್ ಏರಿಯಾ, ದೇವನಹಳ್ಳಿ ತಾ: ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಗೆ ವಿಶೇಷ ಸಹಾಯ ಸವಲತ್ತುಗಳನ್ನು ಮಂಜೂರು ಮಾಡುವ ಬಗ್ಗೆ.

ಪ್ರಸ್ತಾವನೆ :

ಏರೋಸ್ಪೇಸ್ ಇಂಜಿನಿಯರಿಂಗ್ ಕೈಗಾರಿಕೆಗಳ ಸ್ಥಾಪನೆಗೆ ಬೆಂಗಳೂರು ಬಹು ಬೇಡಿಕೆಯುಳ್ಳ ಸ್ಥಾನವಾಗಿರುತ್ತದೆ. (favoured destination). ರಕ್ಷಣಾ ಮತ್ತು ಏರೋಸ್ಪೇಸ್ ಚಟುವಟಿಕೆಗಳಿಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳು ಬೆಂಗಳೂರಿನಲ್ಲಿರುವುದರಿಂದ ಇಂತಹ ಘಟಕಗಳನ್ನು ಇಲ್ಲಿ ಸ್ಥಾಪಿಸಲು ಅವಕಾಶಗಳಿರುತ್ತವೆ. ಈ ಕೈಗಾರಿಕೆಗೆ ತುಂಬಾ ನೈಪುಣ್ಯತೆ ಹಾಗು ಜಾಣ್ಮೆಯುಳ್ಳ ಕೆಲಸಗಾರರ ಅವಶ್ಯಕತೆ ಇರುತ್ತದೆ. ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳು ಕೈಗಾರಿಕಾ ನೀತಿ 2009-14ರ ಪ್ರಕಾರ ವಲಯ-4 ರಲ್ಲಿ ಬರುವುದರಿಂದ ಯಾವುದೇ ಸವಲತ್ತುಗಳನ್ನು ನೀಡುವುದು ಸಾಧ್ಯವಿರುವುದಿಲ್ಲ. ಆದರೆ ಏರೋಸ್ಪೇಸ್ ಇಂಜಿನಿಯರಿಂಗ್ ಘಟಕಗಳ ಅಭಿವೃದ್ಧಿಯಿಂದ ಬೆಂಗಳೂರಿಗೆ ಒಂದು ವಿಶೇಷ ಪ್ರಸಿದ್ಧಿ ಬರುವುದರಿಂದ ಇಂತಹ ಘಟಕಗಳಿಗೆ ಪ್ರೋತ್ಸಾಹ ನೀಡುವುದು ಅವಶ್ಯಕವಿರುತ್ತದೆ.

ಮೆ: ಡೈನಾಮ್ಯಾಟಿಕ್ ಟೆಕ್ನಾಲಜೀಸ್ ಲಿ, ರವರು ವಲಯ-4 ರಲ್ಲಿ ಕೈಗಾರಿಕೆ ಸ್ಥಾಪಿಸುತ್ತಿದ್ದಾಗ್ಯೂ, ವಿಶೇಷ ಸಂದರ್ಭ ಎಂದು ಪರಿಗಣಿಸಿ, ಹಲವು ವಿಶೇಷ ರಿಯಾಯಿತಿಗಳನ್ನು ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಸಿಐ 418 ಎಸ್‌ಪಿಐ 2010, ಬೆಂಗಳೂರು, ದಿನಾಂಕ : 08-08-2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಮೆ: ಡೈನಾಮ್ಯಾಟಿಕ್ ಟೆಕ್ನಾಲಜೀಸ್ ಲಿ., ಇವರಿಗೆ ಕೆ.ಐ.ಎ.ಡಿ.ಬಿ ಏರೋಸ್ಪೇಸ್ ಇಂಡಸ್ಟ್ರಿಯಲ್ ಏರಿಯಾ, ದೇವನಹಳ್ಳಿ ತಾ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮೂರು ವರ್ಷಗಳಲ್ಲಿ ರೂ. 465.00 ಕೋಟಿಗಳ ಬಂಡವಾಳವನ್ನು ಹೂಡಿ, ಕೈಗಾರಿಕೆಯನ್ನು ಸ್ಥಾಪಿಸಿ, 2100 ಜನರಿಗೆ ನೇರ ಉದ್ಯೋಗವನ್ನು ಕೊಡುವ ಷರತ್ತಿನೊಂದಿಗೆ ಈ ಕೆಳಗಿನ ವಿಶೇಷ ರಿಯಾಯಿತಿ ಮತ್ತು ಉತ್ತೇಜನಗಳನ್ನು ಮಂಜೂರು ಮಾಡಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

1. ಯೋಜನೆಯ ಅನುಷ್ಠಾನ ಪ್ರಾರಂಭವಾದಂದಿನಿಂದ ಮೂರು ವರ್ಷಗಳ ಕಾಲ ಸ್ಥಿರ ಸ್ವತ್ತುಗಳು, ಯಂತ್ರಸ್ಥಾವರಗಳು, ವಿದ್ಯುತ್ ಉತ್ಪಾದನಾ ಯಂತ್ರಸ್ಥಾವರಗಳ ಖರೀದಿಯ ಮೇಲೆ 100% ಪ್ರವೇಶ ತೆರಿಗೆ ಪಾವತಿಯಿಂದ ವಿನಾಯಿತಿ.
2. ಕಂಪನಿಯು ರಾಜ್ಯದಲ್ಲಿ ಗ್ರಾಹಕರಿಗೆ ತನ್ನ ಉತ್ಪಾದನೆಗಳನ್ನು ಮಾರಾಟ ಮಾಡಿದಾಗ ಉದ್ಭವಿಸುವ ಮೌಲ್ಯವರ್ಧಿತ ತೆರಿಗೆಯ ಶೇಕಡ 25 ರಷ್ಟನ್ನು 7 ವರ್ಷಗಳವರೆಗೆ ಸ್ಥಿರ ಬಂಡವಾಳ ಹೂಡಿಕೆಯ ಶೇಕಡ 50ರ ಮಿತಿಗೆ ಒಳಪಟ್ಟು ಬಡ್ಡಿರಹಿತ ಮೃದುಸಾಲವನ್ನು ಮಂಜೂರು ಮಾಡುವುದು.
3. ಕಂಪನಿಯ ಉತ್ಪಾದನೆಯನ್ನು ಪಡೆದುಕೊಂಡ ವ್ಯಾಪಾರಿಯು ನಂತರ ಅಂತರರಾಜ್ಯ ಮಾರಾಟ ಅಥವಾ ಸ್ಟಾಕ್ ಟ್ರಾನ್ಸ್‌ಫರ್ ಅಥವಾ ರಫ್ತು ಮಾಡಿದಾಗ ಮರುಪಾವತಿ ಪಡೆಯುವ input tax ಅನ್ನು ಕಂಪನಿಯ ಗ್ರಾಸ್ ವ್ಯಾಟ್‌ನಲ್ಲಿ ಕಳೆದು ಉಳಿಯುವ ಮೌಲ್ಯವರ್ಧಿತ ತೆರಿಗೆಯು ಬಡ್ಡಿರಹಿತ ಸಾಲದ ಲೆಕ್ಕಾಚಾರಕ್ಕೆ ಅರ್ಹತೆಯನ್ನು ಪಡೆಯುವುದು.
4. ಈ ಮೃದುಸಾಲವನ್ನು 7 ವರ್ಷಗಳ ನಂತರ ಮೂರು ವರ್ಷಗಳ ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 127 ವೆಚ್ಚ-1/ 2011, ದಿನಾಂಕ 25-01-2011 ಮತ್ತು ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ: ಸಿ:164:2011, ದಿನಾಂಕ 19-04-2011 ರಲ್ಲಿ ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ವಿ. ಶ್ರೀನಿವಾಸ ದೀಕ್ಷಿತ್

ಪೀಠಾಧಿಕಾರಿ (ತಾಂತ್ರಿಕ ಕೋಶ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 1964

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಕೆ. ರಾಮಣ್ಣ, ಸರ್ಕಾರಿ ಅಭಿಯೋಜಕರು, ಇವರು ಬೆಂಗಳೂರು ವಿಶೇಷ ನ್ಯಾಯಾಲಯದ ಸಿ.ಸಿ.06/97ರಲ್ಲಿ ಎಸಗಿರುವ ಕರ್ತವ್ಯಲೋಪದ ಬಗ್ಗೆ ಇಲಾಖಾ ವಿಚಾರಣೆ ಕೈಬಿಡುವ ಬಗ್ಗೆ.

ಉಲ್ಲೇಖ :
1. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಪಿಎನ್.ಬಿಸಿ. 686/2001, ದಿನಾಂಕ 07-12-2001.
2. ಕಾರಣ ಕೇಳುವ ನೋಟೀಸಿನ ಸಂಖ್ಯೆ: ಒಇ 555 ಪಿಪಿಇ 2005, ದಿನಾಂಕ 24/26-11-2009.
3. ಶ್ರೀ ಕೆ. ರಾಮಣ್ಣ, ರವರ ದಿನಾಂಕ 13-01-2011 ಲಿಖಿತ ಹೇಳಿಕೆ.
4. ಸರ್ಕಾರದ ಆದೇಶ ಸಂಖ್ಯೆ: ಒಇ 555 ಪಿಪಿಇ 2005, ದಿನಾಂಕ 23-07-2010.
5. ಶ್ರೀ ಬಿ. ರಂಗಸ್ವಾಮಿ, ನಿವೃತ್ತ ನ್ಯಾಯಾಧೀಶರು (ಜಿಲ್ಲಾ ಮತ್ತು ಸತ್ರ ನ್ಯಾಯಾಲಯ), ಇವರ ವಿಚಾರಣಾ ವರದಿ ಸಂಖ್ಯೆ: ಒಇ 555 ಪಿಪಿಇ 2005, ದಿನಾಂಕ 26-02-2011.

ಪ್ರಸ್ತಾವನೆ :

ಶ್ರೀ ಕೆ. ರಾಮಣ್ಣ, ಸರ್ಕಾರಿ ಅಭಿಯೋಜಕರು, ಎನ್.ಡಿ.ಪಿ.ಎಸ್. ನ್ಯಾಯಾಲಯ, ಬೆಂಗಳೂರು ಇವರು ವಿಶೇಷ ನ್ಯಾಯಾಲಯ (ಭ್ರಷ್ಟಾಚಾರ ನಿರೋಧ ಕಾಯ್ದೆ) ಬೆಂಗಳೂರು ಇಲ್ಲಿ ಸರ್ಕಾರಿ ಅಭಿಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಸದರಿ ನ್ಯಾಯಾಲಯದ ಸಿ.ಸಿ. ಸಂಖ್ಯೆ: 6/97ರ ಪ್ರಕರಣದ ವಿಚಾರಣೆ ನಡೆಸುವ ಸಂದರ್ಭದಲ್ಲಿ ಸದರಿ ಮೊಕದ್ದಮೆಯಲ್ಲಿ ಪ್ರಮುಖ ಸಾಕ್ಷಿಯಾದ ಚಾ.ಸಾ.ನಂ. 6, ಸುನಿಲ್ ಪರೇಖ್, ಇವರನ್ನು ವಿಚಾರಣೆ ಮಾಡಿರುವುದಿಲ್ಲ. ಹಾಗೂ ಪ್ರಮುಖ ಸಾಕ್ಷಿಯಾದ ಚಾ.ಸಾ. 5 ರವರ ವಿಚಾರಣೆ ಮಾಡದೆ ಪ್ರಕರಣವನ್ನು ಮುಕ್ತಾಯ ಮಾಡಿ, ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿಸಿದ ಸಂಬಂಧ ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮ 1966ರ ನಿಯಮ 3(1) ಉಪ ನಿಯಮ (ii) ಮತ್ತು (iii) ಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿ ಎಸಗಿರುವ ಕರ್ತವ್ಯ ಲೋಪಗಳಿಗೆ ಸಂಬಂಧಿಸಿದಂತೆ ಕರಡು ಆರೋಪ ಪಟ್ಟಿ, ಆರೋಪಗಳನ್ನು ಸಮರ್ಥಿಸುವ ವಿಷಯಗಳ ಪಟ್ಟಿ, ದಾಖಲಾತಿಗಳ ಪಟ್ಟಿ ಮತ್ತು ಸಾಕ್ಷಿದಾರರ ಪಟ್ಟಿಗಳನ್ನು ಅನುಬಂಧ-1 ರಿಂದ 4ರ ವರೆಗೆ ತಯಾರಿಸಿ ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳ ಬಗ್ಗೆ ಲಿಖಿತ ಹೇಳಿಕೆ ನೀಡುವಂತೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳ ಉಪಬಂಧಗಳಿಗನುಸಾರ ಶ್ರೀ ಕೆ. ರಾಮಣ್ಣ, ಸರ್ಕಾರಿ ಅಭಿಯೋಜಕರು ಇವರಿಗೆ ಕಾರಣ ಕೇಳುವ ತಿಳುವಳಿಕೆ ಪತ್ರದೊಂದಿಗೆ ದೋಷಾರೋಪಣ ಪಟ್ಟಿ ಅನುಬಂಧ-1 ರಿಂದ 4ರ ವರೆಗೆ ಜಾರಿಮಾಡಿ ಅವರ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವ ಅಥವಾ ನಿರಾಕರಿಸುವ ಬಗ್ಗೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಮೇಲೆ (2)ರಲ್ಲಿ ಓದಲಾಗಿರುವ ಕಾರಣ ಕೇಳುವ ನೋಟೀಸ್ ನೀಡುವ ಮೂಲಕ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಮೇಲೆ (3)ರಲ್ಲಿ ಓದಲಾಗಿರುವ ಪತ್ರದಲ್ಲಿ ಶ್ರೀ ಕೆ. ರಾಮಣ್ಣ, ಸರ್ಕಾರಿ ಅಭಿಯೋಜಕರು, ಎನ್.ಡಿ.ಪಿ.ಎಸ್. ನ್ಯಾಯಾಲಯ, ಬೆಂಗಳೂರು ಇವರು ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿ ಮುಂದಿನ ಕ್ರಮವನ್ನು ಕೈಬಿಡುವಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಶ್ರೀ ಕೆ. ರಾಮಣ್ಣ, ಸರ್ಕಾರಿ ಅಭಿಯೋಜಕರು, ಎನ್.ಡಿ.ಪಿ.ಎಸ್. ನ್ಯಾಯಾಲಯ, ಬೆಂಗಳೂರು ಇವರು ಸಲ್ಲಿಸಿದ್ದ ಲಿಖಿತ ಹೇಳಿಕೆಯು ಒಪ್ಪತಕ್ಕಂಥದ್ದಲ್ಲವಾದ್ದರಿಂದ, ಸದರಿ ಅಧಿಕಾರಿಗಳ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಬಾಕಿ ಇದ್ದಾಗ್ಯೂ ಅದೇ ಆರೋಪಗಳ ಮೇಲೆ ಶಿಸ್ತಿನ ಕ್ರಮವನ್ನು ನಡೆಸಬಹುದಾಗಿದ್ದರಿಂದ ಇವರ ವಿರುದ್ಧದ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಮೇಲೆ (4)ರಲ್ಲಿ ಓದಲಾದ ದಿನಾಂಕ 23-07-2010ರ ಆದೇಶದಲ್ಲಿ, ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 11ರ ಇಲಾಖಾ ವಿಚಾರಣೆಯನ್ನು ನಡೆಸಲು ನಿಯಮ (2)ರ ಅಡಿಯಲ್ಲಿ ಶ್ರೀ ಬಿ. ರಂಗಸ್ವಾಮಿ, ನಿವೃತ್ತ ನ್ಯಾಯಾಧೀಶರು (ಜಿಲ್ಲಾ ಮತ್ತು ಸತ್ರ ನ್ಯಾಯಾಲಯ), ಸಂಖ್ಯೆ: 768, 9ನೇ ಮೈನ್, 3ನೇ ಬ್ಲಾಕ್, 3ನೇ ಸ್ಟೇಜ್, ಬಸವೇಶ್ವರನಗರ, ಬೆಂಗಳೂರು-79 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಪ್ರಕರಣದ ದಾಖಲೆಗಳನ್ನು ಸರ್ಕಾರದ ಪರವಾಗಿ ವಿಚಾರಣಾ ಪ್ರಾಧಿಕಾರಿಯವರ ಮುಂದೆ ಮಂಡಿಸಲು ಮೇಲ್ಕಂಡ ನಿಯಮಗಳ ನಿಯಮ 11(5)(ಸಿ)ರ ಅನ್ವಯ ಶ್ರೀ ಕೆ.ಬಿ. ಕುಲಕರ್ಣಿ, ಸಹಾಯಕ ಅಭಿಯೋಗ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು-9 ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಶಿಸ್ತು ಪ್ರಾಧಿಕಾರವು ಆರೋಪಿತ ಸರ್ಕಾರಿ ಅಧಿಕಾರಿಯವರಾದ ಶ್ರೀ ಕೆ. ರಾಮಣ್ಣ, ಸರ್ಕಾರಿ ಅಭಿಯೋಜಕರು, ಎನ್.ಡಿ.ಪಿ.ಎಸ್. ನ್ಯಾಯಾಲಯ, ಬೆಂಗಳೂರು ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) 1966, ರ ನಿಯಮ 3(I)(II)(III) ರನ್ನು ಉಲ್ಲಂಘಿಸಿರುವ ಬಗ್ಗೆ ಆರೋಪವನ್ನು ಸಾಬೀತುಪಡಿಸಿರುವುದಿಲ್ಲವೆಂದು ವಿಚಾರಣಾಧಿಕಾರಿಯವರು ಅಭಿಪ್ರಾಯಿಸಿ, ಶ್ರೀ ಕೆ. ರಾಮಣ್ಣ, ಇವರು ತನ್ನ ಕರ್ತವ್ಯದಲ್ಲಿ ಯಾವುದೇ ಲೋಪ ಅಥವಾ ದುರ್ನಡತೆಯನ್ನು ಎಸಗಿರುವುದಿಲ್ಲವೆಂದು ನಿರ್ಣಯಿಸಿ, ಆರೋಪವನ್ನು 'ನ' ಕಾರಾತ್ಮಕವೆಂದು ನಿರ್ಣಯಿಸಿ ವರದಿಯನ್ನು ನೀಡಿರುತ್ತಾರೆ.

ಆದುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 555 ಪಿಪಿಇ 2005, ಬೆಂಗಳೂರು, ದಿನಾಂಕ : 5-8-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಕೆ. ರಾಮಣ್ಣ, ಸಹಾಯಕ ಸರ್ಕಾರಿ ಅಭಿಯೋಜಕರು, ಎನ್.ಡಿ.ಪಿ.ಎಸ್. ನ್ಯಾಯಾಲಯ, ಬೆಂಗಳೂರು (ಹಿಂದಿನ ಸರ್ಕಾರಿ ಅಭಿಯೋಜಕರು, ವಿಶೇಷ ನ್ಯಾಯಾಲಯ (ಭ್ರಷ್ಟಾಚಾರ ನಿರೋಧ ಕಾಯ್ದೆ) ಬೆಂಗಳೂರು ಇವರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಿಂದ ಸಾಬೀತಾಗಿಲ್ಲದಿರುವುದರಿಂದ, ಆರೋಪಮುಕ್ತರನ್ನಾಗಿಸಿ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1965 ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಬಿ)

ಇಂಧನ ಸಚಿವಾಲಯ

ವಿಷಯ : ಮೆ: ಎಸ್.ಕೆ.ಎನ್. ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಯಾತನೂರು ಕಿರು ಜಲ ವಿದ್ಯುತ್ ಯೋಜನೆಗಾಗಿ ಕಾಲಾವಕಾಶ ವಿಸ್ತರಣೆ ಬಗ್ಗೆ ಆದೇಶ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಇಂಇ 299 ಎನ್‌ಸಿಇ 2004, ದಿನಾಂಕ: 13–09–2004.
2. ಸರ್ಕಾರಿ ಆದೇಶ ಸಂಖ್ಯೆ: ಇಂಇ 118 ಎನ್‌ಸಿಇ 2005, ದಿನಾಂಕ: 27–04–2005.
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 374 ಎನ್‌ಸಿಇ 2008, ದಿನಾಂಕ: 12–01–2009.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಸ್‌ಹೆಚ್–170/ಯಾತನೂರು ಎಂಹೆಚ್‌ಎಸ್/953 ದಿನಾಂಕ: 22–03–2011.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ: ಎಸ್.ಕೆ.ಎನ್ ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಯಾತನೂರು ಗ್ರಾಮದ ಬಳಿ ಇಂಡಿ ಬ್ರಾಂಚ್ ಕೆನಾಲ್‌ನ ಡಿಸ್ಟ್ರಿಬ್ಯೂಟರಿ–II (20.2 ಕಿ.ಮೀ ನಿಂದ 21.5 ಕಿ.ಮೀ)ಕ್ಕೆ ಅಡ್ಡಲಾಗಿ 500 ಕಿಲೊ ವ್ಯಾಟ್ (0.5 ಮೆಗಾ ವ್ಯಾಟ್) ಸಾಮರ್ಥ್ಯದ ಯಾತನೂರು ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ: ಎಸ್.ಕೆ.ಎನ್ ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಯಾತನೂರು ಗ್ರಾಮದ ಬಳಿ ಇಂಡಿ ಬ್ರಾಂಚ್ ಕೆನಾಲ್‌ನ ಡಿಸ್ಟ್ರಿಬ್ಯೂಟರಿ–II (20.2 ಕಿ.ಮೀ. ನಿಂದ 21.5 ಕಿ.ಮೀ.) ಕ್ಕೆ (ಮೊದಲು ಹಂಚಿಕೆ ಮಾಡಿದ ಸ್ಥಳವು ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ) ಅಡ್ಡಲಾಗಿ ಹಂಚಿಕೆಯಾದ 500 ಕಿಲೊ ವ್ಯಾಟ್ (0.5 ಮೆಗಾ ವ್ಯಾಟ್) ಸಾಮರ್ಥ್ಯದ ಯಾತನೂರು ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 1.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ: (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ: ಎಸ್.ಕೆ.ಎನ್. ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಯಾತನೂರು ಗ್ರಾಮದ ಬಳಿ ಇಂಡಿ ಬ್ರಾಂಚ್ ಕೆನಾಲ್‌ನ ಡಿಸ್ಟ್ರಿಬ್ಯೂಟರಿ–II (20.2 ಕಿ.ಮೀ. ನಿಂದ 21.5 ಕಿ.ಮೀ) ಕ್ಕೆ ಅಡ್ಡಲಾಗಿ ಹಂಚಿಕೆ ಮಾಡಲಾದ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಯಾತನೂರು ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನದ ಕಾಲಾವಧಿಯನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಇನ್ನೂ 24 ತಿಂಗಳುಗಳವರೆಗೆ ವಿಸ್ತರಿಸಲಾಗಿತ್ತು.

ಸದರಿ ಯೋಜನೆಯ ಅನುಷ್ಠಾನದ ಕಾಲಾವಧಿಯನ್ನು ದಿನಾಂಕ: 12–01–2011 ರಿಂದ ಇನ್ನೂ 18 ತಿಂಗಳುಗಳವರೆಗೆ ವಿಸ್ತರಿಸುವಂತೆ ಮೇಲೆ ಕ್ರಮ ಸಂಖ್ಯೆ: (4)ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಕೋರಿಕೆ ಮೇರೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ : ಇಎನ್ 185 ಎನ್‌ಸಿಇ 2011, ಬೆಂಗಳೂರು, ದಿನಾಂಕ: 03–08–2011

ಮೆ: ಎಸ್.ಕೆ.ಎನ್. ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಯಾತನೂರು ಗ್ರಾಮದ ಬಳಿ ಇಂಡಿ ಬ್ರಾಂಚ್ ಕೆನಾಲ್‌ನ ಡಿಸ್ಟ್ರಿಬ್ಯೂಟರಿ–II (20.2 ಕಿ.ಮೀ. ನಿಂದ 21.5 ಕಿ.ಮೀ) ಕ್ಕೆ ಅಡ್ಡಲಾಗಿ ಹಂಚಿಕೆ ಮಾಡಲಾದ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಯಾತನೂರು ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನದ ಕಾಲಾವಧಿಯನ್ನು ದಿನಾಂಕ: 12–01–2011 ರಿಂದ 18 ತಿಂಗಳುಗಳವರೆಗೆ ವಿಸ್ತರಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಂಇ 299 ಎನ್‌ಸಿಇ 2004 ದಿನಾಂಕ: 13–09–2004ರ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿಆರ್.ನಂ. 1966

ಇಂಧನ ಸಚಿವಾಲಯ

ವಿಷಯ : ಮೆ: ಕಿಂಗ್ಸ್‌ವೇ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಇಂಇ 90 ಎನ್‌ಸಿಇ 2004, ದಿನಾಂಕ: 12–03–2004.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/Show Cause Notice/2010 ದಿನಾಂಕ: 17–04–2010.
3, ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 201 ಎನ್‌ಸಿಇ 2010 ದಿನಾಂಕ: 26–04–2010.
4. ಮೆ: ಶ್ರೀ ಕಿಂಗ್ಸ್‌ವೇ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ನೀಡಿರುವ ಉತ್ತರ ದಿನಾಂಕ: 05–05–2010.
5. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ Show Cause Notice/MHS/2010/2034 ದಿನಾಂಕ: 05/07–07–2010.
6. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 201 ಎನ್‌ಸಿಇ 2010 ದಿನಾಂಕ: 23–09–2010.

ಪ್ರಸ್ತಾವನೆ:

1, ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಮೆ: ಕಿಂಗ್ಸ್‌ವೇ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೊಡಗು ಜಿಲ್ಲೆಯ ವಿರಾಜ್‌ಪೇಟೆ ತಾಲ್ಲೂಕಿನ ಮುಕುಟ ಗ್ರಾಮದ ಬಳಿ ಬರಾಪೊಳೆ ಹೊಳೆಗೆ ಅಡ್ಡಲಾಗಿ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಸರತಬ್ಬಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

2. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ದಿನಾಂಕ: 31–03–2005ರ ಅಂತ್ಯಕ್ಕೆ ಹಂಚಿಕೆಯಾಗಿರುವ ಕಿರು ಜಲ ವಿದ್ಯುತ್ ಯೋಜನೆಗಳ ಪಟ್ಟಿಯನ್ನು ಲಗತ್ತಿಸಿ ಕಳುಹಿಸುತ್ತಾ ಅಭಿವೃದ್ಧಿದಾರರ ಯೋಜನೆಯ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು ಹಾಗೂ ಸದರಿ ಯೋಜನೆಗಳ ಪ್ರಗತಿಯ ಬಗ್ಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಾಹಿತಿ ನೀಡಿಲ್ಲ ಹಾಗೂ ಕಾಲಾವಕಾಶ ವಿಸ್ತರಣೆಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಪ್ರಸ್ತಾವನೆಯನ್ನು ಸಲ್ಲಿಸಿಲ್ಲದಿರುವುದರಿಂದ ಸದರಿ ಅಭಿವೃದ್ಧಿದಾರರಿಗೆ ಸರ್ಕಾರದ ವತಿಯಿಂದ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷಗಳು ಕಳೆದರೂ ಅನುಷ್ಠಾನದ ನಿಟ್ಟಿನಲ್ಲಿ ಮೆ: ಕಿಂಗ್ಸ್‌ವೇ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆ ಹಂಚಿಕೆಯನ್ನು ಏಕೆ ರದ್ದುಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ಅಭಿವೃದ್ಧಿದಾರರನ್ನು ಕೋರಲಾಗಿತ್ತು.

4. ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಮೆ: ಕಿಂಗ್ಸ್‌ವೇ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಸರ್ಕಾರದ ಕಾರಣ ಕೇಳುವ ನೋಟೀಸಿಗೆ ಉತ್ತರಿಸಿ ಈ ವಿಷಯವು ಸರ್ವೋಚ್ಚ ನ್ಯಾಯಾಲಯದಿಂದ ರಚಿಸಲ್ಪಟ್ಟ ಕೇಂದ್ರ ಉನ್ನತಾಧಿಕಾರ ಸಮಿತಿಯ ಮುಂದಿದೆ ಎಂದು ತಿಳಿಸಿರುತ್ತಾರೆ.

5. ಅಭಿವೃದ್ಧಿದಾರರು ನೀಡಿರುವ ಉತ್ತರವನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಇವರಿಗೆ ಕಳುಹಿಸಿ ಮಾಹಿತಿ ಕೋರಲಾಗಿತ್ತು. ಕೇಂದ್ರ ಉನ್ನತಾಧಿಕಾರ ಸಮಿತಿಯ ಆದೇಶ ಜಾರಿಯಾಗಿ 4 ವರ್ಷಗಳು ಕಳೆದಿರುವುದರಿಂದ ಸರ್ಕಾರದಿಂದ ಅಭಿವೃದ್ಧಿದಾರರಿಗೆ ಮತ್ತೊಂದು ಕಾರಣ ಕೇಳುವ ನೋಟೀಸನ್ನು ನೀಡಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಮಾಡದಿದ್ದಲ್ಲಿ ಯೋಜನೆಯನ್ನು ರದ್ದುಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ತಿಳಿಸಿರುತ್ತಾರೆ. ಅದರಂತೆ ಮೇಲೆ ಕ್ರಮ ಸಂಖ್ಯೆ (6)ರ ಎರಡನೆ ಕಾರಣ ಕೇಳುವ ನೋಟೀಸನ್ನು ಅಭಿವೃದ್ಧಿದಾರರಿಗೆ ಜಾರಿಮಾಡಲಾಗಿತ್ತು. ಸದರಿ ಕಾರಣ ಕೇಳುವ ನೋಟೀಸಿಗೆ ಅಭಿವೃದ್ಧಿದಾರರಿಂದ ಯಾವುದೇ ಉತ್ತರ ಬಂದಿರುವುದಿಲ್ಲ.

6. ಅರಣ್ಯ ಇಲಾಖೆಯು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಬರುವ ಯೋಜನೆಗಳಿಗೆ ಬೇಕಾದ ಭೂಮಿಯು ಸರ್ಕಾರದ್ದಾಗಿದ್ದರೆ ಅಂತಹ ಯೋಜನೆಗಳಿಗೆ ಅನುಮತಿ ನೀಡಲಾಗುವುದಿಲ್ಲ ಹಾಗೂ ಯಾವುದೇ ಯೋಜನೆ ಪ್ರಾರಂಭವಾಗದೇ ಇದ್ದಲ್ಲಿ ಅನುಮತಿ ನೀಡಲಾಗುವುದಿಲ್ಲ ಎಂದು ತಿಳಿಸಿರುತ್ತದೆ.

7. ಆದುದರಿಂದ ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ:

ಸರ್ಕಾರಿ ಆದೇಶ ಸಂಖ್ಯೆ : ಇಎನ್ 201 ಎನ್‌ಸಿಇ 2010, ಬೆಂಗಳೂರು, ದಿನಾಂಕ: 01–08–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 90 ಎನ್‌ಸಿಇ 2004 ದಿನಾಂಕ: 12–03–2004 ರಲ್ಲಿ ಮೆ: ಶ್ರೀ ಕಿಂಗ್ಸ್‌ವೇ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೊಡಗು ಜಿಲ್ಲೆಯ ವಿರಾಜ್‌ಪೇಟೆ ತಾಲ್ಲೂಕಿನ ಮುಕುಟ ಗ್ರಾಮದ ಬಳಿ ಬರಾಪೊಳೆ ಹೊಳೆಗೆ ಅಡ್ಡಲಾಗಿ ಹಂಚಿಕೆಯಾಗಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಸರತಬ್ಬಿ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆಯ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಪಿಆರ್.ನಂ. 1967

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಕಂದಾಯ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆಯ ಸಂಡೂರು ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ಕಂಇ 19 ಮುಸರ 2008, ದಿನಾಂಕ: 25–02–2009.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿರುತ್ತದೆ.

1)	ಮಾನ್ಯ ವಿಧಾನಸಭಾ ಸದಸ್ಯರು, ಸಂಡೂರು ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2)	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ ಜಿಲ್ಲೆ	ಸದಸ್ಯರು
3)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಡೂರು ತಾಲ್ಲೂಕು	ಸದಸ್ಯರು
4)	ತಹಶೀಲ್ದಾರ್, ಸಂಡೂರು ತಾಲ್ಲೂಕು	ಸದಸ್ಯ ಕಾರ್ಯದರ್ಶಿ

ಮುಂದುವರೆದು, ಈ ಆದೇಶದಲ್ಲಿ ಅಧಿಕಾರೇತರ ನಾಲ್ಕು ಜನ ಸದಸ್ಯರ ನಾಮನಿರ್ದೇಶನ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿತ್ತು.

ಅದರಂತೆ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಕಂಇ 19 ಮುಸರ 2008, ಬೆಂಗಳೂರು, ದಿನಾಂಕ: 27ನೇ ಜುಲೈ 2011

ಈಗಾಗಲೇ ರಚಿಸಲಾದ ಬಳ್ಳಾರಿ ಜಿಲ್ಲೆಯ ಸಂಡೂರು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಾಮನಿರ್ದೇಶನಗೊಳಿಸಿ ಸರ್ಕಾರವು ಆದೇಶಿಸಿದೆ.

1. ಶ್ರೀ ದೊಡ್ಡನಗೌಡ ಬಿನ್ ಕೆ. ಬಸವನಗೌಡ, ತಾರಾನಗರ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಸಾಮಾನ್ಯ)	ಸದಸ್ಯರು
2. ಶ್ರೀಮತಿ ಬನ್ನಿಗಟ್ಟಿ ಸುಜಾತ ಗಂಡ ಶಂಕರ, ತೋರಣಗಲ್ಲು, ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಮಹಿಳೆ)	ಸದಸ್ಯರು
3. ಶ್ರೀ ವಿ.ಎಸ್. ಶಂಕರ್ ಬಿನ್ ಶಂಕ್ರಪ್ಪ, ಅಂತಾಪುರ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಪರಿಶಿಷ್ಟ ಜಾತಿ)	ಸದಸ್ಯರು
4. ಶ್ರೀ ನಾಗಾನಾಯಕ ಬಿನ್ ಪಿರಾನಾಯಕ, ತೋಕೆನಹಳ್ಳಿ ತಾಂಡ, ರಾಮದುರ್ಗ ಪೋಸ್ಟ್, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಪರಿಶಿಷ್ಟ ಪಂಗಡ)	ಸದಸ್ಯರು

ಈ ಸಮಿತಿಯ ಅವಧಿ ಐದು ವರ್ಷಗಳು ಅಥವಾ ಸರ್ಕಾರವು ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಈ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03–02–2001 ರಲ್ಲಿ ಹೊರಡಿಸಿದ ನಿಯಮಗಳನ್ವಯ ಹಾಗೂ ಸದರಿ ನಿಯಮಗಳಲ್ಲಿ ಸೂಚಿಸಿರುವ ಷರತ್ತುಗಳಿಗೆ ಬದ್ಧವಾಗಿ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಉಮಾಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಪಿಆರ್.ನಂ. 1968

ಕಂದಾಯ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆಯ ಸದಲಗಾ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ಕಂಇ 68 ಮುಸರ 2009, ದಿನಾಂಕ 25–02–2009

ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಬೆಳಗಾಂ ಜಿಲ್ಲೆಯ ಸದಲಗಾ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿರುತ್ತದೆ.

1) ಮಾನ್ಯ ವಿಧಾನಸಭಾ ಸದಸ್ಯರು, ಸದಲಗಾ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2) ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾಂ ಜಿಲ್ಲೆ	ಸದಸ್ಯರು
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕೋಡಿ ತಾಲ್ಲೂಕು	ಸದಸ್ಯರು
4) ತಹಶೀಲ್ದಾರ್, ಚಿಕ್ಕೋಡಿ ತಾಲ್ಲೂಕು	ಸದಸ್ಯ–ಕಾರ್ಯದರ್ಶಿ

ಮುಂದುವರೆದು, ಈ ಆದೇಶದಲ್ಲಿ ಅಧಿಕಾರೇತರ ನಾಲ್ಕು ಜನ ಸದಸ್ಯರ ನಾಮನಿರ್ದೇಶನ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿತ್ತು.

ಅದರಂತೆ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ

ಸರ್ಕಾರದ ಆದೇಶ ಸಂಖ್ಯೆ : ಕಂಇ 68 ಮುಸರ 2009, ಬೆಂಗಳೂರು, ದಿನಾಂಕ : 27–7–2011

ಈಗಾಗಲೇ ರಚಿಸಲಾದ ಬೆಳಗಾಂ ಜಿಲ್ಲೆಯ ಸದಲಗಾ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಾಮನಿರ್ದೇಶನಗೊಳಿಸಿ ಸರ್ಕಾರವು ಆದೇಶಿಸಿದೆ.

1) ಶ್ರೀ ಜಗದೀಶ ದತ್ತಾ ಪಾಂಗಮ, ಯಕ್ಸಂಬಾ	ಸಾಮಾನ್ಯ	ಸದಸ್ಯರು
2) ಶ್ರೀಮತಿ ಸುನೀತಾ ಬಾಬಾಸಾಬ ಖೋತ, ಶಮನೇವಾಡಿ	ಮಹಿಳೆ	ಸದಸ್ಯರು
3) ಶ್ರೀ ಸಂಭಜಿ ಮಾರುತಿ ಹಕ್ಯಾಗೋಳ, ಕೇರೂರು	ಪರಿಶಿಷ್ಟ ಜಾತಿ	ಸದಸ್ಯರು
4) ಶ್ರೀ ಕಲ್ಲಪ್ಪ ರಾಮು ನಾಯಿಕ, ಪಟ್ಟಣಕುಡಿ	ಪರಿಶಿಷ್ಟ ಪಂಗಡ	ಸದಸ್ಯರು

ಈ ಸಮಿತಿಯ ಅವಧಿ ಐದು ವರ್ಷಗಳು ಅಥವಾ ಸರ್ಕಾರವು ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಈ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ 03-02-2001 ರಲ್ಲಿ ಹೊರಡಿಸಿದ ನಿಯಮಗಳನ್ವಯ ಹಾಗೂ ಸದರಿ ನಿಯಮಗಳಲ್ಲಿ ಸೂಚಿಸಿರುವ ಷರತ್ತುಗಳಿಗೆ ಬದ್ಧವಾಗಿ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1969 ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ಕಂಇ 68 ಮುಸರ 2008, ದಿನಾಂಕ 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿರುತ್ತದೆ.

1) ಮಾನ್ಯ ವಿಧಾನಸಭಾ ಸದಸ್ಯರು, ಚಿತ್ರದುರ್ಗ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2) ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ಜಿಲ್ಲೆ	ಸದಸ್ಯರು
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿತ್ರದುರ್ಗ ತಾಲ್ಲೂಕು	ಸದಸ್ಯರು
4) ತಹಶೀಲ್ದಾರ್, ಚಿತ್ರದುರ್ಗ ತಾಲ್ಲೂಕು	ಸದಸ್ಯ-ಕಾರ್ಯದರ್ಶಿ

ಮುಂದುವರೆದು, ಈ ಆದೇಶದಲ್ಲಿ ಅಧಿಕಾರೇತರ ನಾಲ್ಕು ಜನ ಸದಸ್ಯರ ನಾಮನಿರ್ದೇಶನ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿತ್ತು.

ಅದರಂತೆ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ

ಸರ್ಕಾರದ ಆದೇಶ ಸಂಖ್ಯೆ : ಕಂಇ 68 ಮುಸರ 2008, ಬೆಂಗಳೂರು, ದಿನಾಂಕ : 26-7-2011

ಈಗಾಗಲೇ ರಚಿಸಲಾದ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಾಮನಿರ್ದೇಶನಗೊಳಿಸಿ ಸರ್ಕಾರವು ಆದೇಶಿಸಿದೆ.

1) ಶ್ರೀ ಜ.ರಾ. ರಾಮಮೂರ್ತಿ ಬಿನ್ ಲೇ.ಜ.ರಾ. ರಾಘವೇಂದ್ರರಾವ್ ಜೆ.ಜಿ.ಆರ್. 2ನೇ ಅಡ್ಡರಸ್ತೆ, ತುಂಗಾ ನಿಲಯ, ಚಿತ್ರದುರ್ಗ	ಸಾಮಾನ್ಯ	ಸದಸ್ಯರು
2) ಶ್ರೀಮತಿ ಉಮಾಬಾಯಿ ಕೋಂ ಗೋಪಾಲರಾವ್ ಜಾಧವ್, ಧರ್ಮಶಾಲಾ ರಸ್ತೆ, ಚಿತ್ರದುರ್ಗ	ಮಹಿಳೆ	ಸದಸ್ಯರು
3) ಶ್ರೀ ಎಂ. ಗೋವಿಂದರಾಜ್ ಬಿನ್ ಮಲ್ಲಣ್ಣ ಎ.ಡಿ. ಕಾಲೋನಿ, ಮೆದೇಹಳ್ಳಿ ಅಂಚೆ, ಚಿತ್ರದುರ್ಗ ತಾಲ್ಲೂಕು	ಪರಿಶಿಷ್ಟ ಜಾತಿ	ಸದಸ್ಯರು
4) ಶ್ರೀ ಆರ್. ಸಿ. ಪಾಪಯ್ಯ ಬಿನ್ ಚನ್ನಯ್ಯ, ಬಚ್ಚಬೋರನಹಟ್ಟಿ, ಗೋನೂರು ಅಂಚೆ, ಚಿತ್ರದುರ್ಗ ತಾಲ್ಲೂಕು	ಪರಿಶಿಷ್ಟ ಪಂಗಡ	ಸದಸ್ಯರು

ಈ ಸಮಿತಿಯ ಅವಧಿ ಐದು ವರ್ಷಗಳು ಅಥವಾ ಸರ್ಕಾರವು ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಈ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ 03-02-2001 ರಲ್ಲಿ ಹೊರಡಿಸಿದ ನಿಯಮಗಳನ್ವಯ ಹಾಗೂ ಸದರಿ ನಿಯಮಗಳಲ್ಲಿ ಸೂಚಿಸಿರುವ ಷರತ್ತುಗಳಿಗೆ ಬದ್ಧವಾಗಿ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1970 ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಶ್ರೀಮತಿ ನಜ್ಮಾಜಿ, ತಹಶೀಲ್ದಾರರು ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ : 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 51 ಎಎಸ್‌ಡಿ 2008, ದಿನಾಂಕ 23-05-2008

2) ಶ್ರೀಮತಿ ನಜ್ಮಾಜಿ, ತಹಶೀಲ್ದಾರ್ ಇವರ ಪತ್ರ ದಿನಾಂಕ 11-06-2008

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 11-06-2008ರ ಅಧಿಸೂಚನೆಯನ್ವಯ ಶ್ರೀಮತಿ ನಜ್ಮಾಜಿ, ಇವರು ಕಂದಾಯ ಇಲಾಖೆಯ ತಹಶೀಲ್ದಾರ್, ಗುಂಪು-ಬಿ ಹುದ್ದೆಗೆ ನೇಮಕಗೊಂಡಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ 11-06-2008ರ ಪತ್ರದಲ್ಲಿ ಸದರಿಯವರು, ಕಂದಾಯ ಇಲಾಖೆಯಲ್ಲಿ ಸೇವೆ ಪ್ರಾರಂಭಿಸುವ ಪೂರ್ವದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕಿಯಾಗಿ ದಿನಾಂಕ 4-02-2004 ರಿಂದ ಸಲ್ಲಿಸಿರುವ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯಗಳಿಗೆ ಪರಿಗಣಿಸುವಂತೆ ಕೋರಿರುತ್ತಾರೆ.

ಶ್ರೀಯುತರ ಮನವಿಯನ್ನು ಹಾಗೂ ಅವರ ಸೇವಾ ಪುಸ್ತಕವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಶ್ರೀಮತಿ ನಜ್ಮಾಜಿ, ಇವರು ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಶಿವಮೊಗ್ಗ ಇವರ ಜ್ಞಾಪನ ಸಂಖ್ಯೆ: ಇ1/ಫ್ರೌ.ಶಾ.ನೇ. 46/03–04, ದಿನಾಂಕ 30–01–2004ರನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ನೇಮಕಗೊಂಡಿದ್ದು ನಂತರ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ ಇವರ ಆದೇಶ ಸಂಖ್ಯೆ: ಇ1/ಗ್ರೂಪ್–ಬಿ/ಹು.ನೇ/ಬಿಡುಗಡೆ/14/2008–09, ದಿನಾಂಕ 26–05–2008ರನ್ವಯ ದಿನಾಂಕ 04–06–2008 ರಂದು ಸದರಿ ಸೇವೆಯಿಂದ ಬಿಡುಗಡೆ ಹೊಂದಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಗಣಿಸಿ ಶ್ರೀಮತಿ ನಜ್ಮಾಜಿ, ತಹಶೀಲ್ದಾರರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ದಿನಾಂಕ 5–02–2004 ರಿಂದ ದಿನಾಂಕ 04–06–2008 ರವರೆಗಿನ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 224 (ಎ) ರನ್ವಯ ಪ್ರಸ್ತುತ ಸೇವೆಗೆ ನಿವೃತ್ತಿ ವೇತನ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 308 ಎಎಸ್‌ಡಿ 2008, ಬೆಂಗಳೂರು, ದಿನಾಂಕ : 04–08–2011

ಮೇಲೆ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀಮತಿ ನಜ್ಮಾಜಿ, ತಹಶೀಲ್ದಾರರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಕಂದಾಯ ಇಲಾಖೆಯ ಸೇವೆಗೆ ಸೇರುವ ಪೂರ್ವದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಹಾಯಕ ಶಿಕ್ಷಕರಾಗಿ ದಿನಾಂಕ 5–2–2004 ರಿಂದ ದಿನಾಂಕ 4–6–2008ರವರೆಗೆ ಸಲ್ಲಿಸಲಾಗಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 224 (ಎ) ರೀತ್ಯ ಸದರಿಯವರ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ–7) ರವರ ಟಿಪ್ಪಣಿ ಸಂಖ್ಯೆ: ಆ.ಇ. 1177 ವೆಚ್ಚ–7/2009, ದಿನಾಂಕ 21–12–2009ರಲ್ಲಿ ನೀಡಿರುವ ಸಹಮತದೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 1971

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ದಿವಂಗತ ವಿ.ಪಿ. ಕೆರಿಮಠ, ಅಧೀನ ಕಾರ್ಯದರ್ಶಿ, ನಿಯೋಜನೆ ಮೇಲೆ, ವಿಶೇಷ ಭೂ ಸ್ವಾಧೀನ ಅಧಿಕಾರಿ, ಸಿಂಧನೂರು ಇವರ ಗೃಹ ಮುಂಗಡ ಸಾಲದ ಮೊತ್ತದ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 77 ಆಹಿಮು 87, ದಿನಾಂಕ 21–8–1987.
2. ಶ್ರೀಮತಿ ಜಯಶ್ರೀ ವಿಜಯ ಮಹಾತೇಂಶ ಕೆರಿಮಠ, ಮನೆ ನಂ. 68, ಮಲ್ಲಿಕಾರ್ಜುನ ನಗರ, ನಾಗರಹಾಳ್ ಪಬ್ಲಿಕ್ ಸ್ಕೂಲ್ ಹತ್ತಿರ, ಆಶ್ರಮ ರಸ್ತೆ, ವಿಜಾಪುರ, ಇವರ ಮನವಿ ದಿನಾಂಕ 7.02.2009.
3. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು ಇವರ ಪತ್ರ ಸಂಖ್ಯೆ : ಡಿಓ ಸಂ : ಲೋನ್ಸ್ 11/17–2011–12, ದಿನಾಂಕ 28–6–2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 21–8–1987ರ ಸರ್ಕಾರದ ಆದೇಶದಲ್ಲಿ ವಿ.ಪಿ. ಕೆರಿಮಠ, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಸಚಿವಾಲಯ ಇವರಿಗೆ ರೂ. 1,06,400.00 ಗಳ ಗೃಹ ನಿರ್ಮಾಣದ ಮುಂಗಡವನ್ನು ಮಂಜೂರು ಮಾಡಲಾಗಿತ್ತು. ಅಧಿಕಾರಿಯವರು ಸೇವೆಯಲ್ಲಿದ್ದಾಗಲೇ ದಿನಾಂಕ 12–10–2006 ರಂದು ನಿಧನ ಹೊಂದಿರುತ್ತಾರೆ. ಮೇಲೆ ಕ್ರಮ ಸಂಖ್ಯೆ 2 ರಲ್ಲಿ ದಿವಂಗತ ಅಧಿಕಾರಿಯವರ ಪತ್ನಿಯವರು ಗೃಹ ಮುಂಗಡ ನಿರ್ಮಾಣದ ಬಾಕಿಯನ್ನು ಮರುಪಾವತಿಸುವುದಾಗಿ ತಿಳಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಮಹಾಲೇಖಪಾಲಕರ ಪತ್ರದಲ್ಲಿ ದಿವಂಗತ ವಿ.ಪಿ. ಕೆರಿಮಠ, ಸರ್ಕಾರದ ಅಧೀನ ಕಾರ್ಯದರ್ಶಿ, ಇವರ ಗೃಹ ನಿರ್ಮಾಣದ ಮುಂಗಡ ರೂ. 10,06,400.00 ಗಳನ್ನು ಈಗಾಗಲೇ ಮರುಪಾವತಿಸಿದ್ದು ಇದರ ಮೇಲಿನ ಬಡ್ಡಿ ದರ ರೂ. 65,328.00 ಗಳು ಬಾಕಿ ಇದ್ದು ಈ ಬಡ್ಡಿ ಮೊತ್ತವನ್ನು ಕರ್ನಾಟಕ ಆರ್ಥಿಕ ಸಂಹಿತೆ 213(6) ರನ್ವಯ ಸಕ್ರಮ ಪ್ರಾಧಿಕಾರವು ಮನ್ನಾ ಮಾಡಬಹುದೆಂದು ಗೃಹ ಮುಂಗಡ ಸಾಲದ ನಿರ್ಮಾಣದ ಬಡ್ಡಿ ಮನ್ನಾ ಆದೇಶವು ಸ್ವೀಕೃತವಾದ ನಂತರ ಬೇಬಾಕಿ ಪ್ರಮಾಣ ಪತ್ರ ನೀಡುವುದಾಗಿ ತಿಳಿಸಿರುತ್ತಾರೆ. ಸರ್ಕಾರವು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 308 ಸಅಸೇ 2008, ಬೆಂಗಳೂರು, ದಿನಾಂಕ 9ನೇ ಆಗಸ್ಟ್ 2011

ಸೇವೆಯಲ್ಲಿರುವಾಗಲೇ ದಿನಾಂಕ 12–10–2006 ರಂದು ನಿಧನ ಹೊಂದಿದ ಶ್ರೀ ವಿ.ಪಿ. ಕೆರಿಮಠ, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ಇವರು ಪಡೆದಿದ್ದ ಗೃಹ ನಿರ್ಮಾಣ ಸಾಲದ ಮೇಲಿನ ಬಡ್ಡಿ ಮೊತ್ತ ರೂ. 65,328.00 ಗಳನ್ನು (ಅರವತ್ತೈದು ಸಾವಿರದ ಮುನ್ನೂರ ಇಪ್ಪತ್ತೆಂಟು ಮಾತ್ರ) ವಸೂಲಾತಿಯಿಂದ ಮನ್ನಾ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ.
(ಸೇವೆಗಳು–3)

ಪಿ.ಆರ್. 1972

ವಸತಿ ಸಚಿವಾಲಯ

ವಿಷಯ : ಮೈಸೂರು ಜಿಲ್ಲೆ, ಹುಣಸೂರು ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ. ವಇ/42/ಹೆಚ್ಎಂ/1999, ದಿನಾಂಕ 10-05-2000.

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದ್ದು, ಅದರಂತೆ ಮೈಸೂರು ಜಿಲ್ಲೆ ಹುಣಸೂರು ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 36 ಹೆಚ್ಎಎಸ್ 2011, ಬೆಂಗಳೂರು, ದಿನಾಂಕ 30ನೇ ಜುಲೈ 2011

ಮೈಸೂರು ಜಿಲ್ಲೆ ಹುಣಸೂರು ನಗರ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರಿಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

ಕ್ರ.ಸಂ.	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಟಿ. ಅಪ್ಪಣ್ಣ ಬಿನ್ ಲೇಟ್ ತಿಮ್ಮೇಗೌಡ, ನಂ. 3560, ಮಾರುತಿ ಬಡಾವಣೆ, ಹುಣಸೂರು ನಗರ.	ಸಾಮಾನ್ಯ
2	ಶ್ರೀ ಬಿ.ಕೆ. ಪರಮೇಶ ಬಿನ್ ಬಿ.ಪಿ. ಕೊಂಡಯ್ಯ, ನಂ. 3553/ಬಿ, 2ನೇ ಅಡ್ಡರಸ್ತೆ, ಗೋಕುಲ ರಸ್ತೆ, ಹುಣಸೂರು ನಗರ.	ಎಸ್.ಸಿ.
3	ಶೀಮತಿ ನಳಿನಿ ಪಿ.ಎ. ಕೋಂ ಅಪ್ಪಯ್ಯ, ಹಲ್ಲರ್ ಮಿಲ್ ಹಿಂಭಾಗ, ಚಿಕ್ಕಹುಣಸೂರು, ಹುಣಸೂರು.	ಮಹಿಳೆ
4	ಶ್ರೀ ತಾಯಿರ್ ಬಿನ್ ಕಮಲ್ ಪಾಷ, ಕಳೇ ಸೇತುವೆ, ಮಸೀದಿ ಹಿಂಭಾಗ, ಹುಣಸೂರು	ಅಲ್ಪಸಂಖ್ಯಾತರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಾವಿತ್ರಿ,

ಪಿ.ಆರ್. 1973 ಪೀಠಾಧಿಕಾರಿ-2,

ವಸತಿ ಇಲಾಖೆ.

COMMERCE AND INDUSTRIES SECRETARIAT

Sub :- Sanction of incentives & concessions to Sugar Industries as per New Industrial Policy 2009-14-Reg.

Read :- Govt. Order No: CI 233 SPI 2008, dated: 29/02/2009.

Preamble:

There are 62 Sugar Industries in the State out of which 23 are in Co-operative sector, 36 in the private sector, 2 in public sector and one in joint sector.

As per the records available 26 Sugar Industries have availed this facility of conversion of sugarcane purchase tax into interest free loan till date.

Karnataka State has a large potential for promoting sugar Industries in view of conducive environment for growing sugarcane in the State. The sugar Industries play a vital role in value addition to the agricultural produce and creating employment to the rural youths. The sugar Industries also lead to the economic development of the surrounding areas. Hence, with an intension of supporting sugar Industries, a provision has been made in the New Industrial Policy 2009-14 for converting Sugarcane purchase tax into interest free loan.

There is a provision for conversion of sugarcane purchase tax into interest free loan in the New Industrial Policy 2009-14.

The Para 19 of Industrial Policy 2009-14 States as follows:

"New Sugar factories and existing sugar factories who have not availed purchase tax deferment having co-generation facilities and ethanol production would be considered for conversion of purchase tax on sugarcane as interest free loan on case basis depending on the financial position of the factory.

In case of existing Sugar factories which establish co-generation plants, ethanol plant, such investment will be treated as expansion for availing incentives & concessions as per this policy, but limited to the investment made on such additional projects".

F.D has suggested to amend the para 19 of the Industrial Policy 2009-14 in view of some difficulties being faced in implementing the provisions of the policy at present.

In this connection, a meeting was held under the Chairmanship of Principal Secretary, Commerce & Industries Department on 24/06/2010.

After careful examination of the suggestions made by FD and as per the approval of cabinet dated: 08/07/2011 it is proposed to replace para No. 19 of Annexure-2 to the New Industrial Policy 2009-14, pertaining to support sugar sector.

Hence the following order.

Government Order No: CI 06 SPI 2010, Bangalore, Dated: 05/08/2011.

In the circumstances explained in the preamble, Govt. is pleased to replace para No. 19 of Annexure-2 to the New Industrial Policy 2009-14, issued vide G.O read at (1) above, with the following.

a) New sugar units set up with cogeneration plants will be provided interest free loan to the extent of purchase tax to be paid on the sugarcane during first 5 years of the operations.

b) Existing sugar factories taking up expansion of the sugarcane crushing capacity along with setting up of cogeneration unit will also be eligible for the interest free loan during first 5 years from completion of the expansion. The interest free loan will be provided to extent of the purchase tax paid on the sugarcane crushed over and above the pre-expansion crushing capacity.

c) Repayment of the above loans will be in five annual installments from the sixth year.

d) The incentive will be available to the units covered under 2009-14 Industrial Policy.

The terms and conditions will be issued separately with the approval of SLCC.

This order is issued with the concurrence of Finance Department vide U.O Note No: FD 86 Exp-1/2011, dated: 11/05/2011 & Cabinet approval vide No: C:316/2011, dated: 06/07/2011.

By Order and in the name of the Governor of Karnataka
A.V. Srinivasa Dikshit
Desk Officer (Technical Cell)
Commerce & Industries Department

P.R No: 1974

URBAN DEVELOPMENT SECRETARIAT

Sub :- Appointing Nodal officer for Survey and Mapping of Hassan project of Department of Town and Country planning under KMRP.

Ref :- Minutes of the 17th meeting of Review Committee of KMRP held on 23/02/2011 in KUIDFC

Preamble:

The Department of Town and Country planning (DTCP) has taken up Survey of Hassan city and environs for preparation of scientific base map for use in creation of properties to titles, property tax management, utilities and planning under the World Bank Funded Karnataka Municipal Reforms Project (KMRP) though the KUIDFC.

M/s Secon Pvt. Ltd., has been selected as the consultant to execute the project per WB procedures and the contract is signed by DTCP on 13/04/2011 as per the work order the work commenced from 13/05/2011 the period for completion is about 21 months.

There are two different committees at State and District level, constituted vide Govt. Order No. UDD 96 MYAPRA 2011, Bangalore dated: 26/03/2011 to review the status and progress of the project (C/E).

As per the decision taken at the 17th meeting of Review Committee of KMRP held on 23/02/2011 in KUIDFC the proposal is forwarded to appoint the Commissioner, Hassan Urban Development Authority as the Nodal officer for the project who is also the member convener for the District level Review committee for the project. Hence this order.

Government Order No: UDD 234 MYAPPRA 2011, Bangalore, Dated: 30/07/2011.

As per the proposal submitted by the Department of Town & Country Planning, the Commissioner, Hassan Urban Development Authority is appointed as the Nodal officer for the Survey and Mapping of Hassan and its environs using TS project.

The role and responsibilities of the Nodal officer under the project is:

a. He/his representative will be the "Contact Person" for day-to-day interaction with M/s. SECON, the consultant for execution of the project.
b. Receive the deliverables from the consultant.
c. Issuing letters of introduction/ID cards to the SECON's personnel deployed on field work under this project.
d. Obtaining consent of public authorities and private individuals for construction of SCPs.
e. Interacting with Police (Law and Order) to resolve troubles from individual property owners and others if any
f. Interacting with Traffic Police to control vehicular traffic along the sections of roads/lanes/by-lanes during survey as and when required as per the programme of M/s. Secon to carry out control and detail survey.
g. Publishing the details of the project in local news paper.
h. Distribution of hand bills, banners to owner/occupant of all properties for dissemination about project.
i. Publication of notification under KTCP Act if necessary.
j. Any other tasks to be undertaken for smooth progress of the project on approval from the chairman, District Level Review Committee.

By Order and in the Name of the Governor of Karnataka
M.M Hiremath
Under Secretary to Government
Urban Development Department

P.R No: 1975

INFRASTRUCTURE DEVELOPMENT SECRETARIAT

Sub :- Development of Multipurpose, all weather Sea Port at Tadadi-Constituting Local Co-ordination and State level Co-ordination Committees.

Read :- DGM (IPD)/TP/38 2011-12, dated: 06/04/2011 from MD. KSIIDC.

Preamble:

Government of Karnataka has taken up development of a Multipurpose, all weather Sea Port at Tadadi with a capacity of 34.06 MMTPA on Public Private Partnership. KSIIDC has been designated as the nodal agency for undertaking the activities related to procurement of consultants, developers/concessionaires and monitoring execution of work. Managing Director, KSIIDC has requested for the constitution of local and State level co-ordination committees for facilitating public hearing and to review the implementation of the project.

Hence the following order.

Government Order No: IDD 78 ITS 2008 (P) Dated: 08/06/2011

In the circumstances explained in the Preamble, Government is pleased to constitute Local and State level co-ordination committees with the following as Members indicating detailed terms of reference of the Committees. The two committees Would co-ordinate/facilitate stakeholders consultations, public hearing and also review the implementation of the project. The details of members of the Local Co-Ordination Committee and the State Level Co-Ordination are as hereunder.

Local Co-Ordination Committee and its functions:-

1. Deputy Commissioner Uttar Kannada District-Chairman
2. Managing Director, KSIIDC, Bangalore-Member
3. Member of Parliament, Uttar Kannada Constituency-Member
4. Members of Legislative Council, Uttar Kannada-Member
5. Member of Legislative Assembly representing Kumta Constituency-Member
6. Sri Ananth Ashishara, Environmentalist-Member
7. Assistant Commissioner, Kumta taluk-Member

The Local Co-Ordination Committee will facilitate:

a. Overall co-ordination & solving local issues
b. Organizing stake holder & public consultation meetings
c. Creation of social awareness and co-ordination in discussing & finalizing social Action Plan
d. Review & monitor the progress of the port project
e. Report to the Government from time to time and undertake any other related issue

State Level Co-Ordination Committee and its functions:-

1. The Minister for Infrastructure - Chairman
2. The Uttar Kannada District in-Charge Minister - Member
3. The Minister in charge of Ports - Member
4. The Members of Parliament, Uttar Kannada District - Member
5. The Member of Legislative Council, Uttar Kannada - Member
6. The Member of Legislative Assembly representing Kumta Constituency- Member
7. The Chief Secretary to Government, GoK – Member
8. The Principal Secretary to Government, FD, GoK – Member
9. The Principal Secretary to Government, Forest, Eco and Environment – Member
10. The Principal Secretary to Government, PWP & IWT, GoK – Member
11. The Principal Secretary to Government, IDD, GoK – Member Convener
12. The Managing Director, KSIIDC – Member
13. The Deputy Commissioner, Uttar Kannada District – Member
14. Sri Ananth Ashishara, Environmentalist - Member

The State Level Co-Ordination Committee will:

a. Review progress of the project from time to time
b. Accord necessary approvals wherever required to resolve local issues connected with the project
c. Any other issues towards ensuring effective and timely implementation of the project

The above two committees shall perform the tasks satisfactorily on their terms of reference as mentioned above and facilitate the smooth implementation of the Tadadi port project.

By Order and in the name of the Governor of Karnataka

R. Shivalingaiah

Under Secretary to Govt.

Infrastructure Development Department

P.R. No: 1976

ಇಂಧನ ಸಚಿವಾಲಯ

ವಿಷಯ : ಮೆ॥ ಮರುದವೇಲ್ ಇಂಡಸ್ಟ್ರೀಸ್ ಲಿಮಿಟೆಡ್ ಇವರ 6.75 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಕಾಲಾವಕಾಶವನ್ನು ವಿಸ್ತರಣೆ ಮಾಡುವ ಬಗ್ಗೆ

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ನಿಂಇ 26 ಎನ್‌ಸಿಇ 1999, ದಿನಾಂಕ: 13/05/1999
2. ಸರ್ಕಾರದ ಆದೇಶ ಸಂಖ್ಯೆ: ನಿಂಇ 260 ಎನ್‌ಸಿಇ 2004, ದಿನಾಂಕ: 26/08/2004
3. ಸರ್ಕಾರದ ಆದೇಶ ಸಂಖ್ಯೆ: ನಿಂಇ 449 ಎನ್‌ಸಿಇ 2008, ದಿನಾಂಕ: 14/08/2009
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/MTL/2011/1114, ದಿನಾಂಕ: 06/11.04.2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ:: ಮರುದವೇಲ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯ, ಅರಸಿನಗುಂಡಿ ಗಾಳಿ ವಲಯದ ಮದನಾಯಕನ ಹಳ್ಳಿ ಎಂಬಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ:: ಮರುದವೇಲ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಗೆ ಅನುಮತಿಸಲಾದ 5.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಜೊತೆಗೆ ಹೆಚ್ಚುವರಿಯಾಗಿ 1.75 ಮೆ.ವ್ಯಾ ಸಾಮರ್ಥ್ಯದ (ಎಲ್ಲಾ ಸೇರಿ ಒಟ್ಟು 6.75 ಮೆ.ವ್ಯಾ) ಪವನ ವಿದ್ಯುತ್ ಯೋಜನೆಯನ್ನು ಚಿತ್ರದುರ್ಗ ಜಿಲ್ಲೆಯ ಚಿಕ್ಕಗೊಂಡನಹಳ್ಳಿ ಗ್ರಾಮದ ತಿರುವನೂರು ಹೋಬಳಿಯ ಆರ್.ಎಸ್.ಎಂ. 293 ಮತ್ತು 310ರಲ್ಲಿ ಅನುಷ್ಠಾನ ಮಾಡಲು ಮೂಲ ಹಂಚಿಕೆ ಆದೇಶದ ನಿಬಂಧನೆಗಳಿಗೊಳಪಟ್ಟು ಅನುಮತಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಮೆ:: ಮರುದವೇಲ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಹಂಚಿಕೆಯಾಗಿರುವ 5.06 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಕಾಶವನ್ನು ದಿನಾಂಕ: 31/12/2009ರ ವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಮೆ:: ಮರುದವೇಲ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಹೆಚ್ಚುವರಿ ಸಾಮರ್ಥ್ಯವೂ ಸೇರಿದಂತೆ ಒಟ್ಟು 6.75 ಸಾಮರ್ಥ್ಯಕ್ಕೆ ಕಾಲಾವಕಾಶವನ್ನು ದಿನಾಂಕ: 31/12/2011ರವರೆಗೆ ವಿಸ್ತರಿಸಲು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 163 ಎನ್‌ಸಿಇ 2011, ಬೆಂಗಳೂರು, ದಿನಾಂಕ: 02/08/2011

ಮೆ:: ಮರುದವೇಲ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಹಂಚಿಕೆಯಾಗಿರುವ 6.75 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ದಿನಾಂಕ: 31/12/2011 ರವರೆಗೆ ವಿಸ್ತರಿಸಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ,

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 1977

ಇಂಧನ ಸಚಿವಾಲಯ

ವಿಷಯ : ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳಿಗೆ ಪಿಂಚಣಿ ಹಣ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1. ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಇ 14 ಪಿಎಸ್‌ಆರ್ 2002, ದಿನಾಂಕ: 31/05/02.
2. ಸರ್ಕಾರಿ ಆದೇಶ ಸಂಖ್ಯೆ: ಡಿಇ 15 ಪಿಎಸ್‌ಆರ್ 2002, ದಿನಾಂಕ: 19/12/02.
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 19 ಪಿಎಸ್‌ಆರ್ 2011, ದಿನಾಂಕ: 29/04/2011 ಮತ್ತು 10/06/2011.
4. ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳ ಪತ್ರ ಸಂಖ್ಯೆ: ನಿ(ಪಿ ಮತ್ತು ಉಟ್ರಸ್ಟ್)/ಕ–21/ಸ–53–56, ದಿನಾಂಕ: 15/07/2011.
5. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 1266 ವೆಚ್ಚ–1/2011, ದಿನಾಂಕ: 28/07/2011.

ಪ್ರಸ್ತಾವನೆ :

1. ಮೇಲೆ (1) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ (ಕವಿಪ್ರನಿನಿ) ಉದ್ಯಮಗಳು ಮತ್ತು ಅದರ ಸಿಬ್ಬಂದಿಯು ವಿದ್ಯುಚ್ಛಕ್ತಿ ವಿತರಣಾ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) ನಿಯಮಗಳು, 2002, ನಿಯಮ 4(13)(1)ರ ಪ್ರಕಾರ ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಸೇವೆಗಳನ್ನು ಎರಡನೇ ವರ್ಗಾವಣೆ ದಿನಾಂಕ ಜಾರಿಗೆ ಮೊದಲು ಮತ್ತು ಕರ್ನಾಟಕ ವಿದ್ಯುತ್ ಮಂಡಳಿ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ (ಕವಿಪ್ರನಿನಿ) ನಿರ್ದಿಷ್ಟಪಡಿಸಲಾದ ಸಿಬ್ಬಂದಿಯು ಸಲ್ಲಿಸಿದ ಸೇವೆಗಳಿಗಾಗಿ ನಿವೃತ್ತಿ ವೇತನ ನಿಧಿಗಳು ಮತ್ತು ಶಾಸನ ಪ್ರದತ್ತ ಹಾಗೂ ಇತರೇ ಸಿಬ್ಬಂದಿ ಸಂಬಂಧಿತ ನಿಧಿಗಳ ಸಂಗ್ರಹಣೆಗೆ

ರಾಜ್ಯ ಸರ್ಕಾರವು ಜವಾಬ್ದಾರಿಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲ ಮತ್ತು ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಎರಡನೇ ವರ್ಗಾವಣೆ ಜಾರಿಯಾದ ಆಯಾಯ ದಿನಾಂಕದಲ್ಲಿದ್ದಂತೆ ನಿಧಿ ಸಂಗ್ರಹಣೆ ಮಾಡದ ಮಟ್ಟಿಗೆ ರಾಜ್ಯ ಸರ್ಕಾರವು ಹೊಣೆಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲವೆಂದು ತಿಳಿಸಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದ ಪ್ರಕಾರ, ಕವಿಪ್ರನಿನಿ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟನ್ನು "ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳೆಂದು" ಮರುನಾಮಕರಣ ಮಾಡಿ, pay As you Go ಪದ್ಧತಿಯನ್ನು ಅನುಸರಿಸಿ ಕವಿಪ್ರನಿನಿ ಮತ್ತು ಎಸ್ಕಾಂಗಳ ನೌಕರರ ನಿವೃತ್ತಿ ಸೌಲಭ್ಯಗಳನ್ನು (Terminal Benefits) ಪಾವತಿಸಲು ಒಪ್ಪಿಗೆ ನೀಡಿದೆ.

3. 2011-12ನೇ ಸಾಲಿನ ಆಯವ್ಯಯದಲ್ಲಿ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳಿಗೆ ಪಿಂಚಣಿ ವಂತಿಗೆಗಾಗಿ "2801-80-101-1-13-106 (ಯೋಜನೇತರ)" ಲೆಕ್ಕಶೀರ್ಷಿಕೆಯಡಿ ರೂ. 400.00 ಕೋಟಿ ರೂ. ನಿಗಧಿಪಡಿಸಲಾಗಿರುತ್ತದೆ.

4. ಮೇಲೆ ಕ್ರಮಾಂಕ-3ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, 2011-12ನೇ ಸಾಲಿಗೆ ಮೊದಲನೇ ಮತ್ತು ಎರಡನೇ ಕಂತುಗಳಲ್ಲಿ 100 ಕೋಟಿ ರೂ. ಮತ್ತು 50 ಕೋಟಿ ರೂ.ಗಳನ್ನು ಕ್ರಮವಾಗಿ ಬಿಡುಗಡೆ ಮಾಡಲಾಗಿರುತ್ತದೆ.

5. ಮೇಲೆ ಕ್ರಮಾಂಕ-4ರಲ್ಲಿ ಓದಲಾದ ಪತ್ರದಲ್ಲಿ, 2011-12ರ ಆರ್ಥಿಕ ವರ್ಷಕ್ಕೆ ಉಳಿದ ಪಿಂಚಣಿ ಹಣ ರೂ. 250 ಕೋಟಿಗಳಲ್ಲಿ ರೂ. 160 ಕೋಟಿಗಳನ್ನು ಬಿಡುಗಡೆಗೊಳಿಸಲು ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳ ಅಧ್ಯಕ್ಷರು ಮತ್ತು ನಿರ್ದೇಶಕರು (ಹಣಕಾಸು), ಕವಿಪ್ರನಿನಿ ಸರ್ಕಾರವನ್ನು ಕೋರಿರುತ್ತಾರೆ.

6. ಮೇಲೆ ಕ್ರಮಾಂಕ-5ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ರೂ. 50 ಕೋಟಿಗಳನ್ನು ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳಿಗೆ ಬಿಡುಗಡೆ ಮಾಡಲು ಸಹಮತಿ ಸೂಚಿಸಿರುತ್ತಾರೆ.

7. ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳ ಕೋರಿಕೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 2011-12ನೇ ಸಾಲಿನಲ್ಲಿ ಮೂರನೇ ಕಂತು ರೂ. 50 ಕೋಟಿಗಳ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 19 ಪಿಎಸ್ ಆರ್ 2011 ಬೆಂಗಳೂರು, ದಿನಾಂಕ: 03/08/2011

ಸರ್ಕಾರವು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳಿಗೆ 2011-12ನೇ ಸಾಲಿನಲ್ಲಿ ಪಿಂಚಣಿ ವಂತಿಗೆ ರೂ. 50 ಕೋಟಿಗಳನ್ನು (ಐವತ್ತು ಕೋಟಿ ರೂ. ಗಳು ಮಾತ್ರ), ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಿದೆ.

ಈ ವೆಚ್ಚವನ್ನು "2801-80-101-1-13-106 ಸಹಾಯಧನ (ಯೋಜನೇತರ)" ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆಯವರ ಮೇಲು ರುಜುವನ್ನು ಸ್ವೀಕೃತ ರಸೀದಿಯಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು "ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳಿಗೆ" ಹಣ ಪಡೆದ 2 ದಿನದೊಳಗೆ ಪೂರ್ಣವಾಗಿ ಪಾವತಿಸಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 1266 ವೆಚ್ಚ-1/2011, ದಿನಾಂಕ: 28/07/2011 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 1978

ಸಹಕಾರ ಸಚಿವಾಲಯ

ವಿಷಯ : ಸೆಂಟ್ರಲ್ ಎಜುಕೇಷನ್ ಸೊಸೈಟಿ (ರಿ), ಊರ್ಡಿಗೆರೆ, ತುಮಕೂರು ತಾಲ್ಲೂಕು ಈ ಸಂಸ್ಥೆಗೆ ನೇಮಕ ಮಾಡಿರುವ ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ : ಸಇ 101 ಸಸಂನೋ 2010, ದಿನಾಂಕ : 16-9-2010.
2. ಸರ್ಕಾರದ ಆದೇಶ ಸಂಖ್ಯೆ : ಸಇ 23 ಸಸಂನೋ 2010, ದಿನಾಂಕ : 20-10-2010.
3. ಆಡಳಿತಾಧಿಕಾರಿಗಳು, ಸೆಂಟ್ರಲ್ ಎಜುಕೇಷನ್ ಸೊಸೈಟಿ (ರಿ), ಊರ್ಡಿಗೆರೆ, ತುಮಕೂರು ತಾಲ್ಲೂಕು ಹಾಗೂ ಉಪ ವಿಭಾಗಾಧಿಕಾರಿಗಳು, ತುಮಕೂರು ಉಪ ವಿಭಾಗ, ತುಮಕೂರು ರವರ ಪತ್ರ ದಿನಾಂಕ : 8-7-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ : 16-9-2011 ಮತ್ತು ಕ್ರಮ ಸಂಖ್ಯೆ (2) ರ ದಿನಾಂಕ : 20-10-2010ರ ಆದೇಶಗಳಲ್ಲಿ ಸೆಂಟ್ರಲ್ ಎಜುಕೇಷನ್ ಸೊಸೈಟಿ (ರಿ), ಊರ್ಡಿಗೆರೆ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆಗೆ ನೇಮಕ ಮಾಡಲಾಗಿದ್ದ ಆಡಳಿತಾಧಿಕಾರಿಗಳ ಅವಧಿಯನ್ನು ಸಂಸ್ಥೆಯ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಹಿತದೃಷ್ಟಿಯಿಂದ ಕ್ರಮವಾಗಿ ದಿನಾಂಕ : 19-3-2010 ರಿಂದ 6 ತಿಂಗಳ ಅವಧಿಗೆ ಮತ್ತು ಕೊನೆಯದಾಗಿ ದಿನಾಂಕ : 19-9-2010 ರಿಂದ ಮತ್ತೆ 6 ತಿಂಗಳ ಅವಧಿಗೆ ವಿಸ್ತರಿಸಿ. ಕಾಯ್ದೆಯ ಕಲಂ 30(1) ರಡಿಯಲ್ಲಿ ಹೊಸ ಸದಸ್ಯರುಗಳನ್ನು ನೇಮಿಸಿಕೊಂಡು ಚುನಾವಣೆ ನಡೆಸಿ, ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ : 8-7-2011 ರ ಪತ್ರದಲ್ಲಿ ಆಡಳಿತಾಧಿಕಾರಿಗಳು, ಸೆಂಟ್ರಲ್ ಎಜುಕೇಷನ್ ಸೊಸೈಟಿ (ರಿ), ಊರ್ಡಿಗೆರೆ, ತುಮಕೂರು ತಾಲ್ಲೂಕು ಹಾಗೂ ಉಪ ವಿಭಾಗಾಧಿಕಾರಿಗಳು, ತುಮಕೂರು ಉಪ ವಿಭಾಗರವರು ಸಹಕಾರ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 30(1) ರಡಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಸಂಸ್ಥೆಗೆ ಚುನಾವಣೆ ನಡೆಸಲು ಸಂಸ್ಥೆಯ ಬೈಲಾ ನಿಯಮಗಳನ್ನು ಅನುಸರಿಸಿ, ಹೊಸ

ಸದಸ್ಯರುಗಳನ್ನು ನೋಂದಣಿ ಮಾಡಲು ದಿನಾಂಕ : 21–5–2011 ರಲ್ಲಿ ಪ್ರಕಟಣೆ ನೀಡಲಾಗಿದ್ದು, ಅದರಂತೆ, ಒಟ್ಟು 593 ಹೊಸ ಸದಸ್ಯರುಗಳ ನೋಂದಣಿಯಾಗಿದ್ದು, ನೋಂದಣಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ ಮತ್ತು ಚುನಾವಣಾ ವೇಳಾಪಟ್ಟಿ ಪ್ರಕಟಿಸುವ ಪ್ರಕ್ರಿಯೆಯು ನಡೆದಿರುತ್ತದೆ. ಆದ್ದರಿಂದ, ಸಂಸ್ಥೆಯ, ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತೆ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ : 19–3–2011 ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸುವಂತೆ ಆಡಳಿತಾಧಿಕಾರಿಗಳು, ಸೆಂಟ್ರಲ್ ಎಜುಕೇಷನ್ ಸೊಸೈಟಿ, ಊರ್ಡಿಗೆರೆ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ ರವರು ಕೋರಿರುತ್ತಾರೆ.

ಆಡಳಿತಾಧಿಕಾರಿಗಳು ಸರ್ಕಾರಕ್ಕೆ ಬರೆದಿರುವ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 23 ಸಸಂನೋ 2010, ಬೆಂಗಳೂರು, ದಿನಾಂಕ : 30ನೇ ಜುಲೈ 2011.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಡಳಿತಾಧಿಕಾರಿಗಳು, ಸೆಂಟ್ರಲ್ ಎಜುಕೇಷನ್ ಸೊಸೈಟಿ (ರಿ), ಊರ್ಡಿಗೆರೆ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಆಡಳಿತಾಧಿಕಾರಿಯಾಗಿ ನೇಮಕವಾಗಿರುವ ಉಪ ವಿಭಾಗಾಧಿಕಾರಿಗಳು, ತುಮಕೂರು ಉಪ ವಿಭಾಗ, ತುಮಕೂರು ಇವರ ಆಡಳಿತಾಧಿಕಾರ ಅವಧಿಯನ್ನು ದಿನಾಂಕ : 19–3–2011 ರಿಂದ ಮುಂದಿನ ಆರು (6) ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಮುಂದುವರೆದು, ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಿ, ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಸ್. ಸರೋಜಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ–3

ಪಿ.ಆರ್. 1984 ಸಹಕಾರ ಇಲಾಖೆ

ಶಿಕ್ಷಣ ಸಚಿವಾಲಯ

ವಿಷಯ : 2011–12ನೇ ಸಾಲಿನ ಆರ್ಥಿಕ ವರ್ಷಕ್ಕೆ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಸರಬರಾಜು ಮಾಡಲಾದ ಉಚಿತ ಸಮವಸ್ತ್ರ ಬಟ್ಟೆಯ ಸರಬರಾಜು ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ : ಅ4(1)ಸ.ವ.ಹ.ಬಿ : 01 : 2010–11/ ದಿನಾಂಕ: 2–7–2011.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 2–7–2011 ರ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು, 2011–12ನೇ ಸಾಲಿನ ವಿದ್ಯಾ ವಿಕಾಸ ಯೋಜನಾ ಕಾರ್ಯಕ್ರಮಕ್ಕಾಗಿ ಸರ್ಕಾರವು 8319.00 ಲಕ್ಷಗಳನ್ನು ನಿಗದಿಪಡಿಸಿದ್ದು, ಇದಕ್ಕಾಗಿ 8280.00 ಲಕ್ಷ ರೂಗಳ ಅವಶ್ಯಕತೆ ಇರುತ್ತದೆ. ಅದರಲ್ಲಿ 2011–12ನೇ ಸಾಲಿನಲ್ಲಿ ಮೊದಲನೇ ಕಂತಾಗಿ 4332.96 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಈಗಾಗಲೇ ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

ಕ್ರ.ಸಂ.	ವಿವರ	ಮೊತ್ತ (ಲಕ್ಷರೂಗಳಲ್ಲಿ)
1	2011–12ರ ಸಾಲಿಗೆ ಸರಬರಾಜು ಸಂಸ್ಥೆಗಳಿಗೆ ಸಂದಾಯ ಮಾಡಬೇಕಾದ ಮೊತ್ತ (ಸರಬರಾಜು ಮೌಲ್ಯ)	8280.00
2	2011–12ರ ಸಾಲಿಗೆ ನಿಗದಿಯಾಗಿರುವ ಅನುದಾನ	8319.00
3	ಸರ್ಕಾರದಿಂದ ಮೊದಲ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	4159.50
4	ಈ ಕಛೇರಿಯಿಂದ ಕೆ.ಎಸ್.ಪಿ.ಡಿ.ಸಿ ಸಂಸ್ಥೆಗೆ 2010–11ನೇ ಸಾಲಿನ ಬಾಕಿ ಪಾವತಿಸಿದ ಮೊತ್ತ	1129.67
5	ಈ ಕಛೇರಿಯಿಂದ ಕೆ.ಹೆಚ್.ಡಿ.ಸಿ ಸಂಸ್ಥೆಗೆ 2011–12ನೇ ಸರಬರಾಜು ಸಂಬಂಧ ಪಾವತಿಸಿದ ಮೊತ್ತ	2985.00
6	ಮೈಸೂರು ವಿಭಾಗಕ್ಕೆ ಸಮವಸ್ತ್ರ ಸರಬರಾಜು ಮಾಡಿದ ಸುಜುಕಿ ಸಂಸ್ಥೆಗೆ ಪಾವತಿಸಿದ ಮೊತ್ತ	173.25
7	ಸರ್ಕಾರದಿಂದ ಎರಡನೇ ಕಂತಿನಲ್ಲಿ ಬಿಡುಗಡೆ ಮಾಡಬೇಕಾದ ಅನುದಾನ	4120.50

2. ಪ್ರಸ್ತುತ 2011–12ನೇ ಸಾಲಿನ ಗುಲ್ಬರ್ಗಾ ಮತ್ತು ಬೆಂಗಳೂರು ವಿಭಾಗದ ಸಮವಸ್ತ್ರ ಸರಬರಾಜು ಪೂರ್ಣಗೊಂಡಿದ್ದು, ಮೈಸೂರು ವಿಭಾಗದ ಆರು ಜಿಲ್ಲೆಗಳಿಗೆ ಈಗಾಗಲೇ ಸಮವಸ್ತ್ರ ಸರಬರಾಜು ಕಾರ್ಯವನ್ನು ಸುಜುಕಿ ಟೆಕ್ಸ್‌ಟೈಲ್ಸ್ ಲಿಮಿಟೆಡ್, ಬಿಲ್ವಾರ, ರಾಜಸ್ಥಾನ, ಇವರು ಪೂರ್ಣಗೊಳಿಸಿದ್ದು, 9.00 ಕೋಟಿ ರೂಪಾಯಿಗಳಿಗೆ ಬಿಲ್ಲುಗಳನ್ನು ಸಲ್ಲಿಸಿ, ಹಣ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ ಎಂದು ತಿಳಿಸಿ, 2011–12ನೇ ಸಾಲಿಗೆ ಈ ಕಾರ್ಯಕ್ರಮಕ್ಕಾಗಿ ಎರಡನೇ ಕಂತಿನಲ್ಲಿ ಬಿಡುಗಡೆ ಮಾಡಬೇಕಾದ ಅನುದಾನ 4125.50 ಲಕ್ಷರೂಗಳ ಜೊತೆಗೆ ಹೆಚ್ಚುವರಿಯಾಗಿ 1001.04 ಲಕ್ಷರೂಪಾಯಿಗಳನ್ನು ಒಟ್ಟು 5126.54 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

3. ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 116 ಯೋಯೋಕ 2011, ಬೆಂಗಳೂರು, ದಿನಾಂಕ : 3–8–2011.

(ಇಡಿ 43 ಸ್ಕೀಮರ (ಯುನಿಕ್) 2011, ದಿನಾಂಕ : 3–8–2011)

2011–12ನೇ ಸಾಲಿನ ಆರ್ಥಿಕ ವರ್ಷಕ್ಕೆ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಸರಬರಾಜು ಮಾಡಲಾದ ಉಚಿತ ಸಮವಸ್ತ್ರ ಬಟ್ಟೆಯ ಸರಬರಾಜು ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು 2011–12ನೇ ಸಾಲಿನ ಲೆಕ್ಕಶೀರ್ಷಿಕೆ 2202–01–109–0–03 (ಯೋಜನೆ) ಅಡಿ 4159.00 ಲಕ್ಷ ರೂಗಳನ್ನು (ನಾಲ್ಕು ಸಾವಿರದ ಒಂದು ನೂರಾ ಐವತ್ತೊಂಬತ್ತು ಲಕ್ಷ ರೂಪಾಯಿಗಳು) (3 ಮತ್ತು 4ನೇ ಕಂತಾಗಿ) ಮತ್ತು ಲೆಕ್ಕಶೀರ್ಷಿಕೆ 2202–02–800–1–05 (ಯೋಜನೇತರ) ಅಡಿ 170.00 ಲಕ್ಷರೂಗಳು (ಒಂದುನೂರಾ ಎಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ) (ಎರಡನೇ ಕಂತು) ಹೀಗೆ ಒಟ್ಟು 4329.00 ಲಕ್ಷ ರೂಗಳನ್ನು (ನಾಲ್ಕು ಸಾವಿರದ ಮುನ್ನೂರಾ ಇಪ್ಪತ್ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಬಿಡುಗಡೆ ಮಾಡಿದೆ. ಸರಬರಾಜು ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡುವ ಮುನ್ನ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಕರಾರುಗಳ ಪ್ರಕಾರ ಕಟಾವು ಮಾಡಬೇಕಾದ ಮೊತ್ತದ ಬಗ್ಗೆ ಪರಿಶೀಲಿಸಿ ಕಟಾವುಗೊಳಿಸಿದ ನಂತರ ನಿವ್ವಳ ಮೊತ್ತವನ್ನು ಮಾತ್ರ ಪಾವತಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ : ಆಇ 579 ವೆಚ್ಚ 8/2011, ದಿನಾಂಕ : 2–8–2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಐ.ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1985 ಶಿಕ್ಷಣ ಇಲಾಖೆ (ಯೋಜನೆ).

ಶಿಕ್ಷಣ ಸಚಿವಾಲಯ

ವಿಷಯ : ಸಹ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಕಛೇರಿಗೆ ಬಾಡಿಗೆ ವಾಹನಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ : ಯೋ (6) ಶುಲ್ಕ ಮರುಪಾವತಿ/01/2011–12 ದಿನಾಂಕ : 10–6–2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಸಹ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಈ ಕಛೇರಿಗೆ ದೈನಂದಿನ ಕೆಲಸಗಳಿಗೆ ಬಾಡಿಗೆ ವಾಹನ ಉಪಯೋಗಕ್ಕಾಗಿ ರೂ. 3.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 108 ಯೋಯೋಕ 2011, ಬೆಂಗಳೂರು, ದಿನಾಂಕ : 29–7–2011.

(ಇಡಿ 42 ಸ್ಕೀಮರ (ಯುನಿಕ್) ದಿನಾಂಕ : 29–7–2011)

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ 2011–12ನೇ ಸಾಲಿಗೆ ರಾಜ್ಯವಲಯ ಲೆಕ್ಕ ಶೀರ್ಷಿಕೆ 2202–02–101–0–00–051 (ಯೋಜನೆ) ಅಡಿ ಒದಗಿಸಿರುವ ಅನುದಾನದ ಮಿತಿಯಲ್ಲಿ ಸಹ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಇವರ ಬಾಡಿಗೆ ವಾಹನ ಉಪಯೋಗಕ್ಕಾಗಿ ರೂ. 3.00 ಲಕ್ಷ (ರೂಪಾಯಿ ಮೂರು ಲಕ್ಷಗಳು ಮಾತ್ರ) ಗಳನ್ನು ಬಿಡುಗಡೆ ಮಾಡುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ಅನಧಿಕೃತ ಟಿಪ್ಪಣಿ ಸಂಖ್ಯೆ : ಶಿಇ 492 ಐ.ಎಫ್ (ಎ ಮತ್ತು ಬಿ) 2011 ದಿನಾಂಕ : 30–6–2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಐ.ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1986 ಶಿಕ್ಷಣ ಇಲಾಖೆ. (ಯೋಜನೆ).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎನ್.ಎಂ. ನೀಲಕಂಠ, ಕೆ.ಎ.ಎಸ್ (ಕಿರಿಯ ಶ್ರೇಣಿ) ಇವರ ಅಮಾನತ್ತನ್ನು ರದ್ದುಗೊಳಿಸಿ ಸೇವೆಯಲ್ಲಿ ಪುನರ್‌ಸ್ಥಾಪಿಸುವ ಬಗ್ಗೆ

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 042 ಕೆಇವಿ 10, ಬೆಂಗಳೂರು, ದಿನಾಂಕ : 5ನೇ ಆಗಸ್ಟ್ 2011.

ಶ್ರೀ ಎನ್.ಎಂ. ನೀಲಕಂಠ, ಕೆ.ಎ.ಎಸ್ (ಕಿರಿಯ ಶ್ರೇಣಿ), ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಬೆಂಗಳೂರು ಇವರನ್ನು ದಿನಾಂಕ : 22–12–2010 ರ ಆದೇಶ ಸಂಖ್ಯೆ : ಸಿಆಸುಇ 042 ಕೆಇವಿ 10 ರಲ್ಲಿ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಟ್ಟಿರುವುದರಿಂದಲೂ,

ಶ್ರೀ ಎನ್.ಎಂ. ನೀಲಕಂಠ, ಕೆ.ಎ.ಎಸ್ (ಕಿರಿಯ ಶ್ರೇಣಿ), ಇವರ ಅಮಾನತ್ತನ್ನು ತೆರವುಗೊಳಿಸಿ, ಸೇವೆಯಲ್ಲಿ ಪುನರ್‌ಸ್ಥಾಪಿಸಲು ಸರ್ಕಾರವು ಭಾವಿಸಿರುವುದರಿಂದಲೂ,

ಸರ್ಕಾರವು ಶ್ರೀ ಎನ್.ಎಂ. ನೀಲಕಂಠ, ಕೆ.ಎ.ಎಸ್ (ಕಿರಿಯ ಶ್ರೇಣಿ), ಇವರ ವಿರುದ್ಧ ಶಿಸ್ತು ಕ್ರಮವನ್ನು ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತನ್ನು ತೆರವುಗೊಳಿಸಿ, ಇವರನ್ನು ಸೇವೆಯಲ್ಲಿ ಪುನರ್‌ಸ್ಥಾಪಿಸಿದೆ. ಇವರ ಸ್ಥಳ ನಿಯುಕ್ತಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ. ವಾಸುದೇವಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1987 ಸಿಆಸು ಇಲಾಖೆ. (ಸೇವೆಗಳು-2).

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ. ಪ್ರಕಾಶ್, ಜಿಲ್ಲಾ ನೋಂದಣಾಧಿಕಾರಿಗಳು, ರಾಯಚೂರು ಇವರ ವಿರುದ್ಧ ಲೋಕಾಯುಕ್ತ ದಾಳಿ ಪ್ರಕರಣದ ಹಿನ್ನೆಲೆಯಲ್ಲಿ ಅಮಾನತ್ತಿನಲ್ಲಿಡುವ ಬಗ್ಗೆ ಆದೇಶ.

ಓದಲಾಗಿದೆ : ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಜಿ-13/ಸಿಆರ್-5/2011. ರಾಯಚೂರು ದಿನಾಂಕ : 30-3-2011.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 30-3-2011 ರ ಪತ್ರದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಶ್ರೀ ಎಂ. ಪ್ರಕಾಶ್, ಜಿಲ್ಲಾ ನೋಂದಣಾಧಿಕಾರಿ, ರಾಯಚೂರು ಅವರು ಅವರ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುತ್ತಾರೆ. ಎಂಬ ನಂಬಲಾರ್ಹ ಮಾಹಿತಿಯ ಆಧಾರದ ಮೇರೆಗೆ ಅವರ ವಿರುದ್ಧ ರಾಯಚೂರು ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ : 5/2011 ಭ್ರಷ್ಟಾಚಾರ ನಿರೋಧ ಕಾಯ್ದೆ 1988 ರ ಕಲಂ 13(1) (ಇ) ಸಹವಾಚನ 13(2) ರೀತ್ಯ ದಿನಾಂಕ : 16-3-2011 ರಂದು ಪ್ರಕರಣವನ್ನು ದಾಖಲಿಸಿ, ಆನಂತರ ದಿನಾಂಕ : 16-3-2011 ರಂದು ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಧೀಶರು, ರಾಯಚೂರು ಜಿಲ್ಲೆರವರಿಂದ ಅಗತ್ಯವಾದ ಶೋಧನಾ ವಾರೆಂಟ್‌ಗಳನ್ನು ಪಡೆದುಕೊಂಡು ದಿನಾಂಕ : 17-3-2011 ರಂದು ಬಳ್ಳಾರಿ ನಗರದಲ್ಲಿನ ಆದರ್ಶ ಕಾಲೋನಿಯಲ್ಲಿನ ನಿವೇಶನ ನಂ. 18686/49736 ರಲ್ಲಿರುವ ಎರಡು ಅಂತಸ್ತಿನ ಮನೆ ನಂ. 57/ಡಿ, ರಾಯಚೂರು ನಗರದಲ್ಲಿನ ಜಿಲ್ಲಾ ಮುದ್ರಾಂಕ ಮತ್ತು ನೋಂದಣಾಧಿಕಾರಿಗಳ ಕಛೇರಿಯಲ್ಲಿನ ಆರೋಪಿತರ ಛೇಂಬರ್ ಮತ್ತು ರಾಯಚೂರಿನಲ್ಲಿರುವ ಆರೋಪಿತರು ವಾಸಿಸುವ ಪ್ರಿಯಾ ಲಾಡ್ಜ್‌ನಲ್ಲಿರುವ ಕೋಣೆ, ಈ ಸ್ಥಳಗಳನ್ನು ಪಂಚ ಸಾಕ್ಷಿಗಳ ಸಮಕ್ಷಮ ಪ್ರವೇಶಿಸಿ, ಶೋಧಿಸಲಾಗಿ, ಸ್ಥಿರಾಸ್ತಿ, ಚರಾಸ್ತಿ ದಾಖಲಾತಿಗಳು, ಠೇವಣಿಗಳು, ಹೂಡಿಕೆಗಳು, ಚಿನ್ನ ಬೆಳ್ಳಿ ಇತ್ಯಾದಿಗಳು ಪತ್ತೆಯಾಗಿದ್ದು, ಪ್ರಾಥಮಿಕ ತನಿಖೆಯಿಂದ ಆರೋಪಿತರು ತಮ್ಮ ಗೊತ್ತಾದ ಆದಾಯಕ್ಕಿಂತ ರೂ. 85,19,937/- ರಷ್ಟು ಹೆಚ್ಚಿನ ಅಕ್ರಮ ಆಸ್ತಿಗಳನ್ನು ಹೊಂದಿರುತ್ತಾರೆ ಎಂದು ತಿಳಿದು ಬಂದಿದೆ. ಸದರಿ ಚರ-ಸ್ಥಿರಾಸ್ತಿಗಳ ಮೌಲ್ಯವು ಆರೋಪಿತ ಸರ್ಕಾರಿ ನೌಕರರ ಶೋಧನಾ ಅವಧಿಯಲ್ಲಿ ನಿಗದಿತ ಮೂಲಗಳಿಂದ ಗಳಿಸಿರುವ ವರಮಾನಕ್ಕಿಂತ ಹೆಚ್ಚಿನ ಮೊತ್ತವಾಗಿರುತ್ತದೆ, ಅಲ್ಲದೆ ಆರೋಪಿತರು ವಿವಿಧ ಬಾಬ್ತುಗಳಿಗಾಗಿ ಮಾಡಿರುವ ಖರ್ಚು ವೆಚ್ಚಗಳು ಇನ್ನೂ ಕೆಲವು ಮೂಲಗಳಿಂದ ಬರಬೇಕಾಗಿದೆ. ಇದರಿಂದ ಭವಿಷ್ಯದಲ್ಲಿ ಪ್ರಕರಣದ ತನಿಖೆ ಮುಂದುವರೆದಂತೆ ಹೆಚ್ಚಿನ ಚರ/ಸ್ಥಿರ ಮತ್ತು ಖರ್ಚುವೆಚ್ಚಗಳ ಒಟ್ಟಾರೆ ಮೌಲ್ಯವು ಇನ್ನೂ ಹೆಚ್ಚಾಗುವ ಸಂಭವವಿರುತ್ತದೆ, ಶ್ರೀ ಎಂ. ಪ್ರಕಾಶ್, ಜಿಲ್ಲಾ ನೋಂದಣಾಧಿಕಾರಿ ಅವರು ತನ್ನ ಗೊತ್ತಾದ ಆದಾಯದ ಮೂಲಗಳಿಗಿಂತ ಹೆಚ್ಚಿನ ಅಕ್ರಮ ಆಸ್ತಿಯನ್ನು ಹೊಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಇವರು ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಸದರಿ ಆರೋಪಿತರನ್ನು ಈ ಕೂಡಲೇ ಅಮಾನತ್ತಿನಲ್ಲಿಡಲು ಹಾಗೂ ಅವರ ಲೀನ್ (ಸ್ಥಾನ) ವನ್ನು ಕೂಡ ಬೇರೆ ಕಡೆಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಪ್ರಕರಣದ ವಿಶೇಷ ತನಿಖಾ ವರದಿ, ಪ್ರಥಮ ವರ್ತಮಾನ ವರದಿ ಮತ್ತು ಮಹಜರುಗಳ ಪ್ರತಿಗಳನ್ನು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಒದಗಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯಪಡಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಎಂ. ಪ್ರಕಾಶ್, ಜಿಲ್ಲಾ ನೋಂದಣಾಧಿಕಾರಿ, ರಾಯಚೂರು ಜಿಲ್ಲೆ, ರಾಯಚೂರು ಅವರು ಬಲ್ಲ ಮೂಲಗಳಿಗಿಂತ ಹೆಚ್ಚಾದ ಅಕ್ರಮ ಆಸ್ತಿಯನ್ನು ಹೊಂದಿರುವ ಆರೋಪವು ಮೇಲ್ನೋಟಕ್ಕೆ ಲೋಕಾಯುಕ್ತರ ತನಿಖೆಯಿಂದ ಕಂಡುಬಂದಿರುವುದರಿಂದ ಅವರು ಸೇವೆಯಲ್ಲಿ ಮುಂದುವರಿದರೆ, ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಮತ್ತು ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಅಥವಾ ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಬೀರುವ ಸಾಧ್ಯತೆಗಳಿರುವುದರಿಂದ ಇವರನ್ನು ಅಮಾನತ್ತಿನಲ್ಲಿಡಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 23 ಮುನೋಸೇ (1) 2011, ಬೆಂಗಳೂರು, ದಿನಾಂಕ : 30-7-2011.

ಪ್ರಸ್ತಾವನೆಯಲ್ಲಿ ವಿವರಿಸಿದ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಎಂ. ಪ್ರಕಾಶ್, ಜಿಲ್ಲಾ ನೋಂದಣಾಧಿಕಾರಿ, ರಾಯಚೂರು ಜಿಲ್ಲೆ, ರಾಯಚೂರು ಇವರು ಬಲ್ಲ ಮೂಲಗಳಿಗಿಂತ ಹೆಚ್ಚಾದ ಅಕ್ರಮ ಆಸ್ತಿಯನ್ನು ಹೊಂದಿರುವ ಆರೋಪವು ಮೇಲ್ನೋಟಕ್ಕೆ ತನಿಖೆಯಿಂದ ಕಂಡುಬಂದಿರುವುದರಿಂದ ಅವರ ವಿರುದ್ಧ ಶಿಸ್ತು ಕ್ರಮವನ್ನು ಬಾಕಿ ಇಟ್ಟು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳ ನಿಯಮ 10(1)(ಎಎ) ಪ್ರಕಾರ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ.

ಸದರಿ ಅಧಿಕಾರಿಯು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಅವರ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಕೆ. ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1988 ಕಂದಾಯ ಇಲಾಖೆ. (ನೋಂ & ಮು).

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಪಸಂಮೀ/210/ಮೀಇಸೇ/2010, ಬೆಂಗಳೂರು, ದಿನಾಂಕ 05-08-2011

ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/210/ಮೀಇಸೇ/2010, ದಿನಾಂಕ 30-06-2011ರ ಅನುಬಂಧದ ಕ್ರಮ ಸಂಖ್ಯೆ 1 ರಿಂದ 7ರಲ್ಲಿನ ಕಾಲಂ. 4ರಲ್ಲಿ "ಹೊಸ ಜಿಲ್ಲೆಗೆ ಸ್ಥಳಾಂತರಿಸಲಾದ ಹುದ್ದೆಗಳು ಹಾಗೂ ಕಛೇರಿ" ಎಂಬ ಶಿರೋನಾಮೆಯಡಿ ನಮೂದಾಗಿರುವುದನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು.

ಕ್ರಮ ಸಂಖ್ಯೆ	ಹೊಸ ಜಿಲ್ಲೆಗೆ ಸ್ಥಳಾಂತರಿಸಲಾದ ಹುದ್ದೆಗಳು ಹಾಗೂ ಕಛೇರಿ
1	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ದಾವಣಗೆರೆ
	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ದಾವಣಗೆರೆ
	ಪ್ರಥಮ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ದಾವಣಗೆರೆ
	ಬೆರಳಚ್ಚುಗಾರರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ದಾವಣಗೆರೆ
	ವಾಹನ ಚಾಲಕ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ದಾವಣಗೆರೆ
	ಗ್ರೂಪ್-ಡಿ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ದಾವಣಗೆರೆ
2	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾವೇರಿ
	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಹಾವೇರಿ
	ಪ್ರಥಮ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಹಾವೇರಿ
	ದ್ವಿತೀಯ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಹಾವೇರಿ
	ಬೆರಳಚ್ಚುಗಾರರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಹಾವೇರಿ
	ವಾಹನ ಚಾಲಕ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಹಾವೇರಿ
	ಗ್ರೂಪ್-ಡಿ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಹಾವೇರಿ
3	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ
	ಪ್ರಥಮ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಚಾಮರಾಜನಗರ
	ಬೆರಳಚ್ಚುಗಾರರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಚಾಮರಾಜನಗರ
	ವಾಹನ ಚಾಲಕ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಚಾಮರಾಜನಗರ
	ಗ್ರೂಪ್-ಡಿ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಚಾಮರಾಜನಗರ
4	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಬಾಗಲಕೋಟೆ
	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಬಾಗಲಕೋಟೆ
	ಪ್ರಥಮ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಬಾಗಲಕೋಟೆ
	ಬೆರಳಚ್ಚುಗಾರರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಬಾಗಲಕೋಟೆ
	ವಾಹನ ಚಾಲಕ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಬಾಗಲಕೋಟೆ
	ಗ್ರೂಪ್-ಡಿ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಬಾಗಲಕೋಟೆ
5	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಗದಗ
	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಗದಗ
	ಪ್ರಥಮ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಗದಗ
	ಬೆರಳಚ್ಚುಗಾರರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಗದಗ
	ವಾಹನ ಚಾಲಕ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಗದಗ
	ಗ್ರೂಪ್-ಡಿ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಗದಗ
6	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಕೊಪ್ಪಳ
	ಪ್ರಥಮ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಕೊಪ್ಪಳ
	ದ್ವಿತೀಯ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಕೊಪ್ಪಳ
	ಬೆರಳಚ್ಚುಗಾರರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಕೊಪ್ಪಳ
	ವಾಹನ ಚಾಲಕ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಕೊಪ್ಪಳ
	ಗ್ರೂಪ್-ಡಿ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಕೊಪ್ಪಳ

7	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ
	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ–2) ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ
	ಪ್ರಥಮ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ
	ದ್ವಿತೀಯ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ
	ಬೆರಳಚ್ಚುಗಾರರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ
	ವಾಹನ ಚಾಲಕ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ
	ಗ್ರೂಪ್–ಡಿ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ. ಎಂ. ರಾಜಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 1989 ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

INFRASTRUCTURE DEVELOPMENT SECRETARIAT

Sub : Establishment of a Joint Venture Company by KSIIDC and GAIL India Ltd., for City Gas Distribution (CGD) Project-Release of funds for City Gas Distribution Projects.

Read :
1. MoU signed between GOK and GAIL, dated on 29-04-2009
2. JVA signed between KSIIDC & GAIL on 08-06-2011
3. G.O. IDD 18 UIP 2010, dated 20-01-2011
4. Letter No. DGM (IPD)/CGD/753/2011-12, dated 01-07-2011 the Deputy Managing Director, KSIIDC.

Preamble :

In the G.O. No. read at (1) above, A Memorandum of Understanding (MoU for Natural gas Infrastructure and CGD was signed between GoK and GAIL on 29-04-2009 between the State Government in IDD and GAIL. In G.O. read (2) above, KSIIDC has been nominated as the Nodal Agency for Dhabhol-Bangalore Gas pipeline project. As per the MoU, Promotion of Joint Venture for CGD projects for Domestic, Commercial, Industrial and Transport sectors with the participation of GAIL, KSIIDC, KSRTC and BMTC was also agreed. It was also agreed that GAIL and IDD to conduct necessary Techno Economic studies based on demand potential and geographical distribution of demand and address accordingly the requirements of Infrastructure for CG distribution Networks and associated facilities for the State under feasible supply options on long term competitive basis. CGD is also proposed to be taken up by the Government of Karnataka.

2. Read at (2) above, JVA was entered between KSIIDC & GAIL for City Gas Distribution in the State.

3. In G.O. read at (3) above an amount of Rs. 86.50 lakhs (Rs. Eighty Six lakhs fifty thousand only) was released towards Establishment of a Joint Venture Company by KSIIDC and GAIL India Ltd., for City Gas Distribution (CGD) Project.

4. Deputy General Manager KSIIDC in his letter dated 01-07-2011 read at (4) above has requested for release of Rs. 83.14 lakhs (Rs. Eighty three lakhs and fourteen thousand only) towards the expenditure expected to be incurred upto 31-12-2011 for City Gas Distribution (CGD) Project.

5. Government of Karnataka after examining the proposal has decided to release Rs. 83.14 lakhs towards this Project.

6. Hence the following Order

Government Order No. IDD 18 UIP 2010, Bangalore, dated 03-08-2011

Government of Karnataka is pleased to release an amount of Rs. 83.14 lakhs (Rs. Eighty three lakhs and fourteen thousand only) towards the City Gas Distribution Project and other related activities.

2. This expenditure shall be met from the Head of Account “5465-01-190-1-17-City Gas Distribution Project” out of the Budget provision of Rs. 416.44 lakhs in 2011-12.

3. The Managing Director, KSIIDC is authorized to draw the amount on a Payees Receipt duly countersigned by the Under Secretary to Government, Infrastructure Development Department.

4. This order issued in accordance with the financial powers delegated to Principal Secretaries/Secretaries vide G.O. No. FD 1 TFP 2008, dated 16-5-2008.

By Order and in the name of the Governor of Karnataka

K. S. Venugopal

Under Secretary to Government (i/c),

P.R. 1990 Infrastructure Development Department

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಹೆಚ್‌ಡಿ/167/ಪಿಓಪಿ/2011, ಬೆಂಗಳೂರು, ದಿನಾಂಕ 30-07-2011

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 05 ಪಿಓಪಿ 2011, ದಿನಾಂಕ 14-01-2011ರ ಆದೇಶದ ಅನುಬಂಧ-1ರ ಕ್ರಮ ಸಂಖ್ಯೆ 2ರಲ್ಲಿ ಡೆಪ್ಯೂಟಿ ಕಮಾಂಡೆಂಟ್ ಹುದ್ದೆಗೆ ನಮೂದಿಸಿರುವ ವೇತನ ಶ್ರೇಣಿ "16400-26250" ಎಂಬುದರ ಬದಲಾಗಿ "15200-25650" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಜಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1991 ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಜಿ. ಕೃಷ್ಣಮೂರ್ತಿ, ಹೆಚ್.ಸಿ. ನಗರ ವಿಶೇಷ ಶಾಖೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಉಪ ಪೊಲೀಸ್ ಆಯುಕ್ತರು (ಆಡಳಿತ), ಬೆಂಗಳೂರು, ಇವರ ಆದೇಶ ಸಂಖ್ಯೆ : ಡಿಇ(2)/ಸಿಓಪಿ/ಆರ್/7/2/2006 ದಿನಾಂಕ : 18-07-2009.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್, ಆಡಳಿತ, ಬೆಂಗಳೂರು, ಇವರ ಆದೇಶ ಸಂಖ್ಯೆ : 55/ಅಪೀಲು/(1)/2010 ದಿನಾಂಕ : 27-03-2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 22-07-2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು(2)/42/2010-11 ದಿನಾಂಕ : 21-09-2010.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 64 ಸಿಎನ್‌ಎಸ್ 11 ದಿನಾಂಕ : 20-07-2011.

ಪ್ರಸ್ತಾವನೆ :

ಶ್ರೀ ಜಿ. ಕೃಷ್ಣಮೂರ್ತಿ, ಹೆಚ್.ಸಿ. ನಗರ ವಿಶೇಷ ಶಾಖೆ, ಬೆಂಗಳೂರು, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಈ ಹಿಂದೆ ಕಂಟ್ರೋಲ್ ರೂಂನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1956ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಶ್ರೀ ಕೃಷ್ಣಮೂರ್ತಿ, ಪಿ.ಸಿ.-7484 ಆದ ನೀವು ಕಂಟ್ರೋಲ್ ರೂಂ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಶ್ರೀಮತಿ ಜಯಲಕ್ಷ್ಮಿ ಕೋಂ ಶ್ರೀ ಎಂ. ಶಿವಯ್ಯ ರವರು ನಿಮ್ಮ ವಿರುದ್ಧ ನೀಡಿರುವ ದೂರಿನಲ್ಲಿ ಅವರಿಂದ ನೀವು ರೂ. 50,000-00 ಸಾಲವನ್ನು ಪಡೆದು ಮರುಪಾವತಿಸಿಲ್ಲವೆಂದು ದೂರಿರುತ್ತಾರೆ. ಶ್ರೀಮತಿ ಜಯಲಕ್ಷ್ಮಿರವರು ನಿಮ್ಮ ಪತ್ನಿಯವರ ಸ್ವಂತ ಅಕ್ಕನವರಾಗಿರುತ್ತಾರೆ. ನಿಮಗೆ ಸಹಾಯ ಮಾಡುವ ಉದ್ದೇಶದಿಂದ ನಿಮ್ಮ ಸಡಕರವರಾದ ಶ್ರೀ ಶಿವಯ್ಯ ರವರು ತಾವು ಸದಸ್ಯರಾಗಿದ್ದ ಬೆಂಗಳೂರು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ರೂ. 50,000-00 ಗಳನ್ನು ಸಾಲವಾಗಿ ತೆಗೆದುಕೊಂಡು ನಿಮಗೆ ನೀಡಿರುತ್ತಾರೆ.. ಸದರಿ ಬ್ಯಾಂಕಿಗೆ ನೀವು ಕೆಲವು ಕಂತುಗಳನ್ನು ಪ್ರಾಮಾಣಿಕವಾಗಿ ಕಟ್ಟಿರುತ್ತೀರಿ. ನಂತರ ಸಾಲವನ್ನು ಬ್ಯಾಂಕಿಗೆ ಕಟ್ಟಿರುವುದಿಲ್ಲ ಹಾಗೂ ಸಾಲ ತೆಗೆದುಕೊಂಡು ನಿಮ್ಮ ಸಂಬಂಧಿಕರಿಗೆ ಹಿಂತಿರುಗಿಸಿರುವುದಿಲ್ಲ ನಂತರ ಬೆಂಗಳೂರು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಸಾಲವನ್ನು ತೀರಿಸಲು ನೀವು ಷೇರುದಾರರಾಗಿದ್ದ ಆನಂದ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಶ್ರೀ ಶಿವಯ್ಯನವರ ಸ್ನೇಹಿತರಾದ ಶ್ರೀ ವೆಂಕಟಾಚಲಯ್ಯನವರಿಂದ ಜಾಮೀನು ಕೊಡಿಸಿ ರೂ. 40,000-00ಗಳ ಸಾಲವನ್ನು ಮಂಜೂರಾತಿ ಮಾಡಿಸಿ ಸದರಿ ಹಣವನ್ನು ಬೆಂಗಳೂರು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ ಕಟ್ಟಿ ಸಾಲವನ್ನು ತೀರಿಸುವಂತೆ ಹೇಳಿದ್ದರೂ ಸಹ ನೀವು ಆ ಹಣವನ್ನು ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಬೆಂಗಳೂರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗೆ ಪಾವತಿಸಿರುವುದಿಲ್ಲ. ಈ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಿರುವ ಶ್ರೀಮತಿ ಶೋಭಾ ಎಸ್. ಖಟಾವ್ಕರ್, ಪೊಲೀಸ್ ಇನ್ಸ್‌ಪೆಕ್ಟರ್, ಕಂಟ್ರೋಲ್ ರೂಂ ನೀವು ಹಣವನ್ನು ಪಡೆದುಕೊಂಡಿದ್ದು ನಿಜವೆಂದು ನಂತರ ಸದರಿ ಹಣವನ್ನು ಮರುಪಾವತಿಸಿಲ್ಲವೆಂದು ಹೇಳಿರುತ್ತಾರೆ. ಶಿಸ್ತಿನಲ್ಲಿ ಇದ್ದುಕೊಂಡು ನೀವು ಹಣಕಾಸಿನ ವ್ಯವಹಾರದಲ್ಲಿ ನಿಯಮ ರೀತ್ಯಾ ವರ್ತಿಸದೆ, ತೆಗೆದುಕೊಂಡ ಸಾಲವೂ ಸಹ ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶವಿಲ್ಲದೆ ಮರುಪಾವತಿಸಲು ವಿಫಲಗೊಂಡಿರುತ್ತೀರಿ. ಒಬ್ಬ ಜವಾಬ್ದಾರಿಯುತ ಸರ್ಕಾರಿ ನೌಕರರಾಗಿದ್ದುಕೊಂಡು ನಿಯಮದ ಚೌಕಟ್ಟಿನಲ್ಲಿ ಕರ್ತವ್ಯವನ್ನು ಸರಿಯಾಗಿ ಪಾಲಿಸದೆ ಖಾಸಗಿ ವ್ಯವಹಾರವನ್ನು ಕಛೇರಿಯವರೆವಿಗೂ ತೆಗೆದುಕೊಂಡು ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿಯನ್ನು ಪ್ರದರ್ಶಿಸಿರುವುದು ಕಂಡು ಬರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು (ಆಡಳಿತ) ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 18-07-2009ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ 3 ವರ್ಷಗಳ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೋಲೀಸ್ ಕಮೀಷನರ್, ಆಡಳಿತ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ದಿನಾಂಕ : 27–03–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ದೋಷಾರೋಪಣೆಯು ಸ್ಥಿರಪಟ್ಟಿದ್ದರೂ ಅವರ ಖಾಸಗಿ ವಿಷಯವಾಗಿರುವುದರಿಂದ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯು ಆರೋಪಕ್ಕನುಗುಣವಾಗಿಲ್ಲವೆಂದು ಪರಿಗಣಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 122 ಪೊಸಿಅ 2010, ಬೆಂಗಳೂರು, ದಿನಾಂಕ : 29–07–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೋಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಜಿ. ಕೃಷ್ಣಮೂರ್ತಿ, ಹೆಚ್.ಸಿ. ನಗರ ವಿಶೇಷ ಶಾಖೆ, ಬೆಂಗಳೂರು, ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಮಾರ್ಪಡಿಸಿ ವಾಗ್ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೋಲೀಸ್ ಸೇವೆಗಳು)

ಪಿ.ಆರ್. 1992

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಮುಸ್ತಾಕ ಪಾಷ, ಪಿ.ಎಸ್.ಐ., ಡಿ.ಎಸ್.ಎ., ಘಟಕ, ಕೆ.ಜಿ.ಎಫ್., ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್., ಇವರ ಆದೇಶ ಸಂಖ್ಯೆ : ಸಿಬ್ಬಂದಿ(2)/ಶಿಕ್ಷೆ/77/2008 (ಓ.ಬಿ. ಸಂಖ್ಯೆ : 43/2009) ದಿನಾಂಕ : 21–01–2009.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು (36)/ಘನ್ಸಿ/2009–10 (ಓ.ಬಿ. ಸಂಖ್ಯೆ : 39/2010–11) ದಿನಾಂಕ : 06–06–2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 03–11–2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು(2)/69/2010–11 ದಿನಾಂಕ : 03–03–2011.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 63 ಸಿಎನ್‌ಎಸ್ 11 ದಿನಾಂಕ : 20–07–2011.

ಪ್ರಸ್ತಾವನೆ :

ಶ್ರೀ ಮುಸ್ತಾಕ ಪಾಷ, ಪಿ.ಎಸ್.ಐ., ರವರು ಕೆ.ಜಿ.ಎಫ್. ನ ಆಂಡ್ರಸನ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷ್ಯತೆ, ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಆಂಡ್ರಸನ್‌ಪೇಟೆ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ : 02/2003 ಕಲಂ 379 ಐ.ಪಿ.ಸಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯಾದ ಚೌರಿಯಪ್ಪನ್ ಅಲಿಯಾಸ್ ಚೌರಿದಾಸ್ ಎಂಬಾತನಿಗೆ ಶಿಕ್ಷೆಯಾಗಿದ್ದು, ಬೆರಳು ಮುದ್ರೆ ಚೀಟಿಗಳನ್ನು ಎಂ.ಓ.ಬಿ. ಫೈಲ್ ತೆರೆದು ಅಡಕ ಮಾಡದೇ ಇರುವುದು ಮತ್ತು ಸರಿಯಾಗಿ ಮಾಹಿತಿಗಳನ್ನು ಬರೆಯದೆ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಮತ್ತು ಬೇಜವಾಬ್ದಾರಿತನವನ್ನು ತೋರ್ಪಡಿಸಿ ಕರ್ತವ್ಯ ಲೋಪವೆಸಗಿರುತ್ತೀರಿ".

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್., ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 21–01–2009ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಎರಡು ವರ್ಷಗಳ ಕಾಲ ಅವರ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ದಿನಾಂಕ : 06–06–2010ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಪರಿಗಣಿಸಿ ಶಿಸ್ತು ಪ್ರಾಧಿಕಾರದಿಂದ ಆದೇಶವಾದ ಶಿಕ್ಷೆಯನ್ನು ಎರಡು ವರ್ಷಗಳ ಬದಲಾಗಿ ಒಂದು ವರ್ಷಕ್ಕೆ ಇಳಿಸಲಾಗಿದೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಿ ಅರ್ಜಿದಾರರು ಆರೋಪಿಯನ್ನು ಪತ್ತೆಹಚ್ಚುವಲ್ಲಿ ಪ್ರಯತ್ನ ಪಟ್ಟಿರುವುದನ್ನು ಗಮನಿಸಿ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 172 ಪೊಸಿಅ 2010, ಬೆಂಗಳೂರು, ದಿನಾಂಕ : 29–07–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಮುಸ್ತಾಕ ಪಾಷ, ಪಿ.ಎಸ್.ಐ., ಡಿ.ಎಸ್.ಎ., ಘಟಕ ಕೆ.ಜಿ.ಎಫ್. ಇವರಿಗೆ ಮೇಲ್ಮನವಿ ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಮಾರ್ಪಡಿಸಿ "ವಾಗ್ದಂಡನೆ" ಯನ್ನು ವಿಧಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1993

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ದಿವಂಗತ ಎಸ್.ಹೆಚ್.ಪಾಟೀಲ್, ಆಗಿನ ಸಹಾಯಕ ಸರ್ಕಾರಿ ಅಭಿಯೋಜಕರು ಸಿ.ಜೆ.(ಕಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಭದ್ರಾವತಿ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಎ)(1)ರ ಸೌಲಭ್ಯಕ್ಕೆ ಪರಿಗಣಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಲಾ 225 ಪಿಪಿಇ 91, ದಿನಾಂಕ : 10–06–1994.
2. ಸರ್ಕಾರದ ಪತ್ರ ಸಂಖ್ಯೆ : ಲಾ 221 ಪಿಪಿಇ 96(33), ದಿನಾಂಕ : 18–11–1996.
3. ಶ್ರೀ ಎಸ್.ಹೆಚ್. ಪಾಟೀಲ್ ಇವರ ಮನವಿಯ ದಿನಾಂಕ : 10–04–2008.
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂ : ಡಿಪಿಎನ್/ಲೆಕ್ಕ–1/108/2008–09, ದಿನಾಂಕ : 18–06–2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 10–06–1984ರ ಸರ್ಕಾರದ ಅಧಿಸೂಚನೆಯ ಕ್ರ.ಸಂ. 55ರ ಅನ್ವಯ ದಿವಂಗತ ಎಸ್.ಹೆಚ್.ಪಾಟೀಲ್, ಆಗಿನ ಸಹಾಯಕ ಸರ್ಕಾರಿ ಅಭಿಯೋಜಕರು ಸಿ.ಜೆ.(ಕಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಭದ್ರಾವತಿ, ಇವರು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ : 25–06–1994ರ ಪೂರ್ವಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ದಿನಾಂಕ : 18–11–1996ರ ಸರ್ಕಾರದ ಪತ್ರದನ್ವಯ ಸದರಿ ಅಧಿಕಾರಿಯ ಜನ್ಮ ದಿನಾಂಕವನ್ನು 25–06–1962 ಎಂದು ಒಪ್ಪಲಾಗಿದೆ. ಮೇಲೆ (3)ರಲ್ಲಿ ಓದಲಾದ ದಿನಾಂಕ : 10–04–2008ರ ಮನವಿಯಲ್ಲಿ ದಿವಂಗತ ಎಸ್.ಹೆಚ್. ಪಾಟೀಲ್ ರವರು ಅವರು 32 ವರ್ಷಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿದಂತೆ ಆಗುವುದರಿಂದ, ನಿಯಮಾನುಸಾರ 2 ವರ್ಷಗಳ ಹೆಚ್ಚುವರಿ ಸೇವಾ ಸೌಲಭ್ಯಕ್ಕೆ ಅವರು ಅರ್ಹರಿದ್ದು ಪರಿಗಣಿಸುವಂತೆ ಕೋರಿದ್ದು, ಮೇಲೆ (4)ರಲ್ಲಿ ಓದಲಾದ ದಿನಾಂಕ : 18–06–2011ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1) ರನ್ವಯ ಅವರು 2 ವರ್ಷಗಳ ಹೆಚ್ಚುವರಿ ಹೆಚ್ಚುವರಿ ಸೇವಾ ಸೌಲಭ್ಯಕ್ಕೆ ಅರ್ಹರಿರುವುದರಿಂದ ಈ ಬಗ್ಗೆ ಆದೇಶವನ್ನು ಹೊರಡಿಸುವಂತೆ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 263 ಪಿಪಿಇ 2009, ಬೆಂಗಳೂರು, ದಿನಾಂಕ : 04–08–2011

ಮೇಲಿನ ವಿವರಗಳ ಹಿನ್ನೆಲೆಯಲ್ಲಿ, ದಿವಂಗತ ಎಸ್.ಹೆಚ್.ಪಾಟೀಲ್, ಆಗಿನ ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ.(ಕಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಭದ್ರಾವತಿ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247(ಎ)(1)ರ ಅನ್ವಯ ಎರಡು ವರ್ಷಗಳ ಅಧಿಕ ಸೇವಾವಧಿಯನ್ನು ದಿವಂಗತರ ನಿವೃತ್ತಿ ವೇತನ ಸೌಲಭ್ಯಗಳಿಗೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ : ಆಇ 771 ಸೇ–3/2011, ದಿನಾಂಕ : 16–07–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ)

ಪಿ.ಆರ್. 1994

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಸ್.ಟಿ.ಕುಲಕರ್ಣಿ, ನಿವೃತ್ತ ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತುಮಕೂರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಎ)(1)ರ ಸೌಲಭ್ಯಕ್ಕೆ ಪರಿಗಣಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ–1 ಸಂ: ಲಾ 67 ಪಿಪಿಇ 82, ದಿನಾಂಕ: 22.12.82
2. ಸರ್ಕಾರದ ಆದೇಶ ಸಂಖ್ಯೆ:ಲಾ 103 ಪಿಪಿಇ 83, ದಿನಾಂಕ: 14.07.1983
3. ಶ್ರೀ ಎಸ್.ಟಿ. ಕುಲಕರ್ಣಿ ಇವರ ಮನವಿಯ ದಿನಾಂಕ: 19.01.2009
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂ: ಡಿಪಿಎನ್/ಲೆಕ್ಕ–1/379/2008–09, ದಿನಾಂಕ: 18.02.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 22.12.82ರ ಸರ್ಕಾರದ ಅಧಿಸೂಚನೆ–1ಯ ಕ್ರ.ಸಂ. 9ರ ಅನ್ವಯ ಶ್ರೀ ಎಸ್.ಟಿ. ಕುಲಕರ್ಣಿ, ನಿವೃತ್ತ ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು ಇವರು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ: 01.01.1983ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ದಿನಾಂಕ: 14.07.1983ರ ಸರ್ಕಾರದ ಆದೇಶದನ್ವಯ ಸದರಿ ನಿವೃತ್ತ ಅಧಿಕಾರಿಯ ಜನ್ಮ ದಿನಾಂಕವನ್ನು 10.09.1950 ಎಂದು ಒಪ್ಪಲಾಗಿದೆ. ಮೇಲೆ (3)ರಲ್ಲಿ ಓದಲಾದ ದಿನಾಂಕ: 19.01.2009ರ ಮನವಿಯಲ್ಲಿ ಶ್ರೀ ಎಸ್.ಟಿ.ಕುಲಕರ್ಣಿರವರು ಅವರು 32ವರ್ಷ 03 ತಿಂಗಳು 08 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿದಂತೆ ಆಗುವುದರಿಂದ, ನಿಯಮಾನುಸಾರ 02 ವರ್ಷ 03 ತಿಂಗಳ ಹೆಚ್ಚುವರಿ ಸೇವಾ ಸೌಲಭ್ಯಕ್ಕೆ ಅವರು ಅರ್ಹರಿದ್ದು ಪರಿಗಣಿಸುವಂತೆ ಕೋರಿದ್ದು, ಮೇಲೆ (4)ರಲ್ಲಿ ಓದಲಾದ ದಿನಾಂಕ: 18.02.2009ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರುರವರು ಸದರಿಯವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರನ್ವಯ ಎರಡು ಹೆಚ್ಚುವರಿ ಸೇವಾ ಸೌಲಭ್ಯಕ್ಕೆ ಅರ್ಹರಿರುವುದರಿಂದ ಈ ಬಗ್ಗೆ ಆದೇಶವನ್ನು ಹೊರಡಿಸುವಂತೆ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 103 ಪಿಪಿಇ 2009, ಬೆಂಗಳೂರು, ದಿನಾಂಕ: 5ನೇ ಆಗಸ್ಟ್ 2011

ಮೇಲಿನ ವಿವರಗಳ ಹಿನ್ನೆಲೆಯಲ್ಲಿ, ಶ್ರೀ ಎಸ್.ಟಿ. ಕುಲಕರ್ಣಿ, ನಿವೃತ್ತ ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247 (ಎ)(1)ರ ಅನ್ವಯ ಎರಡು ವರ್ಷಗಳ ಅಧಿಕ ಸೇವಾವಧಿಯನ್ನು ಅವರ ನಿವೃತ್ತಿ ವೇತನ ಸೌಲಭ್ಯಗಳಿಗೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ:ಆಇ 791 ಸೇ–3/2011, ದಿನಾಂಕ: 16.07.2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು – ಬಿ)

ಪಿ.ಆರ್. 1995

ಒಳಾಡಳಿತ ಸಚಿವಾಲಯ

ವಿಷಯ : ಚಾಮರಾಜನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರ ಕಛೇರಿಗೆ ಅಧೀಕ್ಷಕರ ಹುದ್ದೆಯ ಸೃಜನೆ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂ:ಒಇ 508 ಪಿಪಿಇ 2007, ದಿನಾಂಕ: 22.10.2009.
2. ಸರ್ಕಾರದ ಆದೇಶ ಸಂ:ಒಇ 194 ಪಿಪಿಇ 2009, ದಿನಾಂಕ: 23.08.2010.
3. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂಖ್ಯೆ:ಡಿಪಿಎನ್/ಸಿಶಾ–2/128/2010–11, ದಿನಾಂಕ: 19.01.2011.

ಪ್ರಸ್ತಾವನೆ:

ಮೇಲೆ (3)ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ದಿನಾಂಕ: 19.01.2011ರ ಪತ್ರದಲ್ಲಿ ಮೇಲೆ (1)ರಲ್ಲಿ ಮತ್ತು (2)ರಲ್ಲಿ ಓದಲಾದ ಸರ್ಕಾರದ ಆದೇಶಗಳನ್ವಯ ಚಾಮರಾಜನಗರದ ಜಿಲ್ಲಾ ಮತ್ತು ಸತ್ರ, ಸಿವಿಲ್ ಜಡ್ಜ್ (ಹಿ.ವಿ) ಮತ್ತು ಸಿ.ಜೆ.ಎಂ. ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ ಸರ್ಕಾರಿ ಅಭಿಯೋಜಕರ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ, ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಹಾಗೂ ಅಟೆಂಡರ್ ತಲಾ ಒಂದು ಹುದ್ದೆಯನ್ನು ಮತ್ತು ಆರಕ್ಷಕ ಅಧೀಕ್ಷಕರ ಕಛೇರಿಗೆ ಹೊಂದಿಕೊಂಡಂತೆ ಒಂದು ಸಹಾಯಕ ಅಭಿಯೋಗ ನಿರ್ದೇಶಕರ ಹಾಗೂ ಒಂದು ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಹುದ್ದೆಗಳನ್ನು ಸೃಜಿಸಲಾಗಿದೆ. ಸಮಾನತೆಯ ಆಧಾರದ ಮೇಲೆ ಜಿಲ್ಲಾ ಕೇಂದ್ರವೆಂದು ಘೋಷಿತವಾಗಿರುವ ಚಾಮರಾಜನಗರದ ಸರ್ಕಾರಿ ಅಭಿಯೋಜಕರ ಕಛೇರಿಯನ್ನು ಸಂಯುಕ್ತ ಕಛೇರಿಯನ್ನಾಗಿ ಪರಿಗಣಿಸುವ ನಿಟ್ಟಿನಲ್ಲಿ ಕಛೇರಿಯ ಮೇಲ್ವಿಚಾರಣೆ, ಸಿಬ್ಬಂದಿ ಮೇಲ್ವಿಚಾರಣೆಗೆ ಒಂದು ಅಧೀಕ್ಷಕರ ಹುದ್ದೆಯನ್ನು ಹಾಗೂ ಹಾಲಿ ಸೃಜನೆಯಾಗಿರುವ ಕಛೇರಿಗಳಿಗೆ ಸ್ವಚ್ಛತೆ ಇನ್ನಿತರ ಕೆಲಗಳಿಗಾಗಿ ಎರಡು ದಲಾಯತ್ ಹುದ್ದೆಯು ಅತ್ಯಾವಶ್ಯವಾಗಿದ್ದು, ಅಗತ್ಯವಾಗಿ ಸೃಜಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 77 ಪಿಪಿಇ 2011, ಬೆಂಗಳೂರು, ದಿನಾಂಕ: 26ನೇ ಜುಲೈ 2011

ಮೇಲಿನ ವಿವರಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಜಾರಿಯಲ್ಲಿರುವ ಆರ್ಥಿಕ ಮಿತಿವ್ಯಯವನ್ನು ಸಡಿಲಿಸಿ, ಚಾಮರಾಜನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರ ಕಛೇರಿಗೆ ಹೊಂದಿಕೊಂಡಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಒಂದು ಅಧೀಕ್ಷಕರ ಹುದ್ದೆಯನ್ನು ಮೊದಲ ಬಾರಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಿದೆ.

ಸದರಿ ಹುದ್ದೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2014–ನ್ಯಾಯಪರಿಪಾಲನೆ–00–114–ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು–0–02 ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು ಇದರಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 145 ವೆಚ್ಚ–11/2011, ದಿನಾಂಕ: 08–07–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು – ಬಿ)

ಪಿ.ಆರ್. 1996

ಇಂಧನ ಸಚಿವಾಲಯ

ವಿಷಯ : ಮೆ॥ ಫಾಲ್ಗುಣಿ ಪವರ್ ಪ್ರಾಜೆಕ್ಟ್ – II ರವರ ಕಂಪನಿಯ ಹೆಸರನ್ನು ಮೆ॥ ಸೋಹಂ ಕೊಳವೂರು ರಿನ್ಯುವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿ 9.00 ಮೆ.ವ್ಯಾ. ಸಾಮರ್ಥ್ಯದ ಕೊಲಾವರ್ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶ ವಿಸ್ತರಣೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ : ಇಂಇ 239 ಎನ್‌ಸಿಇ 2002 ದಿನಾಂಕ: 10.10.2002.
2) ತಿದ್ದುಪಡಿ ಆದೇಶ ಸಂಖ್ಯೆ ಇಂಇ 78 ಎನ್‌ಸಿಇ 2003 ದಿನಾಂಕ: 04.04.2003.
3) ಸರ್ಕಾರಿ ಆದೇಶ ಸಂಖ್ಯೆ : ಇನ್ 438 ಎನ್‌ಸಿಇ 2006 ದಿನಾಂಕ: 15.02.2007.
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/06/ಎಸ್‌ಹೆಚ್–102/ಕೊಲಾವರ್ ಎಂಹೆಚ್‌ಎಸ್/937/ದಿನಾಂಕ: 19/22.3.2011.

ಪ್ರಸ್ತಾವನೆ:

ಓದಲಾದ (1)ರ ಆದೇಶದಲ್ಲಿ ಮೆ॥ ಫಾಲ್ಗುಣಿ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್–2 ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ (ಈಗ ಮಂಗಳೂರು ಜಿಲ್ಲೆಯ, ಮಂಗಳೂರು ತಾಲ್ಲೂಕು) ಕೊಲಾವರ್ ಗ್ರಾಮದ ಬಳಿ ಫಾಲ್ಗುಣಿ ನದಿಗೆ ಅಡ್ಡಲಾಗಿ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕೊಲಾವರ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಓದಲಾದ (2)ರಲ್ಲಿನ ತಿದ್ದುಪಡಿ ಆದೇಶದಲ್ಲಿ ಸದರಿ ಕಂಪನಿಯ ಹೆಸರನ್ನು ಮೆ॥ ಫಾಲ್ಗುಣಿ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್–2 (A division of Ground and Air Technical Services (P) Ltd.) ಎಂದು ತಿದ್ದುಪಡಿ ಮಾಡಲಾಗಿದೆ.

ಓದಲಾದ (3)ರ ಆದೇಶದಲ್ಲಿ ಮೆ॥ ಫಾಲ್ಗುಣಿ ಪವರ್ ಪ್ರಾಜೆಕ್ಟ್ – II ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಕೊಲಾವರ್ ಗ್ರಾಮದ ಬಳಿ ಫಾಲ್ಗುಣಿ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಲಾಗಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕೊಲಾವರ್ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 9.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿದೆ.

ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಕೋರಿಕೆಯ ಹಿನ್ನೆಲೆಯಲ್ಲಿ ಮೆ॥ ಫಾಲ್ಗುಣಿ ಪವರ್ ಪ್ರಾಜೆಕ್ಟ್ – II ರವರ ಕಂಪನಿಯ ಕಂಪನಿಯ ಹೆಸರನ್ನು ಮೆ॥ ಸೋಹಂ ಕೊಳವೂರು ರಿನ್ಯುವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿ 9.00 ಮೆ.ವ್ಯಾ. ಸಾಮರ್ಥ್ಯದ ಕೊಲಾವರ್ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ಮುಂದಿನ 3 ವರ್ಷಗಳ ಅವಧಿಗೆ ವಿಸ್ತರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 176 ಎನ್‌ಸಿಇ 2011, ಬೆಂಗಳೂರು, ದಿನಾಂಕ: 04–08–2011

ಮೆ॥ ಫಾಲ್ಗುಣಿ ಪವರ್ ಪ್ರಾಜೆಕ್ಟ್ – II ರವರ ಕಂಪನಿಯ ಹೆಸರನ್ನು ಮೆ॥ ಸೋಹಂ ಕೊಳವೂರು ರಿನ್ಯುವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು ಅನುಮತಿ ನೀಡಲಾಗಿದೆ ಹಾಗೂ 9.00 ಮೆ.ವ್ಯಾ. ಸಾಮರ್ಥ್ಯದ ಕೊಲಾವರ್ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು 24.5.2010 ರಿಂದ 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 1997

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಯೋಇ 309 ಪಿಟಿಪಿ 94, ದಿನಾಂಕ 07–08–1995.

2. ಮಾನ್ಯ ಹರಿಹರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಿ.ಪಿ. ಹರೀಷ್‌ರವರ ಪತ್ರ.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ 07–08–1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಪತ್ರದಲ್ಲಿ ಮಾನ್ಯ ಶಾಸಕರು ಸೂಚಿಸಿರುವ ಸದಸ್ಯರನ್ನು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಯೋಇ 7 ಯೋವಿವಿ 2010, ಬೆಂಗಳೂರು, ದಿನಾಂಕ 2ನೇ ಆಗಸ್ಟ್ 2011

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿಗೆ ಈ ಕೆಳಕಂಡವರನ್ನು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ಕ್ರ.ಸಂ.	ಜಿಲ್ಲೆ	ಹೆಸರು	ವರ್ಗ
1	ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು	1. ಶ್ರೀ ಚಂದ್ರಶೇಖರಯ್ಯ, ದೊಳೆಹೊಳೆ ಗ್ರಾಮ, ಹರಿಹರ ತಾಲ್ಲೂಕು	ಸಾಮಾನ್ಯ
		2. ಶ್ರೀ ಬಾರ್ಕಿ ಹೊನ್ನಪ್ಪ ಬಿನ್ ಸಿದ್ದಪ್ಪ, ಸಾರಥಿ ಗ್ರಾಮ, ಹರಿಹರ ತಾಲ್ಲೂಕು	ಹಿಂದುಳಿದ ವರ್ಗ
		3. ಶ್ರೀ ಎ. ರಂಗನಾಥ ಬಿನ್ ಚೆನ್ನಕೇಶವಪ್ಪ, ಹರಳಹಳ್ಳಿ ಗ್ರಾಮ, ಹರಿಹರ ತಾಲ್ಲೂಕು	ಸಾಮಾನ್ಯ
		4. ಶ್ರೀ ಹೆಚ್. ರಂಗಪ್ಪ ಬಿನ್ ಗೋಪಾಲಪ್ಪ, ಕೊಕ್ಕನೂರು ಗ್ರಾಮ, ಹರಿಹರ ತಾಲ್ಲೂಕು	ಪರಿಶಿಷ್ಟ ಪಂಗಡ
		5. ಶ್ರೀಮತಿ ಚಂದ್ರಮ್ಮ ಕೋಂ, ಚಂದ್ರಪ್ಪ, ಬಿ.ಎನ್. ಮಲೇಬೆನ್ನೂರು, ಹರಿಹರ ತಾಲ್ಲೂಕು	ಮಹಿಳೆ
		6. ಶ್ರೀ ಸೈಯದ್ ಮಜೀದ್ ಸಾಹೇಬ್ ತಂ : ಚಮನ್ ಸಾಹೇಬ್ ಭಾನವಳ್ಳಿ, ಹರಿಹರ ತಾಲ್ಲೂಕು	ಅಲ್ಪಸಂಖ್ಯಾತ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಚಿಕ್ಕರಾಜು,

ಸರ್ಕಾರದ ಅಧೀನ ಕಾರ್ಯದರ್ಶಿ 1 & 2,

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್. 1998

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಆಡಳಿತಾಧಿಕಾರಿಗಳ ಹುದ್ದೆಯನ್ನು ಜಂಟಿ ನಿರ್ದೇಶಕರ ವೃಂದಕ್ಕೆ ಮೇಲ್ದರ್ಜೆಗೇರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಅಧಿಸೂಚನೆ ಸಂಖ್ಯೆ : ಪಿಡಿ 31 ಎಸ್‌ಎಸ್‌ಎಂ 2009, ದಿನಾಂಕ 21–06–2010.

2. ನಿರ್ದೇಶಕರು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ : ಆಸಾನಿ/21/ ಆ–1/2008, ದಿನಾಂಕ 06–07–2011.

ಪ್ರಸ್ತಾವನೆ :

ಓದಲಾದ (1)ರ ಸರ್ಕಾರದ ಅಧಿಸೂಚನೆ ದಿನಾಂಕ 21–06–2010 ರಲ್ಲಿ ಹೊರಡಿಸಲಾದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಆಡಳಿತಾಧಿಕಾರಿ ಹುದ್ದೆಯನ್ನು ಕರ್ನಾಟಕ ಸರ್ಕಾರ ಸಚಿವಾಲಯದ ಅಧೀನ ಕಾರ್ಯದರ್ಶಿ ಅಥವಾ ಕರ್ನಾಟಕ ಆಡಳಿತ ಸೇವಾ ಅಧಿಕಾರಿ (ಕಿರಿಯ ವೇತನ ಶ್ರೇಣಿ) ನಿಯೋಜನೆ ಮೂಲಕ ಅಥವಾ ಉಪ ನಿರ್ದೇಶಕರನ್ನು ನೇಮಕಾತಿ (i.e. posting) ಮಾಡುವ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಓದಲಾದ (2)ರ ಪತ್ರದಲ್ಲಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಇವರು ಆಡಳಿತಾಧಿಕಾರಿ ಹುದ್ದೆಯನ್ನು ನಿರ್ದೇಶನಾಲಯದ ಉಪ ನಿರ್ದೇಶಕರ ವೃಂದದಿಂದ ಭರ್ತಿ ಮಾಡಲಾಗಿದ್ದು, ಬಹುತೇಕ ಪ್ರಧಾನ/ಪ್ರಮುಖ ಇಲಾಖೆಗಳಲ್ಲಿ (Major Head of the Department)

ಆಡಳಿತಾಧಿಕಾರಿಗಳ ಹುದ್ದೆಯು ಜಂಟಿ ನಿರ್ದೇಶಕರು (ಆಡಳಿತ) ಮತ್ತು ಇದಕ್ಕಿಂತ ಹೆಚ್ಚಿನ ವೃಂದದ ಹುದ್ದೆಯಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಕಾರಣಗಳನ್ನು ಆಧರಿಸಿ ಈ ಹುದ್ದೆಯನ್ನು ಜಂಟಿ ನಿರ್ದೇಶಕರು (ಆಡಳಿತ) ವೃಂದಕ್ಕೆ ಉನ್ನತೀಕರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1. ಸರ್ಕಾರದ ಆದೇಶದ ಸಂಖ್ಯೆ : ಎಫ್‌ಡಿ 30 ಎಸ್‌ಆರ್‌ಎಸ್ 91, ದಿನಾಂಕ 16–03–1992 ರಲ್ಲಿ ಸರ್ಕಾರವು ಈ ನಿರ್ದೇಶನಾಲಯವನ್ನು ಪ್ರಮುಖ/ಪ್ರಧಾನ ಇಲಾಖೆ (Major Head of the Department) ಎಂದು ಘೋಷಿಸಲಾಗಿದೆ,/ಸರ್ಕಾರದ ಇತರೆ ಪ್ರಮುಖ/ಪ್ರಧಾನ ಇಲಾಖೆಗಳ ಮುಖ್ಯಸ್ಥರ ಕಛೇರಿಗಳಲ್ಲಿ ಆಡಳಿತಾಧಿಕಾರಿಗಳ ಹುದ್ದೆಯು ಸಮೂಹ 'ಎ' ಹಿರಿಯ ಶ್ರೇಣಿ ವೃಂದಕ್ಕೆ ಸಮಾನಾಂತರವಾಗಿರುತ್ತದೆ. (ಕೃಷಿ ಇಲಾಖೆ, ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರಿಗೆ ಇಲಾಖೆ, ಸಹಕಾರ ಇಲಾಖೆ, ಕಾರ್ಮಿಕ ಇಲಾಖೆ, ಕೃಷಿ ಮಾರುಕಟ್ಟೆ ಇಲಾಖೆ, ಜಲಾನಯನ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇತ್ಯಾದಿ) ಆದುದರಿಂದ ಈ ಇಲಾಖೆಯ ಆಡಳಿತಾಧಿಕಾರಿ ಹುದ್ದೆಯನ್ನು ಸಹ ಸಮೂಹ 'ಎ' ಹಿರಿಯ ಶ್ರೇಣಿಗೆ (ಜಂಟಿ ನಿರ್ದೇಶಕರು, ವೇತನ ಶ್ರೇಣಿ 20025–28275) ಉನ್ನತೀಕರಿಸುವ ಅಗತ್ಯವಿರುತ್ತದೆ.
2. ಪ್ರಸ್ತುತ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಸಮೂಹ 'ಎ' (ವೇತನ ಶ್ರೇಣಿ ರೂ.18150–26925) ಶ್ರೇಣಿಯ ಉಪ ನಿರ್ದೇಶಕರ ವೃಂದದ ಅಧಿಕಾರಿಗಳಾಗಿದ್ದು, ಕೇಂದ್ರ ಕಛೇರಿಯ ಆಡಳಿತಾಧಿಕಾರಿಗಳು ಅದೇ ವೃಂದದಲ್ಲಿದ್ದುದರಿಂದ, ಜಿಲ್ಲಾ ಮಟ್ಟದ ಕಛೇರಿಗಳಲ್ಲಿನ ಕರ್ತವ್ಯಗಳ ನಿರ್ವಹಣೆ ಮತ್ತು ನಿಯಂತ್ರಣ ವಿಶೇಷವಾಗಿ ಆಡಳಿತಾತ್ಮಕ/ಲೆಕ್ಕಪತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಸೂಕ್ತವಾಗಿ ನಿಯಂತ್ರಿಸುವಲ್ಲಿ ಹಾಗೂ ತಪಾಸಣೆ ಮಾಡುವಾಗ ಅದೇ ಸಮಾನಾಂತರ ವೃಂದದ ಅಧಿಕಾರಿಗಳಾದ ಆಡಳಿತಾಧಿಕಾರಿಗಳಿಗೆ ಕೆಲವು ಸಂದರ್ಭಗಳಲ್ಲಿ ಮುಜುಗರ (Embarrassing) ಉಂಟಾಗುವ ಪ್ರಸಂಗಗಳು ಕಂಡು ಬಂದಿರುತ್ತವೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಜಿಲ್ಲಾ ಖಜಾನೆಗೆ ಸಲ್ಲಿಸುವ ಎಲ್ಲಾ ಡಿ.ಸಿ. ಬಿಲ್ ಸಿಬ್ಬಂದಿಯ ಪ್ರವಾಸ ಭತ್ಯೆ, ಸಾದಿಲ್ವಾರು ಬಿಲ್ಲುಗಳಿಗೆ ಆಡಳಿತಾಧಿಕಾರಿಯವರ ಮೇಲು ರುಜು ಮಾಡಬೇಕಾಗಿರುತ್ತದೆ. ಆದುದರಿಂದ, ಈ ಹುದ್ದೆಯನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗಿಂತ ಮೇಲ್ದರ್ಜೆ ಹುದ್ದೆಯಾದ ಜಂಟಿ ನಿರ್ದೇಶಕರ ಹುದ್ದೆಗೆ ಉನ್ನತೀಕರಿಸುವುದು ಅವಶ್ಯಕವಾಗಿರುತ್ತದೆ.
3. ಸರ್ಕಾರದ ಆದೇಶದ ಸಂಖ್ಯೆ : ಎಫ್‌ಡಿ 2 ಟಿಎಫ್‌ಪಿ 98, ದಿನಾಂಕ 17–05–1999 ರಲ್ಲಿ ಈ ನಿರ್ದೇಶನಾಲಯದಲ್ಲಿ ಆಡಳಿತಾಧಿಕಾರಿಗಳ ಹುದ್ದೆಯನ್ನು ವಿಭಾಗ ಮಟ್ಟದ ಹುದ್ದೆ (Divisional level post) ಎಂದು ಘೋಷಿಸಿದ್ದು, ಇದೇ ಆದೇಶದಲ್ಲಿ ಈ ನಿರ್ದೇಶನಾಲಯದ ಆಡಳಿತಾಧಿಕಾರಿಗಳಿಗೆ ವಿಭಾಗ ಮಟ್ಟದ ಅಧಿಕಾರಿಗಳಿಗೆ ನೀಡಲಾದ ಅಧಿಕಾರ ಪ್ರತ್ಯೋಜನೆ (Deligation of powers) ನೀಡಲಾಗಿದ್ದರಿಂದ, ಆಡಳಿತಾಧಿಕಾರಿಗಳ ಹುದ್ದೆಯನ್ನು ಉನ್ನತೀಕರಿಸುವುದು ಅಗತ್ಯವಿದೆ.
4. ಇತ್ತೀಚೆಗೆ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರ ಹುದ್ದೆಗಳನ್ನು ಸಹ ಕೆ.ಎ.ಎಸ್. ಹಿರಿಯ ಶ್ರೇಣಿಗೆ (ಜಂಟಿ ನಿರ್ದೇಶಕರ ಸಮಾನಾಂತರ ವೇತನ ಶ್ರೇಣಿ) ಮೇಲ್ದರ್ಜೆಗೇರಿಸಲಾಗಿದೆ. ಆದುದರಿಂದ, ಇಲಾಖಾ ಮುಖ್ಯಸ್ಥರ ಕೇಂದ್ರ ಸ್ಥಾನಿಕ ಸಹಾಯಕರ ಹುದ್ದೆಯ ಸಮಾನಾಂತರ ಹುದ್ದೆ ಎಂದು ಪರಿಗಣಿಸಿ ಮೇಲ್ದರ್ಜೆಗೇರಿಸುವುದು ಸೂಕ್ತವಾಗಿರುತ್ತದೆ.
5. ಪ್ರಸ್ತುತ ಕೇಂದ್ರ ಕಛೇರಿಯಲ್ಲಿ ಐದು (5) ಜಂಟಿ ನಿರ್ದೇಶಕರ ಹುದ್ದೆಗಳಿದ್ದು, ಅವರ ಕರ್ತವ್ಯಗಳು/ಜವಾಬ್ದಾರಿಗಳು, ಆಯಾ ತಾಂತ್ರಿಕ ವಿಭಾಗಕ್ಕೆ ಸೀಮಿತವಾಗಿದ್ದು, ನಿರ್ದೇಶನಾಲಯದ ಒಟ್ಟಾರೆ ಜವಾಬ್ದಾರಿಯನ್ನು ನಿರ್ದೇಶಕರೇ ನಿರ್ವಹಿಸಬೇಕಾಗಿದ್ದು, ನಿರ್ದೇಶಕರ ಅನುಪಸ್ಥಿತಿಯಲ್ಲಿ (ಪ್ರವಾಸ, ಸಭೆಯಲ್ಲಿ ಭಾಗವಹಿಸುವ, ಸಾಂದರ್ಭಿಕ ರಜೆ ಇತ್ಯಾದಿ ಸಂದರ್ಭಗಳಲ್ಲಿ) ನಿರ್ದೇಶನಾಲಯಕ್ಕೆ ಸಂಬಂಧಿಸಿದ ಒಟ್ಟಾರೆ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಆಡಳಿತಾಧಿಕಾರಿಗಳೇ ನಿರ್ವಹಿಸಬೇಕಾದ ಪರಿಸ್ಥಿತಿಯಲ್ಲಿ, ಕನಿಷ್ಠ ಈ ಹುದ್ದೆಯಲ್ಲಿನ ಅಧಿಕಾರಿಗಳು ಜಂಟಿ ನಿರ್ದೇಶಕರ ವೃಂದದವರಾಗಿದ್ದಲ್ಲಿ, ಇತರೇ ಜಂಟಿ ನಿರ್ದೇಶಕರೊಂದಿಗೆ ಸಮನ್ವಯವಾಗಿ ಜವಾಬ್ದಾರಿಯನ್ನು ನಿರ್ವಹಿಸುವ ಸಾಧ್ಯತೆಯಿಂದಾಗಿ ನಿರ್ದೇಶನಾಲಯದ ಆಡಳಿತಾಧಿಕಾರಿಗಳ ಹುದ್ದೆಯನ್ನು ಜಂಟಿ ನಿರ್ದೇಶಕರ ವೃಂದಕ್ಕೆ ಮೇಲ್ದರ್ಜೆಗೇರಿಸುವುದು ಸೂಕ್ತವಾಗಿರುತ್ತದೆ.
6. ಉಪ ನಿರ್ದೇಶಕರ ವೃಂದದ ಆಡಳಿತಾಧಿಕಾರಿಗಳ ಹುದ್ದೆಯನ್ನು (ಪ್ರಸ್ತುತ ವೇತನ ಶ್ರೇಣಿ ರೂ.18150–26925) ಜಂಟಿ ನಿರ್ದೇಶಕರ ಹುದ್ದೆಗೆ (ವೇತನ ಶ್ರೇಣಿ ರೂ.20025–28275) ಮೇಲ್ದರ್ಜೆಗೇರಿಸಿದಲ್ಲಿ ಸರ್ಕಾರಕ್ಕೆ ಯಾವುದೇ ಹೆಚ್ಚುವರಿ ಆರ್ಥಿಕ ಹಣಕಾಸಿನ ಹೊರೆಯಾಗುವುದಿಲ್ಲ, ಕಾರಣ ಕನಿಷ್ಠ 5 ವರ್ಷ ಸೇವೆ ಸಲ್ಲಿಸಿರುವವರು ಮಾತ್ರ ಜಂಟಿ ನಿರ್ದೇಶಕರ ಹುದ್ದೆ ಬಡ್ತಿಗೆ ನಿಯಮಾನುಸಾರ ಅರ್ಹರಾಗಿರಬೇಕಾಗಿರುತ್ತವೆ. ಆದರೆ, ಸಾಮಾನ್ಯವಾಗಿ ಉಪ ನಿರ್ದೇಶಕರಾಗಿ 8–9 ವರ್ಷ ಸೇವೆ ಸಲ್ಲಿಸಿದ ನಂತರವೇ ಬಡ್ತಿ ನೀಡಲಾಗುತ್ತಿರುವುದರಿಂದ, ಅವರಿಗೆ ಬಡ್ತಿ ನೀಡಿದಾಗ ಜಂಟಿ ನಿರ್ದೇಶಕರ ಹುದ್ದೆಯ ಕನಿಷ್ಠ ಮೂಲ ವೇತನಕ್ಕಿಂತ (ರೂ.20025/–) ಹೆಚ್ಚಿನ ಹಂತಕ್ಕೆ ತಲುಪುವುದರಿಂದ ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ.

ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಪಿಡಿ 102 ಎಸ್‌ಎಸ್‌ಎಂ 2011, ಬೆಂಗಳೂರು, ದಿನಾಂಕ 26ನೇ ಜುಲೈ 2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿರುವ ಆಡಳಿತಾಧಿಕಾರಿ ಹುದ್ದೆಯನ್ನು ಜಂಟಿ ನಿರ್ದೇಶಕರ ಹುದ್ದೆಗೆ ತಾತ್ಕಾಲಿಕವಾಗಿ ಉನ್ನತೀಕರಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ/342/ವೆಚ್ಚ/06/2011, ದಿನಾಂಕ 20–07–2011 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ವಿ. ರಾಮು,

ಸರ್ಕಾರದ ಅಧೀನ ಕಾರ್ಯದರ್ಶಿ,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಇಲಾಖೆ (ಎಸ್–5).

ಪಿ.ಆರ್. 1999

ಸಹಕಾರ ಸಚಿವಾಲಯ

ವಿಷಯ : ಕೃಷಿ ಅಲ್ಪಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಪ್ರಮಾಣೀಕರಣ ಹಾಗೂ ದೃಢೀಕರಣ ಮಾಡುವ ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸಿಒ 69 ಸಿಎಲ್ಎಸ್ 2010, ದಿನಾಂಕ: 22/04/2010.
2. ಸರ್ಕಾರದ ಆದೇಶ ಸಂಖ್ಯೆ: ಸಿಒ 129 ಸಿಎಲ್ಎಸ್ 2011, ದಿನಾಂಕ: 11/05/2011.
3. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಸಿಆರ್‌ಡಿ/ಸಿಎಬಿ–1/18/2011–12, ದಿನಾಂಕ: 17/06/2011.

ಪ್ರಸ್ತಾವನೆ :

ಮೇಲೆ ಓದಲಾದ (1) ಮತ್ತು (2)ರ ಆದೇಶದಲ್ಲಿ 2010–11 ಹಾಗೂ 2011–12ನೇ ಸಾಲಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ರಾಜ್ಯದ ರೈತರಿಗೆ ಕೃಷಿ ಬೆಳೆ ಸಾಲಗಳನ್ನು ರಿಯಾಯಿತಿ ಬಡ್ಡಿ ದರದಲ್ಲಿ ಒದಗಿಸುವ ಯೋಜನೆಯನ್ನು ಕೆಲವು ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಬೇಡಿಕೆ ಬಿಲ್ಲುಗಳಿಗೆ ಉಪನಿರ್ದೇಶಕರು, ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಹಾಗೂ ಸಹಕಾರ ಸಂಘಗಳ ಉಪನಿಬಂಧಕರು ಇವರು ಪ್ರಮಾಣೀಕರಿಸುವುದು ಮತ್ತು ದೃಢೀಕರಿಸುವುದನ್ನು ಮಾಡುತ್ತಿದ್ದು, ಈ ಅಧಿಕಾರಿಗಳ ಕಾರ್ಯವ್ಯಾಪ್ತಿ ಜಿಲ್ಲಾ ಮಟ್ಟದಲ್ಲಿ ಇದ್ದು, ಸಂಘಗಳ ನೋಂದಣಿಗಾಗಿ ಹೆಚ್ಚುವರಿಯಾಗಿ ಕೆಲಸ ನಿರ್ವಹಿಸಬೇಕಾಗಿರುವುದರಿಂದ, ಬಿಲ್ಲುಗಳನ್ನು ಪರಿಶೀಲಿಸಿ ದೃಢೀಕರಿಸಿ / ಪ್ರಮಾಣೀಕರಿಸಿ ಗೊತ್ತುಪಡಿಸಿದ ಅವಧಿಯಲ್ಲಿ ಸಲ್ಲಿಸಲು ವಿಳಂಬವಾಗುತ್ತದೆ. ಕಾರಣ ಇಲಾಖೆಯ ಕೆಲವು ತಾಲ್ಲೂಕುಗಳನ್ನು ಹೊರತು ಪಡಿಸಿದರೆ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಪತ್ರಾಂಕಿತ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಮತ್ತು ಉಪವಿಭಾಗದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು ಕಾರ್ಯನಿರ್ವಹಿಸುತ್ತಿದ್ದು, ಇವರುಗಳು ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಬಡ್ಡಿ ಬಿಲ್ಲುಗಳನ್ನು ದೃಢೀಕರಣ ಹಾಗೂ ಮೇಲು ರುಜು ಮಾಡಲು ನಿಯೋಜಿಸುವ ಬಗ್ಗೆ ಸಹಕಾರ ಸಂಘಗಳ ನಿಬಂಧಕರು ಮೇಲೆ ಓದಲಾದ (2)ರ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 129 ಸಿಎಲ್ಎಸ್ 2011, ಬೆಂಗಳೂರು, ದಿನಾಂಕ: 01/07/2011.

ಮೇಲೆ ವಿವರಿಸಲಾದ ಪರಿಸ್ಥಿತಿಯಲ್ಲಿ 2010–11ನೇ ವರ್ಷದಲ್ಲಿ ವಿತರಿಸಿ 2011–12ನೇ ವರ್ಷದಲ್ಲಿ ವಸೂಲಾದ ಕೃಷಿ ಅಲ್ಪಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಬಿಲ್ಲುಗಳಿಗೆ ದೃಢೀಕರಣ ಹಾಗೂ ಮೇಲು ರುಜು ಮಾಡಲು 2011–12ನೇ ಸಾಲಿನಿಂದ ಜಾರಿಗೆ ಬರುವಂತೆ ಹಿಂದಿನ ಆದೇಶವನ್ನು ಮಾರ್ಪಡಿಸಿ ಬ್ಯಾಂಕಿನ ಅಧಿಕಾರಿಗಳೊಂದಿಗೆ ಸಹಕಾರ ಅಭಿವೃದ್ಧಿ ಅಧಿಕಾರಿಗಳ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳನ್ನು ನಿಯೋಜಿಸಲಾಗಿದೆ ಹಾಗೂ ಈ ಕೆಳಗೆ ವಿವರಿಸಿದಂತೆ ಪದ್ಧತಿಯನ್ನು ಅನುಸರಿಸಬೇಕೆಂದು ಆದೇಶಿಸಿದೆ.

1. ಸಹಕಾರ ಸಂಘ / ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ತ್ರೈಮಾಸಿಕವಾಗಿ ಆಯಾ ಸಂಘ / ಬ್ಯಾಂಕುಗಳ ಕಾರ್ಯನಿರ್ವಹಣಾಧಿಕಾರಿಗಳು ಬಿಲ್ಲುಗಳನ್ನು ಮರುಪಾವತಿ ಆಧಾರದ ಮೇಲೆ ಜಾರಿಯಲ್ಲಿರುವ ಸರ್ಕಾರದ ಆದೇಶದಂತೆ ತಯಾರಿಸಬೇಕು ಮತ್ತು ಅದರಲ್ಲಿರುವ ವಿವರಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಬೇಕು.

2. ತದನಂತರ ಪ್ರತಿಯೊಂದು ಪ್ರಾಥಮಿಕ ಸಂಘ / ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಣಾ ಅಧಿಕಾರಿಯವರು ತಯಾರಿಸಿರುವ ಬಡ್ಡಿ ಬಿಲ್ಲುಗಳನ್ನು ಸಂಘದಲ್ಲಿರುವ ದಾಖಲೆಗಳ ಹಿನ್ನೆಲೆಯಲ್ಲಿ ಸರಿಯಾಗಿರುತ್ತವೆ ಎಂದು ಸಾಲ ನೀಡುತ್ತಿರುವ ಬ್ಯಾಂಕಿನ ಕ್ಷೇತ್ರ ಸಿಬ್ಬಂದಿ ಅಥವಾ ನಿರೀಕ್ಷಕರು ದೃಢೀಕರಿಸಬೇಕು.

3. ಆಯಾ ತಾಲ್ಲೂಕಿನಲ್ಲಿರುವ ಸಹಕಾರ ಅಭಿವೃದ್ಧಿ ಅಧಿಕಾರಿಯವರು ಅಥವಾ ಈ ಕೆಲಸಕ್ಕಾಗಿ ನಿಯೋಜಿತಗೊಂಡ ಅಧಿಕಾರಿಯವರು ಪುನ: ಸಂಘಗಳಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ದೃಢೀಕರಿಸಬೇಕು.

4. ಸಂಘಗಳ / ಬ್ಯಾಂಕುಗಳ ಕಾರ್ಯವ್ಯಾಪ್ತಿಯಲ್ಲಿರುವ ಹಣಕಾಸು ನೀಡುವ ಶಾಖೆಯ ವ್ಯವಸ್ಥಾಪಕರು ಹಾಗೂ ಅವರೊಂದಿಗೆ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಈ ಬಿಲ್ಲುಗಳನ್ನು ಪರಿಶೀಲಿಸಿ ಸರಿ ಇರುತ್ತವೆ ಎಂದು ದೃಢೀಕರಿಸಿ ಮೇಲು ರುಜು ಮಾಡಬೇಕು.

5. ಜಿಲ್ಲಾ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಬೇಡಿಕೆ ಪತ್ರದಲ್ಲಿ ಮಾಹಿತಿಗಳು ಸರಿ ಇರುತ್ತದೆ ಎಂದು ಹಾಗೂ ಶೇಕಡಾ 1ರಂತೆ ನೀಡಿದ ಕೃಷಿ ಅಲ್ಪಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಬಡ್ಡಿ ಸಹಾಯಧನ ಪಡೆದ ಶೇಕಡಾ ಮೊತ್ತಕ್ಕೆ ಶೇಕಡಾ 2ರ ಬಡ್ಡಿಯ ಮೊತ್ತವನ್ನು ಜಿಲ್ಲಾ ಬ್ಯಾಂಕಿನಿಂದ ಸಂಬಂಧಪಟ್ಟ ಸಹಕಾರ ಸಂಘ / ಬ್ಯಾಂಕುಗಳಿಗೆ ಹಣ ವರ್ಗಾಯಿಸಿರುವ ಬಗ್ಗೆ ಹಾಗೂ ದಿನಾಂಕವನ್ನು ನಮೂದಿಸಿ ಪ್ರಮಾಣಪತ್ರ ನೀಡಬೇಕಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಎಸ್.ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್. 2000

ಉನ್ನತ ಶಿಕ್ಷಣ ಸಚಿವಾಲಯ

ವಿಷಯ : ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಅರೆಕಾಲಿಕ ಬೋಧಕ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಇಡಿ 139 ಯುಎಸ್‌ವಿ 2006, ದಿನಾಂಕ: 04/01/2007
2. ಸರ್ಕಾರದ ಆದೇಶ ಸಂಖ್ಯೆ: ಇಡಿ 25 ಯುಎಸ್‌ವಿ 2007, ದಿನಾಂಕ: 03/04/2007
3. ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಇವರ ಪತ್ರ ಸಂಖ್ಯೆ: ಕುವಿ/ಮಾಸನಿ–3/2010–11, ದಿನಾಂಕ: 20–07–2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಪಟೇಲ್ ಎಂ.ವಿ. ಶ್ರೀ ರವಿಕುಮಾರ್ ಆರ್. ಶ್ರೀ ಚಂದ್ರಪ್ಪ ಮತ್ತು ಶ್ರೀಮತಿ ನಫೀಸಾ ಬೇಗಮ್ ಇವರುಗಳನ್ನು ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಸೇವೆಯಲ್ಲಿ ಖಾಯಂಗೊಳಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಕೆ.ಎಲ್. ನಾಯಕ್ ಇವರ ಸೇವೆಯನ್ನು ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಸೇವೆಯಲ್ಲಿ ಖಾಯಂಗೊಳಿಸಲಾಗಿರುತ್ತದೆ.

ಮೇಲೆ ಓದಲಾದ (3)ರ ಪತ್ರದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವರು ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಸಹ್ಯಾದ್ರಿ ವಿಜ್ಞಾನ ಹಾಗೂ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಟಿ.ಡಿ.ಗೋಪಾಲ್, ಸಸ್ಯಶಾಸ್ತ್ರ ವಿಭಾಗ; ಶ್ರೀ ಬಾಲಸ್ವಾಮಿ, ವಾಣಿಜ್ಯಶಾಸ್ತ್ರ ವಿಭಾಗ ಮತ್ತು ಶ್ರೀ ಎನ್.ಸಿ. ಅರುಣ್ ಕುಮಾರ್, ರಸಾಯನಶಾಸ್ತ್ರ ವಿಭಾಗ ಇವರುಗಳು, ಅರೆಕಾಲಿಕ ಬೋಧಕರು ಸರ್ಕಾರವು ಸಂಖ್ಯೆ:ಡಿಪಿಎಆರ್ 55 ಎಸ್‌ಆರ್‌ಇ 2001, ದಿನಾಂಕ: 31/01/2001ರ ಅಧಿಸೂಚನೆಯಲ್ಲಿ ನಿಗದಿಪಡಿಸಲಾಗಿದ್ದ ವಿದ್ಯಾರ್ಹತೆಯನ್ನು ಹೊಂದಿರುವುದಾಗಿಯೂ ಹಾಗೂ ಅಗತ್ಯ ಬೋಧನಾನುಭವವನ್ನು ಹೊಂದಿರುವುದಾಗಿ ತಿಳಿಸುತ್ತಾ ಸದರಿ ಅರೆಕಾಲಿಕ ಉಪನ್ಯಾಸಕರುಗಳ ಸೇವೆಯನ್ನು ಸಹ ವಿಶ್ವವಿದ್ಯಾಲಯದ ಘಟಕ ಕಾಲೇಜಿನಲ್ಲಿ ಬೇರೆ ವಿಭಾಗಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಮರುಹಂಚಿಕೆ ಮಾಡಿಕೊಂಡು 1990 ರಿಂದ ಹಾಗೂ 1993 ರಿಂದ ಸಲ್ಲಿಸಿದ ಇವರುಗಳ ಅರೆಕಾಲಿಕ ಸೇವೆಯನ್ನು ಖಾಯಂಗೊಳಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 120 ಯುಎಸ್‌ವಿ 2009, ಬೆಂಗಳೂರು, ದಿನಾಂಕ 29–07–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಹಾಗೂ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅರೆಕಾಲಿಕ ಉಪನ್ಯಾಸಕರುಗಳ ಸೇವೆಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಸಹ್ಯಾದ್ರಿ ವಿಜ್ಞಾನ ಹಾಗೂ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ವಿಲೀನಗೊಳಿಸಲಾಗಿದೆ.

ಕ್ರಮ ಸಂಖ್ಯೆ	ಹೆಸರು	ವರ್ಗ	ವಿಷಯ
1	ಶ್ರೀ ಟಿ.ಡಿ. ಗೋಪಾಲ್	ಸಾಮಾನ್ಯ	ಸಸ್ಯಶಾಸ್ತ್ರ
2	ಶ್ರೀ ಬಾಲಸ್ವಾಮಿ	ಎಸ್‌ಸಿ	ವಾಣಿಜ್ಯಶಾಸ್ತ್ರ
3	ಶ್ರೀ ಎನ್.ಸಿ. ಅರುಣ್ ಕುಮಾರ್	ಸಾಮಾನ್ಯ	ರಸಾಯನಶಾಸ್ತ್ರ

ಈ ಅರೆಕಾಲಿಕ ಉಪನ್ಯಾಸಕರುಗಳ ವಿಲೀನವು ಸರ್ಕಾರದ ಆದೇಶ ಸಂಖ್ಯೆ: ಇಡಿ 79 ಯುಎಸ್‌ವಿ 2003, ದಿನಾಂಕ: 02/12/2003ರಲ್ಲಿ ವಿಧಿಸಿರುವ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟಿರುತ್ತದೆ.

ನಿಬಂಧನೆಗಳು:–

1. ಈ ಸೇವಾ ವಿಲೀನತೆಯು ಕರ್ನಾಟಕ ನಾಗರೀಕ ಸೇವಾ (ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳ ಅರೆಕಾಲಿಕ ಶಿಕ್ಷಕರ ಖಾಯಂಮಾತಿ) ವಿಶೇಷ ನಿಯಮಗಳು, 1996ರ ಮತ್ತು ತದನಂತರದ ತಿದ್ದುಪಡಿಗಳನ್ವಯ ಇರತಕ್ಕದ್ದು.
2. ಈ ಅರೆಕಾಲಿಕ ಶಿಕ್ಷಕರು ಯು.ಜಿ.ಸಿ. ನಿಯಮಾವಳಿಯಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುತಕ್ಕದ್ದು.
3. ವಿಲೀನಗೊಂಡ ಅರೆಕಾಲಿಕ ಉಪನ್ಯಾಸಕರುಗಳ ಇಂಟರ್ ಸೇ ಜೇಷ್ಠತೆಯನ್ನು ಅವರುಗಳು ಅರೆಕಾಲಿಕ ಉಪನ್ಯಾಸಕರುಗಳಾಗಿ ಸೇವೆಗೆ ಸೇರಿದ ದಿನಾಂಕವನ್ನು ಉಲ್ಲೇಖವಾಗಿಟ್ಟುಕೊಂಡು ಜೇಷ್ಠತೆಯನ್ನು ನಿರ್ಧರಿಸುವ ಇತರೆ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸತಕ್ಕದ್ದು.
4. ಮೇಲೆ ವಿಲೀನಗೊಳಿಸಲಾದ ಬೋಧಕರ ವಿದ್ಯಾರ್ಹತೆ, ಜನ್ಮ ದಿನಾಂಕ, ಜಾತಿ/ಮೀಸಲಾತಿ ಇವುಗಳನ್ನು ವಿಶ್ವವಿದ್ಯಾಲಯವು ಪರಿಶೀಲಿಸಿ ಸದರಿ ಬೋಧಕರ ಸೇವಾ ಪುಸ್ತಕಗಳ ಸೂಕ್ತವಾಗಿ ದಾಖಲಿಸುವುದು.
5. ವಿಲೀನಗೊಳಿಸಿರುವ ಬೋಧಕರ ವೇತನ, ಭತ್ಯೆ ಹಾಗೂ ಇತರೆ ಆರ್ಥಿಕ ಸೌಲಭ್ಯಗಳನ್ನು ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲದಿಂದ ಭರಿಸತಕ್ಕದ್ದು.

ಮೇಲೆ ತಿಳಿಸಿರುವ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸದರಿ 03 ಅರೆಕಾಲಿಕ ಉಪನ್ಯಾಸಕರುಗಳ ಸೇವೆಯನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜಿನಲ್ಲಿ ವಿಲೀನಗೊಳಿಸಿ ಸೂಕ್ತ ಆದೇಶವನ್ನು ಕುವೆಂಪು ವಿಶ್ವವಿದ್ಯಾಲಯವು ಹೊರಡಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 347 ವೆಚ್ಚ–8 2011, ದಿನಾಂಕ: 31/05/2011ರ ಅನುಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಯು.ಬಿ. ಉಳವಿ
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು)

ಪಿ.ಆರ್. 2001

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ರಾಮದುರ್ಗಾ ತಾಲ್ಲೂಕಿನ ಕಿಲ್ಲಾ ತೋರಗಲ್ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ–1/2011–12/3905, ದಿನಾಂಕ: 22/07/2011

2. ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009(5), ದಿನಾಂಕ: 09/07/2010

ಪ್ರಸ್ತಾವನೆ :

ಬೆಳಗಾವಿ ಜಿಲ್ಲೆ ರಾಮದುರ್ಗಾ ತಾಲ್ಲೂಕಿನ ಕಿಲ್ಲಾ ತೋರಗಲ್ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕಾಮಗಾರಿಗೆ ಮೂರನೇ ಬಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	17/05/2011
ಜಿಲ್ಲಾ ಟೆಂಡರ್ ಬುಲೆಟಿನ್	16/05/2011
ಪ್ರಜಾವಾಣಿ ದಿನಪತ್ರಿಕೆ	18/05/2011
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	18/05/2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಭಾಗವಹಿಸಿದ್ದ ಒಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ: 15/07/2011ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 1,63,32,272/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 2,04,95,110/–

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಆರ್.ಡಿ. ಕಿತ್ತೂರ ಪ್ರಥಮ ದರ್ಜೆ ಗುತ್ತಿಗೆದಾರರು	2,61,31,599/–	60.00 ಹೆಚ್ಚು	27.50 ಹೆಚ್ಚು

ಮೇಲ್ಕಂಡಂತೆ ಶ್ರೀ ಆರ್.ಡಿ. ಕಿತ್ತೂರ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 27.50ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರ ದಿನಾಂಕ: 22/07/2011 ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 12.50 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 2,04,95,110/–ಗಳ ಮೇಲೆ ಶೇ. 12.50ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,30,56,999/– ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 61 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 23/07/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆ ರಾಮದುರ್ಗಾ ತಾಲ್ಲೂಕಿನ ಕಿಲ್ಲಾ ತೋರಗಲ್ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,04,95,110/–ಗಳ ಮೇಲೆ ಶೇ. 12.50ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,30,56,999/– (ರೂ. ಎರಡು ಕೋಟಿ ಮೂವತ್ತು ಲಕ್ಷ ಐವತ್ತಾರು ಸಾವಿರದ ಒಂಬೈನೂರ ತೊಂಭತ್ತೊಂಭತ್ತು ಮಾತ್ರ) ಶ್ರೀ ಆರ್.ಡಿ. ಕಿತ್ತೂರ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್: 2002

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ ಬದಾಮಿ ತಾಲ್ಲೂಕಿನ ಇಂಜಿನವಾರಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ–6/2011–12/3390, ದಿನಾಂಕ: 24/06/2011.

2. ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2010, ದಿನಾಂಕ: 27/11/2010

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ ಬದಾಮಿ ತಾಲ್ಲೂಕಿನ ಇಂಜಿನವಾರಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	04/03/2011
ಕನ್ನಡ ಪ್ರಭ ದಿನಪತ್ರಿಕೆ	05/03/2011
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	04/03/2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಇವರು ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ: 04/05/2011ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 4,20,33,062/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 4,57,68,542/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಶ್ರೀ ಕೆ. ದೊಡ್ಡ ಹನುಮಂತಪ್ಪ, ಪ್ರಥಮ ದರ್ಜೆ ಗುತ್ತಿಗೆದಾರರು	5,80,48,062/–	38.10 ಹೆಚ್ಚು	26.83 ಹೆಚ್ಚು
2.	ಶ್ರೀ ಅಶೋಕ ಶೆಟ್ಟಿ, ಪ್ರಥಮ ದರ್ಜೆ ಗುತ್ತಿಗೆದಾರರು	6,35,32,989/–	51.15 ಹೆಚ್ಚು	38.81 ಹೆಚ್ಚು

ಮೇಲ್ಕಂಡಂತೆ ಶ್ರೀ ಕೆ. ದೊಡ್ಡ ಹನುಮಂತಪ್ಪ, ಪ್ರಥಮ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 26.83ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19/07/2011ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ.16.40ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 4,57,68,542/–ಗಳ ಮೇಲೆ ಶೇ. 16.40ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 5,32,74,583/– ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 25 ಏನೀಯೋ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 22//07/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಾಗಲಕೋಟೆ ಜಿಲ್ಲೆ ಬದಾಮಿ ತಾಲ್ಲೂಕಿನ ಇಂಜಿನವಾರಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 4,57,68,542/–ಗಳ ಮೇಲೆ ಶೇ. 16.40 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 5,32,74,583/– (ಐದು ಕೋಟಿ ಮೂವತ್ತೆರಡು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಐದು ನೂರ ಎಂಭತ್ತಮೂರು ರೂಪಾಯಿಗಳು ಮಾತ್ರ) ಶ್ರೀ ಕೆ. ದೊಡ್ಡ ಹನುಮಂತಪ್ಪ, ಪ್ರಥಮ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್: 2003

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಕಂಕನಾಡಿ ಗ್ರಾಮದ ನಾಗುರಿ ಎಂಬಲ್ಲಿ ಹಾದು ಹೋಗುವ ತೋಡಿನ ಬದಿ ಸಂರಕ್ಷಣಾ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ಪತ್ರದ ಕ್ರಮಾಂಕ: ಮುಸದ/ತಾಂಸ–5–ಸ.ಇಂ–11/ದ.ಜಿ/ಮಂ.ತಾ/ಕಂಕನಾಡಿಪ್ರನಿಕಾ/ಟೆಂಡರ್ ಅನುಮೋದನೆ/2011/2180, ದಿನಾಂಕ: 03/06/2011.

3. ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರ ಪತ್ರ ಸಂಖ್ಯೆ: ಸಿ.ಇ.ಆರ್ ಸಂಖ್ಯೆ:4/2011–12.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಕಂಕನಾಡಿ ಗ್ರಾಮದ ನಾಗುರಿ ಎಂಬಲ್ಲಿ ಹಾದು ಹೋಗುವ ತೋಡಿನ ಬದಿ ಸಂರಕ್ಷಣಾ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	09/05/2011
ಉದಯ ವಾಣಿ ಮತ್ತು ಹೊಸದಿಗಂತ ದಿನ ಪತ್ರಿಕೆಗಳು	13/05/2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು, ಅವರು ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ: 21/05/2011ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 14,26,275/–
ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಶ್ರೀ ಬಿ. ಬಾಲಕೃಷ್ಣ ರೈ. ಪ್ರಥಮ ದರ್ಜೆ ಗುತ್ತಿಗೆದಾರರು ಮಂಗಳೂರು ರಿ.ನಂ: ಸಿಬಿ.ಎಸ್.8225/ಸಿವಿಲ್ 2010–15	17,65,350/–	23.77 ಹೆಚ್ಚು

ಮೇಲ್ಕಂಡಂತೆ ಶ್ರೀ ಬಿ. ಬಾಲಕೃಷ್ಣ ರೈ. ಪ್ರಥಮ ದರ್ಜೆ ಗುತ್ತಿಗೆದಾರರು, ಮಂಗಳೂರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 23.77ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19/07/2011ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇ. 11.50ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 14,26,275/–ಗಳ ಮೇಲೆ ಶೇ.11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 15,90,297/–ಗಳನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 07 ಪ್ರನಿಕಾ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 22/07/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಕಂಕನಾಡಿ ಗ್ರಾಮದ ನಾಗುರಿ ಎಂಬಲ್ಲಿ ಹಾದು ಹೋಗುವ ತೋಡಿನ ಬದಿ ಸಂರಕ್ಷಣಾ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 14,26,275/–ಗಳ ಮೇಲೆ ಶೇ.11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.15,90,297/– (ಹದಿನೈದು ಲಕ್ಷದ ತೊಂಭತ್ತು ಸಾವಿರದ ಎರಡು ನೂರ ತೊಂಭತ್ತೇಳು ರೂಪಾಯಿಗಳು ಮಾತ್ರ) ಶ್ರೀ ಬಿ. ಬಾಲಕೃಷ್ಣ ರೈ. ಪ್ರಥಮ ದರ್ಜೆ ಗುತ್ತಿಗೆದಾರರು, ಮಂಗಳೂರು ಇವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಅರ್. 2004 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

PERSONNEL AND ADMINISTRATIVE REFORMS SECRETARIAT

Sub : Appointment of Sqn Ldr. Vivek Sarpal (27532) ACCTS as ADC to Governor of Karnataka and terms and conditions of deputation.

Read : 1) Letter No. GS 37 EST 2011, dated 25-7-2011

2) Letter No. Air HQ/C 21974/ADC/PO-1(Dep), dated 7-7-2011 of the Wing Commander Director Personnel Officers-1 (Deputation)

Preamble:

In the letter read at (1) above, it has been stated that the deputation period of LT. Cdr. Navin Jacob who was deputed as ADC to Governor has expired on 30-6-2011 and therefore His Excellency the Governor had selected Sqn. Ldr. Vivek Sarpar (27532) ACCTS as is ADC and it has been requested to issue the notification appointing Sqn. Ldr. Vivek Sarpar (27532) ACCTS and ADC to Governor of Karnataka and also the terms and conditions of the deputation.

In the letter read at (2) above, while forwarding the terms and conditions of deputation of IAF Officers as ADC to Governor, it has been stated that posting order in respect of Sqn. Ldr. Vivek Sarpal (27532) ACCTS would be issued shortly.

In the Karnataka Governor's Secretariat Services (Recruitment) Rules, 1995 there are 2 posts of ADC to Governor and the same could be filled by the deputation of an officer of the armed forces of the union of the rank of Captain or Major or of an equivalent rank.

The proposal has been examined, and the following orders are issued:

Order No. DPAR 23 PRB 2011, Bangalore, dated 30-08-2011

Government have been pleased to appoint Sqn. Ldr. Vivek Sarpal (27532) ACCTS as ADC to Governor of Karnataka for a period of 2 years from the date of his assuming charge on the terms and conditions annexed herewith.

This order issues with the concurrence of the Finance Department vide No. FD 1186 Ser-1/11, dated 18-8-2011.

By Order and in the name of the Governor of Karnataka

V. Shivakumar

Under Secretary to Government

Department of Personnel and Administrative Reforms (Political)

ANNEXURE

(Government Order No. DPAR 23 PRB 2011, dated 30-08-2011)

TERMS AND CONDITIONS OF DEPUTATION OF SQN LDR. VIVEK SARPAL (27532) ACCTS AS ADC TO GOVERNOR OF KARNATAKA

1. **Tenure:** The tenure of deputation will be for a period of two years. The period of deputation will commence from the date the officer is relieved at the last duty station in the Indian Air Force and terminate on the date prior to rejoining the Indian Air Force. This period will be treated as Air Force service for all purposes. During the period of deputation the officers are liable to be recalled at any time, if exigencies of service so necessitate.
2. **Discipline:** The IAF personnel will be under the administrative and functional control of competent authority of Government of Karnataka and will continue to be subject to the Air Force Act and rules for disciplinary purpose. IAF deputationists shall be reverted to the IAF in case disciplinary proceedings are to be initiated and due cognizance will be given to Government of Karnataka reports.
3. **Pay:** The IAF personnel shall be eligible for Basic pay, Flying pay, Technical pay/Non-practicing allowance, qualification grant etc., as admissible to them from time to time in the scale of pay of the rank held in the Air Force.
4. **Deputation (Duty) Allowance:** As per government of India, Ministry of Defence letter No. 1/55/2008/D (pay/services) dated 04 November, 2008 Defence forces personnel be given an option to draw either (1) 50% of deputation duty allowance applicable to civilian officers along with service concession or (b) draw 100% of deputation allowance but forego the service concession. Officer is to submit option within one month of joining their deputation post under intimation to this Headquarters.
5. **Allowances:** DA, interim relief, kit maintenance allowance and all other allowances, at the rates sanctioned by the Government from time to time subject to the same terms and conditions as applicable to service officers. The officers and personnel will be entitled to draw free ration in kind or cash allowance in lieu in accordance with the instructions as applicable to them from time to time. These allowances shall not be inferior to the relevant provisions of the IAF.
6. **Accommodation:** Fully furnished accommodation to IAF deputationists would be provided by the State Government as per their entitlement. Wherever, official accommodation in not available, accommodation of similar status would be hired in consultation with the deputationist. Officers will also be entitled to concession concerning water and electricity charges under the IAF rules. Officers will be required to surrender Defence pool accommodation, if any in their possession. In case an officer continues to retain the Defence accommodation he will be treated as unauthorized

occupant and recovery of rent will be regulated under Para (14)(b) of Q&R i.e. assessed rent or market rent whichever is more, will be recovered.

7. **Leave, Ltc., etc:** During their deputation, they will continue to enjoy privileged leave, casual leave and leave travel concession as admissible to them under the respective service rules. Where Railway warrants or concession vouchers are normally issued under the service rules, the deputationist shall be allowed cash value in lieu, the whole expenditure in this regard shall be met by the State Government.
8. **Travelling Allowance:** Joining time and joining time pay, travelling allowance, for journey undertaken in joining the appointment on deputation and on reversion there from shall be regulated under the relevant rules of Government of Karnataka, which shall be not be inferior to the relevant provisions of the IAF. A member of the IAF will be paid TA/DA by the State Government under its own rules for the journey undertaken in connection with the official work, whether in India or abroad, which shall not be inferior to the relevant provisions of the IAF.
9. **Medical Facilities:** Service personnel and their families will be entitled to the medical facilities to the same extent and at the same scale as admissible to officers and personnel of their status in military or civil hospitals, as they would have enjoyed under Army/Navy/Air Force rules, the cost of which will be reimbursed by the State Government. The personnel will also be subject to periodical medical inspection as required under IAF rules.
10. **Uniform Grant:** The personnel joining the State Government will be authorized to draw uniform renewal grant as and when due. The expenditure incurred on this account will be borne by the State Government.
11. **Courses:** Officers on deputation would be eligible for all the mandatory/career courses. The officer shall be spared for the course and the TA/DA would be borne by the State Government. Deputationists will be considered for the short duration courses only.
12. **Children Education allowance, City Compensatory allowance etc:** The personnel joining the State Government on deputation will be granted other allowances, such as children education allowance, city compensatory allowance etc., as may be admissible to Government servants of corresponding ranks under the general orders of the Government.
13. **Subscription to Provident Fund:** The subscription will continue to be recovered from the officer by Government of Karnataka and the amount will be sent to AFCAO, Subroto Park, New Delhi-110 010 through Demand Draft in favour of 'Air Force Public Fund Account (Central Accounts)'

V. Shivakumar
Under Secretary to Government
Department of Personnel and Administrative Reforms (Political)

PR 2153

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸಿಆಸುಇ 119 ಎಸ್‌ಐಎಸ್ 2011, ಬೆಂಗಳೂರು, ದಿನಾಂಕ 30–08–2011

ಶ್ರೀ ಬಿ. ಜಿ. ನಂದಕುಮಾರ್, ಐ.ಎ.ಎಸ್., ಇವರಿಗೆ ಪ್ರಭಾರ ಭತ್ಯೆ ಮಂಜೂರು ಮಾಡಲಾದ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 04 ಎಸ್‌ಐಎಸ್ 2011, ದಿನಾಂಕ 11–01–2011ರ ಆದೇಶದ 5 ಸಾಲಿನಲ್ಲಿ "IAS Supertime Scale (PB 4 Rs. 37400-67000+GP Rs. 10,000)" ಎಂಬುದನ್ನು "IAS Senior Scale (PB 3 Rs. 15600-39100+GP Rs. 7600)" ಎಂಬುದಾಗಿ ಮತ್ತು 7 ಸಾಲಿನಲ್ಲಿ **"ಶೇಕಡ 5ರ ದರದಲ್ಲಿ"** ಎಂಬುದನ್ನು **"ಶೇಕಡ 5ರ ದರದಲ್ಲಿ ಗರಿಷ್ಠ ರೂ. 1,000/–ಗಳು ಇದರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಿಗೊಳಿಸಿ"** ಎಂಬುದಾಗಿ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಶ್ರೀನಿವಾಸ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–1)

ಪಿ. ಆರ್. 2154

ಸಹಕಾರ ಸಚಿವಾಲಯ

ವಿಷಯ : ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಹುದ್ದೆಯನ್ನು ಸಹಾಯಕ ನಿರ್ದೇಶಕರ ವೃಂದದಿಂದ ಉಪ ನಿರ್ದೇಶಕರ ವೃಂದಕ್ಕೆ ಉನ್ನತೀಕರಿಸುವ ಕುರಿತು.

ಓದಲಾಗಿದೆ : 1. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಇವರ ಪತ್ರ ಸಂಖ್ಯೆ: ಕೃಮಾಇ 124 ಸಿಬ್ಬಂಸಿ–1(ಸಿ) 2010, ದಿನಾಂಕ 19–05–2011.

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 37 ಮಾಇಸೇ 2011, ದಿನಾಂಕ 03–08–2011

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾಗಿರುವ ಕೃಷಿ ಮಾರಾಟ ಇಲಾಖೆಯ ನಿರ್ದೇಶಕರ ಪತ್ರ ದಿನಾಂಕ 19–05–2011ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಸನ ಮತ್ತು ಅರಸೀಕೆರೆ ಕಾರ್ಯದರ್ಶಿಗಳ ಹುದ್ದೆಯನ್ನು ಸಹಾಯಕ ನಿರ್ದೇಶಕರ ವೃಂದದಿಂದ ಉಪ ನಿರ್ದೇಶಕರ ವೃಂದಕ್ಕೆ ಉನ್ನತೀಕರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ, ಈ ಹುದ್ದೆಯು ಸಹಾಯಕ ನಿರ್ದೇಶಕರ (ಗ್ರೂಪ್–ಬಿ) ವೃಂದಕ್ಕೆ ಸೇರಿರುತ್ತದೆ. ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಳೆದ 3 ವರ್ಷಗಳ ಮಾರುಕಟ್ಟೆ ಶುಲ್ಕ ವಿವರಗಳು ಈ ಕೆಳಗಿನಂತೆ ಇರುತ್ತದೆ:–

2008–09	2009–10	2010–11
ರೂ. 124–00 ಲಕ್ಷಗಳು	ರೂ. 167–00 ಲಕ್ಷಗಳು	ರೂ. 210–00 ಲಕ್ಷಗಳು

ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವಾರ್ಷಿಕವಾಗಿ ಮಾರುಕಟ್ಟೆ ಶುಲ್ಕವು ಕಳೆದ 3 ವರ್ಷಗಳಿಂದ ಹೆಚ್ಚುತ್ತಾ ಬಂದಿದೆ ಹಾಗೂ ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಡಿ 5 ಉಪ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದ್ದು ಇವುಗಳ ಮೇಲುಸ್ತುವಾರಿಗೆ ಉನ್ನತ ವೃಂದದ ಅಧಿಕಾರಿ ಕಾರ್ಯನಿರ್ವಹಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ. ಸದರಿ ಸಮಿತಿಯ ವ್ಯಾಪ್ತಿಯಡಿ ಬರುವ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಹುದ್ದೆಯನ್ನು ಸಹಾಯಕ ನಿರ್ದೇಶಕರ ವೃಂದದಿಂದ ಉಪ ನಿರ್ದೇಶಕರ ವೃಂದದ ಅಧಿಕಾರಿ ಹುದ್ದೆಗೆ ಉನ್ನತೀಕರಿಸಲು ನಿರ್ಣಹಿಸಿದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 37 ಮಾಇಸೇ 2011, ಬೆಂಗಳೂರು, ದಿನಾಂಕ : 27–08–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅರಸೀಕೆರೆ ಇದರ ಕಾರ್ಯದರ್ಶಿ ಹುದ್ದೆಯನ್ನು ಈಗಿನ ಸಹಾಯಕ ನಿರ್ದೇಶಕರ (ವೇತನ ಶ್ರೇಣಿ ರೂ. 11400–21600) ವೃಂದದಿಂದ ಉಪ ನಿರ್ದೇಶಕರ (ವೇತನ ಶ್ರೇಣಿ ರೂ. 18150–26925) ವೃಂದಕ್ಕೆ ದಿನಾಂಕ 03–08–2011ರಿಂದ ಅನ್ವಯವಾಗುವಂತೆ ಉನ್ನತೀಕರಿಸಲು ಅನುಮೋದನೆ ನೀಡಿದೆ.

ಈ ಉನ್ನತೀಕರಣದ ಆದೇಶವು ಪ್ರಸ್ತುತ ಉಪ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯು ಆ ಹುದ್ದೆಯಲ್ಲಿ ಕಾರ್ಯನಿರ್ವಹಿಸುವವರೆವಿಗೆ ಅಥವಾ ತಾತ್ಕಾಲಿಕವಾಗಿ ಎರಡು ವರ್ಷಗಳ ಅವಧಿಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಜಾರಿಯಲ್ಲಿರುತ್ತದೆ.

ಈ ಅದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 348 ವೆಚ್ಚ–2/2011 ದಿನಾಂಕ 26–08–2011ರಲ್ಲಿ ನೀಡಿರುವ ಸಹಮತದ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ. ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ. ಆರ್. 2155

INFORMATION TECHNOLOGY, BIO-TECHNOLOGY AND SCIENCE AND TECHNOLOGY SECRETARIAT

Sub : Reconstitution of a 'Vision Group of IT'-Orders reg.

Read : 1. Government Order No. ITD/2/PRM 2005, dated 25-11-2006

Preamble:

In the Government Order read at (1) above Vision group on IT was constituted under the Chairmanship Shri N. R. Narayana Murthy, for suggesting and making recommendations to Government on suitable course of action to be taken for implementation on the IT Policy and to advise on various issues relating to IT.

Very recently, the Department has announced ICT and Electronic Hardware policies, Under these policies the Department has taken up various schemes/programmes in Information Technology sector. The suggestions & support of the Industrialists will help in implementation of these schemes. As such, the constitution of Vision group on IT is very essential. Apart from it, the suggestions/guidance of the Vision Group on IT, will be helpful in organizing the IT biz event successfully in future.

Since, Shri N. R. Narayana Murthy, has retired, and in view of the above facts, its felt necessary to re-constitute the Vision Group on IT, under the chairmanship of Shri S. Gopalakrishnan, CEO & ME Infosys Technologies, Bangalore.

Hence, the following order

Government Order No. ITD 11 PRM 2011, Bangalore, dated 29-08-2011

Government is pleased to reconstitute **"Vision Group on Information Technology"** under the Chairmanship of Mr. S. Gopalakrishnan with the following members:-

1. Mr. S. Gopalakrishnan … Chairman
   Chief Executive Officer & Managing Director
   Infosys Technologies Limited, Bangalore
2. Principal Secretary to Government … Member
   Department of IT, Biotechnology, S & T,
   Govt. of Karnataka, Bangalore.
3. Mr. C. P. Gurnani … Member
   Mahindra Satyam Computer Services Ltd.,
   Bangalore
4. Mr. V. R. Ferose … Member
   Managing Director, SAP India Pvt. Ltd.,
   # 138, EPIP, Whitefield, Bangalore

5.	Mr. T. K. Kurien CEO, IT Business & Executive Director Wipro Infotech, Bangalore	…	Member
6.	Mr. Krishna Mikkilineni President, Honeywell Technology Solutions India Pvt., Ltd., Bangalore	…	Member
7.	Mr. Shailesh Rao Managing Director, Google India, Bangalore	…	Member
8.	Dr. John Cherian IT Head – PIC & IT4R&D Competence Lead India, IT Infrastructure, Philips Innovation Campus (PIC), Manyata Tech Park, Nagavara, Bangalore.	…	Member
9.	Mr. Bobby Mitra Managing Director, Texas Instruments India (P) Ltd., Bagmane Tech Park, # 66/3, Adjacent to LRDE, Byrasandra, CV Raman Nagar, Bangalore	…	Member
10.	Mr. Bhaskar Pramanik Chairman Microsoft Corporation (I) Pvt., Ltd., 8th Floor, DLF Cyber Greens, Sector 25A, Gurgoan	…	Member
11.	Mr. Shanker Annaswamy Managing Director, IBM India Ltd., EGL, A-Block, 3rd Floor, Koramangala Intermediate Ring Road, Bangalore.	…	Member
12.	Mr. Krishnan Regional General Manager-Bangalore RO HCL Limited, Bangalore	…	Member
13.	Mr. Tushar Chitra Director, Marketing, Oracle Financial Services Software Limited, Bangalore	…	Member
14.	Mr. Vijay Ratnaparkhe Managing Director, Robert Bosch Engineering and Business Solutions, Bangalore	…	Member
15.	Mr. S. Mahalingam CFO & Executive Director TCS Tata Consultancy Services, Mumbai	…	Member
16.	Mr. Shouvick Mukherjee CEO, Yahoo Software Development India Pvt., Ltd., Emabassy Golf links Business Park, Off Indiranagar-Koramangala Intermediate Ring Road, Bangalore	…	Member
17.	Director Software Technology Parks of India (Society under Department of Information Technology, Ministry of Communication & Information Technology, Govt. of India), Bangalore-560 100.	…	Member
18.	Director Department of IT and BT, Bangalore-560 001	…	Member Secretary

The 'Vision Group on Information Technology" Shall make specific recommendations & suggestions to Government on suitable course of action to be taken for implementation of ICT & Electronic Hardware policy and also in organizing Bangalore.IT.biz event.

By Order and in the name of the Governor of Karnataka

E. Ramkrishnappa

Under Secretary to Government

Department of Information Technology,

Bio Technology and Science and Technology

P.R. 2156

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನಮೊಗರು ಗ್ರಾಮದ ದೋಟದ ಬಳಿ ಹಾದು ಹೋಗುವ ತೋಡಿನ ಬದಿ ಸಂರಕ್ಷಣಾ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1) ಮುಖ್ಯ ಇಂಜಿನಿಯುರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ಪತ್ರದ ಕ್ರಮಾಂಕ: ಮುಸದ/ತಾಂಸ-5-ಸ.ಇಂ-11/ದ.ಜಿ/ಮಂ.ತಾ/ಜಪ್ಪಿನಮೊಗರು ಪ್ರನಿಕಾ/ಟೆಂಡರ್ ಅನುಮೋದನೆ/2011-2181, ದಿನಾಂಕ: 03-06-2011.

2) ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರ ಪತ್ರ ಸಂಖ್ಯೆ: ಸಿ.ಇ.ಆರ್. ಸಂಖ್ಯೆ: 3/2011/12.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನಮೊಗರು ಗ್ರಾಮದ ದೋಟದ ಬಳಿ ಹಾದು ಹೋಗುವ ತೋಡಿನ ಬದಿ ಸಂರಕ್ಷಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	09-05-2011
ಉದಯ ವಾಣಿ ಮತ್ತು ಹೊಸದಿಗಂತ ದಿನ ಪತ್ರಿಕೆಗಳು	13-05-2011

ಈ ಟೆಂಡರ್ ಪ್ರಕಟಣೆಗೆ ಸ್ವಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು, ಅವರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್ ಅನ್ನು ದಿನಾಂಕ: 21-05-2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 18,99,233/-
ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಬಿ. ಹಸೈನಾರ್, ಪ್ರಥಮ ದರ್ಜೆ ಗುತ್ತಿಗೆದಾರರು ಕಾಸರಗೋಡು ರಿ.ನಂ: ಸಿಬಿ.ಎಸ್. 3094/ಸಿವಿಲ್ 2010-15	23,72,095/-	24.897 ಹೆಚ್ಚು

ಮೇಲ್ಕಂಡಂತೆ ಶ್ರೀ ಬಿ. ಹಸೈನಾರ್, ಪ್ರಥಮ ದರ್ಜೆ ಗುತ್ತಿಗೆದಾರರು, ಕಾಸರಗೋಡು ಪ್ರಥಮ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.897ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19-07-2011ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇಕಡ 11.50 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 18,99,233/- ಗಳ ಮೇಲೆ ಶೇಕಡ 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 21,17,645/- ಗಳನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 06 ಪ್ರನಿಕಾ (ತಾಂತ್ರಿಕ) 2011, ಬೆಂಗಳೂರು, ದಿನಾಂಕ : 22ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನಮೊಗರು ಗ್ರಾಮದ ದೋಟದ ಬಳಿ ಹಾದು ಹೋಗುವ ತೋಡಿನ ಬದಿ ಸುಂರಕ್ಷಣಾ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 18.99,233/- ಗಳ ಮೇಲೆ ಶೇಕಡ 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 21,17,645/- (ಇಪ್ಪತ್ತೊಂದು ಲಕ್ಷದ ಹದಿನೇಳು ಸಾವಿರದ ಆರು ನೂರ ನಲವತ್ತೈದು ರೂಪಾಯಿಗಳು ಮಾತ್ರ) ಶ್ರೀ ಬಿ. ಹಸೈನಾರ್, ಪ್ರಥಮ ದರ್ಜೆ ಗುತ್ತಿಗೆದಾರರು, ಕಾಸರಗೋಡು ಇವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2005

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನಮೊಗರು ಗ್ರಾಮದ ಉರುಂಡೆ ತೋಟದಿಂದ ಗಟ್ಟಿಮಾರ್ ಬಳಿ ಹಾದು ಹೋಗುವ ಬೃಹತ್ ತೋಡಿನ ದಂಡೆಗಳ ಆಯ್ದ ಭಾಗಗಳಲ್ಲಿ ಸಂರಕ್ಷಣಾ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ಪತ್ರದ ಕ್ರಮಾಂಕ: ಮುಸದ/ತಾಂಸ–5–ಸ.ಇಂ–11/ದ.ಜಿ/ಮಂ.ತಾ/ಜಪ್ಪಿನಮೊಗರು/ಗಟ್ಟಿಮಾರ್ ಪ್ರನಿಕಾ/ಟೆಂಡರ್ ಅನುಮೋದನೆ/2011/ 2182, ದಿನಾಂಕ: 03–06–2011.

2) ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರ ಪತ್ರ ಸಂಖ್ಯೆ: ಸಿ.ಇ.ಆರ್. ಸಂಖ್ಯೆ: 1/2011/12.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನಮೊಗರು ಗ್ರಾಮದ ಉರುಂಡೆ ತೋಟದಿಂದ ಗಟ್ಟಿಮಾರ್ ಬಳಿ ಹಾದು ಹೋಗುವ ಬೃಹತ್ ತೋಡಿನ ದಂಡೆಗಳ ಆಯ್ದ ಭಾಗಗಳಲ್ಲಿ ಸಂರಕ್ಷಣಾ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	09–05–2011
ಉದಯವಾಣಿ ಮತ್ತು ಹೊಸದಿಗಂತ ದಿನ ಪತ್ರಿಕೆಗಳು	13–05–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು, ಅವರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್ ಅನ್ನು ದಿನಾಂಕ: 21–05–2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 28,61,342/–
ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಕೆ.ಎಂ. ಮೂಸ, ಪ್ರಥಮ ದರ್ಜೆ ಗುತ್ತಿಗೆದಾರರು ಕಾಸರಗೋಡು ರಿ.ನಂ: ಸಿಬಿ.ಎಸ್. 5714/ಸಿವಿಲ್ 2010–15	35,55,700/–	24.266 ಹೆಚ್ಚು

ಮೇಲ್ಕಂಡಂತೆ ಶ್ರೀ ಕೆ.ಎಂ. ಮೂಸ, ಪ್ರಥಮ ದರ್ಜೆ ಗುತ್ತಿಗೆದಾರರು, ಕಾಸರಗೋಡು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.266 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 19–07–2011ರಂದು ಪತ್ರವನ್ನು ನೀಡಿ ಪರಿಷ್ಕೃತ ದರಗಳ ಮೇಲೆ ಶೇಕಡ 11.50 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 28,61,342/– ಗಳ ಮೇಲೆ ಶೇಕಡ 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 31,90,396/– ಮೊತ್ತಕ್ಕೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 04 ಪ್ರನೀಕಾ (ತಾಂತ್ರಿಕ) 2011, ಬೆಂಗಳೂರು, ದಿನಾಂಕ : 22ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನಮೊಗರು ಗ್ರಾಮದ ಉರುಂಡೆ ತೋಟದಿಂದ ಗಟ್ಟಿಮಾರ್ ಬಳಿ ಹಾದು ಹೋಗುವ ಬೃಹತ್ ತೋಡಿನ ದಂಡೆಗಳ ಆಯ್ದ ಭಾಗಗಳಲ್ಲಿ ಸುಂರಕ್ಷಣಾ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 28,61,342/– ಗಳ ಮೇಲೆ ಶೇಕಡ 11.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 31,90,396/– (ಮೂವತ್ತೊಂದು ಲಕ್ಷದ ತೊಂಭತ್ತು ಸಾವಿರದ ಮೂರು ನೂರ ತೊಂಭತ್ತಾರು ರೂಪಾಯಿಗಳು ಮಾತ್ರ) ಶ್ರೀ ಕೆ.ಎಂ. ಮೂಸ, ಪ್ರಥಮ ದರ್ಜೆ ಗುತ್ತಿಗೆದಾರರು, ಕಾಸರಗೋಡು ಇವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪಿ.ಆರ್. 2006

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ ಚಳ್ಳಾರಿ ಜಿನುಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ: 08-06-2011ರ ಪತ್ರ ಸಂಖ್ಯೆ: ಮುಇಂ/ಸನೀ(ಉ)/ಭೂಸ್ವಾಪ್ರ/2011-12/3090.

ಪ್ರಸ್ತಾವನೆ:

ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ ಚಳ್ಳಾರಿ ಜಿನುಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಚಳ್ಳಾರಿ, ಚಿಕ್ಕಸುಳಿಕೆರೆ ಮತ್ತು ಆಚಾರತಿಮ್ಮಾಪೂರ ಗ್ರಾಮಗಳ ಜಮೀನುಗಳಿಗೆ ಸಿವಿಲ್ ಜಡ್ಜ್ (ಹಿರಿಯ ಶ್ರೇಣಿ) ಕೊಪ್ಪಳ ಇವರು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ 08-06-2011ರ ಪತ್ರದಲ್ಲಿ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 04-08-2005.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 22-05-2008. ಜಿಲ್ಲಾಧಿಕಾರಿಗಳು, ಕೊಪ್ಪಳ ಆದೇಶ ದಿನಾಂಕ 18-06-2008.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳದ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಪ್ರತಿ ಎಕರೆಗೆ ರೂ. 1,53,000/- ಗಳಿಗೆ ಹೆಚ್ಚಿಸಿ ಪರಿಹಾರಕ್ಕೆ ತೀರ್ಪು ನೀಡಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ: ಆರ್‌ಡಿ 844 ಎಲ್‌ಸಿಜಿ 2010, ದಿನಾಂಕ 08-09-2010ರಲ್ಲಿ ಅಭಿಪ್ರಾಯ ನೀಡಿದೆ.

ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ:

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಸ.ನಂ.	ಗ್ರಾಮ	ವಿಸ್ತೀರ್ಣ ಎ-ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	5/09	22	ಚಿಕ್ಕಸುಲಿಕೆರೆ	0-30	283127
2	6/09	57	ಅಚಾರತಿಮ್ಮಾಪುರ	0-10	92201
3	7/09	90/ಎ	ಚಳ್ಳಾರಿ	1-04	397684
4	8/09	90ಇ	ಚಳ್ಳಾರಿ	1-16	506007
5	9/09	32/2	ಅಚಾರತಿಮ್ಮಾಪುರ	5-00	1834542
6	10/09	29	ಅಚಾರತಿಮ್ಮಾಪುರ	4-00	1467734
7	11/09	29	ಅಚಾರತಿಮ್ಮಾಪುರ	1-00	367308
8	12/09	89/ಯು 89/ಇ	ಚಳ್ಳಾರಿ	1-00	361576
			ಒಟ್ಟು		**5310179**

ಸರ್ಕಾರದ ಆದೇಶ ಸಂಖ್ಯೆ : ಸನೀಇ 74 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 04ನೇ ಆಗಸ್ಟ್ 2011

ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ ಚಳ್ಳಾರಿ ಜಿನುಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಚಳ್ಳಾರಿ, ಚಿಕ್ಕಸುಳಿಕೆರೆ ಮತ್ತು ಅಚಾರತಿಮ್ಮಾಪೂರ ಗ್ರಾಮಗಳ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ಜಡ್ಜ್ (ಹಿರಿಯ ಶ್ರೇಣಿ) ಕೊಪ್ಪಳ ಇವರು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಮೊತ್ತ ರೂ. 53,10,179-00 ಗಳನ್ನು (ಐವತ್ತ್ಮೂರು ಲಕ್ಷದ ಹತ್ತು ಸಾವಿರದ ನೂರ ಎಪ್ಪತ್ತೊಂಭತ್ತು ರೂ.ಗಳು ಮಾತ್ರ) ಪಾವತಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 53,10,179/- ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ: 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ.ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2007

ಕಂದಾಯ ಸಚಿವಾಲಯ

ವಿಷಯ : ಯಾದಗಿರಿ ಜಿಲ್ಲೆಯ ಯಾದಗಿರಿ ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ಕಂಇ 83 ಮುಸರ 2009 ದಿನಾಂಕ 25-02-2009.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಯಾದಗಿರಿ ಜಿಲ್ಲೆಯ ಯಾದಗಿರಿ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿರುತ್ತದೆ.

1) ಮಾನ್ಯ ವಿಧಾನಸಭಾ ಸದಸ್ಯರು, ಯಾದಗಿರಿ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2) ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ ಜಿಲ್ಲೆ	ಸದಸ್ಯರು
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಯಾದಗಿರಿ ತಾಲ್ಲೂಕು,	ಸದಸ್ಯರು
4) ತಹಶೀಲ್ದಾರ್, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ಈ ಆದೇಶದಲ್ಲಿ ಅಧಿಕಾರೇತರ ನಾಲ್ಕು ಜನ ಸದಸ್ಯರ ನಾಮ ನಿರ್ದೇಶನ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿತ್ತು.

ಅದರಂತೆ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 83 ಮುಸರ 2009 (ಭಾ1) ಬೆಂಗಳೂರು, ದಿನಾಂಕ : 01ನೇ ಆಗಸ್ಟ್ 2011

ಈಗಾಗಲೇ ರಚಿಸಲಾದ ಯಾದಗಿರಿ ಜಿಲ್ಲೆಯ ಯಾದಗಿರಿ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನಗೊಳಿಸಿ ಸರ್ಕಾರವು ಆದೇಶಿಸಿದೆ.

1) ಶ್ರೀ ಬಸವರಾಜ ಬಿನ್ ವಿಶ್ವನಾಥ ತಿಪ್ಪಣ್ಣೂರ್, (ಸಾಮಾನ್ಯ) ಎಲೇರಿ ಅಂಚೆ, ಯಾದಗಿರಿ ತಾಲ್ಲೂಕು	ಸದಸ್ಯರು
2) ಶ್ರೀಮತಿ ಅನಂತಮ್ಮ ಕಟ್ಟೀಮನಿ, (ಮಹಿಳೆ) ಚಿಕ್ಕಕಟ್ಟಾ ಮೈಲಾಪುರ, ಅಗಸಿ, ಯಾದಗಿರಿ ತಾಲ್ಲೂಕು	ಸದಸ್ಯರು
3) ಶ್ರೀ ಮಹಾದೇವಪ್ಪ ಬಿನ್ ಜಲ್ಲಪ್ಪನೋರ್, ಸಾ:: ಯಾದಗಿರಿ (ಪರಿಶಿಷ್ಟ ಜಾತಿ)	ಸದಸ್ಯರು
4) ಶ್ರೀ ಮಲ್ಲಯ್ಯ ಬಿನ್ ಹನುಮಂತರಾಯ, ಸಾ:: ಯಾದಗಿರಿ (ಪರಿಶಿಷ್ಟ ಪಂಗಡ)	ಸದಸ್ಯರು

ಈ ಸಮಿತಿಯ ಅವಧಿ ಐದು ವರ್ಷಗಳು ಅಥವಾ ಸರ್ಕಾರವು ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಈ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ 03-02-2001 ರಲ್ಲಿ ಹೊರಡಿಸಿದ ನಿಯಮಗಳನ್ವಯ ಹಾಗೂ ಸದರಿ ನಿಯಮಗಳಲ್ಲಿ ಸೂಚಿಸಿರುವ ಷರತ್ತುಗಳಿಗೆ ಬದ್ಧವಾಗಿ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 2008

ಕಂದಾಯ ಸಚಿವಾಲಯ

ವಿಷಯ : ಯಾದಗಿರಿ ಜಿಲ್ಲೆಯ ಶಹಾಪೂರ ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ಕಂಇ 82 ಮುಸರ 2009 ದಿನಾಂಕ 25-02-2009.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಯಾದಗಿರಿ ಜಿಲ್ಲೆಯ ಶಹಾಪೂರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿರುತ್ತದೆ.

1) ಮಾನ್ಯ ವಿಧಾನಸಭಾ ಸದಸ್ಯರು, ಶಹಾಪೂರ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2) ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ ಜಿಲ್ಲೆ	ಸದಸ್ಯರು
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಹಾಪೂರ ತಾಲ್ಲೂಕು,	ಸದಸ್ಯರು
4) ತಹಶೀಲ್ದಾರ್, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ಈ ಆದೇಶದಲ್ಲಿ ಅಧಿಕಾರೇತರ ನಾಲ್ಕು ಜನ ಸದಸ್ಯರ ನಾಮ ನಿರ್ದೇಶನ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿತ್ತು.

ಅದರಂತೆ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 82 ಮುಸರ 2009 (ಭಾ) ಬೆಂಗಳೂರು, ದಿನಾಂಕ : 01ನೇ ಆಗಸ್ಟ್ 2011

ಈಗಾಗಲೇ ರಚಿಸಲಾದ ಯಾದಗಿರಿ ಜಿಲ್ಲೆಯ ಶಹಾಪೂರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನಗೊಳಿಸಿ ಸರ್ಕಾರವು ಆದೇಶಿಸಿದೆ.

1) ಶ್ರೀ ಅಶೋಕಗೌಡ ಬಿನ್ ಬನಶಂಕರಿ ಗೌಡ, (ಸಾಮಾನ್ಯ) ಮಾಲೀಪಾಟೀಲ್, ಸಾ:ಮದ್ದರಕಿ, ಶಹಾಪೂರ ತಾ: ಯಾದಗಿರಿ ಜಿಲ್ಲೆ	ಸದಸ್ಯರು
2) ಶ್ರೀಮತಿ ಅಂದೇನಮ್ಮ ಕೋಂ ಶಿವಪ್ಪ (ಮಹಿಳೆ) ಮರಮ್‌ಕಲ್ ಅಂಚೆ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ	ಸದಸ್ಯರು
3) ಶ್ರೀ ಮಲ್ಲಪ್ಪ ಬಿನ್ ಭೀಮಪ್ಪ ಉಳಂಡಿಗೆ (ಪರಿಶಿಷ್ಟ ಜಾತಿ) ಸಾ:: ಗೋಗಿ ಕೆ., ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ	ಸದಸ್ಯರು
4) ಶ್ರೀ ಅಯ್ಯಣ್ಣ ಬಿನ್ ನಿಂಗಣ್ಣ ದೊರೆ (ಪರಿಶಿಷ್ಟ ಪಂಗಡ) ಸಾ:: ಗೌಡೂರು, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ	ಸದಸ್ಯರು

ಈ ಸಮಿತಿಯ ಅವಧಿ ಐದು ವರ್ಷಗಳು ಅಥವಾ ಸರ್ಕಾರವು ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ಥಿತ್ವದಲ್ಲಿರುತ್ತದೆ.

ಈ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ 03-02-2001 ರಲ್ಲಿ ಹೊರಡಿಸಿದ ನಿಯಮಗಳನ್ವಯ ಹಾಗೂ ಸದರಿ ನಿಯಮಗಳಲ್ಲಿ ಸೂಚಿಸಿರುವ ಷರತ್ತುಗಳಿಗೆ ಬದ್ಧವಾಗಿ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 2009 ಕಂದಾಯ ಇಲಾಖೆ (ಮುಜರಾಯಿ)

ತೋಟಗಾರಿಕೆ ಸಚಿವಾಲಯ

ವಿಷಯ : ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಗೆ ಆಡಳಿತಾತ್ಮಕ ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : ಕುಲಪತಿಗಳು, ತೋಟಗಾರಿಕೆ ವಿಶ್ವವಿದ್ಯಾನಿಲಯ, ಬಾಗಲಕೋಟೆರವರ ಪತ್ರ ಸಂಖ್ಯೆ: ಕುಪ/ಹು.ಭ/176/11-12, ದಿನಾಂಕ 15-02-2011 ಮತ್ತು 30-04-2011.

ಪ್ರಸ್ತಾವನೆ :

ಸರ್ಕಾರದ ಆದೇಶ ಸಂಖ್ಯೆ: ಕೃತೋಇ 79 ಕೃವಿವಿ 2009, ದಿನಾಂಕ 22-01-2010ರಲ್ಲಿ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಶ್ವವಿದ್ಯಾಲಯ, ಧಾರವಾಡಗಳಿಂದ ವಿವಿಧ ವರ್ಗದ 169 ಆಡಳಿತಾತ್ಮಕ ಹುದ್ದೆಗಳನ್ನು ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆಗೆ ವರ್ಗಾಯಿಸಲಾಗಿದೆ. ಸದರಿ 169 ಹುದ್ದೆಗಳ ಪೈಕಿ 2011-12ನೇ ಶೈಕ್ಷಣಿಕ ಸಾಲಿನಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಮತ್ತು ಅದರ ಅಧೀನದಲ್ಲಿ ಬರುವ ತೋಟಗಾರಿಕೆ ಕಾಲೇಜುಗಳು ಹಾಗೂ ತೋಟಗಾರಿಕೆ ಸಂಶೋಧನಾ ಕೇಂದ್ರಗಳಿಗೆ ಅಗತ್ಯವಾಗಿ ಭರ್ತಿ ಮಾಡಬೇಕಾಗಿರುವ ವಿವಿಧ ವೃಂದದ 80 ಹುದ್ದೆಗಳನ್ನು, ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ನೀಡುವಂತೆ ಮೇಲೆ ಓದಲಾದ ಪತ್ರದಲ್ಲಿ ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರು ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಕೃತೋಇ 72 ತೋಸೇಪ 2011, ಬೆಂಗಳೂರು, ದಿನಾಂಕ : 02–08–2011

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಣೆಗಳ ಹಿನ್ನೆಲೆಯಲ್ಲಿ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಧಾರವಾಡಗಳಿಂದ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯಾಗಿರುವ 169 ಹುದ್ದೆಗಳ ಪೈಕಿ ಅನುಬಂಧದಲ್ಲಿ ನಮೂದಿಸಿರುವ ವಿವಿಧ ವೃಂದದ 61 ಹುದ್ದೆಗಳನ್ನು ಅವುಗಳು ಮಂಜೂರಾಗಿರತಕ್ಕದ್ದು ಹಾಗೂ ಲ್ಯಾಪ್ಸ್ ಆಗಿರಬಾರದು ಎಂಬ ಷರತ್ತಿನೊಂದಿಗೆ ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿಯನ್ನು ನೀಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 89 Exp.4/2011 ದಿನಾಂಕ 23–07–2011ರ ಅನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಸಿ. ಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ತೋಟಗಾರಿಕೆ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ : ಕೃತೋಇ 72 ತೋಸೇಪ 2011, ಬೆಂಗಳೂರು, ದಿನಾಂಕ : 02–08–2011ಕ್ಕೆ

ಅನುಬಂಧ

Sl. No.	Post	No. of Posts for permission to fill up
UNIVERSITY OF HORTICULTURAL SCIENCES, BAGALKOT (MAIN CAMPUS)		
1	Asst. Director of Students Welfare	1(one)
2	Asst. Registrar	1(one)
3	Asst. Exec. Engineer	1(one)
4	Asst. Engineer (Auto)	1(one)
5	Manager	1(one)
6	Telephone Operator	1(one)
7	Fitter (Auto)	1(one)
8	Tractor Driver	1(one)
9	Driver (HV)	3(Three)
10	Mechanic	1(one)
11	Stenographer	3(Three)
12	Care Taker	1(one)
13	Cook-cum-Care Taker	1(one)
14	Pharmacist/Compounder	1(one)
	Total	**18 (Eighteen)**
PG CENTER AND HIGH-TECH HORTICULTURE RESEARCH STATION, VIDYARANYAPURA, BANGALORE		
1	Jr. Engineer (Civil & Instru.)	1(one)
2	Lab Asst.	1(one)
3	Field Asst.	1(one)
4	Driver (LV)	1(one)
	Total	**4 (Four)**
COLLEGE OF HORTICULTURE, BAGALKOT		
1	Asst. Medical Officer	1(one)
2	Library Asst.	1(one)
3	Self Asst.	1(one)
4	Jr. Engineer (Auto)	1(one)
5	Telephone Operator	1(one)
6	Driver (LV)	1(one)
7.	Cook-cum-Care Taker	1(one)
8	Stenographer	1(one)

9	Plumber	1(one)
	Total	**9 (Nine)**
	KRC COLLEGE OF HORTICULTURE, ARABHAVI	
1	Jr. Technician	1(one)
	Total	**1 (one)**
	COLLEGE OF HORTICULTURE, MUDIGERE	
1	Stenographer	1(one)
2	Telephone Operator	1(one)
3	Lab. Attender	1(one)
	Total	**3 (Three)**
	COLLEGE OF HORTICULTURE, BIDAR	
1	Asst. Exe. Engineer	1(one)
2	Library Asst.	1(one)
3	Stenographer	1(one)
4	Telephone Operator	1(one)
5	Jr. Technician	1(one)
6	Jr. Technician (Ele.)	1(one)
7	Driver (LV)	1(one)
	Total	**7(Seven)**
	COLLEGE OF HORTICULTURE, KOLAR	
1	Library Asst.	1(one)
2	Stenographer	1(one)
3	Jr. Engineer (Civil)	1(one)
4	Jr. Technician	1(one)
5	Driver (LV)	1(one)
	Total	**5(Five)**
	HORTICULTURAL RESEARCH STATION, DEVIHOSUR	
1	Field Asst.	1(one)
2	Driver (LV)	1(one)
	Total	**2 (Two)**
	HORTICULTURAL RESEARCH STATION, KANABARAGI	
1	Driver (LV)	1(one)
	Total	**1(one)**
	HORTICULTURAL RESEARCH STATION, SIRSI (PEPPER)	
1	Field Asst.	1(one)
	Total	**1(one)**
	ZONAL HORTICULTURAL RESEARCH STATION, EXTN. CENTRE, KUMBAPUR	
1	Lab Asst.	1(one)
2	Driver (LV)	1(one)
	Total	**2 (Two)**
	ZONAL HORTICULTURAL RESEARCH STATION, EXTN. CENTRE, HIRIYUR	
1	Jr. Engineer (Civil & Instru.)	1(one)
	Total	**1(one)**
	HORTICULTURAL RESEARCH STATION, ARSIKERE	
1	Field Asst.	1(one)
2	Driver (LV)	1(one)
	Total	**2 (Two)**

HORTICULTURAL RESEARCH STATION, THIRTHAHALLI		
1	Lab. Asst.	1(one)
2	Field Asst.	1(one)
3	Driver (LV)	1(one)
	Total	**3 (Three)**
HORTICULTURAL RESEARCH STATION, SRINGERI		
1	Lab. Asst.	1(one)
2	Field Asst.	1(one)
	Total	**2 (Two)**

B. C. Prakash

Under Secretary to Government

P.R. 2010

Horticulture Department

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆಯ ಯೋಜನಾ ಅನುಷ್ಠಾನದ ಹೆಚ್ಚಳವನ್ನು ಭರಿಸಲು ಆರ್ಥಿಕ ಸಹಾಯ ಒದಗಿಸುವ ಬಗ್ಗೆ.

ಓದಲಾಗಿದೆ :
1. ಪತ್ರ ಸಂಖ್ಯೆ: NCDC 9-8/2003-Sugar(214)SA0016, ದಿನಾಂಕ 8–10–2010.
2. ಪತ್ರ ಸಂಖ್ಯೆ: NCDC 9-8/2003-Sugar(386)RA00370)525, ದಿನಾಂಕ 28–12–2010.
3. ಸರ್ಕಾರಿ ಆದೇಶ ಸಂಖ್ಯೆ: ವಾಕೈ 18 ಸಸಕಾ 2009 ದಿನಾಂಕ 21–1–2011
4. ಅಧ್ಯಕ್ಷರು, ದಿ ಮಾರ್ಕಂಡೇಯ ಕೋ–ಆಪರೇಟಿವ್ ಶುಗರ್ ಮಿಲ್ಸ್ ಲಿಮಿಟೆಡ್, ಇವರ ಪತ್ರ ಸಂಖ್ಯೆ: ಎಂಸಿಎಸ್‌ಎಂ/ಟಿಎಲ್–ಎನ್‌ಸಿಡಿಸಿ/2011–12, ದಿನಾಂಕ 9–5–2011.
5. ಸರ್ಕಾರಿ ಪತ್ರ ಸಂಖ್ಯೆ: ವಾಕೈ 28 ಸಸಕಾ 2011, ದಿನಾಂಕ 24–5–2011
6. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಪತ್ರ ಸಂಖ್ಯೆ: ಡಿಎಸ್‌ಕೆ/ಎಫ್‌ಐಎನ್/12/2002–03, ದಿನಾಂಕ 4–6–2011.

ಪ್ರಸ್ತಾವನೆ :

ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆಯ ಯೋಜನಾ ಅನುಷ್ಠಾನದಲ್ಲಿ ಉಂಟಾದ ಹೆಚ್ಚಳವನ್ನು ಭರಿಸಲು ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪತ್ರದ ಮೂಲಕ ಎನ್.ಸಿ.ಡಿ.ಸಿ.ಯು ಕೆಲವು ಷರತ್ತುಗಳಿಗೆ ಒಳಪಟ್ಟು ರಾಜ್ಯ ಸರ್ಕಾರದ ಮೂಲಕ ರೂ. 22.43 ಕೋಟಿಗಳ ಅವಧಿ ಸಾಲವನ್ನು ಮಂಜೂರು ಮಾಡಿರುತ್ತದೆ. ಸದರಿ ಅವಧಿ ಸಾಲದ ಸಿಂಧುತ್ವದ ಅವಧಿಯ ಕೊನೆಯ ದಿನಾಂಕ 31–3–2011 ಅಗಿರುತ್ತದೆ. ಈ ಅವಧಿ ಸಾಲದ ಮೊತ್ತವನ್ನು ಸಮಾನ ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲು ಉದ್ದೇಶಿಸಿ, ಸದರಿ ಅವಧಿ ಸಾಲದ ಮೊತ್ತದ ಪೈಕಿ ₹ 7.48 ಕೋಟಿಗಳನ್ನು ಮುಂಗಡವಾಗಿ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದ ಮೂಲಕ ರಾಜ್ಯ ಸರ್ಕಾರಕ್ಕೆ NCDCಯು ಬಿಡುಗಡೆ ಮಾಡಿರುತ್ತದೆ. ಎನ್.ಸಿ.ಡಿ.ಸಿ. ವಿಧಿಸಿರುವ ಷರತ್ತುಗಳೊಂದಿಗೆ ರಾಜ್ಯ ಸರ್ಕಾರವು ಕೆಲವೊಂದು ಷರತ್ತುಗಳನ್ನು ವಿಧಿಸಿ ಸದರಿ ಅವಧಿ ಸಾಲದ ಮೊತ್ತದ ಪೈಕಿ ₹ 7.48 ಕೋಟಿಗಳನ್ನು ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದ ಮೂಲಕ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆಗೆ ಬಿಡುಗಡೆ ಮಾಡಿರುತ್ತದೆ.

ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ಎನ್.ಸಿ.ಡಿ.ಸಿ. ಯಿಂದ ಮಂಜೂರಾಗಿರುವ ಅವಧಿ ಸಾಲದ ಸಿಂಧುತ್ವದ ಅವಧಿಯು ಅತ್ಯಂತ ಕಡಿಮೆಯೆಂದು ತಿಳಿಸಿ, ಸದರಿ ಅವಧಿ ಸಾಲದ ಸಿಂಧುತ್ವದ ಪ್ರಸ್ತುತ ಕೊನೆಯ ದಿನಾಂಕವಾದ 31–3–2011ರ ಬದಲಿಗೆ ದಿನಾಂಕ 31–12–2011ಕ್ಕೆ ವಿಸ್ತರಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ. ಸದರಿ ಕೋರಿಕೆಯ ಬಗ್ಗೆ ಪರಿಶೀಲಿಸಿ ಅಭಿಪ್ರಾಯದೊಂದಿಗೆ ವರದಿಯನ್ನು ಸಲ್ಲಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರನ್ನು ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಕೋರಲಾಗಿತ್ತು. ಈ ಬಗ್ಗೆ ಪರಿಶೀಲಿಸಿ, ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಪತ್ರದ ಮೂಲಕ ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಕಾರ್ಖಾನೆಯ ನಿರ್ಮಾಣದ ಕೆಲಸಗಳ ಉಸ್ತುವಾರಿಯನ್ನು ನಿರ್ವಹಿಸಲು ನಿಯತಕಾಲಿಕ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡುವುದು ಅಗತ್ಯವಾಗಿದ್ದು, ಕಾರ್ಖಾನೆಗೆ ನಿಯತಕಾಲಿಕ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡುವಂತೆ ಸಹಕಾರ ಸಂಘಗಳ ನಿಬಂಧಕರನ್ನು ಕೋರಲಾಗಿದೆ ಹಾಗೂ ಮೇಲೆ (3)ರಲ್ಲಿ ಓದಲಾದ ದಿನಾಂಕ 21–1–2011ರ ಸರ್ಕಾರದ ಆದೇಶದಲ್ಲಿ ವಿಧಿಸಲಾಗಿರುವ ಷರತ್ತಿನಂತೆ ಎನ್.ಸಿ.ಡಿ.ಸಿ. ಸಾಲದ ಎರಡು ಹಾಗೂ ಮೂರನೇ ಕಂತನ್ನು ಕಾರ್ಖಾನೆ ₹ 8.49 ಕೋಟಿಗಳ ಹೆಚ್ಚುವರಿ ಷೇರು ಬಂಡವಾಳವನ್ನು ಸದಸ್ಯರಿಂದ ಸಂಗ್ರಹಿಸಿದ ನಂತರವಷ್ಟೆ ಬಿಡುಗಡೆ ಮಾಡಬೇಕಾಗಿದೆಯೆಂದು ತಿಳಿಸಿ ಈ ಎಲ್ಲಾ ಅಂಶಗಳನ್ನು ಕಾರ್ಯಗತಗೊಳಿಸಲು ಹೆಚ್ಚಿನ ಕಾಲಾವಧಿ ಅವಶ್ಯಕವಾಗುವುದೆಂದು ಅಭಿಪ್ರಾಯಪಟ್ಟು ಎನ್.ಸಿ.ಡಿ.ಸಿ. ಮಂಜೂರು ಮಾಡಿರುವ ಅಲ್ಪಾವಧಿ ಸಾಲದ ಸಿಂಧುತ್ವದ ಅವಧಿಯನ್ನು ದಿನಾಂಕ 1–4–2011 ರಿಂದ 31–3–2012ರವರೆಗೆ ವಿಸ್ತರಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಈ ವಿಷಯವನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 28 ಸಸಕಾ 2011, ಬೆಂಗಳೂರು, ದಿನಾಂಕ : 10–08–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆಯ ಯೋಜನಾ ಅನುಷ್ಠಾನದಲ್ಲಿ ಉಂಟಾಗಿರುವ ಹೆಚ್ಚಳವನ್ನು ಭರಿಸುವ ಸಲುವಾಗಿ ಎನ್.ಸಿ.ಡಿ.ಸಿ.ಯು ರಾಜ್ಯ ಸರ್ಕಾರದ ಮೂಲಕ ಮಂಜೂರು ಮಾಡಿರುವ ಅವಧಿ ಸಾಲದ ಸಿಂಧುತ್ವದ ಅವಧಿಯನ್ನು ಕೆಳಕಂಡ ಷರತ್ತಿಗೊಳಪಟ್ಟು ದಿನಾಂಕ 31–12–2011ರ ವರೆಗೆ ವಿಸ್ತರಿಸಲಾಗಿದೆ.

ಮೇಲಿನ ಅವಧಿ ಸಾಲದ ಎರಡನೇ ಮತ್ತು ಮೂರನೇ ಕಂತುಗಳನ್ನು ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆಯು ತನ್ನ ಸದಸ್ಯರಿಂದ ಹೆಚ್ಚುವರಿ ಷೇರು ಬಂಡವಾಳದ ಶೇಕಡ 50ರಷ್ಟು ಹಾಗೂ ಶೇಕಡ 100ರಷ್ಟು ಷೇರು ಬಂಡವಾಳವನ್ನು ಸಂಗ್ರಹಿಸಿದ ನಂತರವೇ ಬಿಡುಗಡೆ ಮಾಡಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ 29-7-2011ರ ಅನಧಿಕೃತ ಟಿಪ್ಪಣಿ ಸಂಖ್ಯೆ: FD 275 Exp-2/2011ರ ಮೂಲಕ ನೀಡಿರುವ ಸಹಮತದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ರಾಮಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2011 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಹಕಾರಿ ಸಕ್ಕರೆ)

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಧಾರವಾಡ ಶಹರದ ಜುಬ್ಲಿ ಸರ್ಕಲ್ ದಿಂದ ದಾಸನಕೊಪ್ಪದವರೆಗೆ (ವಯಾ ಕರ್ನಾಟಕ ಕಾಲೇಜು ಸರ್ಕಲ್) ಕಿ.ಮಿ. 0.00 ರಿಂದ 1.10ರವರೆಗೆ ರಸ್ತೆ ಸುಧಾರಣೆ ಕಾಮಗಾರಿಯ 2ನೇ ಪರಿಷ್ಕೃತ ಅಂದಾಜು ಪತ್ರಿಕೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ :

1. ಸರ್ಕಾರದ ಪತ್ರ ಸಂಖ್ಯೆ: ನಅಇ 158 ಎಹೆಚ್‌ಡಿ 2008, ದಿನಾಂಕ 5-12-2008
2. ಸರ್ಕಾರದ ಆದೇಶ ಸಂಖ್ಯೆ: ನಅಇ 51 ಎಹೆಚ್‌ಡಿ 2009, ದಿನಾಂಕ 5-5-2009
3. ಸರ್ಕಾರದ ಆದೇಶ ಸಂಖ್ಯೆ: ನಅಇ 153 ಎಹೆಚ್‌ಡಿ 2009, ದಿನಾಂಕ 6-2-2010
4. ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಪೌನಿ/ತಾಂತ್ರಿಕ/ಹೆಚ್‌ಡಿಎಂಸಿ/122/10-11 (ಭಾಗ-1)
5. ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡ ಇವರ ಪತ್ರ ಸಂಖ್ಯೆ: ಯುಡಿಸಿ/ಎಸ್‌ಎಫ್‌ಸಿ/ಸಿಆರ್/2/2008-09, ದಿನಾಂಕ 3-3-2011 ಮತ್ತು 5-3-2011
6. ಸರ್ಕಾರದ ಆದೇಶ ಸಂಖ್ಯೆ: ನಅಇ 30 ಎಹೆಚ್‌ಡಿ 2011, ದಿನಾಂಕ 1-6-2011

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ದಿನಾಂಕ 5-12-2008ರ ಪತ್ರದಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವತಿಯಿಂದ ಮಾನ್ಯ ಮುಖ್ಯ ಮಂತ್ರಿಗಳ ರೂ. 100 ಕೋಟಿ ವಿಶೇಷ ಅನುದಾನದ ಅಡಿ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳುವ ಸಲುವಾಗಿ ಮೇಲೆ ಹೇಳಲಾದ ಕಾಮಗಾರಿಯ ರೂ. 270/- ಲಕ್ಷದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2) ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ 5-5-2009ರಲ್ಲಿ ರೂ. 2,63,92,409,79 ಮೊತ್ತದ ಈ ಕಾಮಗಾರಿಯನ್ನು ಶೇಕಡ 15ರಷ್ಟು ಹೆಚ್ಚುವರಿ ಪ್ರೀಮಿಯಂ ಸೇರಿ ರೂ. 3,03,51,271,25 ಮೊತ್ತದ ಟೆಂಡರ್ ಅನ್ನು ಮೇ॥ ಎಸ್. ಎಸ್. ಪೊಲೀಸ್ ಪಾಟೀಲ್ ಮತ್ತು ಕಂಪನಿ, 1ನೇ ದರ್ಜೆ ಗುತ್ತಿಗೆದಾರರು ಇವರ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

3) ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈ ಹಿಂದೆ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರ ಪ್ರಸ್ತಾವನೆಯನ್ನು ಪರಿಗಣಿಸಿ ಗುತ್ತಿಗೆದಾರರ ಶೇಕಡ 15 ರಷ್ಟು ಟೆಂಡರ್ ಪ್ರೀಮಿಯಂ ಸೇರಿದಂತೆ ಸದರಿ ಕಾಮಗಾರಿಯ ರೂ. 3,15,80,178/-ಮೊತ್ತದ ಪರಿಷ್ಕೃತ ಅಂದಾಜು ಪಟ್ಟಿಗೆ ಕೆಲವು ಷರತ್ತಿಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

4) ಮೇಲೆ (4)ರಲ್ಲಿ ಓದಲಾದ ಏಕ ಕಡತದಲ್ಲಿ ಈಗ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಸಲ್ಲಿಸಿರುವಂತೆ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ ರೂ. 4,50,00,000/-ಆಗಿರುತ್ತದೆ. ಇದರಲ್ಲಿ ರೂ. 2,21,30,991/-ಮೊತ್ತದ ವರ್ಕ್ ಸ್ಲಿಪ್ ಮತ್ತು ರೂ. 36,51,309/-ಮೊತ್ತದ ಇ.ಐ.ಆರ್.ಎಲ್. ಸೇರಿರುತ್ತದೆ. ಇದರಿಂದಾಗಿ ಕಾಮಗಾರಿಯ ಮೂಲ ಅಂದಾಜು ಮೊತ್ತದ ರೂ. 2,63,92,409,79ಕ್ಕೆ ಹೋಲಿಸಿದಲ್ಲಿ ಕಾಮಗಾರಿಯ ವೆಚ್ಚದಲ್ಲಿ ರೂ. 1,86,07,590,21 ಹೆಚ್ಚಳವಾಗಿರುತ್ತದೆ. ಇದು ಶೇಕಡ 70.50ರಷ್ಟು ಹೆಚ್ಚಳವಾಗಿರುತ್ತದೆ. ಇದರಲ್ಲಿ ಗುತ್ತಿಗೆದಾರರ ಶೇಕಡ 15ರಷ್ಟು ಟೆಂಡರ್ ಪ್ರೀಮಿಯಂ ಮೊತ್ತ ಸೇರಿದೆ.

5) ಪ್ರಸ್ತಾವನೆಯಲ್ಲಿ ಸದರಿ ಕಾಮಗಾರಿಯ ಅನುಷ್ಠಾನದ ಸಂದರ್ಭದಲ್ಲಿ ಅತ್ಯಗತ್ಯವಾದ ಈ ಕೆಳಕಂಡ ಅಂಶಗಳನ್ನು ಕಾರ್ಯಗತಗೊಳಿಸಿರುವುದಾಗಿ ವರದಿ ಮಾಡಿರುತ್ತಾರೆ.

1) ಕುಡಿಯುವ ನೀರು/ಯುಜಿಡಿ ಪೈಪ್‌ಲೈನ್ ಮತ್ತು ಕೇಬಲ್‌ಗಳ ಅಳವಡಿಕೆಗೆ ಪೂರಕವಾಗುವಂತೆ ಪ್ರತಿ 100 ಮೀ. ಅಂತರದಲ್ಲಿ 450 ಮಿ.ಮೀ. ವ್ಯಾಸದ ಎನ್.ಪಿ. 3 ಕೊಳವೆಗಳನ್ನು ಅಳವಡಿಸುವುದು.

2) ರಸ್ತೆಯ ಅಭಿವೃದ್ಧಿ ಭಾಗದಲ್ಲಿ ಇದ್ದಂತಹ ಎಲೆಕ್ಟ್ರಿಕ್ ಕಂಬಗಳು ಹಾಗೂ ವಿದ್ಯುತ್ ಪರಿವರ್ತಕಗಳ ಸ್ಥಳಾಂತರ

3) ರಸ್ತೆಯ ಅಭಿವೃದ್ಧಿ ಭಾಗದಲ್ಲಿ ಹಾಯ್ದು ಹೋಗಿದ್ದ ಹಳೆಯ ಯು.ಜಿ.ಡಿ. ಪೈಪ್‌ಲೈನ್‌ಗಳ ಜೋಡಣೆಯನ್ನು ಸ್ಥಗಿತಗೊಳಿಸಿ ರಸ್ತೆ ಪಕ್ಕದಲ್ಲಿ ನೂತನ ಯು.ಜಿ.ಡಿ. ಪೈಪ್‌ಲೈನ್ ಹಾಗೂ ಮ್ಯಾನ್‌ಹೋಲ್‌ಗಳ ಅಳವಡಿಕೆ

4) ರಸ್ತೆಯ ಅಭಿವೃದ್ಧಿ ಭಾಗದಲ್ಲಿ ಇದ್ದಂತಹ ಮರಗಳನ್ನು ಕಡಿಯುವುದು

5) ಕಾಮಗಾರಿಯ ಸಮರ್ಪಕ ಅನುಷ್ಠಾನಕ್ಕೆ ಅತ್ಯಗತ್ಯವಾಗಿದ್ದ ಡಬ್ಲ್ಯೂ.ಎಂ.ಎಂ. ಪ್ರೊಫೈಲ್ ಕರೆಕ್ಷನ್ ಕೋರ್ಸ್ ಅಳವಡಿಕೆ.

6) 3ನೇ ತಪಾಸಣಾ ಏಜೆನ್ಸಿಗೆ ನೀಡಬೇಕಾದ ಶುಲ್ಕಕ್ಕೆ ಅವಕಾಶ

6) ಮುಂದುವರೆದು ಮೇಲಿನ ಎಲ್ಲಾ ಬದಲಾವಣೆ/ಹೆಚ್ಚುವರಿ ಕಾಮಗಾರಿ ಅಂಶಗಳನ್ನು ಒಳಗೊಂಡಂತೆ ಪ್ರಸ್ತುತ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದ್ದು ರಸ್ತೆಯ ಅಭಿವೃದ್ಧಿಗೆ ಅಂತಿಮವಾಗಿ ರೂ. 4,50,00,000/- ಲಕ್ಷ ವೆಚ್ಚ ಆಗಿರುತ್ತದೆಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.

7) ಮೇಲೆ (6)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಅಡಿ 1ನೇ ಹಂತದಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಪರಿಷ್ಕೃತ ಕ್ರಿಯಾ ಯೋಜನೆ ಪಟ್ಟಿಗೆ ಅನುಮೋದನೆ ನೀಡಲಾಗಿದೆ. ಈ ಕ್ರಿಯಾ ಯೋಜನೆ ಪಟ್ಟಿಯ ಕ್ರಮ ಸಂಖ್ಯೆ 45ರಲ್ಲಿ ಪ್ರಸ್ತಾಪಿತ ಕಾಮಗಾರಿಗೆ ರೂ. 450 ಲಕ್ಷ ಅನುದಾನ ಒದಗಿಸಲಾಗಿದೆ. ಇದರಿಂದಾಗಿ ಪ್ರಸ್ತಾಪಿತ ಕಾಮಗಾರಿಯ ಈಗಿನ ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ಹೇಳಿರುವ ರೂ. 450/– ಲಕ್ಷ ಅಂದಾಜು ಮೊತ್ತಕ್ಕೆ ಅನುದಾನ ಒದಗಿಸಿದಂತಾಗುತ್ತದೆ. ಈ ಕ್ರಿಯಾ ಯೋಜನೆ ಪರಿಷ್ಕೃತ ಪಟ್ಟಿ ಅನುಮೋದನೆ ಆದೇಶದಲ್ಲಿ ಪ್ರತಿ ಕಾಮಗಾರಿಗೆ ಸಂಬಂಧಿಸಿದಂತೆ ಮೂಲ ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಮೊತ್ತ ವೆಚ್ಚವಾಗಿದ್ದಲ್ಲಿ ಆ ಹೆಚ್ಚುವರಿ ವೆಚ್ಚಕ್ಕೆ (ವರ್ಕ್ ಸ್ಲಿಪ್ ಮತ್ತು ಇ.ಐ.ಅರ್.ಎಲ್.) ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರಬೇಕೆಂದು ಹೇಳಿರುವುದರಿಂದ ಈ ಪ್ರಕರಣದಲ್ಲಿ 2ನೇ ಪರಿಷ್ಕೃತ ಅಂದಾಜು ಪಟ್ಟಿಗೆ ಪ್ರತ್ಯೇಕವಾಗಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಿದೆ.

8) ಸರ್ಕಾರವು ಪ್ರಸ್ತಾವನೆಯನ್ನು ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಮತ್ತು ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ ಇವರು ಶಿಫಾರಸ್ಸನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 43 ಎಹೆಚ್‌ಡಿ 2010, ಬೆಂಗಳೂರು, ದಿನಾಂಕ : 05–08–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯ ಧಾರವಾಡ ಶಹರದ ಜುಬ್ಲಿ ಸರ್ಕಲ್‌ದಿಂದ ದಾಸನಕೊಪ್ಪದವರೆಗೆ (ವಯಾ ಕರ್ನಾಟಕ ಕಾಲೇಜು ಸರ್ಕಲ್) ಕಿ.ಮಿ. 0.00 ರಿಂದ 1.10 ವರೆಗೆ ರಸ್ತೆ ಸುಧಾರಣೆ ಕಾಮಗಾರಿಯ ರೂ. 2,21,30,991/– (ರೂಪಾಯಿ ಎರಡು ಕೋಟಿ ಇಪ್ಪತ್ತೊಂದು ಲಕ್ಷ ಮೂವತ್ತು ಸಾವಿರದ ಒಂಭತ್ತು ನೂರಾ ತೊಂಭತ್ತೊಂಬತ್ತು ಮಾತ್ರ ಮೊತ್ತದ ವರ್ಕ್ ಸ್ಲಿಪ್ ರೂ. 36,51,109/– (ರೂಪಾಯಿ ಮೂವತ್ತಾರು ಲಕ್ಷ ಐವತ್ತೊಂದು ಸಾವಿರದ ಒಂದು ನೂರಾ ಒಂಭತ್ತು ಮಾತ್ರ) ಮೊತ್ತದ ಇ.ಐ.ಆರ್.ಎಲ್. ಮತ್ತು ಗುತ್ತಿಗೆದಾರರ ಶೇದಡ 15 ರಷ್ಟು ಹೆಚ್ಚುವರಿ ಟೆಂಡರ್ ಪ್ರೀಮಿಯಂ ಸೇರಿದಂತೆ ರೂ. 4,50,00,000/– (ರೂಪಾಯಿ ನಾಲ್ಕು ಕೋಟಿ ಐವತ್ತು ಲಕ್ಷಗಳು ಮಾತ್ರ) ಮೊತ್ತದ 2ನೇ ಪರಿಷ್ಕೃತ ಅಂದಾಜು ಪಟ್ಟಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

1) ಕಾಮಗಾರಿಯ 2ನೇ ಪರಿಷ್ಕೃತ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಪಡೆಯತಕ್ಕದ್ದು
2) ಕಾಮಗಾರಿಯ ವೆಚ್ಚ ಯಾವುದೇ ಕಾರಣಕ್ಕೂ ಮೇಲೆ ಹೇಳಲಾದ ಅನುಮೋದಿತ ಮೊತ್ತಕ್ಕಿಂತ ಹೆಚ್ಚಾಗಬಾರದು
3) ಈಗ ಅನುಮೋದಿಸಿರುವ 2ನೇ ಪರಿಷ್ಕೃತ ವೆಚ್ಚವನ್ನು ಈಗಾಗಲೇ ಅನುಮೋದಿಸಿರುವ ರೂ. 100 ಕೋಟಿ ವಿಶೇಷ ಅನುದಾನದ ಕಾಮಗಾರಿಗಳ ಕ್ರಿಯಾ ಯೋಜನೆ ಮೊತ್ತದಲ್ಲಿ ಭರಿಸತಕ್ಕದ್ದು ಹಾಗೂ ಈ ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚುವರಿ ಅನುದಾನವನ್ನು ಒದಗಿಸುವುದಿಲ್ಲ.

2) ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 349 ವೆಚ್ಚ–9/2011, ದಿನಾಂಕ 30–7–2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಈ. ಶಿವರುದ್ರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
(ಮಹಾನಗರಪಾಲಿಕೆ–2)
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 2012

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರು ಸರಬರಾಜು ಮಾಡಲು ಫಲಾನುಭವಿಗಳಿಂದ "ಫಲಾನುಭವಿ ಬಂಡವಾಳವಂತಿಗೆ" (Beneficiary Capital Contribution) ಯನ್ನು ಸಂಗ್ರಹಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ನಅಇ 145 ಎಂಎನ್‌ಐ 2005, ದಿನಾಂಕ 28–02–2005.
2. ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಇಲಾಖೆಯ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 54 ಶಾಸನ 2009, ದಿನಾಂಕ 27–7–2010.
3. ಸರ್ಕಾರಿ ಆದೇಶ ಸಂಖ್ಯೆ : ನಅಇ 269 ಎಂಎನ್‌ಐ 2010, ದಿನಾಂಕ 02–12–2010.
4. ಸರ್ಕಾರಿ ಪತ್ರ ಸಂಖ್ಯೆ : ನಅಇ 269 ಎಂಎನ್‌ಐ 2010, ದಿನಾಂಕ 18–03–2011.
5. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: BWSSB/CHO/030/ 2010–11, ದಿನಾಂಕ 15–04–2011.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 28–02–2005ರ ಆದೇಶದಲ್ಲಿ ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಹಿಂದಿನ 7 ನಗರಸಭೆಗಳಾದ ಬೊಮ್ಮನಹಳ್ಳಿ, ಬ್ಯಾಟರಾಯನಪುರ, ದಾಸರಹಳ್ಳಿ, ಕೃಷ್ಣರಾಜಪುರ, ಮಹದೇವಪುರ, ರಾಜರಾಜೇಶ್ವರಿನಗರ, ಯಲಹಂಕ ಮತ್ತು 1 ಕೆಂಗೇರಿ ಪುರಸಭೆಯ ವಿವಿಧ ಮಾದರಿಯ ವಸತಿ ನಿವೇಶನಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು ಸರ್ಕಾರ ಮಂಜೂರಾತಿ ನೀಡಲಾಗಿತ್ತು.

ಮೇಲೆ (2) ರಲ್ಲಿ ಓದಲಾದ ದಿನಾಂಕ 27–7–2010ರ ಅಧಿಸೂಚನೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ 1964ರ ಸೆಕ್ಷನ್. 89(ಎ) ನ್ನು ಸೇರಿಸಿ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳಿಗೆ ಫಲಾನುಭವಿಗಳಿಂದ ಬಂಡವಾಳ ವಂತಿಕೆಯನ್ನು ಸಂಗ್ರಹಿಸಲು ರಾಜ್ಯ ಸರ್ಕಾರದಿಂದ ನಿಧಿ ವ್ಯವಸ್ಥೆಗಾಗಿ ಬೆಂಗಳೂರು ಜಲಮಂಡಳಿಗೆ ನಿರ್ದೇಶನ ನೀಡಲು ಸೆಕ್ಷನ್. 89(ಎ) ರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಮೇಲೆ (3) ರಲ್ಲಿ ಓದಲಾದ ದಿನಾಂಕ 02-12-2010ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಒಟ್ಟು ರೂ. 2023 ಕೋಟಿಗಳ ವೆಚ್ಚದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು ಈ ಕೆಳಕಂಡ ನಿಬಂಧನೆಗೊಳಪಟ್ಟು ಸರ್ಕಾರ ಆದೇಶಿಸಿದೆ.

(ಎ) ಭಾರತ ಸರ್ಕಾರದ ಮುಖಾಂತರ ಜಪಾನ್ ಅಂತರರಾಷ್ಟ್ರೀಯ ಸಹಕಾರಿ ಏಜೆನ್ಸಿಯಿಂದ ರೂ. 2023 ಕೋಟಿಗಳ ಸಾಲ ಪಡೆಯಲು ;

(ಬಿ) ಕರ್ನಾಟಕ ಸರ್ಕಾರವು ಯೋಜನಾ ವೆಚ್ಚದಲ್ಲಿ ರೂ. 178 ಕೋಟಿಯನ್ನು ಪೂರಕ ಆಧಾರ ರೂಪದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಗರಾಭಿವೃದ್ಧಿ ಇಲಾಖೆಯ ಯೋಜನಾ ಆಯವ್ಯಯದಲ್ಲಿ ಒದಗಿಸುವುದು ;

(ಸಿ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ರೂ.178 ಕೋಟಿಗಳನ್ನು ತನ್ನ ಸ್ವಂತ ನಿಧಿಯಿಂದ ಒದಗಿಸಲು.

(ಡಿ) ಬೃಹತ್ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ ಅಡಿಯಲ್ಲಿ (GBWASP) ಬಂಡವಾಳ ವಂತಿಗೆಯನ್ನು ಬಳಕೆದಾರರಿಂದ ಸಂಗ್ರಹಿಸುವಂತೆ ಅದೇ ಮಾದರಿಯಲ್ಲಿ 110 ಹಳ್ಳಿಗಳಿಂದ ಬಂಡವಾಳ ವಂತಿಗೆಯನ್ನು ಬಳಕೆದಾರರಿಂದ ಸಂಗ್ರಹಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಅನುಮತಿಸಲು ಮತ್ತು ಈ ಹಣವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಸಾಲವನ್ನು ಮರುಪಾವತಿಸಲು ಉಪಯೋಗಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಅನುಮತಿ ನೀಡಲು ;

ಮೇಲೆ (4) ರಲ್ಲಿ ಓದಲಾದ ದಿನಾಂಕ 18-03-2011ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನೂತನವಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು ರೂ. 2023 ಕೋಟಿಗಳನ್ನು ಬೆಂಗಳೂರು ಅಂತರರಾಷ್ಟ್ರೀಯ ಸಹಕಾರ ಏಜೆನ್ಸಿಯಿಂದ ಸಾಲದ ರೂಪದಲ್ಲಿ ಒದಗಿಸಿಕೊಡಲು ವಿವರವಾದ ಯೋಜನಾ ವರದಿಯೊಂದಿಗೆ ಕೇಂದ್ರ ಸರ್ಕಾರದ ಆರ್ಥಿಕ ಮಂತ್ರಾಲಯವನ್ನು ಕೋರಲಾಗಿದೆ. ಹಿಂದಿನ 7 ನಗರಸಭೆ ಮತ್ತು 1 ಪುರಸಭೆಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು ಬಳಕೆದಾರರಿಂದ ಬಂಡವಾಳ ವಂತಿಕೆ ಸಂಗ್ರಹಿಸಲು ಅನುಕೂಲವಾಗುವಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ಅಧಿನಿಯಮ 2010ಕ್ಕೆ ಕಲಂ 89A ಗೆ ತಿದ್ದುಪಡಿ ತರಲಾಗಿದೆ.

ಮೇಲೆ (5) ರಲ್ಲಿ ಓದಲಾದ ದಿನಾಂಕ 15-04-2011 ರ ಪತ್ರದಲ್ಲಿ ಅಧ್ಯಕ್ಷರು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ ಉಲ್ಲೇಖ (2)ರ ಆದೇಶದ ಕಂಡಿಕೆ (ಇ) ಆದೇಶಿಸಿರುವಂತೆ 110 ಹಳ್ಳಿಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನೀರು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು ಫಲಾನುಭವಿ ಬಂಡವಾಳ ವಂತಿಕೆಯನ್ನು ಸಂಗ್ರಹಿಸಲು ಸರ್ಕಾರದಿಂದ ಯಾವುದೇ ಆದೇಶ ಇಲ್ಲದಿರುವುದರಿಂದ ಸರ್ಕಾರಿ ಆದೇಶ ಸಂಖ್ಯೆ : ನಅಇ 145 ಎಂಎನ್‌ಐ 2004, ದಿನಾಂಕ 28-05-2005 ರಲ್ಲಿ ವಿವಿಧ ನಿವೇಶನಗಳಿಗೆ ನಿಗದಿ ಪಡಿಸಿರುವಂತೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ನೀರು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು ಈ ಕೆಳಕಂಡ ಮಾದರಿಯಲ್ಲಿ ವಿವಿಧ ದರ್ಜೆಯ ವಸತಿ ನಿವೇಶನದಾರರಿಗೆ ಫಲಾನುಭವಿ ಬಂಡವಾಳವಂತಿಕೆಯನ್ನು ನಿಗದಿಪಡಿಸಿ ಸರ್ಕಾರ ಆದೇಶ ನೀಡಲು ಕೋರಿರುತ್ತಾರೆ.

Sl. No.	Site Dimension/flat/built up area	Beneficiary Capital Contribution to be collected from users
	A. For Domestic properties-	
	1. Residential Sites	
01	Up to 600 Sq. ft	Nil
02	Between 600 Sq. ft to 1,200 Sq. ft.	Rs. 5,000/-
03	Between 1,200 Sq. ft to 2,400 Sq. ft.	Rs. 10,000/-
04	Above 2,400 Sq. ft	Rs. 15,000/-
	2. Residential Apartment/Flats	
01	Up to 600 Sq. ft	Rs. 2,500/-
02	Between 600 Sq. ft to 1,200 Sq. ft. to Plinth	Rs. 5,000/-
03	Between 1,200 Sq. ft to 2,400 Sq. ft. of Plinth	Rs. 10,000/-
04	Above 2,400 Sq. ft. of Plinth area	Rs. 15,000/-

B. For Non-Domestic Properties-

1. Educational Institutes/Hospital/Nursing Homes/Charity etc.

01	Up to 600 Sq. ft	Rs. 5,000/-
02	Between 600 Sq. ft To 1,200 Sq. ft.	Rs. 10,000/-
03	Between 1,200 Sq. ft To 2,400 Sq. ft.	Rs. 15,000/-
04	Above 2,400 Sq. ft	Rs. 8/- per sq. ft of built up area

2. Commercial Establishment /Shops etc.

01	Up to 600 Sq. ft	Rs. 5,000/-
02	Between 600 Sq. ft To 1,200 Sq. ft.	Rs. 10,000/-
03	Between 1,200 Sq. ft To 2,400 Sq. ft.	Rs. 20,000/-
04	Above 2,400 Sq. ft	Rs. 8/- per sq. ft of built up area

3. Offices/Industries/Software & Hardware companies/BPOs/ Call Centres/

01	Up to 600 Sq. ft	Rs. 7,500/-
02	Between 600 Sq. ft To 1,200 Sq. ft.	Rs. 15,000/-
03	Between 1,200 Sq. ft To 2,400 Sq. ft.	Rs. 25,000/-
04	Above 2,400 Sq. ft	Rs. 5/- per sq. ft of built up area

4. Hotels/Restaurants/Club house/hostels/Marriage Halls etc.,

01	Up to 600 Sq. ft	Rs. 7,500/-
02	Between 600 Sq. ft To 1,200 Sq. ft.	Rs. 15,000/-
03	Between 1,200 Sq. ft To 2,400 Sq. ft.	Rs. 30,000/-
04	Above 2,400 Sq. ft	Rs. 15/- per sq. ft of built up area

ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಪ್ರಸ್ತಾವನೆಯನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನೂತನವಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ನೀರು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು ಫಲಾನುಭವಿಗಳಿಂದ ಬಂಡವಾಳ ವಂತಿಕೆಯನ್ನು ಸಂಗ್ರಹಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 152 ಎಂಎನ್ಐ 2011, ಬೆಂಗಳೂರು, ದಿನಾಂಕ 14ನೇ ಜುಲೈ 2011

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರಿ ಆದೇಶ ಸಂಖ್ಯೆ : ನಅಇ 145 ಎಂಎನ್ಐ 2004, ದಿನಾಂಕ 28.04.2005 ರ ಆದೇಶದಲ್ಲಿ 7 ನಗರಸಭೆ ಮತ್ತು 1 ಪುರಸಭೆ ವ್ಯಾಪ್ತಿಗೆ ನೀರು ಸರಬರಾಜು ಮತ್ತು ಒಳಚರಂಡಿ ಸೌಲಭ್ಯ ಒದಗಿಸಲು ವಿವಿಧ ವಸತಿ ನಿವೇಶನಗಳಿಗೆ ಬಳಕೆದಾರರಿಂದ ಬಂಡವಾಳ ವಂತಿಕೆಯನ್ನು ಸಂಗ್ರಹಿಸಲು ಆದೇಶಿಸಿರುವ ಮಾದರಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು ವಿವಿಧ ವಸತಿ ನಿವೇಶನಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ 1964ರ ಪ್ರಕರಣ 89(ಎ) ರಡಿ ನೀಡಿರುವ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಫಲಾನುಭವಿಗಳಿಂದ ಬಂಡವಾಳ ವಂತಿಕೆಯನ್ನು ಸಂಗ್ರಹಿಸಿ ನಿಗದಿಪಡಿಸಿ ಸರ್ಕಾರ ಆದೇಶಿಸಿದೆ.

Sl. No.	Site Dimension/flat/built up area	Beneficiary Capital Contribution to be collected from users
	A. For Domestic properties-	
	1. Residential Sites	
01	Up to 600 Sq. ft	Nil
02	Between 600 Sq. ft to 1,200 Sq. ft.	Rs. 5,000/-
03	Between 1,200 Sq. ft to 2,400 Sq. ft.	Rs. 10,000/-
04	Above 2,400 Sq. ft	Rs. 15,000/-
	2. Residential Apartment/Flats	
01	Up to 600 Sq. ft	Rs. 2,500/-
02	Between 600 Sq. ft To 1,200 Sq. ft. to Plinth	Rs. 5,000/-
03	Between 1,200 Sq. ft To 2,400 Sq. ft. of Plinth	Rs. 10,000/-
04	Above 2,400 Sq. ft. of Plinth area	Rs. 15,000/-

B. For Non-Domestic Properties-

1. Educational Institutes/Hospital/Nursing Homes/Charity etc.

01	Up to 600 Sq. ft	Rs. 5,000/-
02	Between 600 Sq. ft To 1,200 Sq. ft.	Rs. 10,000/-
03	Between 1,200 Sq. ft To 2,400 Sq. ft.	Rs. 15,000/-
04	Above 2,400 Sq. ft	Rs. 8/- per sq. ft of built up area

2. Commercial Establishment /Shops etc.

01	Up to 600 Sq. ft	Rs. 5,000/-
02	Between 600 Sq. ft To 1,200 Sq. ft.	Rs. 10,000/-
03	Between 1,200 Sq. ft To 2,400 Sq. ft.	Rs. 20,000/-
04	Above 2,400 Sq. ft	Rs. 8/- per sq. ft of built up area

3. Offices/Industries/Software & Hardware companies/BPOs/ Call Centres/

01	Up to 600 Sq. ft	Rs. 7,500/-
02	Between 600 Sq. ft To 1,200 Sq. ft.	Rs. 15,000/-
03	Between 1,200 Sq. ft To 2,400 Sq. ft.	Rs. 25,000/-
04	Above 2,400 Sq. ft	Rs. 5/- per sq. ft of built up area

4. Hotels/Restaurants/Club house/hostels/Marriage Halls etc.,

01	Up to 600 Sq. ft	Rs. 7,500/-
02	Between 600 Sq. ft To 1,200 Sq. ft.	Rs. 15,000/-
03	Between 1,200 Sq. ft To 2,400 Sq. ft.	Rs. 30,000/-
04	Above 2,400 Sq. ft	Rs. 15/- per sq. ft of built up area

ಸದರಿ ಬಂಡವಾಳ ವಂತಿಕೆಗೆ ಈ ಕೆಳಕಂಡ ಷರತ್ತುಗಳು ಅನ್ವಯಿಸುತ್ತದೆ.

1) ಮೇಲ್ಕಂಡ ಫಲಾನುಭವಿ ಬಂಡವಾಳ ವಂತಿಗೆಯ ನಗರ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಬೇಕಾದ ವಸತಿ ಆಸ್ತಿಗಳಿಂದ ರೂ.1500/– ಹಾಗೂ ವಾಣಿಜ್ಯ ಆಸ್ತಿಗಳಿಂದ ರೂ.3000/– ರಸ್ತೆ ಅಗೆತದ ವೆಚ್ಚಗಳನ್ನು ಕೂಡಿಕೊಂಡಿರುತ್ತದೆ. ಆದರೆ, ಬೆಂಗಳೂರು ಜಲಮಂಡಳಿಯು ವಿಧಿಸುವ ಮಾರ್ಗ ಮತ್ತು ಸಂಪರ್ಕ/ ಆ ಪ್ರಮಾಣದ ವೆಚ್ಚವನ್ನು ಒಳಗೊಂಡಿರುವುದಿಲ್ಲ.

2) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಖಾಸಗಿ ಡೆವಲಪರ್‌ಗಳು / ಸಂಘಗಳು / ಸಂಘ ಸಂಸ್ಥೆಗಳು ಅಭಿವೃದ್ಧಿ ಪಡಿಸಲಾದ ಹೊಂದಿಕೊಂಡಿರುವ ಹಾಲಿ ಇರುವ ಬದಲಾವಣೆಗಳು/ಸಾಮೂಹಿಕ ವಸತಿಗಳಿಗೆ ಸಂಬಂಧಿಸಿದಂತೆ ಬೆಂಗಳೂರು ಜಲಮಂಡಳಿಯ ವಿಶಿಷ್ಟ ವಿವರಣಗಳಂತೆ ಸ್ವಂತ ಹಣ ಹೂಡಿಕೆ/ವೆಚ್ಚಗಳಲ್ಲಿ ವಿತರಣಾ ಕೊಳವೆ ಮಾರ್ಗಗಳನ್ನು ಈಗಾಗಲೇ ಅಳವಡಿಸಿಕೊಂಡ ಪಕ್ಷದಲ್ಲಿ ಹಾಗೂ ಇದನ್ನು ಬೆಂಗಳೂರು ಜಲಮಂಡಳಿಯು ದೃಢೀಕರಿಸಿದ್ದಲ್ಲಿ ಆಗ ಬದಲಾವಣೆಯಲ್ಲಿನ ಪ್ರತಿಯೊಂದು ಹೊಸ ಸಂಪರ್ಕಗಳಿಗೆ ಈ ಆದೇಶದಲ್ಲಿ ಸೂಚಿಸಿರುವ ಫಲಾನುಭವಿ ಬಂಡವಾಳ ವಂತಿಕೆಯ ಕೇವಲ ಶೇ. 50 ರಷ್ಟು ಮಾತ್ರ ವಿಧಿಸಲಾಗುವುದು.

3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಖಾಸಗಿ ಡೆವಲಪರ್‌ಗಳು/ಸಂಘಗಳು/ಸಂಘ ಸಂಸ್ಥೆಗಳು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿರುವ ಯಾವುದೇ ಹೊಸ ಬದಲಾವಣೆಗಳು/ಸಾಮೂಹಿಕ ವಸತಿಗಳಿಗೆ ಸಂಬಂಧಿಸಿದಂತೆ ಬೆಂಗಳೂರು ಜಲಮಂಡಳಿಯ ಮಾನದಂಡಗಳಂತೆ ಸ್ವಂತ ವೆಚ್ಚದಲ್ಲಿ ನೀರು ಸರಬರಾಜು ವಿತರಣಾ ಸಂಪರ್ಕವನ್ನು ಹಾಕಲು ಉದ್ದೇಶಿಸಿದ ಪಕ್ಷದಲ್ಲಿ ಮತ್ತು ಬೆಂಗಳೂರು ಜಲಮಂಡಳಿಗೆ ಪಾವತಿಸಬೇಕಾದ ಇ.ಟಿ.ಪಿ. ಮತ್ತು ಆ ಪ್ರಮಾಣದ ಶುಲ್ಕ ಇತ್ಯಾದಿಗಳನ್ನು ಮತ್ತು ಬೆಂಗಳೂರು ಜಲಮಂಡಳಿಯ ಸಮೀಪದ ಮೂಲದಿಂದ ಸಂಪರ್ಕವನ್ನು ಕಲ್ಪಿಸುವ ವೆಚ್ಚವನ್ನು ಕೂಡ ಅವರೇ ಭರಿಸುವುದಾದಲ್ಲಿ, ಇಂತಹ ಪ್ರಕರಣಗಳಲ್ಲಿ ಈ ಆದೇಶದಲ್ಲಿ ಸೂಚಿಸಿರುವ ಫಲಾನುಭವಿ ಬಂಡವಾಳ ವಂತಿಗೆಯ ಕೇವಲ ಶೇ. 50ರಷ್ಟು ಮಾತ್ರ ವಿಧಿಸಲಾಗುವುದು.

4) ಅನುಮೋದನೆಯನ್ನು ವಸತಿ ಉದ್ದೇಶಗಳಿಗೆ ಪಡೆಯಲಾಗಿದ್ದು, ಭೂ ಉಪಯೋಗವು ವಾಣಿಜ್ಯ/ಗೃಹೇತರ ಉದ್ದೇಶಗಳಿಗೆ ಬದಲಾಯಿಸಿದ್ದಲ್ಲಿ ಅನ್ವಯಿಸುವ ವ್ಯತ್ಯಾಸದ ದರಗಳನ್ನು ಉಪಯೋಗ ಬದಲಾವಣೆಯ ವೇಳೆಯಲ್ಲಿ ಪಾವತಿಸಬೇಕು.

5) ನಾಗರೀಕರಿಗೆ ಹಾಲಿ ವಂತಿಗೆಯನ್ನು 1 ರಿಂದ 4 ರವರೆಗಿನ ಬೆಂಗಳೂರು ಜಲಮಂಡಳಿಗೆ ಪಾವತಿಸುವ ಸೌಕರ್ಯವನ್ನು ಹೊಂದಿರುವುದರಿಂದ ಹಾಗೂ ಈ ಶುಲ್ಕವು ರಸ್ತೆ ಅಗೆಯುವ ಶುಲ್ಕವನ್ನು ಒಳಗೊಂಡಿರುವುದರಿಂದ ಅವರು ರಸ್ತೆ ಅಗೆಯುವ ಅನುಮತಿಗೆ ಮಾತ್ರ ಬೆಂಗಳೂರು ಜಲಮಂಡಳಿಗೆ ಅರ್ಜಿ ಸಲ್ಲಿಸಬೇಕು. ಹಾಗೂ ಈ ಯೋಜನೆಯಡಿಯಲ್ಲಿ ಸಂಪರ್ಕ ಹೊಂದಿದ ನಂತರ, ಅಗೆತದ ರಸ್ತೆ, ದುರಸ್ತಿಗಳು ಮೊತ್ತದಿಂದ ಬೆಂಗಳೂರು ಜಲಮಂಡಳಿಯು ರಸ್ತೆ ಅಗೆಯುವಿಕೆಯ ಶುಲ್ಕವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ನಗರ ಸ್ಥಳೀಯ ಸಂಸ್ಥೆಗಳಿಗೆ ಪಾವತಿ ಮೂಲಕ ಬೇಕಾಗಿಲ್ಲ.

6) ಒಂದು ಪಕ್ಷ '30x40' ನಿವೇಶನಗಳ ಕಡಿಮೆ ಮತ್ತು 600 ಚದರಡಿಗಿಂತ ಕಡಿಮೆವುಳ್ಳ ವಸತಿ ಸಮುಚ್ಚಾಯಗಳ ಮಾಲೀಕರುಗಳು ಸರ್ಕಾರದ ಆದೇಶ ಸಂಖ್ಯೆ : ಯುಡಿಡಿ 36 ಎಂಎನ್‌ಐ 2004, ದಿನಾಂಕ 13–02–2004 ರಂತೆ ಈಗಾಗಲೇ ರೂ. 10,000/–ಗಳನ್ನು ಪಾವತಿ ಮಾಡಿದ್ದಲ್ಲಿ, ಪಾವತಿ ಮಾಡಿದ ಅಧಿಕ ಪಾವತಿಯನ್ನು ಸಂಪರ್ಕಗೊಳಿಸುವ ಸಮಯದಲ್ಲಿ ಬೆಂಗಳೂರು ಜಲಮಂಡಳಿಗೆ ಪಾವತಿಸಬೇಕಾದ ಮಾರ್ಗ ಶುಲ್ಕಗಳ/ಆ ಪ್ರಮಾಣ ಶುಲ್ಕಗಳಿಗೆ ಕಾಯ್ದಿರಿಸಲಾಗುವುದು. ಯಾವುದಾದರೂ ಉಳಿಕೆ ಮೊಬಲಗುಗಳಿದ್ದ ಪಕ್ಷದಲ್ಲಿ ಮುಂದಿನ ನೀರಿನ ಬಿಲ್ಲುಗಳಾಗಿ ಕಾಯ್ದಿರಿಸಲಾಗುವುದು.

7) ಸರ್ಕಾರದ ಆದೇಶ ಸಂಖ್ಯೆ : ಯುಡಿಡಿ 36 ಎಂಎನ್‌ಐ 2004, ದಿನಾಂಕ 13ನೇ ಫೆಬ್ರವರಿ 2004 ಮತ್ತು ಯುಡಿಡಿ 36 ಎಂಎನ್‌ಐ 2004, ದಿನಾಂಕ 26ನೇ ಮಾರ್ಚ್ 2004 ರಲ್ಲಿನ ಇತರೆ ಷರತ್ತುಗಳು ಈ ಸರ್ಕಾರಿ ಆದೇಶದ ಮೂಲಕ ಬದಲಾವಣೆ ಮಾಡದಿದ್ದಲ್ಲಿ ಅನ್ವಯಿಸಲು ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಪ್ರೇಮಚಂದ್ರ,

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 2013

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಕಾಡು ಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳಲ್ಲಿ ಮೃತಪಟ್ಟವರ ವಾರಸುದಾರರಿಗೆ ನೀಡಲಾಗುತ್ತಿರುವ ಪರಿಹಾರದ ಧನದ ಮೊತ್ತವನ್ನು ಪರಿಷ್ಕರಿಸಿ ಹೆಚ್ಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ 30–04–2011.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 30–04–2011 ರ ಸರ್ಕಾರಿ ಆದೇಶದಲ್ಲಿ ಕಾಡು ಪ್ರಾಣಿಗಳಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತಪಟ್ಟ ವ್ಯಕ್ತಿಯು ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಲ್ಲವೆಂದೂ ಹಾಗೂ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಸದರಿ ವ್ಯಕ್ತಿಯು ವನ್ಯ ಮೃಗಗಳಿಂದ ಮೃತನಾಗಿದ್ದಾನೆಂದು ದೃಢಪಟ್ಟಿದ್ದರೆ, ಮರಣ ಹೊಂದಿದ ವ್ಯಕ್ತಿಯ ವಾರಸುದಾರರಿಗೆ ರೂ.3.50 ಲಕ್ಷಗಳನ್ನು ಮಂಜೂರು ಮಾಡಲು ಆದೇಶ ನೀಡಲಾಗಿತ್ತು. ಹಾಗೂ ಈ ಪರಿಹಾರ ಧನವನ್ನು ಮಂಜೂರು ಮಾಡಲು ಕ್ಷೇತ್ರ ವ್ಯಾಪ್ತಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ/ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿತ್ತು.

2. ಈಗ ಸರ್ಕಾರವು ಮೇಲ್ಕಂಡ ಆದೇಶವನ್ನು ಪುನರ್ ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ಬೆಂಗಳೂರು, ದಿನಾಂಕ 03ನೇ ಆಗಸ್ಟ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕಾಡು ಪ್ರಾಣಿಗಳಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತಪಟ್ಟ ವ್ಯಕ್ತಿಯು ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಲ್ಲವೆಂದೂ ಹಾಗೂ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಸದರಿ ವ್ಯಕ್ತಿಯು ವನ್ಯ ಮೃಗಗಳಿಂದ ಮೃತನಾಗಿದ್ದಾನೆಂದು ದೃಢಪಟ್ಟಿದ್ದಲ್ಲಿ ಮರಣ ಹೊಂದಿದ ವ್ಯಕ್ತಿಯ ವಾರಸುದಾರರಿಗೆ ರೂ. 5.00 ಲಕ್ಷಗಳ (ರೂಪಾಯಿಗಳು ಐದು ಲಕ್ಷಗಳು ಮಾತ್ರ) ದಯಾತ್ಮಕ ಧನವನ್ನು ದಿನಾಂಕ 08–06–2011 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಲು ಆದೇಶಿಸಲಾಗಿದೆ.

(ಅ) ಹೀಗೆ ಮಂಜೂರು ಮಾಡಲಾದ ದಯಾತ್ಮಕ ಧನದಲ್ಲಿ ರೂ. 2.00 ಲಕ್ಷಗಳನ್ನು ಘಟನೆ ನಡೆದ ತಕ್ಷಣವೇ ವಾರಸುದಾರರಿಗೆ ನೀಡತಕ್ಕದ್ದು.

(ಆ) ಉಳಿದ ಮೊತ್ತ ರೂ. 3.00 ಲಕ್ಷಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಹಂತದಲ್ಲಿ ವಿಚಾರಣೆ ನಡೆಸಿ ವಾರಸುದಾರರಿಗೆ ಬಿಡುಗಡೆ ಮಾಡತಕ್ಕದ್ದು.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 970 ವೆಚ್ಚ–5/2011, ದಿನಾಂಕ 30–07–2011 ರನ್ವಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ವಿ. ರಾಮಕೃಷ್ಣ,

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 2014

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : 45 ವರ್ಷ ಮೇಲ್ಪಟ್ಟ ಅವಿವಾಹಿತ ಮಹಿಳೆಯರಿಗೆ ಮಾಸಿಕ ರೂ. 1000/– ಗೌರವಧನ ನೀಡುವ ಬಗ್ಗೆ.

ಓದಲಾಗಿದೆ : ದಿನಾಂಕ : 1–8–2011 ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಏಕ ಕಡತ ಪ್ರಸ್ತಾವನೆ ಸಂಖ್ಯೆ : ಮಮಅಇ : ಮಕವಿ : ಅವಿಮ : 2011–12.

ಪ್ರಸ್ತಾವನೆ :

ದಿನಾಂಕ : 8–3–2011 ರಂದು, 100ನೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನಾ ಭಾಷಣದಲ್ಲಿ 45 ವರ್ಷ ಮೇಲ್ಪಟ್ಟ ಅವಿವಾಹಿತ ಮಹಿಳೆಯರಿಗೆ ರೂ. 1000/– ಗಳ ಮಾಸಿಕ ಗೌರವಧನ ನೀಡುವುದಾಗಿ ಘೋಷಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರಡು ಯೋಜನಾ ಮಾರ್ಗಸೂಚಿಯನ್ನು ಸಿದ್ಧಪಡಿಸಿ ಅನುಮೋದನೆ ನೀಡುವಂತೆ ಮೇಲೆ ಓದಲಾದ ಏಕ ಕಡತದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

ಮುಂದುವರೆದು, ಈ ಯೋಜನೆಯ ಫಲಾನುಭವಿಗಳನ್ನು ಅಂದಾಜಿಸುವ ಕಾರ್ಯವು ಅಂಗವಾಡಿ ಕಾರ್ಯಕರ್ತೆ/ಗ್ರಾಮ ಪಂಚಾಯತಿ ಮುಖಾಂತರ ಸಮೀಕ್ಷೆ ನಡೆಸಿ ಫಲಾನುಭವಿಗಳನ್ನು ಗುರುತಿಸಬಹುದಾಗಿದ್ದು, ನಗರ ಪ್ರದೇಶದಲ್ಲಿ ಸಮೀಕ್ಷೆ ನಡೆಸುವುದು ಸ್ವಲ್ಪ ಕಷ್ಟವಾಗಿರುವುದರಿಂದ ಹಾಗೂ ಬಹಳ ಸಮಯ ಬೇಕಾಗಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಯೋಜನೆಯನ್ನು ಜಾರಿಗೊಳಿಸಬಹುದಾಗಿದ್ದು, ನಿರ್ದಿಷ್ಟ ಸಂಖ್ಯೆ ಲಭ್ಯವಾದ ನಂತರ ಎಷ್ಟು ಅನುದಾನ ಬೇಕಾಗುತ್ತದೆ ಎಂಬ ಬಗ್ಗೆ ಅಂದಾಜಿಸಬಹುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 83 ಮಮಅ 2011, ಬೆಂಗಳೂರು, ದಿನಾಂಕ : 10–8–2011.

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 45 ವರ್ಷಕ್ಕೂ ಮೇಲ್ಪಟ್ಟ ಅವಿವಾಹಿತ ಮಹಿಳೆಯರಿಗೆ ಮಾಸಿಕ ರೂ. 1000/– ಗಳ ಗೌರವಧನವನ್ನು ನೀಡುವ ಯೋಜನೆಯನ್ನು ಪ್ರಾರಂಭಿಕವಾಗಿ ರಾಜ್ಯದ ಗ್ರಾಮೀಣ ಭಾಗದಲ್ಲಿ ಅನುಬಂಧದಲ್ಲಿರುವ ರೂಪುರೇಷೆಗಳನ್ವಯ ಅನುಷ್ಠಾನಗೊಳಿಸಲು ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ತಾತ್ವಿಕ ಅನುಮೋದನೆ ನೀಡಲಾಗಿದೆ.

ಈ ಕುರಿತು ರಾಜ್ಯದ ಗ್ರಾಮೀಣ ಭಾಗದಲ್ಲಿ ತುರ್ತಾಗಿ ಸಮೀಕ್ಷೆ ನಡೆಸಿ, ನಿಖರ ಅಂಕಿ ಅಂಶಗಳು ಹಾಗೂ ಇದಕ್ಕೆ ಬೇಕಾಗುವ ವಾರ್ಷಿಕ ಅಂದಾಜು ಆಯವ್ಯಯಗಳ ವಿವರಗಳನ್ನು ಸಲ್ಲಿಸುವಂತೆ ಸಹ ಇಲಾಖೆಗೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎನ್. ಕೃಷ್ಣಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ–1,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 83 ಮಮಅ 2011, ಬೆಂಗಳೂರು, ದಿನಾಂಕ : 10–8–2011 ಕ್ಕೆ

ಅನುಬಂಧ

ಅವಿವಾಹಿತ ಮಹಿಳೆಯರಿಗೆ ರೂ. 1000/– ಮಾಸಿಕ ಗೌರವಧನ

1. ಪೀಠಿಕೆ : ದಿನಾಂಕ : 8–3–2011 ರಂದು, 100ನೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ, ಮಾನ್ಯ ಮುಖ್ಯಮಂತ್ರಿಗಳು, ಕಾರ್ಯಕ್ರಮದ ಉದ್ಘಾಟನಾ ಭಾಷಣದಲ್ಲಿ ವಿವಿಧ ಕಾರಣಗಳಿಗಾಗಿ, 45 ವರ್ಷ ಮೇಲ್ಪಟ್ಟ 60 ವರ್ಷದೊಳಗಿನ ಅವಿವಾಹಿತ ಮಹಿಳೆಯರಿಗೆ ರೂ. 1000/–ಗಳ ಮಾಸಾಶನ ನೀಡುವುದಾಗಿ, ಘೋಷಣೆ ಮಾಡಿದಂತಹ ಯೋಜನೆಯಾಗಿರುತ್ತದೆ.
2. ಕರ್ನಾಟಕ ರಾಜ್ಯಾದ್ಯಂತ ಅನ್ವಯವಾಗತಕ್ಕದ್ದು.
3. ಈ ಯೋಜನೆಯು . . . . (ದಿನಾಂಕ) ದಿಂದ ಜಾರಿಗೆ ಬರತಕ್ಕದ್ದು.
4. ಉದ್ದೇಶ : ವಿವಿಧ ಕಾರಣಗಳಿಗಾಗಿ 45 ವರ್ಷ ಮೀರಿದ 60 ವರ್ಷದವರೆಗಿನ ಅವಿವಾಹಿತರಾಗಿ ಉಳಿದ ; ಹಾಗೂ ಸಂಕಷ್ಟ ಪರಿಸ್ಥಿತಿಯಲ್ಲಿದ್ದು, ಹಣಕಾಸಿನ ಅವಶ್ಯಕತೆ ಇರುವ ಎಲ್ಲಾ ಮಹಿಳೆಯರಿಗೆ ಸಾಮಾಜಿಕ ಭದ್ರತಾ ದೃಷ್ಟಿಯಿಂದ ಮಾಸಿಕ ರೂ. 1000/– ಗಳ ಮಾಸಾಶನ ವಿತರಿಸುವುದು ಈ ಯೋಜನೆಯ ಉದ್ದೇಶವಾಗಿದೆ.
5. ಅರ್ಹತೆ : ಈ ಯೋಜನೆಯಡಿ ಮಾಸಿಕ ರೂ. 1000/–ಗಳ ಮಾಸಾಶನ ಪಡೆಯಲು ಈ ಕೆಳಕಂಡ ಷರತ್ತುಗಳನ್ನು ಪೂರೈಸಿದ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರು ಅರ್ಹರಾಗಿರುತ್ತಾರೆ.
   - i) ಮಹಿಳೆಯ ವಯಸ್ಸು 45 ರಿಂದ 60 ವರ್ಷದೊಳಗಿರಬೇಕು.
   - ii) ಸಂಕಷ್ಟ ಪರಿಸ್ಥಿತಿಯಲ್ಲಿರುವ, ಹಣಕಾಸಿನ ಅವಶ್ಯಕತೆ ಇರುವ ಮಹಿಳೆ. ಅಂದರೆ ಜೀವನ ನಡೆಸಲು ಯಾವುದೇ ಆದಾಯ ಅಥವಾ ಆದಾಯದ ಮೂಲ ಇರದಂತಹ ನಮೂನೆ–1ರ ಕ್ರಸಂ. 17 ರಿಂದ 28 ರವರೆಗೆ ಸೂಚಿಸಿರುವ ಮಾನದಂಡಗಳಂತೆ ಬಡತನ ರೇಖೆಗಿಂತ ಕೆಳಗಿರುವವರು.
   - iii) ಅಂಗವಿಕಲರ ವೇತನ, ವಿಮುಕ್ತೆ ವೇತನ ಹಾಗೂ ಇತರೆ ಯಾವುದೇ ಇಲಾಖೆಯ ರಾಜ್ಯ ಮತ್ತು ಕೇಂದ್ರ ಯೋಜನೆಗಳ ಮೇರೆಗೆ, ನಿರ್ವಹಣಾ ಭತ್ಯೆಗೆ ಅರ್ಹರಾದ ಮಹಿಳೆಯರು ಈ ಯೋಜನೆಯಡಿ ಅವಿವಾಹಿತೆ ಮಾಸಾಶನಕ್ಕೆ ಅರ್ಹರಾಗತಕ್ಕದಲ್ಲ.
   - iv) ಯಾವುದೇ ಇಲಾಖೆಯ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದಿಂದ ನಡೆಯುವ ಸಂಸ್ಥೆಗಳು ಉದಾಹರಣೆಗೆ ಸ್ವೀಕಾರ ಕೇಂದ್ರ, ರಾಜ್ಯ ನಿಲಯ, ಸ್ವಾಧಾರ ಗೃಹ, ಅಲ್ಪಾವಧಿ ವಸತಿಗೃಹ ಇತ್ಯಾದಿ ಗೃಹಗಳಲ್ಲಿ ಮತ್ತು ಧರ್ಮಶಾಲೆಯ ಸಂಸ್ಥೆಗಳಲ್ಲಿ, ನಿರಾಶ್ರಿತ ಆಶ್ರಯ ಪಡೆದ ಅವಧಿಯಲ್ಲಿ ಅವಿವಾಹಿತೆಯರು ಮಾಸಾಶನ ಪಡೆಯಲು ಅರ್ಹರಾಗಿರುವುದಿಲ್ಲ.
   - v) ಒಂದು ಕುಟುಂಬದಲ್ಲಿ ಒಬ್ಬರಿಗಿಂತ ಹೆಚ್ಚು ಮಹಿಳೆಯರು ಅವಿವಾಹಿತರಿದ್ದಲ್ಲಿ, ಅಂತಹ ಅವಿವಾಹಿತ ಮಹಿಳೆಯರಿಗೆ ಮಾಸಾಶನ ಪಡೆಯಲು ಅರ್ಹರಿರುತ್ತಾರೆ.
   - vi) ಗುಣಪಡಿಸಲಾಗದಂತಹ, ಅರ್ಬುದ, ನರರೋಗ, ಮಧುಮೇಹ, ಹೆಚ್.ಐ.ವಿ. ಏಡ್ಸ್, ಹೃದಯ ಸಂಬಂಧಿ ಖಾಯಿಲೆಗಳು, ಲುಕೀಮಿಯಾ, ಎಪ್ಲಾಸಿಕ್ ಅನೀಮಿಯಾ, ಹಿಮೋಫೀಲಿಯಾ ಹಾಗೂ ಸಿಕಲ್‌ಸೆಲ್ ತೆಲಿಸೀಮಿಯಾ, ಪರ್ಪರಾ ಖಾಯಿಲೆಗಳಿಂದ ನರಳುತ್ತಿದ್ದರೆ, ಈ ಖಾಯಿಲೆಗಳಿಗೆ ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರವನ್ನು ಡಿಸ್ಟ್ರಿಕ್ಟ್ ಸರ್ಜನ್‌ಗೆ ಕಡಿಮೆ ಇಲ್ಲದಂತಹ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪಡೆದು ಸಲ್ಲಿಸಿದಲ್ಲಿ, ಈ ಯೋಜನೆಯಡಿ ಮಾಶಾಸನ ಪಡೆಯಬಹುದಾಗಿದೆ.
   - vii) ಅರ್ಜಿದಾರರು ಅರ್ಜಿ ದಿನಾಂಕದಿಂದ ಹಿಂದಿನ ನಿರಂತರ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ಈ ರಾಜ್ಯದ ನಿವಾಸಿಯಾಗಿರತಕ್ಕದ್ದು.
6. **ಅರ್ಜಿ ಸಲ್ಲಿಸುವ ವಿಧಾನ :**

   i) ಅವಿವಾಹಿತ ಮಹಿಳೆಯು ಸಾಮಾನ್ಯವಾಗಿ ವಾಸಿಸುವ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅರ್ಜಿ ಸ್ವೀಕರಿಸಲು ಮತ್ತು ಮಾಸಾಶನ ಮಂಜೂರು ಮಾಡುವ ಅರ್ಹ ಅಧಿಕಾರಿಯಾಗಿರುತ್ತಾರೆ.

   ii) ಅರ್ಜಿಗೆ ಯಾವುದೇ ನ್ಯಾಯಾಲಯದ ಶುಲ್ಕದ ಸ್ಟ್ಯಾಂಪನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ.

   iii) ಮುದ್ರಿತ ನಮೂನೆಗಳು ಲಭ್ಯವಾಗದಿದ್ದಲ್ಲಿ ಅರ್ಜಿಯನ್ನು ಸಾದಾ ಬಿಳಿ ಕಾಗದದಲ್ಲಿ ಬರೆದು ಸಲ್ಲಿಸಬಹುದು.

   iv) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಿಂದ ಹಾಗೂ ಅಂಗನವಾಡಿ ಕೇಂದ್ರಗಳಿಂದ ಅರ್ಜಿ ನಮೂನೆಗಳನ್ನು ಪಡೆಯಬಹುದು (ನಮೂನೆ–1).

   v) ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ತುಂಬಿ, ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ನಮೂನೆ–1 ಎ ರಂತೆ ಅರ್ಜಿದಾರರಿಗೆ ಸ್ವೀಕೃತಿ ನೀಡುವುದು.

7. **ಹೀಗೆ ಪಡೆದ ಅರ್ಜಿಗಳನ್ನು ಈ ಕೆಳಕಂಡಂತೆ ಪರಿಶೀಲಿಸುವುದು :- (ಅರ್ಜಿ ನಮೂನೆ-1)**

a) ಅರ್ಜಿದಾರರ ಹೆಸರನ್ನು ಈಗಾಗಲೇ ತಾಲ್ಲೂಕಿನಿಂದ ಗುರುತಿಸಿ ಪ್ರಧಾನ ಕಛೇರಿಗೆ ಸಲ್ಲಿಸಿರುವ ಪಟ್ಟಿಯಲ್ಲಿರುವುದೇ ಎಂಬ ಬಗ್ಗೆ ಪರಿಶೀಲಿಸತಕ್ಕದ್ದು.

b) ಹೆಸರು ಪಟ್ಟಿಯಲ್ಲಿ ಇದ್ದ ಪಕ್ಷದಲ್ಲಿ ಈ ಕೆಳಕಂಡಂತೆ ವಿಚಾರಣೆ ನಡೆಸಿ ನಮೂನೆ-3 ರಂತೆ ಮಂಜೂರಾತಿ ಆದೇಶ ನೀಡಲು ಶಿಫಾರಸ್ಸು ಮಾಡಬಹುದಾಗಿದೆ.

i) ಅರ್ಜಿದಾರರ ವಯಸ್ಸು, ಮೂಲ ವಾಸ, ನಿವಾಸ ಸ್ಥಳ, ಆರ್ಥಿಕ ಸ್ಥಿತಿಗತಿ ಹಾಗೂ ಅವಿವಾಹಿತರಾಗಿರುವ ಬಗ್ಗೆ ವಿವರಗಳನ್ನು ಪರಿಶೀಲಿಸಬೇಕು. ಪರಿಶೀಲಿಸುವ ಉದ್ದೇಶಕ್ಕಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಾವೇ ಖುದ್ದಾಗಿ ಅಥವಾ ತಮ್ಮ ಅಧೀನ ಅಧಿಕಾರಿಗಳ ಮೂಲಕ ವಿಚಾರಣೆ ನಡೆಸಬಹುದು. ಈ ವಿಚಾರಣೆ ನಡೆಸುವಂತಹ ಅಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಮೇಲ್ವಿಚಾರಕಿಯರ ದರ್ಜೆಗಿಂತ ಕಡಿಮೆ ದರ್ಜೆಯವರಾಗಿರಬಾರದು. ವಿಚಾರಣಾಧಿಕಾರಿಯು ಪ್ರಕರಣದ ನೈಜತೆ ಹಾಗೂ ಅರ್ಹತೆಯ ಬಗ್ಗೆ ಖಚಿತ ಪಡಿಸಿಕೊಳ್ಳುವುದಕ್ಕಾಗಿ ಫಲಾನುಭವಿಯನ್ನು ಖುದ್ದಾಗಿ ಭೇಟಿ ಮಾಡಬೇಕು ಮತ್ತು ಫಲಾನುಭವಿಯ ಆರ್ಥಿಕ ಸ್ಥಿತಿಗತಿ ಹಾಗೂ ಅರ್ಜಿಯಲ್ಲಿ ನೀಡಿರುವ ವಿವರಗಳನ್ನು ಪಂಚರ ಸಮ್ಮುಖದಲ್ಲಿ ಪರಿಶೀಲಿಸತಕ್ಕದ್ದು. ಈ ಬಗ್ಗೆ ತನ್ನ ವಿಶೇಷ ಶಿಫಾರಸ್ಸಿನೊಂದಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗೆ ಒಂದು ವರದಿಯನ್ನು ಸಲ್ಲಿಸಬೇಕು. ಅವಿವಾಹಿತೆಯ ಅನಕ್ಷರಸ್ಥರಾಗಿದ್ದ ಸಂದರ್ಭದಲ್ಲಿ ಮಾತ್ರ ಆಕೆಯ ಆಶ್ರಯದಾತರನ್ನು ಅಥವಾ ಇತರೆ ವ್ಯಕ್ತಿಗಳನ್ನು ವಿಚಾರಿಸಿ, ಸಂದರ್ಭಾನುಸಾರವಾಗಿ ಆಕೆಯ ಹೆಬ್ಬೆಟ್ಟಿನ ಗುರುತನ್ನು ಪಡೆಯಬಹುದಾಗಿದೆ.

a) ಅವಿವಾಹಿತೆಯ ವಯಸ್ಸಿನ ಹೇಳಿಕೆಯು ದಾಖಲೆಗಳು ಅಥವಾ ವಿಚಾರಣಾ ವರದಿಗಳ ಮೂಲಕ ಸಮರ್ಥನೆಯಾಗದಿದ್ದ ಸಂದರ್ಭಗಳಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಖುದ್ದಾಗಿ ಸಂದರ್ಶನ ನಡೆಸಿದ ಮೇಲೆ ಆಕೆಯ ವಯಸ್ಸಿನ ನಿಖರತೆಯ ಬಗ್ಗೆ ಸಂದೇಹ ಬಂದರೆ ಸಮೀಪದ ಸರ್ಕಾರಿ ಆಸ್ಪತ್ರೆಯ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯ ಅಭಿಪ್ರಾಯವನ್ನು ಪಡೆದುಕೊಂಡ ನಂತರ ವಯಸ್ಸಿನ ಬಗ್ಗೆ ತಮ್ಮ ನಿರ್ಣಯಕ್ಕೆ ಬರಬಹುದು.

b) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮಂಜೂರಾತಿ ಸಲುವಾಗಿ ಅರ್ಜಿಗಳಿಗೆ ಶಿಫಾರಸ್ಸು ಮಾಡುವ ಮೊದಲು ಅವರ ಅಧೀನ ಅಧಿಕಾರಿಯು ತನಿಖೆ ನಡೆಸಿದ ಕಾಲದಲ್ಲಿ ಬಂದ ಎಲ್ಲಾ ಅರ್ಜಿಗಳನ್ನು ಪರೀಕ್ಷಿಸಬೇಕು.

8. ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರು ಯೋಜನೆಯಡಿ ಮಂಜೂರು ಮಾಡಿದ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿ ಕಛೇರಿಗಳಿಗೆ ಹಾಗೂ ನಗರ ಪ್ರದೇಶಗಳಲ್ಲಿ ಎಲ್ಲಾ ವಾರ್ಡ್‌ಗಳ ಕಛೇರಿಯಲ್ಲಿ/ನಗರಪಾಲಿಕಾ ಕಛೇರಿಗಳಲ್ಲಿ ಪ್ರಕಟಿಸತಕ್ಕದ್ದು. ಮುಂದುವರೆದು, ಗ್ರಾಮ ಸಭೆಗಳಲ್ಲಿ ಮಂಜೂರಾತಿಯ ಪಟ್ಟಿಯನ್ನು ಅನುಮೋದನೆಗೆ ಮಂಡಿಸತಕ್ಕದ್ದು. ಪಟ್ಟಣ / ನಗರ ಪ್ರದೇಶಗಳಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ/ ಮುಖ್ಯಾಧಿಕಾರಿಗಳು, ಪುರಸಭೆ ಇವರು ನಿರ್ಣಯಿಸತಕ್ಕದ್ದು.

9. ಈ ಯೋಜನೆಯು ಸೌಲಭ್ಯದಾರರಿಗೆ ನೀಡುವ ಸೌಲಭ್ಯ ಗರಿಷ್ಠ ಮೂರು ವರ್ಷಕ್ಕೆ ಮಾತ್ರ ಸೀಮಿತವಾಗಿರಬೇಕು.

10. ಅವಿವಾಹಿತೆ ಮಾಸಾಶನ ಮಂಜೂರು ಮಾಡುವ ಆದೇಶಗಳನ್ನು ನಮೂನೆ-4 ರಂತೆ ಪ್ರತಿ ತಿಂಗಳು 10ನೇ ದಿನಾಂಕದೊಳಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಗೆ ಸಲ್ಲಿಸತಕ್ಕದ್ದು, ಉಪ ನಿರ್ದೇಶಕರು, ತಾಲ್ಲೂಕುವಾರು ಕ್ರೋಢೀಕರಿಸಿದ ಮಾಹಿತಿಯನ್ನು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸಲ್ಲಿಸತಕ್ಕದ್ದು ಹಾಗೂ ಅವಿವಾಹಿತೆ ಮಾಸಾಶನ ಸಂದಾಯ ಆದೇಶಗಳ ವಹಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿ ನಮೂನೆ-4 ಎ ರ ಪ್ರಕಾರ ನಿರ್ವಹಿಸತಕ್ಕದ್ದು.

11. ಅರ್ಜಿಗಳನ್ನು ತಿರಸ್ಕರಿಸಿದ ವಿಷಯ ಹಾಗೂ ಕಾರಣಗಳನ್ನು ತಿರಸ್ಕೃತ ಆದೇಶಗಳನ್ನು ಹೊರಡಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ತಿಳಿಸಬೇಕು.

12. ಅವಿವಾಹಿತೆ ಮಾಸಾಶನದ ಅರ್ಜಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಠ ಒಂದು ತಿಂಗಳೊಳಗಾಗಿ ವಿಲೇವಾರಿ ಮಾಡತಕ್ಕದ್ದು.

13. ಈ ಯೋಜನೆ ಮೇರೆಗೆ ಮಂಜೂರಾದ ಮಾಸಾಶನವು ಯಾವುದೇ ವ್ಯಕ್ತಿಯ ಯಾವುದೇ ಘೋಷಣೆಯ ಆಧಾರದ ಮೇಲೆ ಅವಿವಾಹಿತೆ ಮಾಸಾಶನ ಪಡೆದಿದ್ದು, ಅನಂತರ ಅದು ಸುಳ್ಳು ಎಂದು ಕಂಡಬಂದಲ್ಲಿ ಅವರು ಪಡೆದ ವೇತನವನ್ನು ವಸೂಲು ಮಾಡುವ ಅಧಿಕಾರವನ್ನು ಸರ್ಕಾರವು ಕಾದಿರಿಸಿಕೊಂಡಿವೆ.

14 (ಎ) ಯಾರೇ ಅರ್ಜಿದಾರರು ಅವಿವಾಹಿತೆ ಮಾಸಾಶನ ನೀಡಿಕೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಆದಾಯ ಮತ್ತು ಇತರೆ ವಿವರಗಳ ಬಗ್ಗೆ ಮೋಸ ಹಾಗೂ ಅಪ್ರಮಾಣಿಕ ಉದ್ದೇಶದಿಂದ ಮಂಜೂರು ಮಾಡುವ ನೌಕರರಿಗೆ ತಪ್ಪು ಮಾಹಿತಿ ನೀಡಿದಲ್ಲಿ ಮಾಸಾಶನವೇ ಮೋಸದ ಅಪರಾಧವೆಂದು ಆಕೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬಹುದು.

(ಬಿ) ಅವಿವಾಹಿತೆ ಮಾಸಾಶನ ಪಡೆದ ವ್ಯಕ್ತಿಗಳಿಂದ ದಾವೆ ಹೂಡುವುದರಿಂದಲೂ ವಸೂಲು ಮಾಡಬಹುದು. ಆದಾಗ್ಯೂ ದಾವೆ ಹೂಡುವ ಮೊದಲು ಮಾಸಾಶನ ಪಡೆದ ವ್ಯಕ್ತಿಗಳ ವಿರುದ್ಧ ಡಿಕ್ರಿ ತೀರ್ಮಾನವಾಗದೆ, ಡಿಕ್ರಿ ಮೊತ್ತವನ್ನಾದರೂ ಪಡೆಯಲು ಯಾವುದಾದರೂ ಆಸ್ತಿ ಇತರೆ ಮೂಲ ಇದೆಯೇ ಎಂಬ ಬಗ್ಗೆ ಪರಿಶೀಲಿಸಲಾಗುವುದು.

(ಸಿ) ನಿಯಮಗಳಲ್ಲಿ ಸಂಬಂಧಿಸಿದಂತೆ ಯಾವುದೇ ಸೂಕ್ತ ವಿಚಾರಣೆ ನಡೆಸದೇ ಮಾಸಾಶನದ ಬಗ್ಗೆ ಶಿಫಾರಸ್ಸು ಮಾಡಿದಂತಹ ನೌಕರರ ವಿರುದ್ಧ ಸಹ ಆಡಳಿತ ಇಲಾಖೆಯು ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುವುದು.

15. ಅವಿವಾಹಿತೆ ಮಾಸಾಶನವು ತಪ್ಪು ತಿಳುವಳಿಕೆಗಳ ಆಧಾರದ ಮೇಲೆ ಅಥವಾ ಸುಳ್ಳು ಮಾಹಿತಿಯ ಮೇಲೆ ಮಂಜೂರು ಮಾಡಿದರೆ ಅಥವಾ ಅವಿವಾಹಿತೆ ಮಾಸಾಶನವನ್ನು ಪಡೆಯುವಂತಹ ಪರಿಸ್ಥಿತಿಯು ಈಗ ಇಲ್ಲವೆಂದು ತಿಳಿದುಬಂದರೆ ಈ ಸಂದರ್ಭಗಳಲ್ಲಿ ಶಿಶು

ಅಭಿವೃದ್ಧಿ ಯೋಜನಾಧಿಕಾರಿಗಳು ಅವಿವಾಹಿತ ಮಾಸಾಶನವನ್ನು ನಿಲ್ಲಿಸುವ ಪ್ರಸ್ತಾಪ ಮಾಡಬಹುದು. ಅವಿವಾಹಿತೆ ಮಾಸಾಶನದಾರರು ನೈತಿಕ ಪತನವನ್ನೊಳಗೊಂಡಂಥ ಅಪರಾಧವನ್ನು ಎಸಗಿದಂತಹ ಸಂದರ್ಭದಲ್ಲಿ ಸಹ ಮಾಸಾಶನವನ್ನು ನಿಲ್ಲಿಸಲಾಗುವುದು.

16. ಪ್ರತಿಯೊಂದು ಗ್ರಾಮದ ಅಂಗನವಾಡಿ ಕಾರ್ಯಕರ್ತೆಯು ಆ ಗ್ರಾಮದಲ್ಲಿ ಅವಿವಾಹಿತೆ ಮಾಸಾಶನ ಪಡೆಯುವ ಮಹಿಳೆಯರ ಬಗ್ಗೆ ಒಂದು ರಿಜಿಸ್ಟರ್ ಅನ್ನು ಭಾವಚಿತ್ರದೊಂದಿಗೆ ಇಟ್ಟಿರತಕ್ಕದ್ದು (ನಮೂನೆ-2) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿ ಕ್ರೋಢೀಕೃತ ಮಾಹಿತಿಯ ರಿಜಿಸ್ಟರನ್ನು ಕ್ರಮವಾಗಿ ನಿರ್ವಹಿಸತಕ್ಕದ್ದು. (ನಮೂನೆ-2) ಗ್ರಾಮ ಲೆಕ್ಕಿಗರ ಸಹಾಯದಿಂದ ಫಲಾನುಭವಿಗಳನ್ನು ಗುರುತಿಸುವುದು ಮಾಸಾಶನದಾರಳ ಮರಣದ ಅಥವಾ ಆಕೆಯ ವಿಳಾಸ ಬದಲಾವಣೆ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ತಿಳಿಸುವುದು ಆಕೆಯ ಆದ್ಯ ಕರ್ತವ್ಯವಾಗಿರುತ್ತದೆ (ನಮೂನೆ-5).

17. ಪ್ರತಿಯೊಬ್ಬ ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿ ತಮ್ಮ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿರುವ ಅವಿವಾಹಿತೆ ಮಾಸಾಶನದಾರರು ಜೀವಂತವಿದ್ದಾರೆಯೇ ಹಾಗೂ ಅವಿವಾಹಿತರಾಗಿಯೇ ಮುಂದುವರೆದಿದ್ದಾರೆಯೇ ಎಂಬ ಬಗ್ಗೆ ಆರು ತಿಂಗಳಿಗೊಮ್ಮೆ ಪರಿಶೀಲನಾ ಕಾರ್ಯವನ್ನು ಸಂಬಂಧಪಟ್ಟ ಗ್ರಾಮ ಲೆಕ್ಕಿಗರ ಸಹಾಯದಿಂದ ಕೈಗೊಳ್ಳಬೇಕು. ಅಂತಹ ಪರಿಶೀಲನಾ ಕಾರ್ಯದ ಫಲಿತಾಂಶಗಳನ್ನು ಒಳಗೊಂಡ ವರದಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕ್ರೋಢೀಕರಿಸಿದ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು. ಈ ವರದಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಎಚ್ಚರಿಕೆಯಿಂದ ಪುನಃ ಪರಿಶೀಲಿಸಬೇಕು ಹಾಗೂ ಅವರಿಗೆ ಅವಿವಾಹಿತೆ ಮಾಸಾಶನ ನೀಡುವ ಪರಿಸ್ಥಿತಿಯು ಈಗ ಇಲ್ಲ ಅಥವಾ ಮಾಸಾಶನದಾರಳು ಅವಿವಾಹಿತರಾಗಿಯೇ ಉಳಿದಿಲ್ಲವೆಂದು ತನಗೆ ಕಂಡು ಬಂದಲ್ಲಿ, ಫಲಾನುಭವಿ ಮರಣ ಹೊಂದಿದ ಪಕ್ಷದಲ್ಲಿ, ಪ್ರತಿಯೊಂದು ಪ್ರಕರಣದಲ್ಲಿಯೂ ಅವರು ಮಂಜೂರಾತಿ ಆದೇಶವನ್ನು ರದ್ದು ಮಾಡಬೇಕು ಹಾಗೂ ರದ್ದಾದ ಆದೇಶವನ್ನು ಮಾಸಾಶನದಾರಳಿಗೆ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ/ ಮೇಲ್ವಿಚಾರಕಿಯರಿಗೆ ರವಾನಿಸುವುದು. ಅಂತಹ ಆದೇಶಗಳನ್ನು ಪರಿಶೀಲನೆ ನಡೆಸಿದ ಅಂತ್ಯದಲ್ಲೇ ಹೊರಡಿಸತಕ್ಕದ್ದು. ರದ್ದಾದ ಆದೇಶಗಳನ್ನು ಸ್ವೀಕರಿಸಿದ ತರುವಾಯ ವಿತರಣಾಧಿಕಾರಿಯು ಅಂತಹ ವ್ಯಕ್ತಿಗಳಿಗೆ ಮುಂದಿನ ಹಣ ಸಂದಾಯ ಮಾಡುವುದನ್ನು ಆ ತಿಂಗಳಿನಿಂದಲೇ ನಿಲ್ಲಿಸತಕ್ಕದ್ದು.

18. ಶಿಶು ಅಭಿವೃದ್ಧಿ ಯೋಜನಾಧಿಕಾರಿಯು ಅವಿವಾಹಿತೆ ಮಾಸಾಶನವನ್ನು ಸಂದಾಯ ಮಾಡುವ ಅಧಿಕಾರಿಯಾಗಿರುತ್ತಾರೆ. ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮೇಲುಸ್ತುವಾರಿ ಅಧಿಕಾರಿಯಾಗಿರುತ್ತಾರೆ.

19. ವಿತರಣಾಧಿಕಾರಿಯು ಆದೇಶ ಹೊರಡಿಸಿದ ದಿನಾಂಕದ ಮುಂದಿನ ತಿಂಗಳಿನಿಂದ ಅವಿವಾಹಿತೆ ಮಾಸಾಶನವನ್ನು ಸಂದಾಯ ಮಾಡತಕ್ಕದ್ದು.

20. ಪ್ರತಿ ತಿಂಗಳು ಅವಿವಾಹಿತೆ ಮಾಸಾಶನವನ್ನು ಬ್ಯಾಂಕ್ ಖಾತೆಗೆ (ಕಮೀಷನ್ ಮುರಿದು ಕೊಳ್ಳದೇ) ಮಾಸಾಶನದ ಮೊಬಲಗನ್ನು ಸಂದಾಯ ಮಾಡತಕ್ಕದ್ದು (ನಮೂನೆ-6)

21. ಹಣ ಸಂದಾಯವಾದ ಪ್ರತಿಯೊಂದು ತಿಂಗಳ ಬ್ಯಾಂಕ್ ಪಟ್ಟಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಿಸತಕ್ಕದ್ದು ಹಾಗೂ ಪ್ರತಿಯನ್ನು ಉಪ ನಿರ್ದೇಶಕರ ಕಛೇರಿಯಲ್ಲಿ ಪರಿಶೀಲಿಸತಕ್ಕದ್ದು.

22. ಪ್ರತಿಯೊಬ್ಬ ಅವಿವಾಹಿತೆ ಮಾಸಾಶನದಾರಳಿಗೆ ಆಕೆಯ ಗುರುತುಗಳನ್ನು/ ಪಾಸ್ ಪೋರ್ಟ್ ಗಾತ್ರದ ಭಾವಚಿತ್ರ/ ಆಕೆಗೆ ಸಂದಾಯ ಮಾಡಬಹುದಾದ ಮಾಸಾಶನ/ ಮಾಸಾಶನದ ಮೊಬಲಗು ಹಾಗೂ ಮಾಸಾಶನದ ಷರತ್ತುಗಳ ಬಗೆಗಿನ ಎಲ್ಲಾ ಮಾಹಿತಿಗಳನ್ನುಳ್ಳ ಒಂದು ಗುರುತು ಚೀಟಿಯನ್ನು ಒದಗಿಸುವುದು (ನಮೂನೆ-7)

23. ಮಾಸಾಶನದಾರಳು ಸಂಬಂಧಿಸಿದವರಿಗೆ ವಿಚಾರಣಾ ವೇಳೆಯಲ್ಲಿ ಗುರುತಿನ ಚೀಟಿಯನ್ನು ಒದಗಿಸಬೇಕು. ಈ ಗುರುತಿನ ಚೀಟಿಯು ಕಳೆದು ಹೋದರೆ ಮಾಸಾಶನದಾರಳು ಹತೋಟಿ ಮೀರಿದ ಕಾರಣಗಳಿಂದ ಅದು ಕಳೆದಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಮನವರಿಕೆಯಾಗುವವರೆಗೂ ಅವಿವಾಹಿತೆ ಮಾಸಾಶನವನ್ನು ನಿಲ್ಲಿಸಬಾರದು.

24. ಅವಿವಾಹಿತೆ ಮಾಸಾಶನದಾರಳು ರಾಜ್ಯದೊಳಗಿನ ಬೇರೆ ಜಿಲ್ಲೆಗೆ ಅಥವಾ ಅದೇ ಜಿಲ್ಲೆಯಲ್ಲಿರುವ ಬೇರೆ ತಾಲ್ಲೂಕಿಗೆ ವಾಸಸ್ಥಳ ಬದಲಾಯಿಸಿದಲ್ಲಿ ಸಂಬಂಧಪಟ್ಟ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ವಾಸಸ್ಥಳ ಬದಲಾವಣೆಗೊಂಡಿರುವ ಬಗ್ಗೆ ಖಾತರಿ ಪಡಿಸಿಕೊಂಡು ಕಛೇರಿಯಲ್ಲಿರುವ ರಿಜಿಸ್ಟರ್‌ನಲ್ಲಿ ಅವಶ್ಯಕ ತಿದ್ದುಪಡಿ ಮಾಡಿಕೊಳ್ಳುವುದು. ವಾಸಸ್ಥಳ ಬದಲಾವಣೆಯಾದ ವಿಳಾಸ ಬೇರೆ ತಾಲ್ಲೂಕಿನದ್ದಾದರೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸಂಬಂಧಿಸಿ ಇನ್ನೊಂದು ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಹಾಗೂ ಜಿಲ್ಲಾ ಉಪ ನಿರ್ದೇಶಕರಿಗೆ ವಿಳಾಸ ಬದಲಾವಣೆಯ ಕುರಿತು ವಿಷಯವನ್ನು ತಿಳಿಸಬೇಕು. (ಇದೇ ಕ್ರಮವನ್ನು ರಾಜ್ಯದ ಜಿಲ್ಲೆಯಿಂದ ಜಿಲ್ಲೆಗೆ ಅನುಸರಿಸತಕ್ಕದ್ದು).

25. ಅವಿವಾಹಿತೆ ಮಾಸಾಶನದಾರಳು ರಾಜ್ಯದಿಂದ ವಲಸೆ ಹೋದಲ್ಲಿ ಆ ಕೂಡಲೇ ಆಕೆಯು ಅವಿವಾಹಿತೆ ಮಾಸಾಶನ ಸಂದಾಯವನ್ನು ನಿಲ್ಲಿಸತಕ್ಕದ್ದು.

26. ಲಭ್ಯವಿರುವ ನಿಧಿಗಳ ಆಧಾರದ ಮೇಲೆ ಸರ್ಕಾರವು ಯಾವುದೇ ವೇಳೆಯಲ್ಲಿ ಅವಿವಾಹಿತೆ ಮಾಸಾಶನವನ್ನು ರದ್ದುಗೊಳಿಸಬಹುದು ಅಥವಾ ತಡೆ ಹಿಡಿಯಬಹುದು ಅಥವಾ ನಿರ್ಬಂಧಿಸಬಹುದು.

27. ಅವಿವಾಹಿತೆ ಮಾಸಾಶನವನ್ನು ವಿತರಿಸುವ ಕ್ರಮಗಳು :-

a) ಸರ್ಕಾರದ ಲೆಕ್ಕ ಶೀರ್ಷಿಕೆ . . . . ಯಡಿ ನಿಗದಿ ಪಡಿಸಿರುವ ವಾರ್ಷಿಕ ಅನುದಾನವನ್ನು ತ್ರೈಮಾಸಿಕಕ್ಕೊಮ್ಮೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತದೆ.

b) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಅನುದಾನವನ್ನು ಜಿಲ್ಲಾ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರುಗಳಿಗೆ ಪ್ರತಿ ತ್ರೈಮಾಸಿಕಕ್ಕೊಮ್ಮೆ ಬಿಡುಗಡೆ ಮಾಡತಕ್ಕದ್ದು.

c) ಜಿಲ್ಲಾ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ತಮ್ಮ ಅಧೀನಕ್ಕೊಳಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಬೇಡಿಕೆಗೆ ಅನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡತಕ್ಕದ್ದು.

d) ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರತಿ ಫಲಾನುಭವಿಗಳಿಗೆ ಮಾಹೆಯಾನ ರೂ. 1000/– ಗಳಂತೆ ಮಾಸಾಶನವನ್ನು ನೇರವಾಗಿ ಖಜಾನೆಯಿಂದ ಸಹಾಯಧನ ಬಿಲ್ಲಿನಲ್ಲಿ ಹಣ ಸೆಳೆದು ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವ ಅಧಿಕಾರ ನೀಡಲಾಗಿದೆ. ಪ್ರತಿ ಮಾಹೆಯಲ್ಲಿ ಮಂಜೂರು ಮಾಡಿದ ಫಲಾನುಭವಿಗಳ ಸಂಖ್ಯೆ ಹಾಗೂ ಅನುದಾನದ ಖರ್ಚಿನ ವಿವರವನ್ನು ಹಾಗೂ ಅನುದಾನದ ಬೇಡಿಕೆಯನ್ನು ಪ್ರಧಾನ ಕಛೇರಿಗೆ ನೀಡಲು ಕ್ರಮವಹಿಸತಕ್ಕದ್ದು.

(ಎಸ್.ಎನ್. ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ–1

ಅವಿವಾಹಿತೆ ಮಾಸಾಶನಕ್ಕಾಗಿ ಅರ್ಜಿ

ಜಿಲ್ಲೆ . . . .
ತಾಲ್ಲೂಕು . . . .
ಗ್ರಾಮ . . . .
ಪಟ್ಟಣ . . . .

1.	ಅರ್ಜಿದಾರರ ಹೆಸರು	
2.	ತಂದೆಯ ಹೆಸರು	
3.	ಪೂರ್ಣ ಅಂಚೆ ವಿಳಾಸ (ಅ) ತಾತ್ಕಾಲಿಕ ವಿಳಾಸ (ಆ) ಖಾಯಂ ವಿಳಾಸ	
4.	ವಯಸ್ಸು (ಅರ್ಜಿ ಸಲ್ಲಿಸಿದ ದಿನಾಂಕದಿಂದ ವಯಸ್ಸು) (ವಯಸ್ಸನ್ನು ದೃಢೀಕರಿಸಲು ದಸ್ತಾವೇಜುಗಳ ವಿವರಗಳನ್ನು ಲಗತ್ತಿಸಿದೆ/ಲಗತ್ತಿಸಲಾಗಿಲ್ಲ. ಲಗತ್ತಿಸಿದ್ದರೆ ಅವು ಮೂಲ ದಾಖಲೆಗಳೆ ಅಥವಾ ಪ್ರತಿಗಳೆ)	
5.	ಗುರುತು ಚಿಹ್ನೆಗಳು :– 1. 2.	
6.	ಅರ್ಜಿದಾರರ ಸಂಬಂಧಿಕರು ಮತ್ತು ಅವರ ವಯಸ್ಸಿನ ವಿವರಗಳು :– (ಅ) (ಆ) (ಇ) (ಉ) (ಊ)	
7.	ಅರ್ಜಿದಾರರ ಮತ್ತು ಕುಟುಂಬದ ವಾರ್ಷಿಕ ಆದಾಯ	
8.	ಅರ್ಜಿದಾರರು ವಿಧವಾ ವೇತನ/ಅಂಗವಿಕಲ ವೇತನ/ ವಿಮುಕ್ತೆ ವೇತನ/ ಬೇರೆ ಯಾವುದೇ ರೀತಿಯ ವೇತನವನ್ನು ಸಾರ್ವಜನಿಕ ಅಥವಾ ಖಾಸಗಿ ಮೂಲಗಳಿಂದ ಪಡೆಯುತ್ತಿದ್ದಾರೆಯೇ ಪಡೆಯುತ್ತಿದ್ದರೆ, ವಿವರಗಳನ್ನು ನೀಡುವುದು.	
9.	ಶೈಕ್ಷಣಿಕ ಸ್ಥಾನಮಾನ ಅ) ಅನಕ್ಷರಸ್ಥ ಆ) ಐದನೇ ತರಗತಿ ತೇರ್ಗಡೆ ಇ) ಎಂಟನೇ ತರಗತಿ ತೇರ್ಗಡೆ (ಈ) ಹತ್ತನೇ ತರಗತಿ ತೇರ್ಗಡೆ (ಉ) ಹನ್ನರಡನೇ ತರಗತಿ ತೇರ್ಗಡೆ (ಊ) ಪದವಿ ಮತ್ತು ಅದಕ್ಕಿಂತ ಹೆಚ್ಚು	

10.	ಕುಟುಂಬದ ಸರಾಸರಿ ಮಾಸಿಕ ಆದಾಯ ರೂಪಾಯಿಗಳಲ್ಲಿ ಅ) ರೂ. 250 ಕ್ಕಿಂತ ಕಡಿಮೆ ಆ) ರೂ. 250–499 ಇ) ರೂ. 500–1499 ಈ) ರೂ. 1500–2500 ಉ) ರೂ. 2500 ಕ್ಕಿಂತ ಹೆಚ್ಚು	
11.	ಇಂದಿರಾ ಆವಾಸ ಯೋಜನೆ ಅಥವಾ ಇನ್ಯಾವುದೇ ಯೋಜನೆಯಡಿ ಮನೆ ಕಟ್ಟಲು ಸ್ವಂತ ಜಾಗ (ನಿವೇಶನ) ಹೊಂದಿದ್ದಾರೆಯೇ	ಹೌದು/ಇಲ್ಲ
12.	ಧರ್ಮ	
13.	ಜಾತಿ/ಉಪಜಾತಿ	
14.	ಮತದಾರರ ಗುರುತಿನ ಚೀಟಿ ಸಂಖ್ಯೆ	
15.	ಪಡಿತರ ಚೀಟಿಯ ಸಂಖ್ಯೆ	
16.	ಕುಟುಂಬದಲ್ಲಿ ಯಾರಾದರು ಸದಸ್ಯರು ಈಗಾಗಲೇ ಸಾಮಾಜಿಕ ಭದ್ರತೆ ಯೋಜನೆಯಡಿಯಲ್ಲಿ ವೇತನ ಪಡೆಯುತ್ತಿದ್ದರೆ ಅ) ಸದಸ್ಯರ ಹೆಸರು ಆ) ಸಂಬಂಧ ಇ) ವೇತನದ ಹೆಸರು	
17.	ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸುವ ಮಾನದಂಡ (0 ಯಿಂದ 4 ರವರೆಗೆ ಅಂಕಗಳನ್ನು ನೀಡುವುದು)	
	ಅ) ಜಮೀನು ಗಾತ್ರ 1) ಇಲ್ಲ 2) 2.5 ಎಕರೆಗಿಂತ ಕಡಿಮೆ ಖುಷ್ಕಿ ಜಮೀನು (ಅಥವಾ 1.25 ಎಕರೆಗಿಂತ ಕಡಿಮೆಯಿರುವ ತರಿ ಜಮೀನು) 3) 2.5 ಎಕರೆಗಿಂತ 5 ಎಕರೆವರೆಗಿನ ಖುಷ್ಕಿ ಜಮೀನು (ಅಥವಾ 1.25–2.5 ಎಕರೆವರೆಗಿನ ತರಿ ಜಮೀನು) 4) 5 ಎಕರೆಗಿಂತ 12.5 ಎಕರೆವರೆಗಿನ ಖುಷ್ಕಿ ಜಮೀನು (ಅಥವಾ 2.5–6.25 ಎಕರೆವರೆಗಿನ ತರಿ ಜಮೀನು) 5) 12.5 ಎಕರೆಗಿಂತ ಜಾಸ್ತಿಯಿರುವ ಖುಷ್ಕಿ ಜಮೀನು (ಅಥವಾ 6.25 ಎಕರೆವರೆಗಿನ ತರಿ ಜಮೀನು)	
18.	ಮನೆಯ ಮಾದರಿ 1) ಮನೆ ಇಲ್ಲದವರು 2) ಕಚ್ಚಾ ಮನೆ 3) ಅರೆ ಪಕ್ಕ 4) ಪಕ್ಕ 5) ಆರ್.ಸಿ.ಸಿ. ಕಟ್ಟಡ	
19.	ಆಹಾರ ಭದ್ರತೆ 1) ವರ್ಷದ ಬಹುತೇಕ ದಿನಗಳಲ್ಲಿ ಒಂದಕ್ಕಿಂತ ಕಡಿಮೆ ಪೂರ್ಣ ಊಟ 2) ಸಾಮಾನ್ಯವಾಗಿ ಒಂದು ದಿನಕ್ಕೆ ಒಂದು ಊಟ ಆದರೆ ಕೆಲವೊಮ್ಮೆ ಒಂದಕ್ಕಿಂತ ಕಡಿಮೆ ಪೂರ್ಣ ಊಟ 3) ವರ್ಷಪೂರ್ತಿ ಪ್ರತಿದಿನ ಒಂದು ಪೂರ್ಣ ಊಟ 4) ಪ್ರತಿದಿನ ಎರಡು ಪೂರ್ಣ ಊಟ ಕೆಲವೊಮ್ಮೆ ಕಡಿಮೆ 5) ವರ್ಷಪೂರ್ತಿ ಸಾಕಷ್ಟು ಆಹಾರ	
20.	ನೈರ್ಮಲ್ಯ 1) ಬಯಲು ಶೌಚ 2) ಅಸಮರ್ಪಕ ನೀರಿರುವ ಸಾಮೂಹಿಕ ಶೌಚಾಲಯ 3) ಸಮರ್ಪಕ ನೀರಿರುವ ಸಾಮೂಹಿಕ ಶೌಚಾಲಯ 4) ಸಮರ್ಪಕ ನೀರು ಮತ್ತು ನಿಯತ ಜಾಡಮಾಲಿ ಇರುವ ಸ್ವಚ್ಛ ಸಾಮೂಹಿಕ ಶೌಚಾಲಯ 5) ಖಾಸಗಿ ಶೌಚಾಲಯ	
21.	ಗೃಹೋಪಯೋಗಿ ವಸ್ತುಗಳ ಮಾಲೀಕತ್ವ (**ವಿದ್ಯುತ್–ಟೀವಿ**, ಫ್ಯಾನ್, ರೇಡಿಯೋ, ಅಡಿಗೆ **ಸಾಮಾಗ್ರಿಗಳು**– ಪ್ರಷರ್ ಕುಕ್ಕರ್/ತರಹ) 1) ಇಲ್ಲ	

	2) ಒಂದು ಮಾತ್ರ 3) ಎರಡು ಮಾತ್ರ 4) ಮೂರು ಅಥವಾ ಎಲ್ಲಾ ಐಟಂ 5) ಎಲ್ಲಾ ಐಟಂ ಮತ್ತು / ಅಥವಾ ಕೆಳಗಿನ ಒಂದರ ಮಾಲಿಕತ್ವ ದೂರವಾಣಿ, ಗಣಕಯಂತ್ರ, ಬಣ್ಣದ ಟೀವಿ, ಫ್ರಿಡ್ಜ್, ದ್ವಿ ಚಕ್ರ ವಾಹನ, ವಿದ್ಯುತ್ ಚಾಲಿತ ಅಡಿಗೆ ಸಾಮಾಗ್ರಿ, ಟ್ರ್ಯಾಕ್ಟರ್, ದುಬಾರಿ ಪೀಠೋಪಕರಣ, ನಾಲ್ಕು ಚಕ್ರಗಳ ವಾಹನ	
22.	ಕುಟುಂಬದಲ್ಲಿ ಹೆಚ್ಚು ವಿದ್ಯಾರ್ಹತೆ ಹೊಂದಿರುವ ವ್ಯಕ್ತಿಗಳ ಸಂಖ್ಯೆ 1) ಅನಕ್ಷರಸ್ಥ 2) ಪ್ರಾಥಮಿಕದವರೆಗೆ (5ನೇ ತರಗತಿ) 3) ಪ್ರೌಢ ಶಿಕ್ಷಣದವರೆಗೆ (ಮತ್ತು 10ನೇ ತರಗತಿ ತೇರ್ಗಡೆ) 4) ಪದವಿ/ವೃತ್ತಿಪರ ಡಿಪ್ಲೊಮ 5) ಸ್ನಾತಕೋತ್ತರ ಪದವಿ/ವೃತ್ತಪರ ಪದವಿ	
23.	ಕುಟುಂಬದ ದುಡಿಮೆಯ ಸ್ಥಿತಿಗತಿ 1) ಜೀತ ಕಾರ್ಮಿಕ 2) ಮಹಿಳೆ ಮತ್ತು ಮಕ್ಕಳ ದುಡಿಮೆ 3) ವಯಸ್ಕ ಮಹಿಳೆ ಮಾತ್ರ ಮತ್ತು ಬಾಲ ಕಾರ್ಮಿಕತೆ ಇಲ್ಲದಿರುವುದು 4) ವಯಸ್ಕ ಪುರುಷರು ಮಾತ್ರ 5) ಇತರೆ	
24.	ಜೀವನೋಪಾಯದ ಮಾರ್ಗ 1) ಬಿಡಿಗೂಲಿ 2) ಜೀವನ ನಿರ್ವಾಹಣಾ ಬೇಸಾಯ 3) ಕುಶಲಕರ್ಮಿ 4) ಸಂಬಳ/ವೇತನ 5) ಇತರೆ	
25.	ಸಾಲದ ಹೊರೆ 1) ದಿನೋಪಯೋಗಿ ಉದ್ದೇಶಗಳಿಗಾಗಿ ಅನೌಪಚಾರಿಕ ಮೂಲಗಳಿಂದ 2) ಉತ್ಪಾದನ ಉದ್ದೇಶಕ್ಕಾಗಿ ಅನೌಪಚಾರಿಕ ಮೂಲಗಳಿಂದ 3) ಇತರೆ ಉದ್ದೇಶಕ್ಕಾಗಿ ಅನೌಪಚಾರಿಕ ಮೂಲಗಳಿಂದ 4) ಸಂಸ್ಥೆಗಳಿಂದ ಮಾತ್ರ ಸಾಲ ಪಡೆಯುವುದು 5) ಸಾಲ ಇಲ್ಲದಿರುವುದು	
26.	ಕುಟುಂಬದಿಂದ ವಲಸೆ ಹೋಗಿರುವ ಕಾರಣ 1) ಬಿಡಿ ಕೆಲಸಕ್ಕಾಗಿ ಬೇರೆ ಊರಿಗೆ ಹೋಗಿರುವುದು 2) ಋತು ಕಾಲಿಕ ಉದ್ಯೋಗಕ್ಕಾಗಿ ಬೇರೆಡೆಗೆ ಹೋಗಿರುವುದು 3) ಜೀವನ ನಿರ್ವಹಣೆಯ ಇತರೆ ಕೆಲಸಕ್ಕಾಗಿ ಬೇರೆಡೆಗೆ ಹೋಗಿರುವುದು 4) ವಲಸೆ ಹೋಗಿಲ್ಲದಿರುವುದು 5) ಇತರೆ ಉದ್ದೇಶ	
27.	ಒಟ್ಟು ಅಂಕಗಳು	

ನಾನು ಒದಗಿಸಿರುವ ಎಲ್ಲಾ ವಿವರಗಳು ನನ್ನ ತಿಳುವಳಿಕೆಯ ಮಟ್ಟಿಗೆ ಸಮರ್ಪಕವಾಗಿವೆ. ನಾನು ಒದಗಿಸಿರುವ ಮಾಹಿತಿಯು ಯಾವುದೇ ಕಾಲದಲ್ಲಿ ಸುಳ್ಳೆಂದು ಕಂಡುಬಂದರೆ, ನಾನು ಪಡೆದ ಅವಿವಾಹಿತೆ ಮಾಸಾಶನವನ್ನು ಸರ್ಕಾರಕ್ಕೆ ನಾನು ಮರುಪಾವತಿ ಮಾಡುತ್ತೇನೆ.

ಸ್ಥಳ : . . . .

ದಿನಾಂಕ : . . . .

ಅರ್ಜಿದಾರರ ಸಹಿ
ಅಥವಾ ಎಡಗೈ ಹೆಬ್ಬೆಟ್ಟಿನ ಗುರುತು

(ಎಸ್.ಎನ್. ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ–1ಎ

ಸ್ವೀಕೃತಿ ನಮೂನೆ

. . . . ಜಿಲ್ಲೆಯ . . . . ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಅವಿವಾಹಿತೆ ಮಾಸಾಶನಕ್ಕಾಗಿ ಕುಮಾರಿ . . . . ಇವರಿಂದ . . . . ರಂದು ಅರ್ಜಿಯನ್ನು ಸ್ವೀಕರಿಸಲಾಗಿದೆ.

ಸ್ಥಳ : . . . .
ದಿನಾಂಕ : . . . .

ಸಹಿ : . . . .
ಹುದ್ದೆ : . . . .

(ಎಸ್.ಎನ್. ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ–2

ಅವಿವಾಹಿತೆ ಮಾಸಾಶನದಾರರ ಅರ್ಜಿ ರಿಜಿಸ್ಟರ್

ಭಾವಚಿತ್ರ

ತಾಲ್ಲೂಕು . . . .
ಜಿಲ್ಲೆ . . . .

ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು ಮತ್ತು ಅವರ ತಂದೆಯ/ಪೋಷಕರ ಹೆಸರು	ಪೂರ್ಣ ವಿಳಾಸ	ಅರ್ಜಿಯನ್ನು ವಿಚಾರಣೆಗೆ ಕಳುಹಿಸಿದ ದಿನಾಂಕ	ವಿಚಾರಣಾಧಿಕಾರಿಯ ವರದಿಯ ದಿನಾಂಕ	ಮಂಜೂರಾತಿ ನೀಡಿದ ದಿನಾಂಕ	ಶಿಫಾರಸ್ಸಿನ ಸಾರಾಂಶ	ಮಂಜೂರು ಪ್ರಾಧಿಕಾರದ ಆದೇಶ ಮತ್ತು ಉಲ್ಲೇಖಿತ ಸಂಖ್ಯೆ	ಮಾಸಾಶನ ಸಂದಾಯದ ಆದೇಶ ಸಂಖ್ಯೆ ಮತ್ತು ದಿನಾಂಕ	ಷರಾ
1	2	3	4	5	6	7	8	9	10

ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ–3

ವಿಚಾರಣಾಧಿಕಾರಿಯ ವರದಿ

ಅವಿವಾಹಿತೆ ಮಾಸಾಶನ ಯೋಜನೆಯಲ್ಲಿ ಅಗತ್ಯಪಡಿಸಿರುವಂತೆ ನಾನು ಅವಶ್ಯಕ ವಿಚಾರಣೆಗಳನ್ನು ನಡೆಸಿ ಈ ಕೆಳಕಂಡ ವರದಿಯನ್ನು ಸಲ್ಲಿಸುತ್ತಿದ್ದೇನೆ –

1.	ವಿಚಾರಣೆಯ ದಿನಾಂಕದಂದು ಅರ್ಜಿದಾರರ ವಯಸ್ಸು ಎಷ್ಟು ?	
2.	ಅರ್ಜಿದಾರರ ಒಟ್ಟು ವಾರ್ಷಿಕ ಆದಾಯವೆಷ್ಟು ? a) ಕೂಲಿ ರೂ. . . . . ತಿಂಗಳಿಗೆ b) ಕಟ್ಟಡದ ಬಾಡಿಗೆ ರೂ. . . . . ವಾರ್ಷಿಕ c) ಜಮೀನಿನಿಂದ ಆದಾಯ ರೂ. . . . . ವಾರ್ಷಿಕ d) ಠೇವಣಿಗಳ ಮೇಲೆ ಬಡ್ಡಿ ರೂ. . . . . ವಾರ್ಷಿಕ e) ಕುಟುಂಬ ನಿವೃತ್ತಿ ವೇತನ ರೂ. . . . . ವಾರ್ಷಿಕ f) ಯಾವುದೇ ಇತರೆ ಮೂಲಗಳಿಂದ ರೂ. . . . . . . ವಾರ್ಷಿಕ g) ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.	
3.	ಆಕೆ ಈ ಕೆಳಗಿನವುಗಳನ್ನು ಪಡೆಯುತ್ತಿದ್ದಾರೆಯೇ a) ವಿಧವಾ ವೇತನ b) ಅಂಗವಿಕಲರ ವೇತನ c) ದೇವದಾಸಿ ವೇತನ d) ವಿಮುಕ್ತೆ ಮಾಸಾಶನ e) ಪಿಪಿಎಫ್/ಎಲ್ಐ ಸಂಬಂಧಿಸಿದ ವೇತನ f) ಕುಟುಂಬ ವೇತನ g) ಹೊಂದಿರುವ ಜಮೀನು : ವಿಸ್ತೀರ್ಣ . . . . ಆದಾಯ ರೂ. . . . . h) ಮನೆ ಬಾಡಿಗೆ ರೂ.	
4.	ಆಕೆ ಕಳೆದ 10 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿದ್ದಾರೆಯೇ : ಆಕೆ ವಾಸಸ್ಥಳದ ಪ್ರಮಾಣ ಪತ್ರವನ್ನು ಲಗತ್ತಿಸಿದ್ದಾರೆಯೇ ?	
5.	ಅರ್ಜಿದಾರರು ಸಲ್ಲಿಸಿದ ಈ ಅರ್ಜಿ ಮೊದಲನೆಯ/ಎರಡನೇಯ/ ಮೂರನೆಯ ಅರ್ಜಿಯೇ ? ಹಿಂದಿನ ಅರ್ಜಿ ಬಗ್ಗೆ ಹೊರಡಿಸಿದ ಆದೇಶಗಳು ಹೀಗಿವೆ :–	
6.	ಆಕೆ ನೀಡಿರುವ ವಿಳಾಸದಲ್ಲಿ ವಾಸಿಸುತ್ತಿದ್ದಾರೆಯೇ ? ಅದು ಸರಿಯಾಗಿದೆಯೇ ? ಪಿನ್‌ಕೋಡ್ ಸಹಿತ ಪೂರ್ತಿ ಅಂಚೆ ವಿಳಾಸವನ್ನು ನೀಡುವುದು.	
7.	ಆಕೆ ನಾಲ್ಕು ಪಾಸ್‌ಪೋರ್ಟ್ ಸೈಜಿನ ಭಾವಚಿತ್ರಗಳನ್ನು ಲಗತ್ತಿಸಿದ್ದಾರೆಯೇ ?	
8.	ಸ್ಥಳೀಯ ವಿಚಾರಣೆ ಬಗ್ಗೆ ಸ್ಥಳೀಯ ಪಂಚಾಯ್ತಿ/ಮುನಿಸಿಪಾಲ್ ಸದಸ್ಯರು ಮತ್ತು ಅದರ ಕಾರ್ಯದರ್ಶಿಗಳು/ಸಿಓ ಅವರ ಮಹಾಜರನ್ನು ಲಗತ್ತಿಸಿದ್ದಾರೆಯೇ ?	
9.	ಅವಿವಾಹಿತೆ ಮಾಸಾಶನಕ್ಕೆ ನೀವು ಶಿಫಾರಸ್ಸು ಮಾಡಲಾಗಿದೆಯೇ ?	

ಅರ್ಜಿಯ ನಮೂನೆಯಲ್ಲಿರುವಂತೆ ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸುವ ಮಾನದಂಡದ ಪರಿಶೀಲನಾ ವರದಿ

ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸುವ ಮಾನದಂಡ (0 ಯಿಂದ 4 ರವರೆಗೆ ಅಂಕಗಳನ್ನು ನೀಡುವುದು)		
1.	ಅ) ಜಮೀನು ಗಾತ್ರ 1) ಇಲ್ಲ 2) 2.5 ಎಕರೆಗಿಂತ ಕಡಿಮೆ ಖುಷ್ಕಿ ಜಮೀನು (ಅಥವಾ 1.25 ಎಕರೆಗಿಂತ ಕಡಿಮೆಯಿರುವ ತರಿ ಜಮೀನು) 3) 2.5 ಎಕರೆಗಿಂತ 5 ಎಕರೆವರೆಗಿನ ಖುಷ್ಕಿ ಜಮೀನು (ಅಥವಾ 1.25–2.5 ಎಕರೆವರೆಗಿನ ತರಿ ಜಮೀನು) 4) 5 ಎಕರೆಗಿಂತ 12.5 ಎಕರೆವರೆಗಿನ ಖುಷ್ಕಿ ಜಮೀನು (ಅಥವಾ 2.5–6.25 ಎಕರೆವರೆಗಿನ ತರಿ ಜಮೀನು) 5) 12.5 ಎಕರೆಗಿಂತ ಜಾಸ್ತಿಯಿರುವ ಖುಷ್ಕಿ ಜಮೀನು (ಅಥವಾ 6.25 ಎಕರೆವರೆಗಿನ ತರಿ ಜಮೀನು)	

2.	ಮನೆಯ ಮಾದರಿ 1) ಮನೆ ಇಲ್ಲದವರು 2) ಕಚ್ಚಾ ಮನೆ 3) ಅರೆ ಪಕ್ಕ 4) ಪಕ್ಕ 5) ಆರ್.ಸಿ.ಸಿ. ಕಟ್ಟಡ	
3.	ಸಾಮಾನ್ಯವಾಗಿ ಧರಿಸುವ ಬಟ್ಟೆಯ ಸರಾಸರಿ ಲಭ್ಯತೆ (ಪ್ರತಿ ವ್ಯಕ್ತಿಗೆ ಜೊತೆಗಳಲ್ಲಿ) 1) 2 ಕ್ಕಿಂತ ಕಡಿಮೆ 2) 2 ಅಥವಾ 2 ಕ್ಕಿಂತ ಹೆಚ್ಚು ಆದರೆ 4 ಕ್ಕಿಂತ ಕಡಿಮೆ 3) 4 ಅಥವಾ ಹೆಚ್ಚು ಆದರೆ 6 ಕ್ಕಿಂತ ಕಡಿಮೆ 4) 6 ಅಥವಾ ಹೆಚ್ಚು ಆದರೆ 10 ಕ್ಕಿಂತ ಕಡಿಮೆ 5) 10 ಅಥವಾ ಅದಕ್ಕಿಂತ ಜಾಸ್ತಿ	
4.	ಆಹಾರ ಭದ್ರತೆ 1) ವರ್ಷದ ಬಹುತೇಕ ದಿನಗಳಲ್ಲಿ ಒಂದಕ್ಕಿಂತ ಕಡಿಮೆ ಪೂರ್ಣ ಊಟ 2) ಸಾಮಾನ್ಯವಾಗಿ ಒಂದು ದಿನಕ್ಕೆ ಒಂದು ಊಟ ಆದರೆ ಕೆಲವೊಮ್ಮೆ ಒಂದಕ್ಕಿಂತ ಕಡಿಮೆ ಪೂರ್ಣ ಊಟ 3) ವರ್ಷಪೂರ್ತಿ ಪ್ರತಿದಿನ ಒಂದು ಪೂರ್ಣ ಊಟ 4) ಪ್ರತಿದಿನ ಎರಡು ಪೂರ್ಣ ಊಟ ಕೆಲವೊಮ್ಮೆ ಕಡಿಮೆ 5) ವರ್ಷಪೂರ್ತಿ ಸಾಕಷ್ಟು ಆಹಾರ	
5.	ನೈರ್ಮಲ್ಯ 1) ಬಯಲು ಶೌಚ 2) ಅಸಮರ್ಪಕ ನೀರಿರುವ ಸಾಮೂಹಿಕ ಶೌಚಾಲಯ 3) ಸಮರ್ಪಕ ನೀರಿರುವ ಸಾಮೂಹಿಕ ಶೌಚಾಲಯ 4) ಸಮರ್ಪಕ ನೀರು ಮತ್ತು ನಿಯತ ಜಾಡಮಾಲಿ ಇರುವ ಸ್ವಚ್ಛ ಸಾಮೂಹಿಕ ಶೌಚಾಲಯ 5) ಖಾಸಗಿ ಶೌಚಾಲಯ	
6.	ಗೃಹೋಪಯೋಗಿ ವಸ್ತುಗಳ ಮಾಲೀಕತ್ವ (**ವಿದ್ಯುತ್–ಟೀವಿ**, ಫ್ಯಾನ್, ರೇಡಿಯೋ, ಅಡಿಗೆ **ಸಾಮಾಗ್ರಿಗಳು–** ಪ್ರಷರ್ ಕುಕ್ಕರ್/ತರಹ) 1) ಇಲ್ಲ 2) ಒಂದು ಮಾತ್ರ 3) ಎರಡು ಮಾತ್ರ 4) ಮೂರು ಅಥವಾ ಎಲ್ಲಾ ಐಟಂ 5) ಎಲ್ಲಾ ಐಟಂ ಮತ್ತು / ಅಥವಾ ಕೆಳಗಿನ ಒಂದರ ಮಾಲಿಕತ್ವ ದೂರವಾಣಿ, ಗಣಕಯಂತ್ರ, ಬಣ್ಣದ ಟೀವಿ, ಫ್ರಿಡ್ಜ್, ದ್ವಿ ಚಕ್ರ ವಾಹನ, ವಿದ್ಯುತ್ ಚಾಲಿತ ಅಡಿಗೆ ಸಾಮಾಗ್ರಿ, ಟ್ರ್ಯಾಕ್ಟರ್, ದುಬಾರಿ ಪೀಠೋಪಕರಣ, ನಾಲ್ಕು ಚಕ್ರಗಳ ವಾಹನ	
7.	ಕುಟುಂಬದಲ್ಲಿ ಹೆಚ್ಚು ವಿದ್ಯಾರ್ಹತೆ ಹೊಂದಿರುವ ವ್ಯಕ್ತಿಗಳ ಸಂಖ್ಯೆ 1) ಅನಕ್ಷರಸ್ಥ 2) ಪ್ರಾಥಮಿಕದವರೆಗೆ (5ನೇ ತರಗತಿ) 3) ಪ್ರೌಢ ಶಿಕ್ಷಣದವರೆಗೆ (ಮತ್ತು 10ನೇ ತರಗತಿ ತೇರ್ಗಡೆ) 4) ಪದವಿ/ವೃತ್ತಿಪರ ಡಿಪ್ಲೊಮ 5) ಸ್ನಾತಕೋತ್ತರ ಪದವಿ/ವೃತ್ತಪರ ಪದವಿ	
8.	ಕುಟುಂಬದ ದುಡಿಮೆಯ ಸ್ಥಿತಿಗತಿ 1) ಜೀತ ಕಾರ್ಮಿಕ 2) ಮಹಿಳೆ ಮತ್ತು ಮಕ್ಕಳ ದುಡಿಮೆ 3) ವಯಸ್ಕ ಮಹಿಳೆ ಮಾತ್ರ ಮತ್ತು ಬಾಲ ಕಾರ್ಮಿಕತೆ ಇಲ್ಲದಿರುವುದು 4) ವಯಸ್ಕ ಪುರುಷರು ಮಾತ್ರ 5) ಇತರೆ	

9.	ಜೀವನೋಪಾಯದ ಮಾರ್ಗ 1) ಬಿಡಿಗೂಲಿ 2) ಜೀವನ ನಿರ್ವಾಹಣಾ ಬೇಸಾಯ 3) ಕುಶಲಕರ್ಮಿ 4) ಸಂಬಳ/ವೇತನ 5) ಇತರೆ	
11.	ಸಾಲದ ಹೊರೆ 1) ದಿನೋಪಯೋಗಿ ಉದ್ದೇಶಗಳಿಗಾಗಿ ಅನೌಪಚಾರಿಕ ಮೂಲಗಳಿಂದ 2) ಉತ್ಪಾದನ ಉದ್ದೇಶಕ್ಕಾಗಿ ಅನೌಪಚಾರಕ ಮೂಲಗಳಿಂದ 3) ಇತರೆ ಉದ್ದೇಶಕ್ಕಾಗಿ ಅನೌಪಚಾರಿಕ ಮೂಲಗಳಿಂದ 4) ಸಂಸ್ಥೆಗಳಿಂದ ಮಾತ್ರ ಸಾಲ ಪಡೆಯುವುದು 5) ಸಾಲ ಇಲ್ಲದಿರುವುದು	
12.	ಕುಟುಂಬದಿಂದ ವಲಸೆ ಹೋಗಿರುವ ಕಾರಣ 1) ಬಿಡಿ ಕೆಲಸಕ್ಕಾಗಿ ಬೇರೆ ಊರಿಗೆ ಹೋಗಿರುವುದು 2) ಋತು ಕಾಲಿಕ ಉದ್ಯೋಗಕ್ಕಾಗಿ ಬೇರೆಡೆಗೆ ಹೋಗಿರುವುದು 3) ಜೀವನ ನಿರ್ವಹಣೆಯ ಇತರೆ ಕೆಲಸಕ್ಕಾಗಿ ಬೇರೆಡೆಗೆ ಹೋಗಿರುವುದು 4) ವಲಸೆ ಹೋಗಿಲ್ಲದಿರುವುದು 5) ಇತರೆ ಉದ್ದೇಶ	
13.	ಯಾವ ರೀತಿ ಸಹಾಯ ಬೇಕು 1) ಕೂಲಿ ಕೆಲಸ/ಪಿಡಿಎಸ್ (ಗುರಿ ಆಧಾರಿತ ಸಾರ್ವಜನಿಕ ವಿತರಣಾ ಪದ್ಧತಿ) 2) ಸ್ವಯಂ ಉದ್ಯೋಗ 3) ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ 4) ವಸತಿ 5) ಸಾಲ/ಸಹಾಯ ಧನ ಒಂದು ಲಕ್ಷಕ್ಕಿಂತ ಹೆಚ್ಚಿಗೆ ಅಥವಾ ಸಹಾಯ ಅಗತ್ಯತೆ ಇಲ್ಲ	
	ಒಟ್ಟು ಅಂಕಗಳು	

ಸ್ಥಳ : . . . .

ದಿನಾಂಕ : . . . . ವಿಚಾರಣಾಧಿಕಾರಿಯ ಸಹಿ ಮತ್ತು ಹುದ್ದೆ

ವಿಚಾರಣಾಧಿಕಾರಿಯವರು ಮೇಲೆ ಒದಗಿಸಿರುವ ಮಾಹಿತಿಯನ್ನು ಪರಿಶೀಲಿಸಿ ನನ್ನ ತಿಳುವಳಿಕೆ ಮಟ್ಟಿಗೆ ಸಮರ್ಪಕವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : . . . .

ದಿನಾಂಕ : . . . . ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಸಹಿ ಮತ್ತು ಮೊಹರು

ಎಸ್.ಎನ್. ಕೃಷ್ಣಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ–1,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ–4

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ

ಯೋಜನೆ/ತಾಲ್ಲೂಕು . . . .

. . . . ಜಿಲ್ಲೆ

ವಿಷಯ : ಕುಮಾರಿ . . . . ಅವರಿಗೆ ಅವಿವಾಹಿತೆ ಮಾಸಾಶನ ಮಂಜೂರಾತಿಯ ಆದೇಶ ಸಂಖ್ಯೆ : . . . . ದಿನಾಂಕ : . . . .

ಮೇಲೆ ತಿಳಿಸಲಾಗಿರುವ ವಿಷಯ ಕುರಿತು . . . . ಹೋಬಳಿಯ ತಾಲ್ಲೂಕಿನ ವಿಚಾರಣಾಧಿಕಾರಿ ಅವರ ಪತ್ರ ಸಂಖ್ಯೆ : . . . . ದಿನಾಂಕ . . . . ಗೆ ಸಂಬಂಧಿಸಿದಂತೆ, ಈ ಕೆಳಗೆ ತಿಳಿಸಲಾಗಿರುವ ಮಹಿಳೆಗೆ ಈ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ ಆಕೆಗೆ 60 ವರ್ಷ ತುಂಬುವವರೆಗೆ ಪ್ರತಿ ತಿಂಗಳಿಗೆ ರೂ. . . . . (. . . . ರೂಪಾಯಿಗಳು ಮಾತ್ರ) ಅವಿವಾಹಿತೆ ಮಾಸಾಶನದ ಸಂದಾಯಕ್ಕೆ ಮಂಜೂರಾತಿ ನೀಡಲಾಗಿದೆ.

ವಿಳಾಸ :– ಕುಮಾರಿ . . . .
. . . .
. . . .

2. ಮಾಸಾಶನ ಸಂದಾಯವನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ, ... ಅವರು ಫಲಾನುಭವಿಯ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು.

3. ಮಾಸಾಶನದಾರರು/ಸ್ವೀಕರ್ತರು ಯಾವುದೇ ಕಾಲದಲ್ಲಿ ವಿಳಾಸದಲ್ಲಿ ಆದ ಯಾವುದೇ ಬದಲಾವಣೆಯನ್ನು ವಿಳಂಬ ಮಾಡದೆ . . . . ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ತಿಳಿಸತಕ್ಕದ್ದು. ವಿಳಂಬ ಮಾಡುವುದರಿಂದಾಗಿ ಮಾಸಾಶನದ ಸಂದಾಯವನ್ನು ಮುಂದೂಡಲಾಗುತ್ತದೆ.

4. ಮಾಸಾಶನವು ತಪ್ಪು ತಿಳುವಳಿಕೆಯ ಅಥವಾ ಸುಳ್ಳು ಮಾಹಿತಿಯ ಆಧಾರದ ಮೇಲೆ ಮಂಜೂರಾಗಿದೆಯೆಂದು ಕಂಡುಬಂದರೆ, ಈ ಆದೇಶವು ರದ್ದಿಯಾತಿಗೆ ಬದ್ಧವಾಗುತ್ತದೆ.

ಶಿಶು ಅಭಿವೃದ್ಧಿ ಯೋಜನಾಧಿಕಾರಿ
. . . . ತಾಲ್ಲೂಕು
. . . . ಜಿಲ್ಲೆ

ಇವರಿಗೆ,
ಮಾಸಾಶನದಾರರು/ಸ್ವೀಕರ್ತರು . . . .
ಜಿಲ್ಲಾ ಉಪ ನಿರ್ದೇಶಕರು . . . .

ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ–4ಎ

ಅವಿವಾಹಿತೆ ಮಾಸಾಶನ ಸಂದಾಯ ಆದೇಶಗಳ ವಹಿ

ತಾಲ್ಲೂಕು . . . .
ಜಿಲ್ಲೆ . . . .

ಕ್ರಮ ಸಂಖ್ಯೆ	ಮಾಸಾಶನದಾರರ ಹೆಸರು ಮತ್ತು ಪೂರ್ಣ ವಿಳಾಸ	* ಮಾಸಾಶನ ಸಂದಾಯ ಆದೇಶ ಸಂಖ್ಯೆ ಮತ್ತು ದಿನಾಂಕ	ಜಾರಿಗೆ ಬರುವ ತಿಂಗಳು ಮತ್ತು ವರ್ಷ		ಮಾಸಾಶನದ ಮೊಬಲಗು	ಬ್ಯಾಂಕಿನ ಹೆಸರು ಮತ್ತು ಖಾತೆ ಸಂಖ್ಯೆ	ಮಾಸಾಶನ ಕೊನೆಗೊಳ್ಳುವ ದಿನಾಂಕ	ದಿನಾಂಕ, ಪ್ರಭಾರಿ ಅಧಿಕಾರಿಯ ಚಿಕ್ಕ ರುಜು	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಚಿಕ್ಕ ರುಜು	ಷರಾ
			ತಿಂಗಳು	ವರ್ಷ						
1	2	3	4(ಎ)	4(ಬಿ)	5	6	7	8	9	10

*ರೆಡ್ ಇಂಕ್‌ನಲ್ಲಿ ಭರ್ತಿ ಮಾಡಬೇಕು

ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ-5

ಮಾಸಾಶನ ಪಡೆಯುವ ಮಾಸಾಶನದಾರರ ಮರಣದ/ವಿಳಾಸದ/ ಬದಲಾವಣೆ/ವಿವಾಹ/ಉದ್ಯೋಗ ಇತ್ಯಾದಿಗಳ ಸೂಚನೆಯ ನಮೂನೆ

ಜಿಲ್ಲೆ . . . .
ತಾಲ್ಲೂಕು . . . .
ಗ್ರಾಮ/ಪಟ್ಟಣ . . . .

1. ಕುಮಾರಿ . . . . ಅವಿವಾಹಿತೆ ಮಾಸಾಶನ ಸಂಖ್ಯೆ : . . . . ದಿನಾಂಕ . . . . ಅವರು 20 . . . . . . ರ . . . . ದಿನದಂದು ಮೃತರಾದರು.
2. ಕುಮಾರಿ . . . . ಅವಿವಾಹಿತೆ ಮಾಸಾಶ ಸಂಖ್ಯೆ . . . . ದಿನಾಂಕ . . . . ಅವರು ತಮ್ಮ ವಿಳಾಸವನ್ನು ಈ ಕೆಳಕಂಡಂತೆ ಬದಲಾಯಿಸಿದ್ದಾರೆ.
   . . . .
   . . . .
3. ಕುಮಾರಿ . . . . ಮಾಸಾಶನ ಸಂಖ್ಯೆ . . . . ದಿನಾಂಕ : . . . . ಅವರು ಗ್ರಾಮವನ್ನು ಬಿಟ್ಟುಹೋಗಿದ್ದಾರೆ. ಆಕೆ ಗ್ರಾಮವನ್ನು ಬಿಟ್ಟ ತರುವಾಯದ ವಿಳಾಸ ತಿಳಿದುಬಂದಿಲ್ಲ.

   ಅವರು ಅವಿವಾಹಿತೆ ಮಾಸಾಶನವನ್ನು . . . . (ತಿಂಗಳು) . . . . ವರ್ಷದಿಂದ ಕೊನೆಗೊಳಿಸುವುದು.

ಸ್ಥಳ : . . . .
ದಿನಾಂಕ : . . . .
ಮೊಹರು :

ಅಂಗನವಾಡಿ ಕಾರ್ಯಕರ್ತೆಯ ಸಹಿ
ಪರಿಶೀಲನಾಧಿಕಾರಿ / ಮೇಲ್ವಿಚಾರಕಿಯ ಸಹಿ

. . . .
(*ಅನ್ವಯಿಸದೇ ಇರುವುದನ್ನು ಹೊಡದುಹಾಕುವುದು)

ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ-6

ಅವಿವಾಹಿತೆ ಮಾಸಾಶನ ಸಂದಾಯ ತನಿಖಾ ರಿಜಿಸ್ಟರು

ಭಾವಚಿತ್ರ

1.	ಕ್ರಮ ಸಂಖ್ಯೆ	
2.	ಮಾಸಾಶನ ಮಂಜೂರಾದ ಆದೇಶ ಸಂಖ್ಯೆ ಮತ್ತು ದಿನಾಂಕ	
3.	ಮಾಸಾಶನದಾರರ ಹೆಸರು	
4.	ಪೂರ್ಣ ವಿಳಾಸ	
6.	ಮಾಸಾಶನದ ಮೊಬಲಗು (ಅಂಕ ಮತ್ತು ಪದಗಳಲ್ಲಿ)	
7.	ಮಾಸಾಶನ ಪ್ರಾರಂಭವಾದ ದಿನಾಂಕ	
8.	ಬ್ಯಾಂಕ್ ಹೆಸರು ಮತ್ತು ಖಾತೆ ಸಂಖ್ಯೆ	
9.	ವಿಳಾಸದಲ್ಲಿನ ಬದಲಾವಣೆ ಯಾವುದಾದರೂ ಇದ್ದರೆ	
10.	ಮಾಸಾಶನ ಕೊನೆಗೊಂಡ ದಿನಾಂಕ	
	ಇತರೆ ಷರಾ	

ಸ್ಥಳ :

ದಿನಾಂಕ : ಶಿಶು ಅಭಿವೃದ್ಧಿ ಯೋಜನಾಧಿಕಾರಿಯ ಸಹಿ

ಮಾಸಾಶನದಾರರ ಮಾದರಿ ರುಜುವಿನ ಚೀಟಿ ಅಂಟಿಸುವ ಸ್ಥಳ

1.

2.

3.

ಅವಿವಾಹಿತೆ ಮಾಸಾಶನದಾರರ ಅಸ್ತಿತ್ವ ಮತ್ತು ಸ್ಥಿತಿಗತಿಗೆ ಸಂಬಂಧಿಸಿದಂತೆ ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿಯಿಂದ ಪಡೆದ ವರದಿಗಳ ಬಗ್ಗೆ ಟಿಪ್ಪಣಿಗಳನ್ನು ಬರೆಯುವ ಸ್ಥಳ.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಸಹಿ ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿಯ ಸಹಿ

ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಮೂನೆ–7

ಕರ್ನಾಟಕ ಸರ್ಕಾರ

ಅವಿವಾಹಿತೆ ಮಾಸಾಶನದಾರರ ಗುರುತು ಪತ್ರ

1. ಮಾಸಾಶನದಾರರ ಹೆಸರು ಮತ್ತು ವಿಳಾಸ :
2. ಮಾಸಾಶನ ಮಂಜೂರಾತಿ ಆದೇಶ ಸಂಖ್ಯೆ ಮತ್ತು ದಿನಾಂಕ :
3. ಮಾಸಾಶನದ ಮೊಬಲಗು : ರೂ. . . . . (ಪದಗಳಲ್ಲಿ)
4. ಮಾಸಾಶನ ಸಂದಾಯವಾಗುವವರೆಗಿನ ಅವಧಿ :

ಗುರುತು ಚಿಹ್ನೆಗಳು :

(1)

(2)

ಮಾಸಾಶನದಾರರ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ ಅಂಟಿಸಲು ಸ್ಥಳ

ಮಾಸಾಶನದಾರರ ಸಹಿ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತು

ಶಿಶು ಅಭಿವೃದ್ಧಿ ಯೋಜನಾಧಿಕಾರಿಯ ಸಹಿ
ಮತ್ತು ಮೊಹರು

ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್. 2015

ಕೃಷಿ ಸಚಿವಾಲಯ

ವಿಷಯ : ಸಮಗ್ರ ಕೃಷಿ ಪದ್ಧತಿಗೆ ಪ್ರೋತ್ಸಾಹ/ಆದ್ಯತೆ ನೀಡುವ ಬಗ್ಗೆ.

ಓದಲಾಗಿದೆ :
1. ಮಾನ್ಯ ಮುಖ್ಯಮಂತ್ರಿಯವರ 2011–12ನೇ ಸಾಲಿನ ಕೃಷಿ ಆಯವ್ಯಯ ಭಾಷಣ.
2. ಧಾರವಾಡ ಕೃಷಿ ವಿಶ್ವವಿದ್ಯಾಲಯದ ದಿನಾಂಕ: 21–03–2011, 19–04–2011, 02–05–2011 ಮತ್ತು 11–07–2011ರ ಪತ್ರಗಳ ಸಂಖ್ಯೆ: DE/IFSD/590/2011-12
3. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ದಿನಾಂಕ : 01–04–2011, 12–07–2011, ಪತ್ರಗಳ ಸಂಖ್ಯೆ: UASH/IFSD/GOK/35/2011-12.
4. ರಾಯಚೂರು ಕೃಷಿ ವಿಶ್ವವಿದ್ಯಾಲಯದ ದಿನಾಂಕ: 21–05–2011 ಮತ್ತು 12–07–2011ರ ಪತ್ರಗಳ ಸಂಖ್ಯೆ: DR/UASR/IFS/609/2011-12.

ಪ್ರಸ್ತಾವನೆ:

ಮಾನ್ಯ ಮುಖ್ಯಮಂತ್ರಿಯವರು ಮೇಲೆ (1)ರಲ್ಲಿ ಓದಲಾದ ದಿನಾಂಕ: 24–02–2011 ರಂದು ಮಾಡಿದ ಕೃಷಿ ಆಯವ್ಯಯ ಭಾಷಣದ ಕಂಡಿಕೆ–49ರಲ್ಲಿ **"ಸಮಗ್ರ ಕೃಷಿಗೆ ಆದ್ಯತೆ"** ಕುರಿತಂತೆ ಕೃಷಿ ಆದಾಯವನ್ನು ಹೆಚ್ಚಿಸಲು ಪರಿಪೂರ್ಣವಾದ ಕ್ರಮಗಳನ್ನು ಅನುಸರಿಸುವ ಮೂಲಕ ಕೃಷಿ ವ್ಯವಸ್ಥೆಯನ್ನು ಪುನಃಶ್ಚೇತನಗೊಳಿಸುವ ಅವಶ್ಯಕತೆ ಇದ್ದು ರಾಜ್ಯದಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸುವುದು ಅವಶ್ಯಕವಾಗಿದ್ದು ಮೊದಲ ವರ್ಷದಲ್ಲಿ ಪ್ರಾಯೋಗಿಕವಾಗಿ ಪ್ರತಿ ವಿಶ್ವವಿದ್ಯಾಲಯವು ಕನಿಷ್ಠ 25,000 ಹೆಕ್ಟೇರ್ ಪ್ರದೇಶಗಳಲ್ಲಿ ಈ ಪದ್ಧತಿಯನ್ನು 2011ರ ಮುಂಗಾರಿನಿಂದ ಅನುಷ್ಠಾನಗೊಳಿಸಲಿದ್ದು ರಾಜ್ಯದಲ್ಲಿ ಒಟ್ಟು 1,25,000 ಹೆಕ್ಟೇರ್ ಪ್ರದೇಶದಲ್ಲಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ಒಟ್ಟು 75.00 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ನೀಡಲಾಗುವುದೆಂದು ಘೋಷಿಸಿರುತ್ತಾರೆ.

ಸಮಗ್ರ ಕೃಷಿ ಪದ್ಧತಿಯನ್ನು ಕೃಷಿ ವಿಶ್ವವಿದ್ಯಾಲಯಗಳ ಮೂಲಕ ರಾಜ್ಯದಲ್ಲಿ ಅಳವಡಿಸುವ ಸಲುವಾಗಿ ರಾಜ್ಯದಲ್ಲಿನ ಬೆಂಗಳೂರು, ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳಿಂದ ಮೇಲೆ (3), (2) ಮತ್ತು (4)ರಲ್ಲಿ ಓದಲಾದ ಪತ್ರಗಳ ಮುಖೇನ ವರದಿಯನ್ನು ಪಡೆದು ಪರಿಶೀಲಿಸಲಾಗಿದೆ.

ಸಮಗ್ರ ಕೃಷಿ ಪದ್ಧತಿಯಲ್ಲಿ ಸುಸ್ಥಿರ ಉತ್ಪಾದನೆ ಮತ್ತು ಆದಾಯ ಹೆಚ್ಚಿಸುವುದು ಹಾಗೂ ರೈತರ ಮತ್ತು ಭೂರಹಿತ ಕಾರ್ಮಿಕರ ಜೀವನ ಮಟ್ಟ ಸುಧಾರಿಸುವ ಮುಖ್ಯೋದ್ದೇಶದಿಂದ ಅಗತ್ಯವಾದ ತರಬೇತಿ, ಸಂಶೋಧನೆ, ತಾಂತ್ರಿಕತೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ಮುಖ್ಯವಾದ ಮಾಹಿತಿಯನ್ನು ಒದಗಿಸುವುದು ಮತ್ತು ವಿವಿಧ ಬೆಳೆಗಳನ್ನು ಬೆಳೆಯುವುದು ಮುಂತಾದ ಕಾರ್ಯಕ್ರಮಗಳ ತೊಡಗಿಕೊಳ್ಳಲು ಈ ಯೋಜನೆಯನ್ನು ರೂಪಿಸಲಾಗಿದೆ.

ಸಮಗ್ರ ಕೃಷಿ ಪದ್ಧತಿಯನ್ನು ಜಾರಿಗೊಳಿಸಲು ರಾಜ್ಯಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಭಿವೃದ್ಧಿ ಆಯುಕ್ತರು, ಪ್ರಧಾನ/ಕಾರ್ಯದರ್ಶಿ (ಕೃಷಿ) ಮತ್ತು ಸಂಬಂಧಪಟ್ಟ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿ ಮತ್ತು ನಬಾರ್ಡ್ ಸಂಸ್ಥೆಯವರು ರಾಜ್ಯ ಮಟ್ಟದ ನೋಡಲ್ ಸಂಸ್ಥೆಯಾಗಿರುತ್ತದೆ. ಕೃಷಿ ವಿಶ್ವವಿದ್ಯಾಲಯದ ಮಟ್ಟದಲ್ಲಿ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಿರ್ವಹಣಾ ಸಮಿತಿಯಿದ್ದು ಜಿಲ್ಲಾ ಮಟ್ಟದಲ್ಲಿ ಕೃಷಿ ವಿಶ್ವವಿದ್ಯಾಲಯದ ಸಂಬಂಧಪಟ್ಟ ಡೀನ್ ಸ.ಸಂ.ನಿ/ಸ.ವಿ.ನಿ ಅಧ್ಯಕ್ಷತೆಯಲ್ಲಿ ಸಂಯೋಜನಾ ಸಮಿತಿ ಇರುತ್ತದೆ. ಇವರದೇ ಅಧ್ಯಕ್ಷತೆಯ ಸಮಿತಿಯಲ್ಲಿ ಅನುಷ್ಠಾನಗೊಳಿಸುವ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ಕೃಷಿ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಹೈನುಗಾರಿಕೆ, ಅಭಿವೃದ್ಧಿ, ಸಹಕಾರ, ಮಾರುಕಟ್ಟೆ ಇಲಾಖೆಗಳು, ಕೃಷಿ ಸಂಶೋಧನಾ/ವಿಸ್ತರಣಾ ಕೇಂದ್ರಗಳು, ಬೀಜೋತ್ಪಾನೆ ಘಟಕಗಳು, ಲೀಡ್ ಬ್ಯಾಂಕುಗಳು, ಕೃಷಿ ವಿಜ್ಞಾನ ಕೇಂದ್ರಗಳು, ರೈತ ಸಂಪರ್ಕ ಕೇಂದ್ರಗಳು ಮುಂತಾದವುಗಳು ಕೃಷಿ ವಿಶ್ವವಿದ್ಯಾಲಯದ ಸಮಿತಿ/ಅಧಿಕಾರಿ ನಿಗದಿಪಡಿಸುವ ಸೂಚನೆಗಳಡಿ ಕಾರ್ಯಕ್ರಮ ಅನುಷ್ಠಾನಕ್ಕೆ ಸಹಕರಿಸಬೇಕಾಗುತ್ತದೆ.

ಸಮಗ್ರ ಕೃಷಿ ಪದ್ಧತಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಪ್ರತಿ ಕೃಷಿ ವಿಶ್ವವಿದ್ಯಾಲಯಕ್ಕೆ 13.00 ಕೋಟಿ ರೂಪಾಯಿಗಳಂತೆ ಒಟ್ಟು 52.00 ಕೋಟಿ ರೂಪಾಯಿಗಳನ್ನು ನಿಗದಿಪಡಿಸುವ ಪ್ರಸ್ತಾವನೆಗೆ ದಿನಾಂಕ: 29–04–2011ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ SLSC ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕೃತೋಇ 119 ಕೃವಿವಿ 2011, ಬೆಂಗಳೂರು, ದಿನಾಂಕ : 2–08–2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಮೇರೆಗೆ ಕರ್ನಾಟಕ ರಾಜ್ಯದಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ರಾಜ್ಯದ ಬೆಂಗಳೂರು, ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳ ಮುಂದಾಳತ್ವದಲ್ಲಿ ಹಾಗೂ ಸದರಿ ಕೃಷಿ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಅನುಮತಿಯನ್ನು ಈ ಮೂಲಕ ನೀಡಲಾಗಿದೆ.

2. ಮೇಲ್ಕಂಡ ಉದ್ದೇಶಕ್ಕಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ನಿಗದಿಪಡಿಸಲಾದ ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಲು ಕ್ರಮವಿಡಲಾಗುವುದು.

3. ಬೆಂಗಳೂರು, ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳು ತಾವುಗಳು ಸಲ್ಲಿಸಿರುವ ವರದಿ–ಮಾಹಿತಿಯಲ್ಲಿ ಒಳಗೊಂಡಿರುವ ಷರತ್ತುಗಳನ್ನು – ನಿಯಮಗಳನ್ನು – ನಿಬಂಧನೆಗಳನ್ನು ಹಾಗೂ ಈ ಸಂಬಂಧದಲ್ಲಿ ದಿನಾಂಕ : 04–07–2011ರಂದು ಸರ್ಕಾರದ ಅಪರ ಕಾರ್ಯದರ್ಶಿ (ಕೃಷಿ)ರವರ ಅಧ್ಯಕ್ಷತೆಯಲ್ಲಿ ದಿನಾಂಕ: 13–07–2011ರಂದು (ಕೃತೋಇ 119 ಕೃವಿವಿ 2011) ನಡೆದ ಸಭೆಯಲ್ಲಿ ನೀಡಿರುವ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮವನ್ನು ಜಾರಿಗೊಳಿಸಲು ನಿರ್ದೇಶಿಸಲಾಗಿದೆ.

4. ಸಮಗ್ರ ಕೃಷಿ ಪದ್ಧತಿಯನ್ನು ಅನುಷ್ಠಾನಗೊಳಿಸುವ–ಪ್ರೋತ್ಸಾಹಿಸುವ ಸಲುವಾಗಿ ಕೃಷಿ ವಿಶ್ವವಿದ್ಯಾಲಯಕ್ಕೆ ಒಳಪಡುವ ವ್ಯಾಪ್ತಿಯಲ್ಲಿನ ಜಿಲ್ಲೆ–ತಾಲ್ಲೂಕು–ಪ್ರದೇಶದಲ್ಲಿರುವ ಎಲ್ಲಾ ಜಿಲ್ಲಾ/ತಾಲ್ಲೂಕು ಪಂಚಾಯತ್ ಕೃಷಿ–ಅಭಿವೃದ್ಧಿ – ಸಹಕಾರ – ತೋಟಗಾರಿಕೆ – ಪಶುಸಂಗೋಪನೆ – ಹೈನುಗಾರಿಕೆ – ಮಾರುಕಟ್ಟೆ ಇಲಾಖೆಗಳು ಹಾಗೂ ಸಹಕಾರ–ಲೀಡ್ ಬ್ಯಾಂಕುಗಳು ಮತ್ತು ಕೃಷಿ ವಿಶ್ವವಿದ್ಯಾಲಯದ ಪ್ರಾದೇಶಿಕ/ಘಟಕ ಸಂಸ್ಥೆಗಳಲ್ಲಿನ ಅಧಿಕಾರಿ–ಸಿಬ್ಬಂದಿಗಳು ಸಹಕರಿಸುವಂತೆ ಈ ಮೂಲಕ ನಿರ್ದೇಶಿಸಲಾಗಿದೆ. ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಈ ಬಗ್ಗೆ

ಸಂಬಂಧಿಸಿದ ಅಧಿಕಾರಿಗಳ ಸಮಿತಿ ರಚಿಸಿ, ಪ್ರತಿ ತಿಂಗಳು ಪ್ರಗತಿ ಪರಿಶೀಲಿಸಲು ಹಾಗೂ ಸಹಯೋಗದಿಂದ, ಇಲಾಖೆಯ ಕಾರ್ಯಕ್ರಮಗಳನ್ನು IFS ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಸಹಕಾರಿ ಆಗುವಂತೆ ಮಾಡಲು ಸೂಚಿಸಿದೆ.

5. ಕಾರ್ಯಕ್ರಮ ಅನುಷ್ಠಾನಕ್ಕೆ ಅಗತ್ಯವಾದ ಕನಿಷ್ಠ ಸಂಖ್ಯೆಯ ವಾಹನಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳುವಂತೆ ಮತ್ತು 2 ಮೋಟಾರು ಸೈಕಲ್‌ಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಕೈಬಿಡುವಂತೆಯೂ ನಿರ್ದೇಶಿಸಲಾಗಿದೆ.

6. ಸರ್ಕಾರದ ಆರ್ಥಿಕ ಇಲಾಖೆಯ ದಿನಾಂಕ: 02-06-2011ರ ಟಿಪ್ಪಣಿ ಸಂಖ್ಯೆ : FD 253 Exp-4/2011ರಲ್ಲಿ 253 ರಲ್ಲಿ ಮತ್ತು ಯೋಜನಾ ಇಲಾಖೆಯು ದಿನಾಂಕ : 12-07-2011ರ ಟಿಪ್ಪಣಿ ಸಂಖ್ಯೆ : PD 45 PFO 2011ರಲ್ಲಿ ನೀಡಿರುವ ಸಹಮತಿ ಹಾಗೂ ಅಭಿಪ್ರಾಯಗಳ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಮಂಜುನಾಥ ಪಾಟೀಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಸೇವೆಗಳು)

ಪಿ.ಆರ್. 2016

ಒಳಾಡಳಿತ ಸಚಿವಾಲಯ

ವಿಷಯ : ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (KSISF) 2 ಮತ್ತು 3ನೇ ಘಟಕವನ್ನು ರಚಿಸುವ ಬಗ್ಗೆ.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 05 ಪಿಓಪಿ 2011, ದಿನಾಂಕ: 14-01-2011.

(2) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ:ಆರ್.ಎಲ್.ಎನ್[5]13/2003-04[ಎ], ದಿನಾಂಕ: 14-06-2011

ಪ್ರಸ್ತಾವನೆ:

ಭಯೋತ್ಪಾದಕರು ಹಾಗೂ ನಕ್ಸಲೀಯರ ಭಯೋತ್ಪಾದಕ ಚಟುವಟಿಕೆಗಳನ್ನು ಹಾಗೂ ವಿಧ್ವಂಸಕ ಕೃತ್ಯಗಳನ್ನು ತಡೆಗಟ್ಟಲು 3 ಬೆಟಾಲಿಯನ್‌ಗಳನ್ನು ಒಳಗೊಂಡಿರುವ ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್‌ನ್ನು ಮೂರು ಹಂತಗಳಲ್ಲಿ ಸ್ಥಾಪಿಸಲು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಸಲ್ಲಿಸಿದ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಮೊದಲ ಹಂತದಲ್ಲಿ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಪೊಲೀಸ್ ಇಲಾಖೆಯ ನಿಯಂತ್ರಣದಲ್ಲಿ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ ಘಟಕವನ್ನು 1060 ಬಲವುಳ್ಳ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳೊಂದಿಗೆ ಒಂದು ಬೆಟಾಲಿಯನ್ ರಚಿಸಲು ಮಂಜೂರಾತಿ ನೀಡಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ, ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಬೆಂಗಳೂರು ಮೆಟ್ರೋಗೆ ಭದ್ರತೆ ಯೋಜನೆಯೊಂದನ್ನು ಸಿ.ಐ.ಎಸ್.ಎಫ್. ಯೋಜಿಸಿದ್ದು, ಈ ಯೋಜನೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರಸ್ತುತ ಸರ್ಕಾರ ಕರ್ನಾಟಕ ಸ್ಟೇಟ್ ಇಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್‌ಗೆ ಮಂಜೂರು ಮಾಡಿರುವ ಒಂದು ಬೆಟಾಲಿಯನ್‌ನಿಂದ ಬೆಂಗಳೂರು ಮೆಟ್ರೋ ಸೇರಿದಂತೆ ಸರ್ಕಾರದ ಸಂಸ್ಥೆಗಳು, ಖಾಸಗಿ ವಲಯದ ಕಂಪನಿಗಳಿಂದ ಭದ್ರತಾ ವ್ಯವಸ್ಥೆಗಾಗಿ ಬರುವ ಬೇಡಿಕೆಯನ್ನು ನಿರ್ವಹಿಸಲು ಸಾಧ್ಯವಾಗದ ಕಾರಣ ಕರ್ನಾಟಕ ಸ್ಟೇಟ್ ಇಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್ ಘಟಕವನ್ನು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆ ಮಾಡಲು ಹೆಚ್ಚುವರಿಯಾಗಿ 2 ಬೆಟಾಲಿಯನ್‌ಗಳನ್ನು ಸ್ಥಾಪನೆ ಮಾಡಲು ಕೋರಿರುತ್ತಾರೆ. ಹಾಗೂ ಈ 3 ಬೆಟಾಲಿಯನ್‌ಗಳ ಮೇಲ್ವಿಚಾರಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಐ.ಪಿ.ಎಸ್. ದರ್ಜೆಯ ಅಧಿಕಾರಿ ಅವಶ್ಯಕತೆ ಇದ್ದು, ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಐ.ಪಿ.ಎಸ್. ಹುದ್ದೆಯನ್ನು ಬೆಂಬಲ ಸಿಬ್ಬಂದಿಗಳಾದ 1-ಶೀಘ್ರಲಿಪಿಗಾರರು, 2-ಪೊಲೀಸ್ ಕಾನ್ಸ್‌ಟೇಬಲ್ (ಆರ್ಡರ್ಲಿ), 1-ಚಾಲಕ (ಎ.ಪಿ.ಸಿ. ಚಾಲಕ), 1-ದಲಾಯತ್ ಹಾಗೂ 1-ಸ್ವೀಪರ್ ಹುದ್ದೆಗಳನ್ನು ಸೃಜಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶ ಮಾಡಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 137 ಪಿಓಪಿ 2011, ಬೆಂಗಳೂರು, ದಿನಾಂಕ 05-08-2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಪೊಲೀಸ್ ಇಲಾಖೆಯ ನಿಯಂತ್ರಣದಲ್ಲಿ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (KSISF) ಎರಡನೇ ಬೆಟಾಲಿಯನ್‌ನ್ನು 2011-12ನೇ ಸಾಲಿನಲ್ಲಿ ಮತ್ತು ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (KSISF) ಮೂರನೇ ಬೆಟಾಲಿಯನ್‌ನ್ನು 2012-13ನೇ ಸಾಲಿನಲ್ಲಿ ತಲಾ 1060 ಬಲವುಳ್ಳ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳೊಂದಿಗೆ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ-1ರಲ್ಲಿ ಸೂಚಿಸಿರುವ ಹುದ್ದೆಗಳೊಂದಿಗೆ ರಚಿಸಲು ಸರ್ಕಾರದ ಮಂಜೂರಾತಿ ನೀಡಿದೆ.

2) ಪ್ರತಿ 2ನೇ ಮತ್ತು 3ನೇ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್(KSISF) ಘಟಕಗಳಿಗೆ ಅಗತ್ಯವಿರುವ ಸಾರಿಗೆ, ವೈರ್‌ಲೆಸ್ ಸಾಧನಗಳು ಹಾಗೂ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ಖರೀದಿಗೆ ತಗಲುವ ಅಂದಾಜು ಅನಾವಶ್ಯಕ ವೆಚ್ಚ ರೂ. 5,99,26,820/-ಗಳನ್ನು [ಐದು ಕೋಟಿ ತೊಂಭತೊಂಭತ್ತು ಲಕ್ಷ ಇಪ್ಪತ್ತಾರು ಸಾವಿರದ ಎಂಟುನೂರ ಇಪ್ಪತ್ತು ರೂಪಾಯಿಗಳು ಮಾತ್ರ] ಅನುಬಂಧ-IIರಲ್ಲಿ ವಿವರಿಸಿರುವಂತೆ, ಮಂಜೂರಾದ ವಾಹನಗಳ ನಿರ್ವಹಣೆಗಾಗಿ ತಗಲುವ ಅಂದಾಜು ಅನಾವರ್ತಕ ವೆಚ್ಚ ರೂ. 59,28,000/-ಗಳನ್ನು [ಐವತೊಂಭತ್ತು ಲಕ್ಷ ಇಪ್ಪತ್ತೆಂಟು ಸಾವಿರ ರೂಪಾಯಿಗಳು ಮಾತ್ರ] ಅನುಬಂಧ-III ರಲ್ಲಿ ವಿವರಿಸಿರುವಂತೆ ಹಾಗೂ ಸಮವಸ್ತ್ರ ಮತ್ತು ಕಿಟ್ ಸಾಮಗ್ರಿಗಳ ಖರೀದಿಗೆ ತಗಲುವ ಅಂದಾಜು ವೆಚ್ಚ ರೂ. 14,50,115/-ಗಳನ್ನು [ಹದಿನಾಲ್ಕು ಲಕ್ಷ ಐವತ್ತು ಸಾವಿರದ ಒಂದುನೂರ ಹದಿನೈದು ರೂಪಾಯಿಗಳು ಮಾತ್ರ] ಅನುಬಂಧ-IV ರಲ್ಲಿ ವಿವರಿಸಿರುವಂತೆ 2011-12ನೇ ಸಾಲಿಗೆ ಮತ್ತು 2012-13ನೇ ಸಾಲಿಗೆ ಭರಿಸಲು ಸಹ ಮಂಜೂರಾತಿ ನೀಡಿದೆ.

3) ಮೇಲಿನ ವೆಚ್ಚಗಳಿಗೆ ಹೆಚ್ಚುವರಿ ಅನುದಾನದ ಅಗತ್ಯವಿದ್ದಲ್ಲಿ ಈ ಕುರಿತ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ. ಸದರಿ ಹೆಚ್ಚುವರಿ ಅನುದಾನದ ಬಿಡುಗಡೆಯನ್ನು ಕಾಯ್ದಿರಿಸಿ 2ನೇ ಮತ್ತು 3ನೇ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ ಘಟಕಕ್ಕೆ (KSISF)ಗೆ ಬೇಕಾದ ಪೊಲೀಸ್ ಸಿಬ್ಬಂದಿಯ ನೇಮಕ ಮತ್ತು ಅವರಿಗೆ ಸೂಕ್ತ ತರಬೇತಿ ನೀಡಲು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು, ಮುಂದುವರೆದು, ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು 2ನೇ ಮತ್ತು 3ನೇ

ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ ಘಟಕಕ್ಕೆ (KSISF)ಗೆ ಮಂಜೂರಾಗಿರುವ ವಾಹನಗಳಿಗೆ ಬೇಕಾದ ಹಣ ಬಿಡುಗಡೆಯಾದ ಮೇಲೆ ಮಾತ್ರ ಅವುಗಳನ್ನು ನಿಯಮಾನುಸಾರ ಖರೀದಿಸಲು ಕ್ರಮ ಕೈಗೊಳ್ಳತಕ್ಕದು.

4) 2011–12ನೇ ಸಾಲಿನಲ್ಲಿ ಹಾಗು 2012–13ನೇ ಸಾಲಿಗೆ ಆಯವ್ಯಯದಲ್ಲಿ ಈ ಬೆಟಾಲಿಯನ್‌ಗಳಿಗೆ ಅಗತ್ಯವಿರುವ ಅನುದಾನವನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಕಲ್ಪಿಸಿಕೊಳ್ಳಲು ಕ್ರಮ ತೆಗೆದುಕೊಳ್ಳತಕ್ಕದ್ದು.

5) 2ನೇ ಮತ್ತು 3ನೇ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (KSISF) ಘಟಕಗಳ ರಚನೆಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

i. ಸದರಿ ಪಡೆಯ ವೆಚ್ಚವನ್ನು ಸರ್ಕಾರಿ/ಸಾರ್ವಜನಿಕ ನಿಯಂತ್ರಣದ ಸಂಸ್ಥೆಗಳಿಗೆ/ನೀರಾವರಿ ಯೋಜನೆಗಳಿಗೆ/ ವಿದ್ಯುತ್ ಯೋಜನೆಗಳಿಗೆ ಮತ್ತಿತರೇ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ವಾಸ್ತವವಾಗಿ ಖರ್ಚಾಗುವ ಮೊತ್ತ ಹಾಗೂ ಆ ಮೊತ್ತದ ಮೇಲೆ ಶೇ. 15ರಷ್ಟನ್ನು ಸೇರಿಸಿ, ಆ ಒಟ್ಟಾರೆ ಮೊತ್ತವನ್ನು ಅಂತಹ ಸಂಬಂಧಿಸಿದ ಸಂಸ್ಥೆಗಳಿಂದ ವಸೂಲು ಮಾಡತಕ್ಕದ್ದು.

ii. ಸದರಿ ಪಡೆಯ ವೆಚ್ಚವನ್ನು ಖಾಸಗಿ ನಿಯಂತ್ರಣದ ಕಂಪನಿಗಳಿಗೆ ಒದಗಿಸಿದಲ್ಲಿ ವಾಸ್ತವವಾಗಿ ಖರ್ಚಾಗುವ ಮೊತ್ತ ಹಾಗೂ ಆ ಮೊತ್ತದ ಮೇಲೆ ಶೇ. 20ರಷ್ಟನ್ನು ಸೇರಿಸಿ, ಆ ಒಟ್ಟಾರೆ ಮೊತ್ತವನ್ನು ಅಂತಹ ಸಂಬಂಧಿಸಿದ ಸಂಸ್ಥೆಗಳಿಂದ ವಸೂಲು ಮಾಡತಕ್ಕದ್ದು.

iii. ಈ ಪಡೆಯ ಸೇವೆಯನ್ನು ನಿಯೋಜನೆ ಮಾಡುವ ಮೊದಲು ಆ ಸಂಸ್ಥೆಗಳಿಗಿರುವ ಬೆದರಿಕೆಯ ತೀವ್ರತೆ ಹಾಗೂ ಪ್ರಾಮುಖ್ಯತೆಯನ್ನು ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಪರಿಗಣಿಸತಕ್ಕದ್ದು.

iv. ಈ ಪಡೆಯ ಸೇವೆಯನ್ನು ಪಡೆಯುವ ಸಂಸ್ಥೆಗಳು ಹೊರಗುತ್ತಿಗೆ ಆಧಾರದ ಮೇಲೆ ಪಡೆದಿರುವ ರಕ್ಷಣಾ ಸಿಬ್ಬಂದಿಗಳನ್ನು ಆ ಸಂಸ್ಥೆಯ ಪರಿಧಿಯ ಭದ್ರತೆಗಾಗಿ ಉಪಯೋಗಿಸಿಕೊಂಡು ಈ ವಿಶೇಷ ಪಡೆಯ ಸಿಬ್ಬಂದಿಗಳನ್ನು ಕೇವಲ ಪ್ರಮುಖ ಪ್ರದೇಶಗಳ ಮಹತ್ವದ ಸ್ಥಾವರಗಳನ್ನು ಕಾಯಲು ಮಾತ್ರ [to guard the core areas of vital installations] ಉಪಯೋಗಿಸಿಕೊಳ್ಳುವ ಬಗ್ಗೆ ಪ್ರೋತ್ಸಾಹಿಸತಕ್ಕದ್ದು.

v. ಸರ್ಕಾರಿ ಸ್ವಾಮ್ಯದ ಯೋಜನೆಗಳ ಭದ್ರತೆಗೆ ಆದ್ಯತೆ ಮೇರೆಗೆ ಪ್ರಸ್ತಾಪಿತ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ ಘಟಕಕ್ಕೆ ವಹಿಸತಕ್ಕದ್ದು. ಆದಾಗ್ಯೂ ಈ ಪಡೆಯಲ್ಲಿ ಯಾವುದೇ ಸಮಯದಲ್ಲಿ ಹೆಚ್ಚುವರಿ ಸಿಬ್ಬಂದಿಗಳ ಲಭ್ಯತೆ ಇದ್ದಲ್ಲಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಸರ್ಕಾರಿ ಸ್ವಾಮ್ಯದ ಯೋಜನೆಗಳ ರಕ್ಷಣೆ ಅವಶ್ಯಕತೆ ಮತ್ತು ಬೇಡಿಕೆಯನ್ನು ಪೂರೈಸಿದ ನಂತರ, ಹೆಚ್ಚಿನ ಬೆದರಿಕೆ ಎದುರಿಸುತ್ತಿರುವ ಖಾಸಗಿ ಕಂಪನಿಗಳಿಗೆ ರಕ್ಷಣೆಗಾಗಿ ಸಿಬ್ಬಂದಿಯನ್ನು ನಿಯೋಜಿಸುವ ಬಗ್ಗೆ ಪರಿಗಣಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಎಫ್‌ಡಿ 206 ವೆಚ್ಚ–11/2011, ದಿನಾಂಕ: 30–07–2011 ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಂ. ಜಾಮದಾರ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 137 ಪಿಓಪಿ 2011, ದಿನಾಂಕ: 05–08–2011 ರ ಅನುಬಂಧ–I

ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್‌ನ ಪ್ರತಿ ಬೆಟಾಲಿಯನ್‌ಗೆ ಸೃಜಿಸಲು ಮಂಜೂರಾತಿ ನೀಡಿದ ಕಾರ್ಯಕಾರಿ ಮತ್ತು ಲಿಪಿಕ ಹುದ್ದೆಗಳು ಹಾಗೂ ಅವುಗಳಿಗೆ ತಗಲುವ ಅಂದಾಜು ವಾರ್ಷಿಕ ವೆಚ್ಚದ ವಿವರ

ಎ. ಕಾರ್ಯಕಾರಿ ಹುದ್ದೆಗಳು:

2011–12ನೇ ಸಾಲಿನಲ್ಲಿ ರಚಿಸಲಾಗುವ 2ನೇ ಬೆಟಾಲಿಯನ್					2012–13ನೇ ಸಾಲಿನಲ್ಲಿ ಸ್ಥಾಪಿಸಲಾಗುವ 3ನೇ ಬೆಟಾಲಿಯನ್			
ಕ್ರ. ಸಂ.	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ	1 ತಿಂಗಳಿಗೆ ತಗಲುವ ಅಂದಾಜು ವೆಚ್ಚ (ರೂ. ಗಳಲ್ಲಿ)	1 ವರ್ಷಕ್ಕೆ ತಗಲುವ ಅಂದಾಜು ವೆಚ್ಚ (ರೂ.ಗಳಲ್ಲಿ)	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ	1 ತಿಂಗಳಿಗೆ ತಗಲುವ ಅಂದಾಜು ವೆಚ್ಚ (ರೂ.ಗಳಲ್ಲಿ)	1 ವರ್ಷಕ್ಕೆ ತಗಲುವ ಅಂದಾಜು ವೆಚ್ಚ (ರೂ.ಗಳಲ್ಲಿ)
1	ಕಮಾಂಡೆಂಟ್ [Commandant] 18150–26925	1	37714	452568	ಕಮಾಂಡೆಂಟ್ [Commandant] 18150–26925	1	37714	452568
2	ಡೆಪ್ಯೂಟಿ ಕಮಾಂಡೆಂಟ್ [Deputy Commandant] 15200–25650	1	33628	403536	ಡೆಪ್ಯೂಟಿ ಕಮಾಂಡೆಂಟ್ [Deputy Commandant] 15200–25650	1	33628	403536
3	ಅಸಿಸ್ಟೆಂಟ್ ಕಮಾಂಡೆಂಟ್ [Assistant Commandant] 14050–25050	8	262024	3144288	ಅಸಿಸ್ಟೆಂಟ್ ಕಮಾಂಡೆಂಟ್ [Assistant Commandant] 14050–25050	8	262024	3144288

4	ಕೆ.ಎಸ್.ಐ.ಎಸ್.ಎಫ್–ಪೊಲೀಸ್ ಇನ್ಸ್‌ಪೆಕ್ಟರ್ [K.S.I.S.F-Police Inspector] 10800–20025	24	621264	7455168	ಕೆ.ಎಸ್.ಐ.ಎಸ್.ಎಫ್–ಪೊಲೀಸ್ ಇನ್ಸ್‌ಪೆಕ್ಟರ್ [K.S.I.S.F-Police Inspector] 10800–20025	24	621264	7455168
5	ಕೆ.ಎಸ್.ಐ.ಎಸ್.ಎಫ್–ಪೊಲೀಸ್ ಸಬ್ ಇನ್ಸ್‌ಪೆಕ್ಟರ್ [K.S.I.S.F-Police Sub Inspector] 10000–18150	66	1571790	18861480	ಕೆ.ಎಸ್.ಐ.ಎಸ್.ಎಫ್–ಪೊಲೀಸ್ ಸಬ್ ಇನ್ಸ್‌ಪೆಕ್ಟರ್ [K.S.I.S.F-Police Sub Inspector] 10000–18150	66	1571790	18861480
6	ಕೆ.ಎಸ್.ಐ.ಎಸ್.ಎಫ್–ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ [K.S.I.S.F-Assistant Sub Inspector of Police] 7275–13350	126	2213820	26565840	ಕೆ.ಎಸ್.ಐ.ಎಸ್.ಎಫ್–ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ [K.S.I.S.F-Assistant Sub Inspector of Police] 7275–13350	126	2213820	26565840
7	ಕೆ.ಎಸ್.ಐ.ಎಸ್.ಎಫ್–ಹೆಡ್ ಕಾನ್ಸ್‌ಟೇಬಲ್ [K.S.I.S.F- Head Constable] 6250–12000	155	2417690	29012280	ಕೆ.ಎಸ್.ಐ.ಎಸ್.ಎಫ್–ಹೆಡ್ ಕಾನ್ಸ್‌ಟೇಬಲ್ [K.S.I.S.F-Head Constable] 6250–12000	155	2417690	29012280
8	ಕೆ.ಎಸ್.ಐ.ಎಸ್.ಎಫ್–ಪೊಲೀಸ್ ಕಾನ್ಸ್‌ಟೇಬಲ್ [K.S.I.S.F- Police Constable] 5800–10500	577	8065883	96790596	ಕೆ.ಎಸ್.ಐ.ಎಸ್.ಎಫ್–ಪೊಲೀಸ್ ಕಾನ್ಸ್‌ಟೇಬಲ್ [K.S.I.S.F-Police Constable] 5800–10500	577	8065883	96790596
9	ಫಾಲೋಯರ್ಸ್ [Followers] (ವಾಟರ್ ಕ್ಯಾರಿಯರ್ಸ್, ಸ್ವೀಪರ್ಸ್, ಕುಕ್, ಡೋಬಿಸ್ & ಬಾರ್ಬರ್) 5200–8200	69	788118	9457416	ಫಾಲೋಯರ್ಸ್ [Followers] (ವಾಟರ್ ಕ್ಯಾರಿಯರ್ಸ್, ಸ್ವೀಪರ್ಸ್, ಕುಕ್, ಡೋಬಿಸ್ & ಬಾರ್ಬರ್) 5200–8200	69	788118	9457416
	ಒಟ್ಟು	1027		19,21,43,172	ಒಟ್ಟು	1027		19,21,43,172

ಬಿ. ಲಿಪಿಕ ಹುದ್ದೆಗಳು

2011–12ನೇ ಸಾಲಿನಲ್ಲಿ ರಚಿಸಲಾಗುವ 2ನೇ ಬೆಟಾಲಿಯನ್					2012–13ನೇ ಸಾಲಿನಲ್ಲಿ ಸ್ಥಾಪಿಸಲಾಗುವ 3ನೇ ಬೆಟಾಲಿಯನ್			
ಕ್ರ. ಸಂ.	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ	1 ತಿಂಗಳಿಗೆ ತಗಲುವ ಅಂದಾಜು ವೆಚ್ಚ (ರೂ. ಗಳಲ್ಲಿ)	1 ವರ್ಷಕ್ಕೆ ತಗಲುವ ಅಂದಾಜು ವೆಚ್ಚ (ರೂ.ಗಳಲ್ಲಿ)	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ	1 ತಿಂಗಳಿಗೆ ತಗಲುವ ಅಂದಾಜು ವೆಚ್ಚ (ರೂ.ಗಳಲ್ಲಿ)	1 ವರ್ಷಕ್ಕೆ ತಗಲುವ ಅಂದಾಜು ವೆಚ್ಚ (ರೂ.ಗಳಲ್ಲಿ)
1	ಆಡಳಿತಾಧಿಕಾರಿ 14050–25050	1	32753	393036	ಆಡಳಿತಾಧಿಕಾರಿ 14050–25050	1	32753	393036
2	ಸಹಾಯಕ ಆಡಳಿತಾಧಿಕಾರಿ 11400–21600	1	27740	332880	ಸಹಾಯಕ ಆಡಳಿತಾಧಿಕಾರಿ 11400–21600	1	27740	332880
3	ಶಾಖಾಧೀಕ್ಷಕರು 10000–18150	2	51870	622440	ಶಾಖಾಧೀಕ್ಷಕರು 10000–18150	2	51870	622440
4	ಪ್ರ.ದ.ಸ. 7275–13350	6	104814	1257768	ಪ್ರ.ದ.ಸ. 7275–13350	6	104814	1257768

5	ದ್ವಿ.ದ.ಸ 5800–10500	8	111032	1332384	ದ್ವಿ.ದ.ಸ 5800–10500	8	111032	1332384
6	ಶೀಘ್ರಲಿಪಿಗಾರ 7275–13350	2	35178	422136	ಶೀಘ್ರಲಿಪಿಗಾರ 7275–13350	2	35178	422136
7	ಬೆರಳಚ್ಚುಗಾರ 5800–10500	2	27938	335256	ಬೆರಳಚ್ಚುಗಾರ 5800–10500	2	27938	335256
8	ದಲಾಯತ್ 4800–7275	8	82976	995712	ದಲಾಯತ್ 4800–7275	8	82976	995712
9	ಡಾಕ್ಟರ್ 14050–25050	1	32753	393036	ಡಾಕ್ಟರ್ 14050–25050	1	32753	393036
10	ಫಾರ್ಮಸಿಸ್ಟ್ 8825–16000	1	20956	251472	ಫಾರ್ಮಸಿಸ್ಟ್ 8825–16000	1	20956	251472
11	ನರ್ಸ್ 8825–16000	1	20956	251472	ನರ್ಸ್ 8825–16000	1	20956	251472
	ಒಟ್ಟು	**33**		**65,87,592**	**ಒಟ್ಟು**	**33**		**65,87,592**

ಬಿ. ರಾಜಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 137 ಪಿಓಪಿ 2011, ದಿನಾಂಕ: 05–08–2011 ರ ಅನುಬಂಧ–II

ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್‌ನ ಪ್ರತಿ ಬೆಟಾಲಿಯನ್‌ಗೆ ಮಂಜೂರು ಮಾಡಿರುವ ಸಾರಿಗೆ, ವೈರ್‌ಲೆಸ್ ಸಾಧನಗಳು ಹಾಗೂ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ಅಂದಾಜು ಅನಾವರ್ತಕ ವೆಚ್ಚದ ವಿವರ

2011–12ನೇ ಸಾಲಿನಲ್ಲಿ ರಚಿಸಲಾಗುವ 2ನೇ ಬೆಟಾಲಿಯನ್					2012–13ನೇ ಸಾಲಿನಲ್ಲಿ ಸ್ಥಾಪಿಸಲಾಗುವ 3ನೇ ಬೆಟಾಲಿಯನ್			
Sl. No.	Details	Quantity	Rate (in Rs.)	Total (in Rs.)	Details	Quantity	Rate (in Rs.)	Total (in Rs.)
ಸಾರಿಗೆ (TRANSPORT)					**ಸಾರಿಗೆ (TRANSPORT)**			
1)	Innova Car	2 Nos.	10,000,00-00	20,000,00,-00	Innova Car	2 Nos.	10,000,00-00	20,000,00,-00
2)	Ambassador Car	2 Nos.	5,000,00-00	10,000,00,-00	Ambassador Car	2 Nos.	5,000,00-00	10,000,00,-00
3)	Jeep	8 Nos.	4,76,000-00	38,08,000-00	Jeep	8 Nos.	4,76,000-00	38,08,000-00
4)	Minibus	4 Nos.	14,000,00-00	56,000,00-00	Minibus	4 Nos.	14,000,00-00	56,000,00-00
5)	Buses	4 Nos.	13,65,000-00	54,60,000-00	Buses	4 Nos.	13,65,000-00	54,60,000-00
6)	Trucks	2 Nos.	7,50,,000-00	15,00,000-00	Trucks	2 Nos.	7,50,,000-00	15,00,000-00
7)	Motorcycles	30 Nos.	52,000-00	15,60,000-00	Motorcycles	30 Nos.	52,000-00	15,60,000,-00
8)	Ambulance	1 No.	8,000,00-00	8,000,00,-00	Ambulance	1 No.	8,000,00-00	8,000,00,-00
ವೈರ್‌ಲೆಸ್ ಸಲಕರಣೆಗಳು (WIRELESS EQUIPMENTS)					**ವೈರ್‌ಲೆಸ್ ಸಲಕರಣೆಗಳು (WIRELESS EQUIPMENTS)**			
1)	HF sets	2 Set	1,50,000-00	3,00,000,-00	HF sets	2 Set	1,50,000-00	3,00,000,-00
2)	Duplex sets	2 Set	60,,000-00	1,20,000,-00	Duplex sets	2 Set	60,,000-00	1,20,000,-00
3)	20W VHF sets	15 Sets	12,000-00	1,80,000-00	20W VHF sets	15 Sets	12,000-00	1,80,000-00
4)	2W VHF sets	30 Sets	12,000-00	3,60,000-00	2W VHF sets	30 Sets	12,000-00	3,60,000-00
ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳು (ARMS AND AMMUNITION)					**ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳು (ARMS AND AMMUNITION)**			
1)	SLR	175 Nos.	28,350-00	49,61,250-00	SLR	175Nos	28,350-00	49,61,250-00
2)	Pistol 9mm	30 Nos.	15,000-00	4,50,000-00	Pistol 9mm	30 Nos.	15,000-00	4,50,000-00
3)	9mm Carbine	50 Nos.	14,000-00	7,00,000-00	9mm Carbine	50 Nos.	14,000-00	7,00,000-00
4)	Mortars 51 mm	10 Nos.	82,286-00+ 12.5 Vat	8,22,860-00+ 12.5 Vat	Mortars 51 mm	10 Nos.	82,286-00+ 12.5 Vat	8,22,860-00+ 12.5 Vat
5)	LMGs	10 Nos.	2,121-00	21,210-00	LMGs	10 Nos.	2,121-00	21,210-00
6)	7.62 mm SLRs (with SOL Tube attachment)	10 Nos.	28,350-00	2,83,500-00	7.62 mm SLRs (with SOL Tube attachment)	10 Nos.	28,350-00	2,83,500-00
7)	Office Building			3,00,00,000-00	Office Building			3,00,00,000-00
			TOTAL	5,99,26,820-00			TOTAL	5,99,26,820-00

ಬಿ. ರಾಜಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 137 ಪಿಓಪಿ 2011, ದಿನಾಂಕ: 05–08–2011 ರ ಅನುಬಂಧ–III

ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್‌ನ ಪ್ರತಿ ಬೆಟಾಲಿಯನ್‌ಗೆ ಮಂಜೂರಾದ ವಾಹನಗಳ ನಿರ್ವಹಣೆಯ ಅಂದಾಜು ಅನಾವರ್ತಕ ವೆಚ್ಚದ ವಿವರ

(POL CHARGES, MAINTENANCE CHARGES)

2011–12ನೇ ಸಾಲಿನಲ್ಲಿ ರಚಿಸಲಾಗುವ 2ನೇ ಬೆಟಾಲಿಯನ್							2012–13ನೇ ಸಾಲಿನಲ್ಲಿ ಸ್ಥಾಪಿಸಲಾಗುವ 3ನೇ ಬೆಟಾಲಿಯನ್					
ಕ್ರ. ಸಂ.	ವಾಹನದ ಹೆಸರು	ಒಂದು ವಾಹನಕ್ಕೆ ಒಂದು ವರ್ಷಕ್ಕೆ ತಗಲುವ ಇಂಧನದ ಅಂದಾಜು ವೆಚ್ಚ (ರೂ.ಗಳಲ್ಲಿ)	ಒಂದು ವಾಹನಕ್ಕೆ ಒಂದು ವರ್ಷಕ್ಕೆ ತಗಲುವ ನಿರ್ವಹಣೆಯ ಅಂದಾಜು ವೆಚ್ಚ (ರೂ.ಗಳಲ್ಲಿ)	3+4 ರ ಒಟ್ಟು ಮೊತ್ತ (ರೂ. ಗಳಲ್ಲಿ)	ಪ್ರಸ್ತಾವನೆಯ ಒಟ್ಟು ವಾಹನಗಳ ಸಂಖ್ಯೆ	ವಾಹನಗಳ ಪ್ರಸ್ತಾವನೆಗಳಿಗೆ ತಗಲುವ ಒಟ್ಟು ಮೊತ್ತದ ಅಂದಾಜು ಪಟ್ಟಿ (ರೂ.ಗಳಲ್ಲಿ)	ವಾಹನದ ಹೆಸರು	ಒಂದು ವಾಹನಕ್ಕೆ ಒಂದು ವರ್ಷಕ್ಕೆ ತಗಲುವ ಇಂಧನದ ಅಂದಾಜು ವೆಚ್ಚ (ರೂ. ಗಳಲ್ಲಿ)	ಒಂದು ವಾಹನಕ್ಕೆ ಒಂದು ವರ್ಷಕ್ಕೆ ತಗಲುವ ನಿರ್ವಹಣೆಯ ಅಂದಾಜು ವೆಚ್ಚ (ರೂ.ಗಳಲ್ಲಿ)	3+4 ರ ಒಟ್ಟು ಮೊತ್ತ (ರೂ. ಗಳಲ್ಲಿ)	ಪ್ರಸ್ತಾವನೆಯ ಒಟ್ಟು ವಾಹನಗಳ ಸಂಖ್ಯೆ	ವಾಹನಗಳ ಪ್ರಸ್ತಾವನೆಗಳಿಗೆ ತಗಲುವ ಒಟ್ಟು ಮೊತ್ತದ ಅಂದಾಜು ಪಟ್ಟಿ (ರೂ. ಗಳಲ್ಲಿ)
1)	ಇನೋವ ಕಾರು	78,000-00	1,50,000-00	2,28,000-00	02	4,56,000	ಇನೋವ ಕಾರು	78,000-00	1,50,000-00	2,28,000-00	02	4,56,000
2)	ಅಂಬಾಸಿಡರ್ ಕಾರು	78,000-00	1,50,000-00	2,28,000-00	02	4,56,000	ಅಂಬಾಸಿಡರ್ ಕಾರು	78,000-00	1,50,000-00	2,28,000-00	02	4,56,000
3)	ಜೀಪು	78,000-00	1,00,000-00	1,78,000-00	08	14,24,000	ಜೀಪು	78,000-00	1,00,000-00	1,78,000-00	08	14,24,000
4)	ಮಿನಿ ಬಸ್	66,000-00	1,50,000-00	2,16,000-00	04	8,64,000	ಮಿನಿ ಬಸ್	66,000-00	1,50,000-00	2,16,000-00	04	8,64,000
5)	ಬಸ್	66,000-00	1,50,000-00	2,16,000-00	04	8,64,000	ಬಸ್	66,000-00	1,50,000-00	2,16,000-00	04	8,64,000
6)	ಟ್ರಕ್	60,000-00	1,50,000-00	2,10,,000-00	02	4,20,000	ಟ್ರಕ್	60,000-00	1,50,000-00	2,10,,000-00	02	4,20,000
7)	ಮೋಟಾರ್ ಸೈಕಲ್	24,000-00	20,000-00	44,000-00	30	13,20,000	ಮೋಟಾರ್ ಸೈಕಲ್	24,000-00	20,000-00	44,000-00	30	13,20,000
8)	ಆಂಬುಲೆನ್ಸ್	24,000-00	1,00,000-00	1,24,000-00	01	1,24,000	ಆಂಬುಲೆನ್ಸ್	24,000-00	1,00,000-00	1,24,000-00	01	1,24,000
					ಒಟ್ಟು	59,28,000					**ಒಟ್ಟು**	59,28,000

ಬಿ. ರಾಜಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 137 ಪಿಓಪಿ 2011, ದಿನಾಂಕ: 05–08–2011 ರ ಅನುಬಂಧ–IV

ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್‌ನ ಪ್ರತಿ ಬೆಟಾಲಿಯನ್‌ಗೆ ಮಂಜೂರಾದ ಸಮವಸ್ತ್ರ ಮತ್ತು ಕಿಟ್ ಸಾಮಗ್ರಿಗಳ ಅಂದಾಜು ವೆಚ್ಚದ ವಿವರ

(UNIFORM AND KIT ARTICLES)

2011–12ನೇ ಸಾಲಿನಲ್ಲಿ ರಚಿಸಲಾಗುವ 2ನೇ ಬೆಟಾಲಿಯನ್						2012–13ನೇ ಸಾಲಿನಲ್ಲಿ ಸ್ಥಾಪಿಸಲಾಗುವ 3ನೇ ಬೆಟಾಲಿಯನ್				
Sl. No.	Ranks	Total No. of Items	Strength	Approximate Unit cost+tax (per each PA) Rs. Ps.	Total Amount + tax (in Rs.)	Ranks	Total No. of Items	Strength	Approximate Unit cost+tax (per each PA) Rs. Ps.	Total Amount + tax (in Rs.)
ಸಾರಿಗೆ (TRANSPORT)						**ಸಾರಿಗೆ (TRANSPORT)**				
1.	KSISF - PSI	15 Items	66	1051-34	69,388-00	KSISF - PSI	15 Items	66	1051-34	69,388-00
2.	KSISF -ASI		126	1051-34	1,32,469-00	KSISF -ASI		126	1051-34	1,32,469-00
3.	KSISF -HC	32 Items	155	1705-27	2,64,317-00	KSISF -HC	32 Items	155	1705-27	2,64,317-00
4.	KSISF -PC		577	1705-27	9,83,941-00	KSISF -PC		577	1705-27	9,83,941-00
	TOTAL		*924		14,50,115-00	TOTAL		*924		14,50,115-00

*Kit articles are supplied to police Personnel from the rank of KSISF - PC's to KSISF - PSI's only

ಬಿ. ರಾಜಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಪಿ.ಆರ್. 2017

ಶಿಕ್ಷಣ ಸಚಿವಾಲಯ

ವಿಷಯ : ಡಿ.ಇಡಿ. ಪಠ್ಯಕ್ರಮವನ್ನು ಪರಿಷ್ಕರಿಸಲು ಸಮಿತಿಯನ್ನು ರಚಿಸುವ ಕುರಿತು.

ಓದಲಾಗಿದೆ : 1. ದಿನಾಂಕ : 17-09-2009ರ ಡಿ.ಎಸ್.ಇ.ಆರ್.ಟಿ. ನಿರ್ದೇಶಕರ ಪತ್ರ ಸಂಖ್ಯೆ : ಶಿತ.ಡಿ.ಇಡಿ. ಪಠ್ಯಕ್ರಮ ಪರಿಷ್ಕರಣೆ/2009-10.

2. ದಿನಾಂಕ : 02-08-2010ರ ಡಿ.ಎಸ್.ಇ.ಆರ್.ಟಿ. ನಿರ್ದೇಶಕರ ಪತ್ರ ಸಂಖ್ಯೆ : ಶಿತ.2ಡಿ.ಇಡಿ. ಪ.ಕ್ರ.ಪ. 27/2009-10/77.

3. ದಿನಾಂಕ : 03-04-2010ರ ಸರ್ಕಾರಿ ಆದೇಶ ಸಂಖ್ಯೆ : ಇಡಿ 112 ಯೋಯೋಕ 2010.

ಪ್ರಸ್ತಾವನೆ :

1. ಮೇಲೆ (1)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಡಿ.ಎಸ್.ಇ.ಆರ್.ಟಿ. ನಿರ್ದೇಶಕರು ಡಿ.ಇಡಿ., ಪಠ್ಯವಸ್ತು ಪರಿಶೀಲನೆಯನ್ನು ಆರ್.ಐ.ಇ. ಮೈಸೂರು ರವರಿಗೆ ವಹಿಸಲಾಗಿದ್ದು, ಸದರಿಯವರು ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯನ್ವಯ ಡಿ.ಇಡಿ., ಪಠ್ಯಕ್ರಮವನ್ನು ಪರಿಷ್ಕರಿಸಬೇಕಾಗಿದೆ ಎಂದು ಪ್ರಸ್ತಾಪಿಸಿರುತ್ತಾರೆ. ಮುಂದುವರೆದು, ಈಗಾಗಲೇ ಇಲಾಖೆಯಿಂದ ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಬದಲಾವಣೆ ಬಗ್ಗೆ ಪರಿಚಯಿಸಬೇಕಾಗಿರುತ್ತದೆ. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಅನುವಾಗುವಂತೆ ಚಟುವಟಿಕೆ ಆಧಾರಿತ ವಿಧಾನದ ಕುರಿತು ಡಿ.ಇಡಿ., ಕೋರ್ಸಿನ ಅಭ್ಯರ್ಥಿಗಳಿಗೆ ಪರಿಚಯಿಸಲು ಮತ್ತು ಶಾಲೆಗಳಲ್ಲಿ ರೂಡಿ ಬೋಧನೆಯನ್ನು ಈ ವಿಧಾನದಲ್ಲಿ ಅಳವಡಿಸಿ ಅವಕಾಶ ಕಲ್ಪಿಸಬೇಕಾಗುತ್ತದೆ. 2002ರ ಪಠ್ಯಕ್ರಮದಲ್ಲಿ ನಿಕಟ ಸೇವಾ ತರಬೇತಿಯ ಅವಧಿಯನ್ನು 6 ತಿಂಗಳಿಗೆ ನಿಗದಿಪಡಿಸಿದ್ದು, ಸಂಸ್ಥೆಗಳ ಬೇಡಿಕೆ ನಂತರ ಅವಧಿಯನ್ನು 3 ತಿಂಗಳಿಗೆ ಸೀಮಿತಗೊಳಿಸಲಾಗಿದೆ ಇದರಿಂದಾಗಿ ಪಠ್ಯಕ್ರಮದ ಹೊರೆ ಕಡಿಮೆಯಾಗಿರುವುದಿಲ್ಲ.

2. ಮೇಲ್ಕಂಡ ಅಂಶಗಳನ್ನು ಪಠ್ಯಕ್ರಮ ಮತ್ತು ಪಠ್ಯವಸ್ತುವಿನಲ್ಲಿ ಅಳವಡಿಸುವ ಕುರಿತು ಇಲಾಖೆಯ ಹಂತದಲ್ಲಿ ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸಿ ಅಭಿಪ್ರಾಯವನ್ನು ಪಡೆದು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಸಮಿತಿಗೆ ಸುಮಾರು 20 ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ಐದು ಹಂತಗಳಲ್ಲಿ 5 ದಿನಗಳ ಕಾರ್ಯಾಗಾರವನ್ನು ನಡೆಸಬೇಕಾಗಿದ್ದು, ಒಟ್ಟಾರೆ ರೂ. 7,67,500/- ವೆಚ್ಚವನ್ನು ಭರಿಸಬೇಕಾಗುತ್ತದೆಂದು ನಿರ್ದೇಶಕರು ತಿಳಿಸಿರುತ್ತಾರೆ.

3. ಮೇಲೆ (2)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಡಿ.ಎಸ್.ಇ.ಆರ್.ಟಿ. ನಿರ್ದೇಶಕರು 2010-11ನೇ ಸಾಲಿನ ಆಯವ್ಯಯದಲ್ಲಿ ರೂ. 8 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಡಿ.ಇಡಿ., ತರಬೇತಿಯಲ್ಲಿ ಒಟ್ಟು 13 ಬೋಧನಾ ವಿಷಯಗಳಿದ್ದು ಒಂದು ವಿಷಯಕ್ಕೆ ಐದು ಸಂಪನ್ಮೂಲ ವ್ಯಕ್ತಿಗಳ ಅವಶ್ಯಕತೆ ಇರುತ್ತದೆಂದು ತಿಳಿಸುತ್ತಾ ಸಮಿತಿಯ ಅಧ್ಯಕ್ಷರನ್ನು ನೇಮಿಸುವಂತೆ ಕೋರಿ ಕೊಂಡಿರುತ್ತಾರೆ.

4. ಮೇಲೆ (3)ರಲ್ಲಿ ಓದಲಾದ ಆದೇಶದಲ್ಲಿ ಡಿ.ಇಡಿ., ಪಠ್ಯ ಪುಸ್ತಕ ಪರಿಷ್ಕರಣೆ ಕಾರ್ಯಾಗಾರಕ್ಕೆ 2010-11ನೇ ಸಾಲಿನಲ್ಲಿ ರೂ. 8 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಈ ಮೇಲ್ಕಂಡ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 21 ಪಿಟಿಐ 2010, ಬೆಂಗಳೂರು, ದಿನಾಂಕ : 09-08-2011

5. ಡಿ.ಇಡಿ., ಪಠ್ಯಕ್ರಮ ಮತ್ತು ಪಠ್ಯ ವಸ್ತುವನ್ನು ಪರಿಷ್ಕರಿಸುವುದಕ್ಕೆ ಸಂಬಂಧಿಸಿದಂತೆ, ಇಲಾಖೆಯ ಹಂತದಲ್ಲಿ ಡಾ॥ ಕೆ.ಎಸ್. ಸಮೀರ ಸಿಂಹ ಇವರನ್ನು ಅಧ್ಯಕ್ಷರನ್ನಾಗಿಸಿಕೊಂಡು ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸಿ ಕಾರ್ಯಕ್ರಮ ಕೈಗೊಳ್ಳಲು ಸರ್ಕಾರದ ಅನುಮತಿಯನ್ನು ನೀಡಿ ಆದೇಶಿಸಲಾಗಿದೆ.

6. ಡಿ.ಇಡಿ., ತರಬೇತಿಯಲ್ಲಿ ಒಟ್ಟು 13 ಬೋಧನಾ ವಿಷಯಗಳಿಗೆ ಒಂದು ವಿಷಯಕ್ಕೆ 5 ಸಂಪನ್ಮೂಲ ವ್ಯಕ್ತಿಗಳಂತೆ ಸಮಿತಿಯನ್ನು ರಚಿಸಿಕೊಂಡು 5 ಹಂತಗಳಲ್ಲಿ 5 ದಿನಗಳ ಕಾರ್ಯಾಗಾರವನ್ನು ನಡೆಸಲು ಒಟ್ಟಾರೆ ರೂ. 7,67,500/-ಗಳನ್ನು ವೆಚ್ಚ ಮಾಡಲು ಸರ್ಕಾರದ ಅನುಮೋದನೆಯನ್ನು ನೀಡಿ ಆದೇಶಿಸಿದೆ.

7. ಈ ಆದೇಶವನ್ನು ದಿನಾಂಕ : 06-12-2010ರ ಆಂತರಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಶಿಇ 2284 ಐಎಫ್(ಬಿ&ಎ) 2010 ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಬಿ. ಪಟಗಾರ್
ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)
ಶಿಕ್ಷಣ ಇಲಾಖೆ

ಪಿ.ಆರ್. 2018

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಕರ್ನಾಟಕ ಲೋಕಾಯುಕ್ತದಲ್ಲಿ ಗುತ್ತಿಗೆ ಆಧಾರದ ಮೇಲೆ ಅಪರ ನಿಬಂಧಕ (ವಿಚಾರಣೆಗಳು) ರಾಗಿ ನೇಮಕವಾಗಿರುವ ಶ್ರೀ ಬಿ.ಯೋಗಿನಾಥ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ವೇತನವನ್ನು ಪುನರ್‌ನಿಗದಿಪಡಿಸುವ ಬಗ್ಗೆ.

ಓದಲಾಗಿದೆ : 1. ಅಧಿಸೂಚನೆ ಸಂಖ್ಯೆ : ಸಿಆಸುಇ 28 ಸೇಲೋಯ 2007 ದಿನಾಂಕ : 02-01-2007.

2. ಅಧಿಸೂಚನೆ ಸಂಖ್ಯೆ : ಸಿಆಸುಇ 160 ಸೇಲೋಯ 2008 ದಿನಾಂಕ : 11-12-2008.

3. ಅಧಿಸೂಚನೆ ಸಂಖ್ಯೆ : ಸಿಆಸುಇ 22 ಸೇಲೋಯ 2011 ದಿನಾಂಕ : 30-04-2011.

4. ಆದೇಶ ಸಂಖ್ಯೆ : ಸಿಆಸುಇ 28 ಸೇಲೋಯ 2007 ದಿನಾಂಕ : 25-04-2007.

5. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ : ಎಲ್‌ಎಡಬ್ಲ್ಯೂ 147 ಎಲ್‌ಎಸಿ 2009 ದಿನಾಂಕ : 30-09-2010 ಮತ್ತು ದಿನಾಂಕ : 13-10-2010.

6. ಕರ್ನಾಟಕ ಲೋಕಾಯುಕ್ತದ ನಿಬಂಧಕರ ದಿನಾಂಕ : 26-05-2011ರ ಪತ್ರ ಸಂಖ್ಯೆ : ಕಲೋ/ಸಿಬ್ಬಂದಿ (1)/29/2006-07.

ಪ್ರಸ್ತಾವನೆ :

ಶ್ರೀ ಬಿ.ಯೋಗಿನಾಥ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿದ್ದ ಅಪರ ನಿಬಂಧಕ (ವಿಚಾರಣೆಗಳು) ಹುದ್ದೆಗೆ ಮೇಲೆ (1)ರಲ್ಲಿ ಓದಲಾದ ದಿನಾಂಕ : 02-01-2007ರ ಅಧಿಸೂಚನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಳ

ಅವಧಿಗೆ ನೇಮಕಾತಿ ಮಾಡಿದ್ದು, ದಿನಾಂಕ : 10–01–2007 ರಿಂದ ಕರ್ತವ್ಯ ನಿರ್ವಹಿಸಿರುತ್ತಾರೆ. ಇವರ ಗುತ್ತಿಗೆ ಆಧಾರದ ನೇಮಕಾತಿಯನ್ನು ಮೇಲೆ (2) ರಲ್ಲಿ ಓದಲಾದ ದಿನಾಂಕ : 11–12–2008 ರ ಅಧಿಸೂಚನೆಯ ಮೂಲಕ ಮತ್ತೆರಡು ವರ್ಷಗಳ ಅವಧಿಗೆ ಮುಂದುವರಿಸಲಾಗಿತ್ತು. ತದನಂತರ, ದಿನಾಂಕ : 30–04–2011ರ ಅಧಿಸೂಚನೆಯಲ್ಲಿ (ಮೇಲೆ (3)ರಲ್ಲಿ ಓದಲಾಗಿದೆ) ದಿನಾಂಕ : 10–01–2011 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಇವರ ಹಾಲಿ ಗುತ್ತಿಗೆ ಆಧಾರದ ನೇಮಕಾತಿಯನ್ನು ಮುಂದುವರಿಸಲಾಗಿದೆ. ಮೇಲೆ (4)ರಲ್ಲಿ ಓದಲಾದ ದಿನಾಂಕ : 25–04–2007ರ ಆದೇಶದಲ್ಲಿ ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳು (ಮರುನೇಮಕಾತಿಯ ವೇತನವನ್ನು ಹೊರತುಪಡಿಸಿ) ಶ್ರೀ ಯೋಗಿನಾಥ್, ಅಪರ ನಿಬಂಧಕರು (ವಿಚಾರಣೆಗಳು) ಇವರಿಗೆ ಈವರೆವಿಗೂ ಅನ್ವಯವಾಗುತ್ತಿದೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯು ಹೊರಡಿಸಿರುವ ಮೇಲೆ (5)ರಲ್ಲಿ ಓದಲಾದ ದಿನಾಂಕ : 30–09–2010 ಮತ್ತು 13–10–2010ರ ಆದೇಶಗಳಲ್ಲಿ ನಿವೃತ್ತ ನ್ಯಾಯಾಂಗ ಅಧಿಕಾರಿಗಳ ನಿವೃತ್ತಿ ವೇತನವು ಪೂರ್ವಾನ್ವಯವಾಗಿ ಪರಿಷ್ಕರಿಸಿರುವುದರಿಂದ, ತಮ್ಮ ಗುತ್ತಿಗೆ ಆಧಾರದ ನೇಮಕಾತಿಯ ವೇತನವನ್ನು ಪೂರ್ವಾನ್ವಯವಾಗಿ ಪುನರ್‌ನಿಗದಿಪಡಿಸುವಂತೆ ಶ್ರೀ ಯೋಗಿನಾಥ್‌ರವರು ಸಲ್ಲಿಸಿರುವ ಕೋರಿಕೆಯನ್ನು ಪರಿಗಣಿಸಲು ಮೇಲೆ (6)ರಲ್ಲಿ ಓದಲಾದ ದಿನಾಂಕ : 26–05–2011ರ ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತದ ನಿಬಂಧಕರು ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 117 ಸೇಲೋಯು 2011, ಬೆಂಗಳೂರು, ದಿನಾಂಕ : 08–08–2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಬಿ.ಯೋಗಿನಾಥ್, ಅಪರ ನಿಬಂಧಕರು (ವಿಚಾರಣೆಗಳು), ಕರ್ನಾಟಕ ಲೋಕಾಯುಕ್ತ ಇವರ ವೇತನವನ್ನು ದಿನಾಂಕ : 10–01–2007 ರಿಂದ ಅನ್ವಯವಾಗುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 313 (ಬಿ) ಪ್ರಕಾರ ರೂ. 22,227/– ಕ್ಕೆ ಪುನರ್‌ನಿಗದಿಪಡಿಸಲಾಗಿದೆ. ಈ ಮರುನೇಮಕಾತಿ ವೇತನದೊಂದಿಗೆ ಶ್ರೀಯುತರು ನಿವೃತ್ತಿ ಸಮಯದಲ್ಲಿ ಪಡೆಯುತ್ತಿದ್ದ ಮೂಲ ವೇತನವಾದ (ಪರಿಷ್ಕೃತ) ರೂ. 60,310/–ಕ್ಕೆ ಲಭ್ಯವಾಗುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ. ಆದರೆ, ನಿವೃತ್ತಿ ವೇತನದ ಮೇಲಿನ ತುಟ್ಟಿಭತ್ಯೆಯನ್ನು ಪಡೆಯುವಂತಿಲ್ಲ. ನಿವೃತ್ತಿ ನಂತರದ ಸೇವೆಯನ್ನು ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವಂತಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 813 ಸೇ–3/2011, ದಿನಾಂಕ : 23–07–2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಮಾರ್ಕಂಡೇಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2019 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು–2)

ಕಂದಾಯ ಸಚಿವಾಲಯ

ವಿಷಯ : ಶ್ರೀ ನವೀನ್ ಜೋಸೆಫ್, ತಹಶೀಲ್ದಾರರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಇವರ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ : 1. ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 51 ಎಎಸ್‌ಡಿ 2008, ದಿನಾಂಕ : 23–05–2008.

2. ಶ್ರೀ ನವೀನ್ ಜೋಸೆಫ್, ತಹಶೀಲ್ದಾರರು, ಇವರ ಪತ್ರ ದಿನಾಂಕ : 17–05–2008.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 11–06–2008ರ ಅಧಿಸೂಚನೆಯನ್ವಯ ಶ್ರೀ ನವೀನ್ ಜೋಸೆಫ್ ಇವರು ಕಂದಾಯ ತಹಶೀಲ್ದಾರ್, ಗುಂಪು–ಬಿ ಹುದ್ದೆಗೆ ನೇಮಕಗೊಂಡಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ : 17–05–2008ರ ಪತ್ರದಲ್ಲಿ ಸದರಿಯವರು, ಕಂದಾಯ ಇಲಾಖೆಯಲ್ಲಿ ಸೇವೆ ಪ್ರಾರಂಭಿಸುವ ಪೂರ್ವದಲ್ಲಿ ಗೃಹ ಇಲಾಖೆಯಲ್ಲಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿ ದಿನಾಂಕ : 01–09–2005 ರಿಂದ ಸಲ್ಲಿಸಿದ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯಗಳಿಗೆ ಪರಿಗಣಿಸುವಂತೆ ಕೋರಿರುತ್ತಾರೆ.

ಶ್ರೀಯುತರ ಮನವಿಯನ್ನು ಹಾಗೂ ಅವರ ಸೇವಾ ಪುಸ್ತಕವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಶ್ರೀ ನವೀನ್ ಜೋಸೆಫ್ ಇವರು ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಆದೇಶ ಸಂಖ್ಯೆ : ಸಿಬ್ಬಂದಿ (1)/39/2005–06, ದಿನಾಂಕ : 17–08–2005ರನ್ವಯ ಗೃಹ ಇಲಾಖೆಯಲ್ಲಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿ ನೇಮಕಗೊಂಡಿದ್ದು ನಂತರ ಸಹಾಯಕ ಪೋಲೀಸ್ ಕಮೀಷನರ್, ಇಮಿಗ್ರೇಷನ್, ಬೆಂಗಳೂರು ನಗರ ಇವರ ಪತ್ರ ಸಂಖ್ಯೆ : ಎಸಿಪಿ/ಇಮಿಗ್ರೇಷನ್/ಬೆಂ/359/2008, ದಿನಾಂಕ : 09–06–2008ರನ್ವಯ ದಿನಾಂಕ : 06–06–2008 ರಂದು ಸದರಿ ಸೇವೆಯಿಂದ ಬಿಡುಗಡೆ ಹೊಂದಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಗಣಿಸಿ ಶ್ರೀ ನವೀನ್ ಜೋಸೆಫ್, ತಹಶೀಲ್ದಾರರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಇವರು ಗೃಹ ಇಲಾಖೆಯಲ್ಲಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿ ದಿನಾಂಕ : 01–09–2005 ರಿಂದ ದಿನಾಂಕ : 06–06–2008 ರವರೆಗಿನ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 224(ಎ) ರನ್ವಯ ಪ್ರಸ್ತುತ ಸೇವೆಗೆ ನಿವೃತ್ತಿ ವೇತನ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 240 ಎಎಸ್‌ಡಿ 2009, ಬೆಂಗಳೂರು, ದಿನಾಂಕ : 04–08–2011

ಮೇಲೆ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ನವೀನ್ ಜೋಸೆಫ್, ತಹಶೀಲ್ದಾರರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಇವರು ಕಂದಾಯ ಇಲಾಖೆಯ ಸೇವೆಗೆ ಸೇರುವ ಪೂರ್ವದಲ್ಲಿ ಗೃಹ ಇಲಾಖೆಯಲ್ಲಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿ ದಿನಾಂಕ : 01–09–2005 ರಿಂದ ದಿನಾಂಕ : 06–06–2008 ರವರೆಗೆ ಸಲ್ಲಿಸಲಾಗಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 224(ಎ) ರೀತ್ಯ ಸದರಿ ಯವರ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ-7)ರವರ ಟಿಪ್ಪಣಿ ಸಂಖ್ಯೆ : ಆ.ಇ. 1034 ವೆಚ್ಚ-7/2009, ದಿನಾಂಕ : 12-11-2009 ರಲ್ಲಿ ನೀಡಿರುವ ಸಹಮತದೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 2020 ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪಿಸುವ ಸಲುವಾಗಿ ಕೃಷಿ ಮಾರುಕಟ್ಟೆ ಸಮಿತಿ ಇವರಿಗೆ ಸರ್ಕಾರಿ ಜಮೀನು ಮಂಜೂರು ಮಾಡುವ ಕುರಿತು.

ಓದಲಾಗಿದೆ : ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ ರವರ ಪತ್ರ ಸಂಖ್ಯೆ : ಕಂದಾಯ/ಭೂಮಿ/76/09-10 ದಿನಾಂಕ : 18-06-2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 18-06-2010ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪಿಸುವ ಸಲುವಾಗಿ ಕೃಷಿ ಮಾರುಕಟ್ಟೆ ಸಮಿತಿ ಇವರಿಗೆ ಸರ್ಕಾರಿ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

2. 2010-11ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ರೈಸ್ ಪಾರ್ಕ್ ಸ್ಥಾಪಿಸಲು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದು, ಇದಕ್ಕಾಗಿ 10 ಕೋಟಿ ರೂಪಾಯಿ ಒದಗಿಸಿರುವುದಾಗಿ ತಿಳಿಸಿ ಈ ರೈಸ್ ಟೆಕ್ನಾಲಜಿ ಪಾರ್ಕಿಗೆ, ನವಳಿ ಮತ್ತು ಸೋಮನಾಳ ಗ್ರಾಮದಲ್ಲಿರುವ ಜಮೀನನ್ನು ವಶಪಡಿಸಿಕೊಳ್ಳಲು ನಿರ್ಧರಿಸಲಾಗಿದೆ. ಆ ಜಮೀನನ್ನು ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ಕಾಯ್ದೆ ಕಲಂ 69(2)ರನ್ವಯ ಗಂಗಾವತಿ ಮಾರುಕಟ್ಟೆ ಸಮಿತಿಗೆ ವರ್ಗಾಯಿಸುವಂತೆ ಪ್ರಸ್ತಾಪಿಸಲಾಗಿದೆ.

3. ಜಿಲ್ಲಾಧಿಕಾರಿಗಳು ಸಲ್ಲಿಸಿದ್ದ ವರದಿ ಪ್ರಕಾರ ಮಂಜೂರು ಮಾಡಬೇಕಾದ ಸರ್ಕಾರಿ ಜಮೀನು ವಿವರ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಸರ್ಕಾರಿ ಜಮೀನಿನ ಸ.ನಂ.	ಒಟ್ಟು ಕ್ಷೇತ್ರ	ಫಲಾನುಭವಿಗಳಿಗೆ ಮಂಜೂರಾದ ಜಮೀನು	ಉಳಿದ ಜಮೀನು	ಜಮೀನಿನ ವರ್ಗೀಕರಣ
1	ನವಲಿ	222	23-27	9-36	13-31	ಸರ್ಕಾರಿ ಪಡಾ ಮಹಾಪೂಜಾ ಗಾಯರಾಬ್
2	ನವಲಿ	225	34-30	34-30	-	
3	ನವಲಿ	226	23-32	12-00	11-32	ಸರ್ಕಾರಿ ಮಹಾಪೂಜೆ
4	ನವಲಿ	229	29-13	15-00	14-13	ಗಾಯರಾಣ ಮಾಡಿ
5	ನವಲಿ	230	34-14	29-28	4-26	ಸರ್ಕಾರಿ ಮಹಾಪೂಜ
6	ನವಲಿ	231	30-29	4-38	25-31	ಸರ್ಕಾರಿ ಪಡಾ ಮಹಾಪೂಜಾ ಗಾಯರಾಣ
7	ನವಲಿ	233	35-01	14-34	20-07	ಸರ್ಕಾರಿ ಪಡಾ ಮಹಾಪೂಜಾ ಗಾಯರಾಣ
	ಒಟ್ಟು		**211-26**	**121-06**	**90-20**	

4. ರೈಸ್ ಟೆಕ್ನಾಲಜಿ ಪಾರ್ಕ್ ವಿನೂತನ ಆಹಾರ ಸಂರಕ್ಷಣ ಘಟಕವಾಗಿದ್ದು, ಕೇಂದ್ರ ಸರ್ಕಾರ ಹಾಗೂ ಇತರೆ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಗಣನೀಯ ಪ್ರಮಾಣದಲ್ಲಿ ಸಹಾಯಧನ ಪಡೆಯುವ ಏಕೈಕ ಯೋಜನೆ ಇದಾಗಿದೆ. ರೈತರ ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ದೊರೆಯುವುದರ ಜೊತೆಗೆ ಉದ್ಯೋಗ ಸೃಷ್ಟಿ ಹಾಗೂ ಗ್ರಾಮೀಣಾಭಿವೃದ್ಧಿಗೆ ಕೂಡ ಈ ಯೋಜನೆಯ ಅನುಷ್ಠಾನ ಸಹಾಯಕವಾಗುತ್ತದೆ.

5. ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆಗೆ ಮೇಲೆ ತಿಳಿಸಿದ 90 ಎಕರೆ 20 ಗುಂಟೆ ಗಾಯರಾಣ/ಸರ್ಕಾರಿ ಫಡಾ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರಡಿಯಲ್ಲಿನ ಅವಕಾಶದಂತೆ ಗಾಯರಾಣ ಶೀರ್ಷಿಕೆಯಿಂದ ತಗ್ಗಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮ 20(1)(ಸಿ) ಪ್ರಕಾರ ಪ್ರಚಲಿತ ಮಾರುಕಟ್ಟೆ ದರ ಶೇ. 50 ರಷ್ಟು ಹಾಗೂ ನಿಯಮಾನುಸಾರ ಇತರೆ ಶುಲ್ಕಗಳನ್ನು ವಿಧಿಸಿ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆಗಾಗಿ ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಮಂಜೂರು ಮಾಡಲು ಸೂಕ್ತ ಆದೇಶ ಹೊರಡಿಸಲು ಜಿಲ್ಲಾಧಿಕಾರಿಗಳು ಕೋರಿರುತ್ತಾರೆ.

ಕೊಪ್ಪಳ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ ರವರ ಪತ್ರದಲ್ಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 18 ಎಲ್‌ಜಿಆರ್ 2010, ಬೆಂಗಳೂರು, ದಿನಾಂಕ : 05–08–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕಿನ, ನವಲಿ ಗ್ರಾಮದ ಸ.ನಂ. 222–13.31 ಎಕರೆ, ಸ.ನಂ. 226–11.32 ಎಕರೆ, ಸ.ನಂ. 229–14.13 ಎಕರೆ, ಸ.ನಂ. 230–4.26 ಎಕರೆ ಸ.ನಂ. 231–25.31 ಎಕರೆ ಸ.ನಂ. 233–20.07 ಎಕರೆ ಒಟ್ಟು ವಿಸ್ತೀರ್ಣ 90 ಎಕರೆ 20 ಗುಂಟೆ ಗಾಯರಾಣ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1966ರ ನಿಯಮ 97(4)ರಡಿಯಲ್ಲಿನ ಅವಕಾಶದಂತೆ ಗಾಯರಾಣ ಶೀರ್ಷಿಕೆಯಿಂದ ತಗ್ಗಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20(1)(ಸಿ) ಪ್ರಕಾರ ಪ್ರಚಲಿತ ಮಾರುಕಟ್ಟೆ ದರ ಶೇ. 50ರಷ್ಟು ದರ ಹಾಗೂ ನಿಯಮಾನುಸಾರ ಇತರೆ ಶುಲ್ಕಗಳನ್ನು ವಿಧಿಸಿ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಕಾರಟಗಿ ರೈಸ್ ಟೆಕ್ನಾಲಜಿ ಪಾರ್ಕ್‌ನ್ನು ಸ್ಥಾಪಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಗಂಗಾವತಿ ಇವರಿಗೆ ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆ.ಇ. 7220 : ವೆಚ್ಚ–7/2010, ದಿನಾಂಕ : 18–1–2010 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಜಿ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಪಿ.ಆರ್. 2021

ಕಂದಾಯ ಸಚಿವಾಲಯ

ವಿಷಯ : ರಾಜ್ಯದ ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಅಡಿ ಕಾರ್ಯ ನಿರ್ವಹಿಸಲು ಮಂಜುರಾಗಿದ್ದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ದಿನಾಂಕ : 01–04–2011 ರಿಂದ 31–03–2012ರ ವರೆಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಕಂಇ 17 ಎಲ್‌ಆರ್‌ಇ 88 (ಭಾಗ–2) ದಿನಾಂಕ : 14–05–1993.
2. ಸರ್ಕಾರದ ಆದೇಶ ಸಂಖ್ಯೆ : ಕಂಇ 68 ಎಲ್‌ಆರ್‌ಇ 2001, ದಿನಾಂಕ : 22–10–2001.
3. ಸರ್ಕಾರದ ಆದೇಶ ಸಂಖ್ಯೆ : ಕಂಇ 85 ಎಲ್‌ಆರ್‌ಎ 2002, ದಿನಾಂಕ : 7–09–2002.
4. ಸರ್ಕಾರದ ಆದೇಶ ಸಂಖ್ಯೆ : ಕಂಇ 50 ಎಲ್‌ಆರ್‌ಎ 2003, ದಿನಾಂಕ : 16–12–2003.
5. ಸರ್ಕಾರದ ಆದೇಶ ಸಂಖ್ಯೆ : ಕಂಇ 131 ಎಲ್‌ಆರ್‌ಎ 04, ದಿನಾಂಕ : 15–01–2005.
6. ಸರ್ಕಾರದ ಆದೇಶ ಸಂಖ್ಯೆ : ಕಂಇ 79 ಎಲ್‌ಆರ್‌ಎ 05, ದಿನಾಂಕ : 01–07–2005.
7. ಸರ್ಕಾರದ ಆದೇಶ ಸಂಖ್ಯೆ : ಕಂಇ 15 ಎಲ್‌ಆರ್‌ಎ 06, ದಿನಾಂಕ : 19–10–2006.
8. ಸರ್ಕಾರದ ಆದೇಶ ಸಂಖ್ಯೆ : ಕಂಇ 13 ಎಲ್‌ಆರ್‌ಎಂ 07, ದಿನಾಂಕ : 24–11–2007.
9. ಸರ್ಕಾರದ ಆದೇಶ ಸಂಖ್ಯೆ : ಕಂಇ 36 ಎಲ್‌ಆರ್‌ಎಂ 08, ದಿನಾಂಕ : 05–08–2008.
10. ಸರ್ಕಾರದ ಆದೇಶ ಸಂಖ್ಯೆ : ಕಂಇ 08 ಎಲ್‌ಆರ್‌ಎಸ್ 09, ದಿನಾಂಕ : 18–07–2009.
11. ಸರ್ಕಾರದ ಆದೇಶ ಸಂಖ್ಯೆ : ಕಂಇ 41 ಎಲ್‌ಆರ್‌ಎಸ್ 10, ಆಗಸ್ಟ್ 2010.

ಪ್ರಸ್ತಾವನೆ :

ಮೇಲಿನ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಅಡಿ ಕಾರ್ಯ ನಿರ್ವಹಿಸಲು ತಾತ್ಕಾಲಿಕ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಸೃಜಿಸಲಾಗಿದ್ದು ಈ ಹುದ್ದೆಗಳನ್ನು ಕಾಲಕಾಲಕ್ಕೆ ಮುಂದುವರೆಸಲಾಗುತ್ತಿದೆ. ಅಂತಿಮವಾಗಿ ಕಳೆದ ಸಾಲಿನಲ್ಲಿ ಕ್ರಮ ಸಂಖ್ಯೆ (11)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈ ಹುದ್ದೆಗಳನ್ನು (144 ಹುದ್ದೆಗಳು) ದಿನಾಂಕ : 01–04–2010 ರಿಂದ 31–03–2011ರ ವರೆಗೆ ಒಂದು ವರ್ಷದ ಕಾಲಾವಧಿಗೆ ಮುಂದುವರೆಸಲಾಗಿದೆ.

ಪ್ರಸ್ತುತ 2011–12ನೇ ಸಾಲಿನಲ್ಲಿ ಭೂ ಸುಧಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 145 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಮುಂದುವರೆಸಲು ಆಯವ್ಯಯದ ಅಪೆಂಡಿಕ್ಸ್ "ಬಿ" ನಲ್ಲಿ ಅವಕಾಶ ಕಲ್ಪಿಸಲಾಗಿದೆ. ರಾಜ್ಯದ ಕೆಲವು ಜಿಲ್ಲಾಧಿಕಾರಿಗಳು ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಅಡಿ ಕಾರ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಪ್ರಥಮ ದರ್ಜೆ ಸಹಾಯಕ ಹುದ್ದೆಗಳು ಅಗತ್ಯವಾಗಿರುವುದರಿಂದ ಮತ್ತೊಂದು ವರ್ಷ ಮುಂದುವರೆಸುವಂತೆ ಕೋರಿದ್ದು, ಪ್ರಾದೇಶಿಕ ಆಯುಕ್ತರ/ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಪ್ರಥಮ ದರ್ಜೆ ಸಹಾಯಕ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಮುಂದುವರೆಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 41 ಎಲ್‌ಆರ್‌ಎಸ್ 2011, ಬೆಂಗಳೂರು, ದಿನಾಂಕ : 09–08–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ವಿವಿಧ ತಾಲ್ಲೂಕು ಕಛೇರಿಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಅಡಿ ಕಾರ್ಯ ನಿರ್ವಹಿಸಲು ಸೃಜಿಸಲಾಗಿದ್ದ ತಾತ್ಕಾಲಿಕ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಪೈಕಿ 145 ಹುದ್ದೆಗಳನ್ನು (2011–12ನೇ ಸಾಲಿನ ಆಯವ್ಯಯದ ಅಪೆಂಡಿಕ್ಸ್ "ಬಿ" ನಲ್ಲಿ ವಿವರಿಸಿರುವಂತೆ ಬೆಂಗಳೂರು ವಿಭಾಗದ ಜಿಲ್ಲೆಗಳಿಗೆ 51 ಹುದ್ದೆಗಳು ಮೈಸೂರು ವಿಭಾಗದ ಜಿಲ್ಲೆಗಳಿಗೆ 43 ಹುದ್ದೆಗಳು ಮತ್ತು ಭೂ ಸ್ವಾಧೀನ ಅಧಿಕಾರಿಗಳು 2 ಹುದ್ದೆಗಳು ಹಾಗೂ ಬೆಳಗಾವಿ ವಿಭಾಗದ ಜಿಲ್ಲೆಗಳಿಗೆ 49 ಹುದ್ದೆಗಳು ಹೀಗೆ ಒಟ್ಟು 145 ಹುದ್ದೆಗಳು) ಒಂದು ವರ್ಷದ ಅವಧಿಗೆ ಅಂದರೆ, ದಿನಾಂಕ : 01–04–2011 ರಿಂದ 31–03–2012ರ ವರೆಗೆ ಮುಂದುವರೆಸಿ ಆದೇಶಿಸಲಾಗಿದೆ.

ಸದರಿ ಬಾಬ್ತಿಗೆ ತಗಲುವ ವೆಚ್ಚವನ್ನು 2011–12ನೇ ಸಾಲಿನ ಲೆಕ್ಕ ಶೀರ್ಷಿಕೆ "2506–ಲ್ಯಾಂಡ್ ರಿಫಾರ್ಮ್ಸ್–ರೆಗ್ಯುಲೇಷನ್ ಆಫ್ ಲ್ಯಾಂಡ್ ಹೋಲ್ಡಿಂಗ್ ಅಂಡ್ ಟೆನನ್ಸಿ" (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಈ ಹುದ್ದೆಗಳ ಮುಂದುವರಿಕೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ : ಕಂಇ 17 ಎಲ್‌ಆರ್‌ಇ 88 (ಭಾಗ–2), ದಿನಾಂಕ : 14–05–1993 ರಲ್ಲಿ ವಿಧಿಸಿರುವ ಷರತ್ತುಗಳು ಅನ್ವಯವಾಗುತ್ತವೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 96 ದಿನಾಂಕ : 10–07–1996 ಹಾಗೂ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2003 ದಿನಾಂಕ : 12–06–2003 ರಲ್ಲಿ ಆಡಳಿತ ಇಲಾಖೆಯ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ನಾರಾಯಣಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 2022 ಕಂದಾಯ ಇಲಾಖೆ (ಭೂ ಸುಧಾರಣೆ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಬೆಂಗಳೂರು ನಗರ ಕಂದಾಯ ತಾಲ್ಲೂಕಿನಲ್ಲಿ ಖಾಲಿ ಇರುವ 2 ನೋಟರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಲಾ 209 ಎಲ್‌ಸಿಎಲ್ 2005 ದಿನಾಂಕ: 24–12–2005 ಮತ್ತು ಸರ್ಕಾರದ ಆದೇಶ ಸಂಖ್ಯೆ: ಲಾ 83 ಎಲ್‌ಸಿಎಲ್ 2006 ದಿನಾಂಕ: 12–9–2006.
2. ರಿಜಿಸ್ಟ್ರಾರ್, ಸಿಟಿ ಸಿವಿಲ್ ಕೋರ್ಟ್, ಬೆಂಗಳೂರು ಇವರ ಪತ್ರ ಸಂಖ್ಯೆ: ಎಡಿಎಂ–I /ಬಿ/96/2010 ದಿನಾಂಕ: 29–03–2010
3. ಸರ್ಕಾರದ ಪತ್ರ ಸಂಖ್ಯೆ: ಲಾ 102 ಎಲ್‌ಸಿಎಲ್ 2010 ದಿನಾಂಕ: 22–05–2010 ಮತ್ತು 18–10–2010.
4. ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಬೆಂಗಳೂರು ಇವರ ಪತ್ರ ಸಂಖ್ಯೆ: ಎಡಿಎಂ–I/ಬಿ/24/2011 ದಿನಾಂಕ: 28–01–2011.
5. ನೋಟರಿಗಳ ತಿದ್ದುಪಡಿ ನಿಯಮಗಳು 2009ರ ಅಧಿಸೂಚನೆ ಸಂಖ್ಯೆ: GSR 114/E ದಿನಾಂಕ: 24–02–2009
6. ಅಧಿಸೂಚನೆ ಸಂಖ್ಯೆ: ಲಾ 61 ಎಲ್‌ಸಿಎಲ್ 2009 ದಿನಾಂಕ: 24–07–2010
7. ಸಂದರ್ಶನ ಸೂಚನಾ ಪತ್ರ ಸಂಖ್ಯೆ: ಲಾ 102 ಎಲ್‌ಸಿಎಲ್ 2009 ದಿನಾಂಕ: 15–04–2011.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಆದೇಶ ದಿನಾಂಕ: 24–12–2005ರಲ್ಲಿ 5 ನೋಟರಿ ಹುದ್ದೆಗಳನ್ನು ಬೆಂಗಳೂರು ನಗರ ಕಂದಾಯ ತಾಲ್ಲೂಕಿಗೆ ಸೃಜಿಸಲಾಗಿತ್ತು. ಅವುಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ಕೈಗೊಂಡು ಆದೇಶ ಸಂಖ್ಯೆ: ಲಾ 83 ಎಲ್‌ಸಿಎಲ್ 2006 ದಿನಾಂಕ: 12–09–2006ರಲ್ಲಿ 4 ನೋಟರಿಗಳನ್ನು ನೇಮಿಸಲಾಗಿತ್ತು. ಈ ನೇಮಕಾತಿ ಬಗ್ಗೆ ರಿಟ್ ಅರ್ಜಿ ದಾಖಲಿಸಿದ್ದರಿಂದ ಅದು ಇತ್ಯರ್ಥಗೊಳ್ಳುವವರೆಗೆ ಉಳಿದ 1 ಹುದ್ದೆ ಭರ್ತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ರಿಟ್ ಅರ್ಜಿ ಇತ್ಯರ್ಥಗೊಂಡ ಸಂದರ್ಭ ನೋಟರಿ ನಿಯಮಗಳಿಗೆ ಉಲ್ಲೇಖಿತ (5) ರಲ್ಲಿ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿತ್ತು. ನೋಟರಿ ನಿಯಮಗಳಿಗೆ ತಿದ್ದುಪಡಿ ಜಾರಿಗೊಳಿಸಿದ ಪ್ರಯುಕ್ತ ಅದರಂತೆ ಕ್ರಮ ವಹಿಸಲು ತೀರ್ಮಾನಿಸಲಾಯಿತು. ಈ ಮಧ್ಯೆ ಬೆಂಗಳೂರು ನಗರದಲ್ಲಿ ನೋಟರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕಳಸ ಶಾಮಣ್ಣರವರು ದಿನಾಂಕ: 18–06–2008ರಂದು ನಿಧನ ಹೊಂದಿರುವುದಾಗಿ ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ರಿಜಿಸ್ಟ್ರಾರ್, ಸಿಟಿ ಸಿವಿಲ್ ನ್ಯಾಯಾಲಯರವರು ವರದಿ ಮಾಡಿದ್ದರು. ಆದ್ದರಿಂದ ಮೇಲಿನ 2 ಹುದ್ದೆಗಳನ್ನು ಭರ್ತಿ ಮಾಡಲು ನೋಟರಿಗಳ ಅಧಿನಿಯಮ/ನಿಯಮಗಳು ಹಾಗೂ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳು 1977ರ ನಿಯಮ 12ರನ್ವಯ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ಮೇಲೆ (3)ರಲ್ಲಿ ಓದಲಾದ ದಿನಾಂಕ:22–05–2010 ಮತ್ತು 18.10.2010ರ ಪತ್ರಗಳಲ್ಲಿ ಕೋರಲಾಗಿತ್ತು. ಆ ಮೇರೆಗೆ ಮೇಲೆ (4) ರಲ್ಲಿ ಓದಲಾದ ದಿನಾಂಕ: 28–01–2011ರ ಪತ್ರದಲ್ಲಿ 43 ಜನರ ಮೆಮೋರಿಯಲ್ಸ್‌ಗಳನ್ನೊಳಗೊಂಡ ಪ್ರಸ್ತಾವನೆ ಸಲ್ಲಿಸಿದ್ದರು.

ಆ ಪ್ರಸ್ತಾವನೆಯನ್ನು ಮೇಲೆ (5) ರಲ್ಲಿ ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು 2009ರನ್ವಯ ಕರ್ನಾಟಕ ರಾಜ್ಯದಿಂದ ನೋಟರಿಗಳ ನೇಮಕಕ್ಕಾಗಿ ಮೇಲೆ (6)ರಲ್ಲಿ ಓದಲಾದ ದಿನಾಂಕ: 24–07–2010ರ ಅಧಿಸೂಚನೆಯಲ್ಲಿ ರಚಿಸಲಾಗಿರುವ ಸಂದರ್ಶನ ಮಂಡಳಿಯ ಪರಿಶೀಲನೆಗೆ ಕಳಿಸಿ ಎಲ್ಲಾ ಅಭ್ಯರ್ಥಿಗಳನ್ನು ಸಂದರ್ಶನ ಮಂಡಳಿಯ ಮುಂದೆ ಸಂದರ್ಶನಕ್ಕೆ ಹಾಜರಾಗುವಂತೆ ಮೇಲೆ (7)ರಲ್ಲಿ ಓದಲಾದ ದಿನಾಂಕ: 15–04–2011ರ ಸಂದರ್ಶನ ಸೂಚನಾ ಪತ್ರದಲ್ಲಿ ಸೂಚಿಸಲಾಗಿತ್ತು. ಅದರಂತೆ ಸಂದರ್ಶನ ಮಂಡಳಿಯು ಸಂದರ್ಶನ ನಡೆಸಿ ದಿನಾಂಕ: 18–05–2011ರಂದು ವರದಿಯನ್ನು ಸಲ್ಲಿಸಿದೆ.

ಸಂದರ್ಶನ ಮಂಡಳಿಯ ಶಿಫಾರಸ್ಸನ್ನು ಸರ್ಕಾರವು ಪರಿಗಣಿಸಿದೆ. ಅದರಂತೆ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಲಾ 102 ಎಲ್‌ಸಿಎಲ್ 2010 ಬೆಂಗಳೂರು ದಿನಾಂಕ: 03–08–2011

ನೋಟರಿಗಳ ಅಧಿನಿಯಮ (1952) ಹಾಗೂ ಅದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು (1956) ಮತ್ತು ತಿದ್ದುಪಡಿ ನಿಯಮಗಳನ್ವಯ ನಿಯಮ 8(1)ರಲ್ಲಿ ಪ್ರದತ್ತವಾಗಿರುವ ಅಧಿಕಾರದಂತೆ ಈ ಕೆಳಕಂಡ ಇಬ್ಬರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಬೆಂಗಳೂರು ನಗರ ಕಂದಾಯ ತಾಲ್ಲೂಕಿನ ನೋಟರಿಗಳನ್ನಾಗಿ ನೇಮಿಸಿದೆ.

(1) ಶ್ರೀ ಸಿ. ಪ್ರಕಾಶ್, ವಕೀಲರು, S/O ಚಿಕ್ಕಣ್ಣ ಕೆ. EWS ನಂ.16/2, 1ನೇ ಕ್ರಾಸ್, 2ನೇ ಮೈನ್, 2ನೇ ಹಂತ, ಕೆಹೆಚ್‌ಬಿ (ಎ.ಡಿ.ಹಳ್ಳಿ) ಬಸವೇಶ್ವರನಗರ, ಬೆಂಗಳೂರು–79.

(2) ಶ್ರೀ ಅರವಿಂದ ಪಾಟೀಲ್, ಜಿ.ಜಿ. ವಕೀಲರು S/O ಜಿ. ಗಂಗಾಧರಪ್ಪ, ನಂ. 4 ಪಾಪ್ಪು ಕಾಟೇಜ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು.

ಸದರಿ ವಕೀಲರುಗಳು ಲೆಕ್ಕ ಶೀರ್ಷಿಕೆ 0070-ಇತರೆ ಆಡಳಿತಾತ್ಮಕ ಸೇವೆಗಳು-01-ನ್ಯಾಯ ಪರಿಪಾಲನೆ-501-0-ಇತರೆ ಸ್ವೀಕೃತಿಗಳು-06 ಇತರೆ ಬಾಬ್ತುಗಳಿಗೆ (0070-01-501-0-06) ಸರ್ಕಾರಿ ಖಜಾನೆಯಲ್ಲಿ ನಿಗದಿಪಡಿಸಲಾದ ರೂ. 1000.00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಸದರಿಯವರಿಗೆ ವೃತಿ ಪ್ರಮಾಣ ಪತ್ರ ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರುಗಳನ್ನು ನೋಟರಿ ಅಧಿನಿಯಮ (1952)ರ ಕಲಂ 4ರಡಿಯಲ್ಲಿ ಸರ್ಕಾರ ನಿರ್ವಹಿಸುತ್ತಿರುವ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಆರ್. ಶಕುಂತಲ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್.ನಂ. 2023

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2011-12ನೇ ಸಾರಿಗೆ ಇಲಾಖೆಯ ಅಂಗ ಸಂಸ್ಥೆಗಳ ಕಾರ್ಯಚಟುವಟಿಕೆ ಮತ್ತು ಆಡಳಿತ ನಿರ್ವಹಣೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ವಿಯಇ 189 ವಿತ್ರಮ 2010, ದಿನಾಂಕ: 19-03-2011.
2. ಸರ್ಕಾರಿ ಆದೇಶ ಸಂಖ್ಯೆ: ವಿಯಇ 50 ವಿತ್ರಮ 2011, ದಿನಾಂಕ: 13-04-2011.
3. ಸರ್ಕಾರಿ ಆದೇಶ ಸಂಖ್ಯೆ: ವಿಯಇ 50 ವಿತ್ರಮ 2011, ದಿನಾಂಕ: 12-07-2011.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ದಿ: 18.07.2011 ರಂದು ನಡೆದ ಇಲಾಖೆಯ ಜೂನ್ ಮಾಹೆಯ ಮಾಸಿಕ ವಿವಿಧ ಹಂತದ ಪರಿಶೀಲನಾ ಸಭೆಯ ನಡವಳಿ.

ಪ್ರಸ್ತಾವನೆ:

ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಂದುವರಿಸಿ, 2011-12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3425-60-200-0-01(101) (ಯೋಜನೆ) ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯಾನುದಾನವಾಗಿ ಒಟ್ಟು ರೂ. 500.00 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗಿದ್ದು, ಇದರ ಪೈಕಿ ಮೇಲೆ ಕ್ರ. ಸಂ. (2 ಮತ್ತು 3) ರಲ್ಲಿ ಓದಲಾದ ಆದೇಶಗಳಲ್ಲಿ ಮೊದಲನೇ ಹಾಗೂ ಎರಡನೇ ಕಂತುಗಳಲ್ಲಿ ಒಟ್ಟಾರೆ ರೂ. 97.50 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

2011-12ನೇ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಗಳಾದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಲಿ, ಜವಾಹರಲಾಲ್ ನೆಹರು ತಾರಾಲಯ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಈ ಸಂಸ್ಥೆಗಳು ಹಮ್ಮಿಕೊಂಡಿರುವ ವೈಜ್ಞಾನಿಕ ಕಾರ್ಯಚಟುವಟಿಕೆ ಮತ್ತು ಆಡಳಿತ ನಿರ್ವಹಣೆಗಾಗಿ ಕೊನೆಯ ಹಾಗೂ ಅಂತಿಮ ಕಂತಾಗಿ ಒಟ್ಟಾರೆ ರೂ. 85.00 ಲಕ್ಷಗಳನ್ನು ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿನಾಂಕ: 18.07.2011ರಂದು ನಡೆದ ಇಲಾಖೆಯ ಜೂನ್ ಮಾಹೆಯ ಮಾಸಿಕ ವಿವಿಧ ಹಂತದ ಪರಿಶೀಲನಾ ಸಭೆಯಲ್ಲಿನ ನಿರ್ಣಯದಂತೆ ಅನುದಾನ ಬಿಡುಗಡೆಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 50 ವಿತ್ರಮ 2011, ಬೆಂಗಳೂರು, ದಿನಾಂಕ: 05/08/2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯ ಅಂಗ ಸಂಸ್ಥೆಗಳು 2011-12ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಚಟುವಟಿಕೆ ಮತ್ತು ಆಡಳಿತ ನಿರ್ವಹಣೆಗಾಗಿ ಕೊನೆಯ ಹಾಗೂ ಅಂತಿಮ ಕಂತಿನ ಅನುದಾನವಾಗಿ ಲೆಕ್ಕ ಶೀರ್ಷಿಕೆ 3425-60-200-0-01 (101) (ಯೋ) ಇದರಡಿ ಒಟ್ಟಾರೆ ರೂ. 85.00 ಲಕ್ಷ (ರೂಪಾಯಿ ಎಂಬತ್ತೈದು ಲಕ್ಷಗಳು ಮಾತ್ರ)ಗಳನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಂಗ ಸಂಸ್ಥೆಗಳಿಗೆ ಮಂಜೂರು ಮಾಡಿದೆ.

ರೂ. ಲಕ್ಷಗಳಲ್ಲಿ

1	ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ,	28.00
2	ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು,	27.00
3	ನಿರ್ದೇಶಕರು, ಜವಾಹರಲಾಲ್ ನೆಹರು ತಾರಾಲಯ,	30.00

ಒಟ್ಟು-85.00

1) ಈ ಹಣವನ್ನು 2011-12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 3425-60-200-0-01(101) (ಯೋ) ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯಾನುದಾನ ಇದರಡಿಯಲ್ಲಿ ಭರಿಸತಕ್ಕದ್ದು.

2) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮೇಲಿನ 3 ಸಂಸ್ಥೆಗಳು ಸ್ವೀಕೃತ ರಶೀದಿಯಲ್ಲಿ ಹಣವನ್ನು ಸರ್ಕಾರದ ಅಧೀನ ಕಾರ್ಯದರ್ಶಿ ಹಾಗೂ ಪೀಠಾಧಿಕಾರಿಗಳ ಮೇಲು ರುಜುವಿನೊಂದಿಗೆ ಹಣ ಸೆಳೆಯಬಹುದು.

3) ಬಿಡುಗಡೆ ಮಾಡಿರುವ ಅನುದಾನವನ್ನು ಖರ್ಚು ಮಾಡಿದ ಬಗ್ಗೆ ಉಪಯೋಗತಾ ಪ್ರಮಾಣ ಪತ್ರ ಹಾಗೂ ಆಡಿಟ್ ಆದ ಲೆಕ್ಕಪತ್ರಗಳನ್ನು ಕೂಡಲೇ ಸಲ್ಲಿಸತಕ್ಕದ್ದು.

4) ಬಿಡುಗಡೆ ಮಾಡಿದ ಹಣವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಮಾತ್ರ ಉಪಯೋಗಿಸತಕ್ಕದ್ದು, ಹಾಗೂ ಈ ಹಣವನ್ನು ಬೇರೆ ಯೋಜನೆಗೆ/ಕಾರ್ಯಕ್ರಮಗಳಿಗೆ ಸರ್ಕಾರದ ಅನುಮತಿ ಇಲ್ಲದೆ ವರ್ಗಾಯಿಸಬಾರದು.

5) ಉದ್ದೇಶಿತ ಕಾರ್ಯಕ್ರಮಕ್ಕೆ ಖರ್ಚಾಗದ ಬಾಬ್ತು ಅನುದಾನವನ್ನು ಉಳಿಸಿಕೊಂಡು ಅದನ್ನು ಸರ್ಕಾರದ ಗಮನಕ್ಕೆ ತರದೇ ಇದ್ದದ್ದು ಕಂಡು ಬಂದಲ್ಲಿ ಸದರಿ ಮೊತ್ತಕ್ಕೆ ಸರಳ ಬಡ್ಡಿಯೊಂದಿಗೆ ಸರ್ಕಾರಕ್ಕೆ ಪಾವತಿಸಿಕೊಳ್ಳಲು ಕ್ರಮಕೈಗೊಳ್ಳಲಾಗುವುದು.

6) ಅನುದಾನವನ್ನು ಬಳಸದೇ ಬ್ಯಾಂಕಿನಲ್ಲಿ ಠೇವಣಿ ಮಾಡಿದ ಪಕ್ಷದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತರತಕ್ಕದು ಇಲ್ಲವಾದಲ್ಲಿ ಅಂತಹ ಠೇವಣಿ ಮೊತ್ತಕ್ಕೆ ದೊರೆಯುವ ಬಡ್ಡಿಯೊಂದಿಗೆ ಹಿಂದಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.

7) ಉದ್ದೇಶಿತ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದಂತಹ ಅನುದಾನದ ಲೆಕ್ಕಪತ್ರಗಳನ್ನು ಮಂಜೂರು ಮಾಡುವ ಅಧಿಕಾರಿಯು ಸಮೀಕ್ಷೆಗಾಗಿ ಕೋರಿದ್ದಲ್ಲಿ ತಪ್ಪದೇ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ, ಆಇ 1 ಟಿಎಫ್‌ಪಿ 2008, ದಿನಾಂಕ: 16/05/2008ರಡಿ ಇಲಾಖಾ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಭಾನುಮತಿ

ಪೀಠಾಧಿಕಾರಿ,

ಪಿ.ಆರ್.ನಂ. 2024

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ
ಮತ್ತು ತಂತ್ರಜ್ಞಾನ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಸಂಖ್ಯೆ: ಮಮಇ 173 ಪಿಎಚ್‌ಪಿ 2010 , ಬೆಂಗಳೂರು, ದಿನಾಂಕ: 29–07–2011

ತಿದ್ದುಪಡಿ

ದಿನಾಂಕ: 12–05–2011ರ ಸರ್ಕಾರಿ ಆದೇಶ ಸಂಖ್ಯೆ: ಮಮಇ 173 ಪಿಎಚ್‌ಪಿ 2010ರ ಅನುಬಂಧ–1, 2 ಮತ್ತು 3ರ ಬದಲಿಗೆ ಈ ತಿದ್ದುಪಡಿ ಆದೇಶಕ್ಕೆ ಹೊಸದಾಗಿ ಲಗತ್ತಿಸಿರುವ ಅನುಬಂಧ–1, 2 ಮತ್ತು 3ನ್ನು ಸೇರಿಸಿ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ –2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಅನುಬಂಧ–1

ಮೈಸೂರು ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಅನುಷ್ಠಾನಕ್ಕೆ ಬೇಕಾಗುವ ವಾರ್ಷಿಕ ಆಯವ್ಯಯ

1. ಆವರ್ತಕ ವೆಚ್ಚಗಳು

ಕ್ರ. ಸಂ	ಹುದ್ದೆಗಳ ವಿವರ			ಮಾಸಿಕ ಗೌರವ ಧನ	ಬೇಕಾಗುವ ವಾರ್ಷಿಕ ಆಯವ್ಯಯ
	ಹುದ್ದೆ	ಸಂಖ್ಯೆ	ವಿದ್ಯಾರ್ಹತೆ ಅನುಭವ		
1	ನೋಡಲ್ ಆಫೀಸರ್/ಸಮಾಜ ಸೇವಾ ಕಾರ್ಯಕರ್ತರು (ಯೂನಿಟ್ ಇನ್ ಚಾರ್ಜ್)	01	ಎಂ.ಎಸ್.ಡಬ್ಲ್ಯೂ ಪುನರ್ವಸತಿ ಸೇವೆ ಅನುಭವ	15000	180000
2	ಅಕೌಂಟೆಂಟ್ ಕಂ ಕ್ಲರ್ಕ್	01	ಬಿ.ಕಾಂ ಪದವಿ ಗಣಕ ಯಂತ್ರದ ಅನುಭವ	8000	96000
3	ಸ್ಟೋರ್ ಕೀಪರ್ ಕಂ ಕ್ಲರ್ಕ್	01	ಪದವಿ ಗಣಕ ಯಂತ್ರದ ಅನುಭವ	6000	72000
4	ಕಂಪ್ಯೂಟರ್ ಆಪರೇಟರ್	01	ಕಂಪ್ಯೂಟರ್ ಜ್ಞಾನ ಹೊಂದಿರಬೇಕು	5000	60000
5	ಕಛೇರಿ ಸೇವಕ	01	7ನೇ ತರಗತಿ	4000	48000
6	ರಾತ್ರಿ ಕಾವಲುಗಾರರು	01	7ನೇ ತರಗತಿ	4000	48000
7	ಕೃತಕಾಂಗ ಜೋಡಣೆ ಪಿ & ಒ ಅಭಿಯಂತರರು	01	ಪಿ & ಒ ಇಂಜಿನಿಯರಿಂಗ್ ಪದವಿ/ಡಿಪ್ಲೊಮ 2ರಿಂದ 5ವರ್ಷ ಅನುಭವ	15000	180000
8	ಪ್ರಾಸ್ಥೋಟಿಸ್ಟ್ & ಆರ್ಥೋಟಿಸ್ಟ್	02	ಡಿಪ್ಲೊಮ ಇನ್ ಪಿ & ಒ/ ಐಟಿಐ (ಫಿಟ್ಟರ್) 2 ವರ್ಷದ ಕ್ಷೇತ್ರ ಮಟ್ಟದ ಅನುಭವ	10000	240000

9	ಲೆದರ್ ವರ್ಕರ್/ಶೂ ಮೇಕರ್	01	ಸರ್ಟಿಫಿಕೆಟ್ ಇನ್ ಲೆದರ್ ವರ್ಕಿಂಗ್ & ಶೂ ಮೇಕಿಂಗ್ 2 ವರ್ಷದ ಕ್ಷೇತ್ರ ಮಟ್ಟದ ಅನುಭವ	5000	60000
10	ಕ್ಲಿನಿಕಲ್ ಸೈಕಾಲಿಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 1000/– ಗಳಂತೆ)	01	ಎಂ.ಎ ಇನ್ ಕ್ಲಿನಿಕಲ್ ಸೈಕಾಲಜಿ	12000	144000
11	ಸ್ಪೀಚ್ ಥೆರಪಿಸ್ಟ್ & ಆಡಿಯಾಲಿಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ.1000/–ಗಳಂತೆ	01	ಡಿಗ್ರಿ ಇನ್ ಸ್ಪೀಚ್ ಪೆಥಾಲಜಿ & ಆಡಿಯಾಲಜಿ	12000	144000
12	ಫಿಸಿಯೋ ಥೆರಪಿಸ್ಟ್/ ಆಕ್ಯುಪೇಷನಲ್ ಥೆರಪಿಸ್ಟ್ (ವಾರಕ್ಕೆ 3 ದಿನಗಳು, ದಿನಕ್ಕೆ ರೂ. 1000/– ಗಳಂತೆ	01	ಡಿಗ್ರಿ ಇನ್ ಫಿಸಿಯೋಥೆರಪಿ ಅಥವಾ ಆಕ್ಯುಪೇಷನ್ ಥೆರಪಿ	12000	144000
13	ಮೊಬಿಲಿಟಿ ಇನ್‌ಸ್ಟ್ರಕ್ಟರ್	01	ಸರ್ಟಿಫಿಕೇಟ್ ಕೋರ್ಸ್ ಇನ್ ಒ&ಎಂ	5000	60000
14	ಸ್ಪೆಷಲ್ ಎಜುಕೇಟರ್ (ಹೆಚ್.ಐ, ವಿ.ಐ, ಎಂ.ಆರ್)	03	ಡಿಪ್ಲೊಮಾ ಇನ್ ಸ್ಪೆಷಲ್ ಎಜುಕೇಷನ್ ಹೆಚ್.ಐ, ವಿ.ಐ & ಎಂ.ಆರ್.	5000	180000
15	ಇಯರ್ ಮೋಲ್ಡ್ ಟೆಕ್ನಿಷಿಯನ್	01	ಸರ್ಟಿಫಿಕೇಟ್ ಕೋರ್ಸ್ ಇನ್ ಇಯರ್ ಮೋಲ್ಡ್ ಟೆಕ್ನಾಲಜಿ	5000	60000
16	ಕೀಲು ಮತ್ತು ಮೂಳೆ ತಜ್ಞರು (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/–ಗಳಂತೆ)	01	ಪೋಸ್ಟ್ ಗ್ರಾಜುಯೇಷನ್ ಅಥವಾ ಡಿಪ್ಲೊಮ ಇನ್ ಆರ್ಥೋಪೆಡಿಕ್ಸ್	8100	97200
17	ಆಪ್ತಾಲ್ಮೊಲಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ.675/–ಗಳಂತೆ)	01	ಪೋಸ್ಟ್ ಗ್ರಾಜುಯೇಷನ್/ ಡಿಪ್ಲೊಮ ಇನ್ ಆಪ್ತಾಲ್ಮೊಲಜಿ	8100	97200
18	ಇ ಎನ್ ಟಿ ಸ್ಪೆಷಲಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/–ಗಳಂತೆ)	01	ಪೋಸ್ಟ್ ಗ್ರಾಜುಯೇಷನ್/ ಡಿಪ್ಲೊಮ ಇನ್ ಇ.ಎನ್.ಟಿ	8100	97200
19	ಸೈಕಿಯಾಟ್ರಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/– ಗಳಂತೆ)	01	ಪೋಸ್ಟ್ ಗ್ರಾಜುಯೇಷನ್ ಸೈಕಿಯಾಟ್ರಿ ಮೆಡಿಸಿನ್	8100	97200
20	ಕಟ್ಟಡ ನಿರ್ವಹಣೆ/ಬಾಡಿಗೆ	–	–	3000	36000
21	ಪ್ರಯಾಣ ವೆಚ್ಚಗಳು	–	–	10000	120000
22	ಕಛೇರಿ ವೆಚ್ಚಗಳು	–	–	4000	48000
23	ಲೇಖನ ಸಾಮಗ್ರಿ/ಪೋಸ್ಟೇಜ್	–	–	4000	48000
24	ಇತರೆ ವೆಚ್ಚಗಳು	–	–	5000	60000
				(I) ಒಟ್ಟು ರೂ	**24,16,800**
II ಆನಾವರ್ತಕ ವೆಚ್ಚಗಳು					
1	ಮೆಷಿನರಿ & ಎಕ್ವಿಪ್‌ಮೆಂಟ್ಸ್				200000
2	ಕಂಪ್ಯೂಟರ್ ಮತ್ತು ಪರಿಕರಗಳು				50000
3	ಪೀಠೋಪಕರಣಗಳು				50000
				(II) ಒಟ್ಟು ರೂ	**3,00,000**
				ಒಟ್ಟು ಮೊತ್ತ (I) + (II)	**27,16,800**

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ –2

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಅನುಬಂಧ–2

ಗದಗ್ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಅನುಷ್ಠಾನಕ್ಕೆ ಬೇಕಾಗುವ ವಾರ್ಷಿಕ ಆಯವ್ಯಯ

1. ಆವರ್ತಕ ವೆಚ್ಚಗಳು

ಕ್ರ. ಸಂ	ಹುದ್ದೆಗಳ ವಿವರ			ಮಾಸಿಕ ಗೌರವ ಧನ	ಬೇಕಾಗುವ ವಾರ್ಷಿಕ ಆಯವ್ಯಯ
	ಹುದ್ದೆ	ಸಂಖ್ಯೆ	ವಿದ್ಯಾರ್ಹತೆ ಅನುಭವ		
1	ನೋಡಲ್ ಆಫೀಸರ್/ಸಮಾಜ ಸೇವಾ ಕಾರ್ಯಕರ್ತರು (ಯೂನಿಟ್ ಇನ್ ಚಾರ್ಜ್)	01	ಎಂ.ಎಸ್.ಡಬ್ಲ್ಯೂ ಪುನರ್ವಸತಿ ಸೇವೆ ಅನುಭವ	15000	180000
2	ಅಕೌಂಟೆಂಟ್ ಕಂ ಕ್ಲರ್ಕ್	01	ಬಿ.ಕಾಂ ಪದವಿ ಗಣಕ ಯಂತ್ರದ ಅನುಭವ	8000	96000
3	ಸ್ಟೋರ್ ಕೀಪರ್ ಕಂ ಕ್ಲರ್ಕ್	01	ಪದವಿ ಗಣಕ ಯಂತ್ರದ ಅನುಭವ	6000	72000
4	ಕಂಪ್ಯೂಟರ್ ಆಪರೇಟರ್	01	ಕಂಪ್ಯೂಟರ್ ಜ್ಞಾನ ಹೊಂದಿರಬೇಕು	5000	60000
5	ಕಛೇರಿ ಸೇವಕ	01	7ನೇ ತರಗತಿ	4000	48000
6	ರಾತ್ರಿ ಕಾವಲುಗಾರರು	01	7ನೇ ತರಗತಿ	4000	48000
7	ಕೃತಕಾಂಗ ಜೋಡಣೆ ಪಿ & ಒ ಅಭಿಯಂತರರು	01	ಪಿ & ಒ ಇಂಜಿನಿಯರಿಂಗ್ ಪದವಿ/ಡಿಪ್ಲೊಮ 2ರಿಂದ 5ವರ್ಷ ಅನುಭವ	15000	180000
8	ಪ್ರಾಸ್ಥೋಟಿಸ್ಟ್ & ಆರ್ಥೋಟಿಸ್ಟ್	02	ಡಿಪ್ಲೊಮ ಇನ್ ಪಿ & ಒ/ ಐಟಿಐ (ಫಿಟ್ಟರ್) 2 ವರ್ಷದ ಕ್ಷೇತ್ರ ಮಟ್ಟದ ಅನುಭವ	10000	240000
9	ಲೆದರ್ ವರ್ಕರ್/ಶೂ ಮೇಕರ್	01	ಸರ್ಟಿಫಿಕೇಟ್ ಇನ್ ಲೆದರ್ ವರ್ಕಿಂಗ್ & ಶೂ ಮೇಕಿಂಗ್ 2 ವರ್ಷದ ಕ್ಷೇತ್ರ ಮಟ್ಟದ ಅನುಭವ	5000	60000
10	ಕ್ಲಿನಿಕಲ್ ಸೈಕಾಲಿಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 1000/– ಗಳಂತೆ)	01	ಎಂ.ಎ ಇನ್ ಕ್ಲಿನಿಕಲ್ ಸೈಕಾಲಜಿ	12000	144000
11	ಸ್ಪೀಚ್ ಥೆರಪಿಸ್ಟ್ & ಆಡಿಯಾಲಿಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ.1000/–ಗಳಂತೆ	01	ಡಿಗ್ರಿ ಇನ್ ಸ್ಪೀಚ್ ಪೆಥಾಲಜಿ & ಆಡಿಯಾಲಜಿ	12000	144000
12	ಫಿಸಿಯೋ ಥೆರಪಿಸ್ಟ್/ ಆಕ್ಯುಪೇಷನಲ್ ಥೆರಪಿಸ್ಟ್ (ವಾರಕ್ಕೆ 3 ದಿನಗಳು, ದಿನಕ್ಕೆ ರೂ. 1000/–ಗಳಂತೆ	01	ಡಿಗ್ರಿ ಇನ್ ಫಿಸಿಯೋಥೆರಪಿ ಅಥವಾ ಆಕ್ಯುಪೇಷನ್ ಥೆರಪಿ	12000	144000
13	ಮೊಬಿಲಿಟಿ ಇನ್‌ಸ್ಟ್ರಕ್ಟರ್	01	ಸರ್ಟಿಫಿಕೇಟ್ ಕೋರ್ಸ್ ಇನ್ ಒ&ಎಂ	5000	60000
14	ಸ್ಪೆಷಲ್ ಎಜುಕೇಟರ್ (ಹೆಚ್.ಐ, ವಿ.ಐ, ಎಂ.ಆರ್)	03	ಡಿಪ್ಲೊಮಾ ಇನ್ ಸ್ಪೆಷಲ್ ಎಜುಕೇಷನ್ ಹೆಚ್.ಐ, ವಿ.ಐ & ಎಂ.ಆರ್.	5000	180000
15	ಇಯರ್ ಮೊಲ್ಡ್ ಟೆಕ್ನಿಷಿಯನ್	01	ಸರ್ಟಿಫಿಕೇಟ್ ಕೋರ್ಸ್ ಇನ್ ಇಯರ್ ಮೊಲ್ಡ್ ಟೆಕ್ನಾಲಜಿ	5000	60000
16	ಕೀಲು ಮತ್ತು ಮೂಳೆ ತಜ್ಞರು (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/–ಗಳಂತೆ)	01	ಪೋಸ್ಟ್ ಗ್ರಾಜುಯೇಷನ್ ಅಥವಾ ಡಿಪ್ಲೊಮ ಇನ್ ಆರ್ಥೋಪೆಡಿಕ್ಸ್	8100	97200
17	ಆಪ್ತಾಲ್ಮೊಲಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ.675/–ಗಳಂತೆ)	01	ಪೋಸ್ಟ್ ಗ್ರಾಜುಯೇಷನ್/ ಡಿಪ್ಲೊಮ ಇನ್ ಆಪ್ತಾಲ್ಮೊಲಜಿ	8100	97200
18	ಇ ಎನ್ ಟಿ ಸ್ಪೆಷಲಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/–ಗಳಂತೆ)	01	ಪೋಸ್ಟ್ ಗ್ರಾಜುಯೇಷನ್/ ಡಿಪ್ಲೊಮ ಇನ್ ಇ.ಎನ್.ಟಿ	8100	97200

19	ಸೈಕಿಯಾಟ್ರಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/– ಗಳಂತೆ)	01	ಪೋಸ್ಟ್ ಗ್ರಾಜುಯೇಷನ್ ಸೈಕಿಯಾಟ್ರಿ ಮೆಡಿಸಿನ್	8100	97200
20	ಕಟ್ಟಡ ನಿರ್ವಹಣೆ/ಬಾಡಿಗೆ	–	–	3000	36000
21	ಪ್ರಯಾಣ ವೆಚ್ಚಗಳು	–	–	10000	120000
22	ಕಛೇರಿ ವೆಚ್ಚಗಳು	–	–	4000	48000
23	ಲೇಖನ ಸಾಮಗ್ರಿ/ಪೋಸ್ಟೇಜ್	–	–	4000	48000
24	ಇತರೆ ವೆಚ್ಚಗಳು	–	–	5000	60000
				(I) ಒಟ್ಟು ರೂ	**24,16,800**
II ಅನಾವರ್ತಕ ವೆಚ್ಚಗಳು					
1	ಮೆಷಿನರಿ & ಎಕ್ವಿಪ್‌ಮೆಂಟ್ಸ್				500000
2	ಕಂಪ್ಯೂಟರ್ ಮತ್ತು ಪರಿಕರಗಳು				50000
3	ಪೀಠೋಪಕರಣಗಳು				50000
	(II) ಒಟ್ಟು ರೂ				**6,00,000**
				ಒಟ್ಟು ಮೊತ್ತ (I) + (II)	**30,16,800**

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ –2

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಅನುಬಂಧ–3

ರಾಯಚೂರು ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಅನುಷ್ಟಾನಕ್ಕೆ ಬೇಕಾಗುವ ವಾರ್ಷಿಕ ಆಯವ್ಯಯ

ಆವರ್ತಕ ವೆಚ್ಚಗಳು					
ಕ್ರ. ಸಂ	ಹುದ್ದೆಗಳ ವಿವರ			ಮಾಸಿಕ ಗೌರವ ಧನ	ಬೇಕಾಗುವ ವಾರ್ಷಿಕ ಆಯವ್ಯಯ
	ಹುದ್ದೆ	ಸಂಖ್ಯೆ	ವಿದ್ಯಾರ್ಹತೆ ಅನುಭವ		
1	ನೋಡಲ್ ಆಫೀಸರ್/ಸಮಾಜ ಸೇವಾ ಕಾರ್ಯಕರ್ತರು (ಯೂನಿಟ್ ಇನ್‌ಚಾರ್ಜ್)	01	ಎಂ.ಎಸ್.ಡಬ್ಲ್ಯೂ ಪುನರ್ವಸತಿ ಸೇವೆ ಅನುಭವ	15000	180000
2	ಅಕೌಂಟೆಂಟ್ ಕಂ ಕ್ಲರ್ಕ್	01	ಬಿ.ಕಾಂ ಪದವಿ ಗಣಕ ಯಂತ್ರದ ಅನುಭವ	8000	96000
3	ಸ್ಟೋರ್ ಕೀಪರ್ ಕಂ ಕ್ಲರ್ಕ್	01	ಪದವಿ ಗಣಕ ಯಂತ್ರದ ಅನುಭವ	6000	72000
4	ಕಂಪ್ಯೂಟರ್ ಆಪರೇಟರ್	01	ಕಂಪ್ಯೂಟರ್ ಜ್ಞಾನ ಹೊಂದಿರಬೇಕು	5000	60000
5	ಕಛೇರಿ ಸೇವಕ	01	7ನೇ ತರಗತಿ	4000	48000
6	ರಾತ್ರಿ ಕಾವಲುಗಾರರು	01	7ನೇ ತರಗತಿ	4000	48000
7	ಕೃತಕಾಂಗ ಜೋಡಣೆ ಪಿ & ಒ ಅಭಿಯಂತರರು	01	ಪಿ & ಒ ಇಂಜಿನಿಯರಿಂಗ್ ಪದವಿ/ಡಿಪ್ಲೊಮ 2ರಿಂದ 5ವರ್ಷ ಅನುಭವ	15000	180000
8	ಪ್ರಾಸ್ಥೋಟಿಸ್ಟ್ & ಆರ್ಥೋಟಿಸ್ಟ್	02	ಡಿಪ್ಲೊಮ ಇನ್ ಪಿ & ಒ/ ಐಟಿಐ (ಫಿಟ್ಟರ್) 2 ವರ್ಷದ ಕ್ಷೇತ್ರ ಮಟ್ಟದ ಅನುಭವ	10000	240000
9	ಲೆದರ್ ವರ್ಕರ್/ಶೂ ಮೇಕರ್	01	ಸರ್ಟಿಫಿಕೇಟ್ ಇನ್ ಲೆದರ್ ವರ್ಕಿಂಗ್ & ಶೂ ಮೇಕಿಂಗ್ 2 ವರ್ಷದ ಕ್ಷೇತ್ರ ಮಟ್ಟದ ಅನುಭವ	5000	60000
10	ಕ್ಲಿನಿಕಲ್ ಸೈಕಾಲಿಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 1000/– ಗಳಂತೆ)	01	ಎಂ.ಎ ಇನ್ ಕ್ಲಿನಿಕಲ್ ಸೈಕಾಲಜಿ	12000	144000
11	ಸ್ಪೀಚ್ ಥೆರಪಿಸ್ಟ್ & ಆಡಿಯಾಲಿಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ.1000/–ಗಳಂತೆ	01	ಡಿಗ್ರಿ ಇನ್ ಸ್ಪೀಚ್ ಪೆಥಾಲಜಿ & ಆಡಿಯಾಲಜಿ	12000	144000

12	ಫಿಸಿಯೋ ಥೆರಪಿಸ್ಟ್/ ಆಕ್ಯುಪೇಷನಲ್ ಥೆರಪಿಸ್ಟ್ (ವಾರಕ್ಕೆ 3 ದಿನಗಳು, ದಿನಕ್ಕೆ ರೂ. 1000/-ಗಳಂತೆ	01	ಡಿಗ್ರಿ ಇನ್ ಫಿಸಿಯೋಥೆರಪಿ ಅಥವಾ ಆಕ್ಯುಪೇಷನ್ ಥೆರಪಿ	12000	144000
13	ಮೊಬಿಲಿಟಿ ಇನ್‌ಸ್ಟ್ರಕ್ಟರ್	01	ಸರ್ಟಿಫಿಕೇಟ್ ಕೋರ್ಸ್ ಇನ್ ಒ&ಎಂ	5000	60000
14	ಸ್ಪೆಷಲ್ ಎಜುಕೇಟರ್ (ಹೆಚ್.ಐ, ವಿ.ಐ, ಎಂ.ಆರ್)	03	ಡಿಪ್ಲೊಮಾ ಇನ್ ಸ್ಪೆಷಲ್ ಎಜುಕೇಷನ್ ಹೆಚ್.ಐ, ವಿ.ಐ & ಎಂ.ಆರ್.	5000	180000
15	ಇಯರ್ ಮೋಲ್ಡ್ ಟೆಕ್ನಿಷಿಯನ್	01	ಸರ್ಟಿಫಿಕೇಟ್ ಕೋರ್ಸ್ ಇನ್ ಇಯರ್ ಮೋಲ್ಡ್ ಟೆಕ್ನಾಲಜಿ	500	60000
16	ಕೀಲು ಮತ್ತು ಮೂಳೆ ತಜ್ಞರು (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/- ಗಳಂತೆ)	01	ಪೋಸ್ಟ್ ಗ್ರಾಜುಯೇಷನ್ ಅಥವಾ ಡಿಪ್ಲೊಮ ಇನ್ ಆರ್ಥೋಪೆಡಿಕ್ಸ್	8100	97200
17	ಆಪ್ತಾಲ್ಮೊಲಜಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ.675/-ಗಳಂತೆ)	01	ಪೋಸ್ಟ್ ಗ್ರಾಜುಯೇಷನ್/ ಡಿಪ್ಲೊಮ ಇನ್ ಆಪ್ತಾಲ್ಮೊಲಜಿ	8100	97200
18	ಇ ಎನ್ ಟಿ ಸ್ಪೆಷಲಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/-ಗಳಂತೆ)	01	ಪೋಸ್ಟ್ ಗ್ರಾಜುಯೇಷನ್/ ಡಿಪ್ಲೊಮ ಇನ್ ಇ.ಎನ್.ಟಿ	8100	97200
19	ಸೈಕಿಯಾಟ್ರಿಸ್ಟ್ (ವಾರಕ್ಕೆ 03 ದಿನಗಳು, ದಿನಕ್ಕೆ ರೂ. 675/ ಗಳಂತೆ)	01	ಪೋಸ್ಟ್ ಗ್ರಾಜುಯೇಷನ್ ಸೈಕಿಯಾಟ್ರಿ ಮೆಡಿಸಿನ್	8100	97200
20	ಕಟ್ಟಡ ನಿರ್ವಹಣೆ/ಬಾಡಿಗೆ	–	–	3000	36000
21	ಪ್ರಯಾಣ ವೆಚ್ಚಗಳು	–	–	10000	120000
22	ಕಛೇರಿ ವೆಚ್ಚಗಳು	–	–	4000	48000
23	ಲೇಖನ ಸಾಮಗ್ರಿ/ಪೊಸ್ಟೇಜ್	–	–	4000	48000
24	ಇತರೆ ವೆಚ್ಚಗಳು	–	–	5000	60000
				(II) ಒಟ್ಟು ರೂ.	**24,16,800**
II ಅನಾವರ್ತಕ ವೆಚ್ಚಗಳು					
1	ಮೆಷಿನರಿ & ಎಕ್ವಿಪ್‌ಮೆಂಟ್ಸ್		500000		
2	ಕಂಪ್ಯೂಟರ್ ಮತ್ತು ಪರಿಕರಗಳು		50000		
3	ಪೀಠೋಪಕರಣಗಳು		50000		
				(II) ಒಟ್ಟು ರೂ	**6,00,000**
				ಒಟ್ಟು ಮೊತ್ತ (I) + (II)	**30,16,800**

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ -2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್.ನಂ. 2025

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 411 ಸಅಸೇ 2008, ದಿನಾಂಕ: 28-07-2009.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 559 ಸಅಸೇ 2010, ದಿನಾಂಕ: 04-03-2011.
3. ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಸನೀಇ 108 ಸೇಸಎ2011, ದಿನಾಂಕ: 20-7-2011.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸರ್ಕಾರಿ ಸಚಿವಾಲಯದ ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಲಾಗಿದೆ ಮತ್ತು ಮೇಲೆ ಕ್ರಸಂ. (2) ರಲ್ಲಿ ಓದಲಾದ ಆದೇಶದಲ್ಲಿ ಸದರಿ ಹುದ್ದೆಗಳನ್ನು ದಿನಾಂಕ: 27-07-2011 ರವರೆಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವೇತನ ಶ್ರೇಣಿ ರೂ. 14,050–25,050)	01
2	ಸಹಾಯಕ ಇಂಜಿನಿಯರ್ (ವೇತನ ಶ್ರೇಣಿ ರೂ. 11,400–21,600)	03
3	ಶೀಘ್ರಲಿಪಿಗಾರರು. (ವೇತನ ಶ್ರೇಣಿ ರೂ8000–14,800)	01

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)ಯು ದಿನಾಂಕ: 04–03–2011ರ ಆದೇಶದಲ್ಲಿ ತಾತ್ಕಾಲಿಕವಾಗಿ ಮುಂದುವರಿಸಲಾದ 5 ಹುದ್ದೆಗಳು ಅವಶ್ಯಕವಿರುವುದರಿಂದ ಈ ಹುದ್ದೆಗಳನ್ನು ದಿನಾಂಕ: 27–07–2011 ರಿಂದ ಒಂದು ವರ್ಷದ ಕಾಲ ಮುಂದುವರೆಸಲು ಕೋರಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 393 ಸಅಸೇ 2011, ಬೆಂಗಳೂರು, ದಿ: 09–08–2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸರ್ಕಾರ ಸಚಿವಾಲಯದ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ಸೃಜಿಸಲಾದ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ: 27–07–2011 ರಿಂದ 1 ವರ್ಷದವರೆಗೆ ತಾತ್ಕಾಲಿಕವಾಗಿ ಮುಂದುವರೆಸಿ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವೇತನ ಶ್ರೇಣಿ ರೂ. 14,050–25,050)	01
2	ಸಹಾಯಕ ಇಂಜಿನಿಯರ್ (ವೇತನ ಶ್ರೇಣಿ ರೂ. 11,400–21,600)	03
3	ಶೀಘ್ರಲಿಪಿಗಾರರು. (ವೇತನ ಶ್ರೇಣಿ ರೂ8000–14,800)	01

ಮೇಲ್ಕಂಡ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ದಿನಾಂಕ: 28–07–2009 ರ ಆದೇಶದಲ್ಲಿ ನಿಗದಿಪಡಿಸಲಾದ ಕ್ರಮಗಳನ್ನು ಅನುಸರಿಸಲು ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10–07–1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು–3)

ಪಿ.ಆರ್.ನಂ. 2026

ENERGY SECRETARIAT

Sub :- Change of name from M/s Doddanavar Brothers to M/s Doddanavar Global Energy Private Limited-reg.

Read:-
1. Government Order No. EN 93 NCE 2009 dated:04.2.2010
2. Government Order No. EN 27 NCE 2009 dated:12.2.2009
3. Letter No. KRED/08/DBGEPL/2011/2114 dated: 14/19.07.2011 received from the Managing Director, Karnataka Renewable Energy Development Limited, Bangalore

PREAMBLE:

In the Government Order read at (1) above, sanction has been accorded for allotment of 6.0 MW wind power capacity in favour of M/s Doddanavar Brothers at Belgaum District.

In the Government Order read at (2) above, approval has been accorded for transfer of 15.00 MW wind power capacity in favour of M/s Doddanavar Brothers at Channenadaddi village, Chikkodi Taluk, Belgaum District.

In the letter read at (3) above, the Managing Director, Karnataka Renewable Energy Development Limited, Bangalore has recommended for Change the name from M/s Doddanavar Brothers to M/s Doddanavar Global Energy Private Limited.

The Proposal has been examined in detail and hence the following Order:-

GOVERNMENT ORDER NO: EN 218 NCE 2011, Bangalore, Dated 10.08.2011.

Government accords approval for the change of name in respect of two projects vide Government Orders referred at (1) & (2) respectively i.e. 6+15=21 MW from M/s Doddanavar Brothers to M/s Doddanavar Global Energy Private Limited at Channenadaddi village, Chikkodi Taluk, Belgaum District.

The Government has reserved power to cancel/modify this Order.

The others terms and conditions of the Government Order read at (1) &(2) above shall IPSO FACTO applicable.

By Order and in the name of the Governor of Karnataka

P.R. 2027

SURESH.B. KRISHNAPPANAVAR

Under Secretary to Government

Energy Department

ಇಂಧನ ಸಚಿವಾಲಯ

ವಿಷಯ : M/s Doddannanavar Global Energy Private Limited ಇವರಿಗೆ 27.20 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ :

1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/DGEPL-27.2MW/2011/789 ದಿನಾಂಕ: 01/14–03–2011.
2. ದಿನಾಂಕ: 27–05–2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Doddannanavar Global Energy Private Limited ಇವರಿಗೆ ಬೆಳಗಾಂ ಜಿಲ್ಲೆಯ, ಚಿಕ್ಕೋಡಿ ತಾಲ್ಲೂಕಿನ ಜೈನಾಪುರ ತೋರಣಹಳ್ಳಿ ಗ್ರಾಮದ ಪ್ರದೇಶಗಳಲ್ಲಿ 27.20 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯವಾಗಿರುತ್ತದೆ:

> ಸದರಿ ಪ್ರಸ್ತಾವನೆಯು ವಿದ್ಯುತ್ ವಿತರಣಾ ಕಂಪನಿಗಳಿಗೆ ವಿದ್ಯುತ್ ಮಾರಾಟ ಮಾಡದೆ ಮೂರನೆಯ ವ್ಯಕ್ತಿಗಳಿಗೆ (Third Party) ಮಾರಾಟ ಮಾಡಲು ಉದ್ದೇಶಿಸಿರುವುದರಿಂದ ಹಾಗೂ ಇದಕ್ಕೆ ಬೇಕಾದ ಭೂಮಿಯು ಸರ್ಕಾರದ ಅಥವಾ ಅರಣ್ಯ ಪ್ರದೇಶವಲ್ಲದ್ದರಿಂದ ಎಸ್ಕಾಂಗಳ ಜೊತೆ ವಿದ್ಯುತ್ ಖರೀದಿ ಒಪ್ಪಂದದ ಒಡಂಬಡಿಕೆ ಮಾಡುವ ಅಗತ್ಯವಿಲ್ಲದ್ದರಿಂದ ಇಂತಹ ಪ್ರಕರಣಗಳನ್ನು ಇನ್ನು ಮುಂದೆ ಹಂಚಿಕೆ ಸಮಿತಿಗೆ ತರುವ ಅವಶ್ಯಕತೆ ಇರುವುದಿಲ್ಲವೆಂದು, ಅಭಿವೃದ್ಧಿದಾರರು ನೇರವಾಗಿ ವಿದ್ಯುತ್ ಜಾಲದ ವ್ಯವಸ್ಥೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು ಸಂಪರ್ಕಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು. ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಸರ್ಕಾರಿ ಆದೇಶ ಹೊರಡಿಸಲು ಸಹ ನಿರ್ಣಯಿಸಲಾಯಿತು.
>
> ಆದಾಗ್ಯೂ, ಸದರಿ ಪ್ರಸ್ತಾವನೆಗೆ ಅನುಮತಿ ನೀಡುವ ಒಂದು ಸರ್ಕಾರಿ ಆದೇಶವನ್ನು ಹೊರಡಿಸಲು ಶಿಫಾರಸ್ಸು ಮಾಡಲಾಯಿತು.

ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 171 ಎನ್‌ಸಿಇ 2011, ಬೆಂಗಳೂರು, ದಿನಾಂಕ: 09–08–2011

M/s Doddannanavar Global Energy Private Limited ಇವರಿಗೆ ಬೆಳಗಾಂ ಜಿಲ್ಲೆಯ, ಚಿಕ್ಕೋಡಿ ತಾಲ್ಲೂಕಿನ ಜೈನಾಪುರ ತೋರಣಹಳ್ಳಿ ಗ್ರಾಮದ ಪ್ರದೇಶಗಳಲ್ಲಿ 27.20 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಘಟಕದ ಸ್ಥಾಪನೆಗೆ ಈ ಕೆಳಗೆ ವಿವರಿಸಿರುವಂತೆ ಆದೇಶದಲ್ಲಿನ ನಿಬಂಧನೆಗೊಳಪಟ್ಟು ಅನುಮತಿ ನೀಡಲಾಗಿದೆ.

1. ಸದರಿ ಯೋಜನೆಯನ್ನು financial closure ಸಾಧಿಸಿದ 24 ತಿಂಗಳುಗಳ ಒಳಗಾಗಿ ಪ್ರಾರಂಭ ಮಾಡತಕ್ಕದ್ದು.
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳೊಳಗಾಗಿ ಯೋಜನಾಭಿವೃದ್ಧಿದಾರರು ರೂ. 400ರ ಛಾಪಾ ಕಾಗದದಲ್ಲಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.

4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ)
➢ 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
➢ 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
➢ 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
➢ 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.

6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು.

7. ಸದರಿ ಪ್ರಸ್ತಾವನೆಯು ವಿದ್ಯುತ್ ವಿತರಣಾ ಕಂಪನಿಗಳಿಗೆ ವಿದ್ಯುತ್ ಮಾರಾಟ ಮಾಡದೆ ಮೂರನೆಯ ವ್ಯಕ್ತಿಗಳಿಗೆ (Third Party) ಮಾರಾಟ ಮಾಡಲು ಉದ್ದೇಶಿಸಿರುವುದರಿಂದ ಹಾಗೂ ಇದಕ್ಕೆ ಬೇಕಾದ ಭೂಮಿಯು ಸರ್ಕಾರದ ಅಥವಾ ಅರಣ್ಯ ಪ್ರದೇಶವಲ್ಲದ್ದರಿಂದ ಎಸ್ಕಾಂಗಳ ಜೊತೆ ವಿದ್ಯುತ್ ಖರೀದಿ ಒಪ್ಪಂದದ ಒಡಂಬಡಿಕೆ ಮಾಡುವ ಅಗತ್ಯವಿಲ್ಲದ್ದರಿಂದ ಅಭಿವೃದ್ಧಿದಾರರು ನೇರವಾಗಿ ವಿದ್ಯುತ್ ಜಾಲದ ವ್ಯವಸ್ಥೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ. ವೀಲಿಂಗ್ ಮತ್ತು ಬ್ಯಾಂಕಿಂಗ್ ಮಾಡಿಕೊಳ್ಳಲು ಅನುಮತಿಸಲಾಗಿದೆ.

8. ಕಾಲ ಕಾಲಕ್ಕೆ ಇರುವ ನೀತಿ ನಿಯಮಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗುವುದು.

9. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.

10. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.

11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿಆರ್.ನಂ. 2028

ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ: ಶ್ರೀ ಕೃಷ್ಣಾ ಜಲಶಕ್ತಿ ಪ್ರೈವೇಟ್ ಲಿಮಿಟೆಡ್ ಕಂಪನಿಯ 5.00 ಮೆಗಾ ವ್ಯಾಟ್ ಸಾಮರ್ಥ್ಯದ ನಂದಿಮೊಟ್ಟೆ ಕಿರು ಜಲ ವಿದ್ಯುತ್ ಯೋಜನೆಗಾಗಿ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ: ಇಂಇ 150 ಎನ್‌ಸಿಇ 2003, ದಿನಾಂಕ: 10-09-2003.
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 449 ಎನ್‌ಸಿಇ 2006, ದಿನಾಂಕ: 05-12-2006.
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 122 ಎನ್‌ಸಿಇ 2007, ದಿನಾಂಕ: 27-06-2007
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಸ್.ಹೆಚ್.-271/ನಂದಿಮೊಟ್ಟೆಹೊಳೆ-ಎಂಹೆಚ್‌ಎಸ್/2011/1118 ದಿನಾಂಕ: 02/11-04-2011.

ಪ್ರಸ್ತಾವನೆ:

ಓದಲಾದ (1)ರ ಆದೇಶದಲ್ಲಿ ಮೆ: ಶ್ರೀ ಕೃಷ್ಣಾ ಜಲಶಕ್ತಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಾದಾಪುರ ಗ್ರಾಮದ ಬಳಿ ನಂದಿಮೊಟ್ಟೆ ನಾಲೆಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ನಂದಿಮೊಟ್ಟೆ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಓದಲಾದ (2)ರ ಆದೇಶದಲ್ಲಿ ಮೆ: ಶ್ರೀ ಕೃಷ್ಣಾ ಜಲಶಕ್ತಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಾದಾಪುರ ಗ್ರಾಮದ ಬಳಿ ನಂದಿಮೊಟ್ಟೆ ನಾಲೆಗೆ ಅಡ್ಡಲಾಗಿ ಹಂಚಿಕೆ ಮಾಡಲಾಗಿರುವ 3.00 ಮೆಗಾ ವ್ಯಾಟ್ ಸಾಮರ್ಥ್ಯದ ನಂದಿಮೊಟ್ಟೆ ಕಿರು ಜಲ ವಿದ್ಯುತ್ ಯೋಜನೆಗೆ ಕಾಲಾವಕಾಶವನ್ನು 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಓದಲಾದ (3)ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ ಇಂಇ 210 ಎನ್‌ಸಿಇ 2004 ದಿನಾಂಕ: 09-09-2004ರಲ್ಲಿ ಮೆ: ಆಸ್ಟರ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಮೆ: ಶ್ರೀ ಕೃಷ್ಣಾ ಜಲಶಕ್ತಿ ಪ್ರೈವೇಟ್ ಲಿಮಿಟೆಡ್ ಕಂಪನಿಯ ಜಾಗದ ಕೆಳ ತೊರೆಯಲ್ಲಿ ಹಂಚಿಕೆ ಮಾಡಲಾಗಿರುವ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸಿ ಈ ಜಾಗವನ್ನು ಮೆ: ಶ್ರೀ ಕೃಷ್ಣಾ ಜಲಶಕ್ತಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಾದಾಪುರ ಗ್ರಾಮದ ಬಳಿ ನಂದಿಮೊಟ್ಟೆ ನಾಲೆಗೆ ಅಡ್ಡಲಾಗಿ ಹಂಚಿಕೆ ಮಾಡಲಾಗಿರುವ 3.00 ಮೆಗಾ ವ್ಯಾಟ್ ಸಾಮರ್ಥ್ಯದ ನಂದಿಮೊಟ್ಟೆ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 5.00 ಮೆ.ವ್ಯಾ.ಗೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು. ಅದರನ್ವಯ ಅಭಿವೃದ್ಧಿದಾರರು ಸರ್ಕಾರದೊಂದಿಗೆ ದಿನಾಂಕ: 29-06-2007 ರಂದು ಒಡಂಬಡಿಕೆ ಮಾಡಿಕೊಂಡಿದ್ದು ಯೋಜನೆಯನ್ನು ದಿನಾಂಕ: 28-06-2010ರೊಳಗೆ ಅನುಷ್ಠಾನಗೊಳಿಸಬೇಕಾಗುತ್ತದೆ.

ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಸದರಿ ಯೋಜನೆಯು ಕಂಪನಿಯ ಸ್ವಂತ ಜಮೀನಿನಲ್ಲಿ ಬರುವುದರಿಂದ ಇನ್ನು ಮುಂದೆ ಯಾವುದೇ ಕಾರಣಕ್ಕೂ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲವೆಂಬ ಷರತ್ತಿಗೊಳಪಟ್ಟು ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ಅಂತಿಮವಾಗಿ 2 ವರ್ಷಗಳ ಅವಧಿಗೆ (ದಿನಾಂಕ: 29-06-2010ರಿಂದ) ವಿಸ್ತರಿಸಲು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಪ್ರಸ್ತಾವನೆಯನ್ನು ಶಿಫಾರಸ್ಸುಮಾಡಿ ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಮೇಲಿನ ಶಿಫಾರಸ್ಸನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 205 ಎನ್‌ಸಿಇ 2011, ಬೆಂಗಳೂರು, ದಿನಾಂಕ: 09-08-2011

ಮೆ: ಶ್ರೀ ಕೃಷ್ಣಾ ಜಲಶಕ್ತಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಾದಾಪುರ ಗ್ರಾಮದ ಬಳಿ ನಂದಿಮೊಟ್ಟೆ ನಾಲೆಗೆ ಅಡ್ಡಲಾಗಿ ಹಂಚಿಕೆ ಮಾಡಲಾಗಿರುವ 5.00 ಮೆಗಾ ವ್ಯಾಟ್ ಸಾಮರ್ಥ್ಯದ ನಂದಿಮೊಟ್ಟೆ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಯಾವುದೇ ಕಾರಣಕ್ಕೂ ಇನ್ನು ಮುಂದೆ ಕಾಲಾವಕಾಶವನ್ನು ವಿಸ್ತರಿಸಲಾಗುವುದಿಲ್ಲವೆಂಬ ಷರತ್ತಿಗೊಳಪಟ್ಟು ಅಂತಿಮವಾಗಿ ದಿನಾಂಕ: 29-06-2010ರಿಂದ ಮುಂದಿನ 2 ವರ್ಷಗಳವರೆಗೆ (ಎರಡು ವರ್ಷಗಳವರೆಗೆ) ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿಆರ್.ನಂ. 2029

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ (ಸೋಷಿಯೋ ಎಕನಾಮಿಕ್ ಅಂಡ್ ಕ್ಯಾಸ್ಟ್ ಸೆನ್ಸಸ್)ಯನ್ನು ಪರಿಣಾಮಕಾರಿಯಾಗಿ ನಡೆಸುವ ಬಗ್ಗೆ.

ಓದಲಾಗಿದೆ :

1. ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಅ.ಸ. ಪತ್ರ ಸಂಖ್ಯೆ: ಕ್ಯೂ 14016/6/2011/ಎ1 (ಆರ್‌ಡಿ) ದಿನಾಂಕ: 30-05-2011.
2. ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಪತ್ರ ಸಂಖ್ಯೆ: ಕ್ಯೂ 14016/6/2011/ಎ1 (ಆರ್‌ಡಿ) ದಿನಾಂಕ: 13-06-2011.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ಸಂಖ್ಯೆ: ಆರ್‌ಡಿಪಿ 16 ಎಸ್‌ಜೆವೈ 2011 (ಎ1) ದಿನಾಂಕ: 18-07-2011.

ಪ್ರಸ್ತಾವನೆ:

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಪ್ರತಿ 5 ವರ್ಷಕ್ಕೊಮ್ಮೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಗ್ರಾಮೀಣ ಪ್ರದೇಶದಲ್ಲಿ ಗಣತಿ ಕಾರ್ಯ ನಡೆಸುತ್ತಿದೆ. ರಾಜ್ಯವು ಈ ಹಿಂದೆ 2004 ರಲ್ಲಿ ಸರ್ವ ಕುಟುಂಬ ಸಮೀಕ್ಷೆಯ ಹೆಸರಿನಲ್ಲಿ ಗಣತಿ ಕಾರ್ಯ ಕೈಗೊಂಡು ಪೂರ್ಣಗೊಳಿಸಿದೆ.

ಪ್ರಸ್ತುತ ಗಣತಿ ಪ್ರಕ್ರಿಯೆ 2007 ರಲ್ಲಿ ಪ್ರಾರಂಭಗೊಂಡಿದ್ದು, 2011 ರಲ್ಲಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿಯನ್ನು ಕೈಗೊಳ್ಳುವಂತೆ ಓದಲಾಗಿದೆ (1)ರಲ್ಲಿ ನಿರ್ಧರಿಸಿದೆ. ಪ್ರಸಕ್ತ ಗಣತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಪ್ರಥಮ ಬಾರಿಗೆ ಪಟ್ಟಣ ಪ್ರದೇಶಗಳಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದೆ. ಇದರೊಂದಿಗೆ ಸ್ವಾತಂತ್ರ್ಯ ನಂತರ ಪ್ರಥಮ ಬಾರಿಗೆ ಜಾತಿ ಗಣತಿಯನ್ನು ಸಹ ತೆಗೆದುಕೊಳ್ಳಲಾಗುತ್ತಿದೆ. ಇದರಂತೆ ರಾಜ್ಯದಲ್ಲಿಯೂ ಗಣತಿ ಕಾರ್ಯ ಕೈಗೊಳ್ಳಬೇಕಾಗಿದೆ. ಗಣತಿಯನ್ನು 2 ಹಂತಗಳಲ್ಲಿ (1) ನವೆಂಬರ್ 2011 (2) ಡಿಸೆಂಬರ್ 2011 ರಲ್ಲಿ ನಡೆಸಬೇಕಾಗಿದೆ.

ಓದಲಾಗಿದೆ (3) ರನ್ವಯ ದಿನಾಂಕ: 06-07-2011 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ, ಈ ಗಣತಿ ಕಾರ್ಯಕ್ಕಾಗಿ ರಾಜ್ಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳ ರಚನೆ ಹಾಗೂ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 29 ಎಸ್‌ಜೆವೈ 2011 (ಎ-1) ಬೆಂಗಳೂರು, ದಿನಾಂಕ: 03-08-2011

ರಾಜ್ಯ ಸರ್ಕಾರವು ಸಾಮಾಜಿಕ ಆರ್ಥಿಕ ಹಾಗೂ ಜಾತಿ ಗಣತಿ 2011 ನಡೆಸಲು ರಾಜ್ಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಸಮಿತಿಗಳನ್ನು ರಚಿಸಲು ಹಾಗೂ ನೋಡಲ್ ಅಧಿಕಾರಿಗಳನ್ನು ನೇಮಿಸಲು ಮಂಜೂರಾತಿ ನೀಡಿದೆ.

ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ: (State Level Empowered Committee)

ಕ್ರಮ ಸಂಖ್ಯೆ	ಅಧಿಕಾರಿಯ ಪದನಾಮ	
1	ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು	ಅಧ್ಯಕ್ಷರು
2	ಅಪರ ಮುಖ್ಯ ಕಾರ್ಯದರ್ಶಿಗಳು, ಹಾಗೂ ಅಭಿವೃದ್ಧಿ ಆಯುಕ್ತರು, ಬೆಂಗಳೂರು	ಸದಸ್ಯರು
3	ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು	ಸದಸ್ಯರು
4	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು	ಸದಸ್ಯರು
5	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು	ಸದಸ್ಯರು
6	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು	ಸದಸ್ಯರು
7	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು	ಸದಸ್ಯರು
8	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು	ಸದಸ್ಯರು
9	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು	ಸದಸ್ಯರು
10	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು	ಸದಸ್ಯರು
11	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು	ಸದಸ್ಯರು
12	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ) ಬೆಂಗಳೂರು	ಸದಸ್ಯರು
13	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ, (ಉನ್ನತ ಶಿಕ್ಷಣ) ಇಲಾಖೆ, ಬೆಂಗಳೂರು	ಸದಸ್ಯರು
14	ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು	ಸದಸ್ಯರು
15	ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು	ಸದಸ್ಯರು
16	ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು	ಸದಸ್ಯರು
17	ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು	ಸದಸ್ಯರು
18	ಆಯುಕ್ತರು, ಪೌರಾಡಳಿತ ಇಲಾಖೆ, ಬೆಂಗಳೂರು	ಸದಸ್ಯರು
19	ಆಯುಕ್ತರು, ಪೂರ್ವ ಪದವಿ ಶಿಕ್ಷಣ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು	ಸದಸ್ಯರು
20	ಆಯುಕ್ತರು, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ ಕಟ್ಟಡ, ಪ್ಯಾಲೇಜ್ ರಸ್ತೆ, ಬೆಂಗಳೂರು	ಸದಸ್ಯರು
21	ನಿರ್ದೇಶಕರು, ಸೆನ್ಸಸ್ ಆಪರೇಷನ್ಸ್ ಇನ್ ಕರ್ನಾಟಕ, ಬೆಂಗಳೂರು	ಸದಸ್ಯರು
22	ರಾಜ್ಯ ಮಾಹಿತಿ ಅಧಿಕಾರಿ, ಎನ್‌ಐಸಿ, ಬೆಂಗಳೂರು	ಸದಸ್ಯರು
23	ಬಿಇಎಲ್ ಪ್ರತಿನಿಧಿ, ಬೆಂಗಳೂರು	ಸದಸ್ಯರು
24	ನಿರ್ದೇಶಕರು (ಸ್ವಉಕಾ) ಹಾಗೂ ಪ/ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.	ಸದಸ್ಯ ಕಾರ್ಯದರ್ಶಿ

ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು:

- ಸಮಿತಿಯು ಅವಶ್ಯಕತೆಗನುಗುಣವಾಗಿ ಯಾವುದೇ ಅಧಿಕಾರಿಗಳನ್ನು ಸಮಿತಿಗೆ ಸೇರ್ಪಡಿಸಿಕೊಳ್ಳಬಹುದು.
- ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ನಡೆಸುವುದು.

ಗ್ರಾಮೀಣ ಗಣತಿಯ ರಾಜ್ಯ ಮಟ್ಟದ ಉಪ ಸಮಿತಿ:

ಕ್ರಮ ಸಂಖ್ಯೆ	ಅಧಿಕಾರಿಯ ಪದನಾಮ	
1	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು	ಅಧ್ಯಕ್ಷರು
2	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು	ಸದಸ್ಯರು
3	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು	ಸದಸ್ಯರು
4	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು	ಸದಸ್ಯರು
5	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು	ಸದಸ್ಯರು
6	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬೆಂಗಳೂರು	ಸದಸ್ಯರು
7	ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು	ಸದಸ್ಯರು
8	ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು	ಸದಸ್ಯರು
9	ನಿರ್ದೇಶಕರು, ಸೆನ್ಸಸ್ ಆಪರೇಷನ್ ಇನ್ ಕರ್ನಾಟಕ, ಬೆಂಗಳೂರು	ಸದಸ್ಯರು
10	ರಾಜ್ಯ ಮಾಹಿತಿ ಅಧಿಕಾರಿ, ಎನ್‌ಐಸಿ, ಬೆಂಗಳೂರು	ಸದಸ್ಯರು
11	ಬಿಇಎಲ್ ಪ್ರತಿನಿಧಿ, ಬೆಂಗಳೂರು	ಸದಸ್ಯರು
12	ನಿರ್ದೇಶಕರು (ಸ್ವಉಕಾ) ಹಾಗೂ ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿ

ಗ್ರಾಮೀಣ ಗಣತಿಯ ರಾಜ್ಯ ಮಟ್ಟದ ಉಪ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು:

- ಸಮಿತಿಯು ಅವಶ್ಯಕತೆಗನುಗುಣವಾಗಿ ಯಾವುದೇ ಅಧಿಕಾರಿಗಳನ್ನು ಸಮಿತಿಗೆ ಸೇರ್ಪಡಿಸಿಕೊಳ್ಳಬಹುದು.
- ರಾಜ್ಯ ಮಟ್ಟದ ಉಪ ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆಯನ್ನು ಗಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.
- ಗಣತಿ ಕಾರ್ಯದ ಕುರಿತು ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ.
- ರಾಜ್ಯದಲ್ಲಿ ಕೈಗೊಳ್ಳಲಾಗುವ ಪ್ರಥಮ ಹಾಗೂ ದ್ವಿತೀಯ ಹಂತಗಳಲ್ಲಿ ಗಣತಿ ಕಾರ್ಯಕ್ಕೆ ಜಿಲ್ಲೆಗಳನ್ನು ಗುರುತಿಸುವುದು.
- ಆಗಿಂದಾಗ್ಗೆ ಗಣತಿ ಕಾರ್ಯದ ಕುರಿತು ಪ್ರಗತಿ ಪರಿಶೀಲನೆ ನಡೆಸುವುದು.

ರಾಜ್ಯ ಮಟ್ಟದ ನೋಡಲ್ ಅಧಿಕಾರಿಯವರ ನೇಮಕ ಮತ್ತು ಅವರ ಕರ್ತವ್ಯ ಮತ್ತು ಜವಾಬ್ದಾರಿ:

- ಆಯುಕ್ತರು, ಪೌರಾಡಳಿತ ಇಲಾಖೆ, ಬೆಂಗಳೂರು ರವರನ್ನು ನಗರ ಪ್ರದೇಶದ ಗಣತಿಯ ನೋಡಲ್ ಅಧಿಕಾರಿಗಳಾಗಿದ್ದು, ನಗರದ ಪ್ರದೇಶದ ಗಣತಿ ಕಾರ್ಯದ ಎಲ್ಲಾ ಪ್ರಾಸಂಗಿಕ ಕ್ರಮಗಳನ್ನು ಕೈಗೊಂಡು, ಮಾಹಿತಿಯನ್ನು ರಾಜ್ಯ ಮಟ್ಟದ ನೋಡಲ್ ಅಧಿಕಾರಿಯವರಿಗೆ ನೀಡುವುದು.

ಜಿಲ್ಲಾ ಮಟ್ಟದ ಸಮಿತಿ:

ಕ್ರಮ ಸಂಖ್ಯೆ	ಅಧಿಕಾರಿಯ ಪದನಾಮ	
1	ಜಿಲ್ಲಾಧಿಕಾರಿಗಳು	ಅಧ್ಯಕ್ಷರು
2	ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು	ಉಪಾಧ್ಯಕ್ಷರು
3	ಸೂಪರಿಂಟೆಂಡೆಂಟ್ ಆಫ್ ಪೊಲೀಸ್	ಸದಸ್ಯರು
4	ಜಿಲ್ಲಾ ಆರೋಗ್ಯಾಧಿಕಾರಿಗಳು	ಸದಸ್ಯರು
5	ಡಿಡಿಪಿಐ, ಶಿಕ್ಷಣ ಇಲಾಖೆ	ಸದಸ್ಯರು
6	ಜಂಟಿ ನಿರ್ದೇಶಕರು, ಕೃಷಿ ಇಲಾಖೆ	ಸದಸ್ಯರು
7	ಸಿಎಂಸಿ/ಕಾರ್ಪೋರೇಷನ್ ಆಯುಕ್ತರು/ಆಡಳಿತಾಧಿಕಾರಿಗಳು	ಸದಸ್ಯರು
8	ಪ್ರಾದೇಶಿಕ ಸಾರಿಗೆ ಅಧಿಕಾರಿಗಳು	ಸದಸ್ಯರು
9	ಜಿಲ್ಲಾ ಸೆನ್ಸಸ್ ಅಧಿಕಾರಿಗಳು	ಸದಸ್ಯರು
10	ಜಿಲ್ಲಾ ಎನ್.ಐ.ಸಿ ಅಧಿಕಾರಿಗಳು	ಸದಸ್ಯರು
11	ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು	ಸದಸ್ಯರು
12	ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು	ಸದಸ್ಯರು
13	ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ	ಸದಸ್ಯರು
14	ಜಿಲ್ಲಾ ಮಾಹಿತಿ ಮತ್ತು ಪ್ರಚಾರಾಧಿಕಾರಿಗಳು	ಸದಸ್ಯರು
15	ಅಗ್ರ ಜಿಲ್ಲಾ ವ್ಯವಸ್ಥಾಪಕರು	ಸದಸ್ಯರು
16	ಯೋಜನಾ ನಿರ್ದೇಶಕರು (ಡಿಆರ್‌ಡಿಎ)	ಸದಸ್ಯರು
17	ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್	ಸದಸ್ಯ ಕಾರ್ಯದರ್ಶಿ

ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿ:

- ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಗಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.
- ಗಣತಿಗೆ ಅವಶ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಛಾರ್ಜ್ ಆಫೀಸ್‌ಗೆ ಅವಕಾಶ ಕಲ್ಪಿಸುವುದು.
- ಜಿಲ್ಲೆಯಲ್ಲಿರುವ 4 ಎನ್ಯೂಮರೇಷನ್ ಬ್ಲಾಕ್ (ಇ.ಬಿ) ನ ಆಧಾರದ ಮೇಲೆ ಒಬ್ಬ ಗಣತಿದಾರರನ್ನು ಹಾಗೂ 6 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ಅಥವಾ ಸಂದರ್ಭಕ್ಕೆ ಅನುಗುಣವಾಗಿ ನೇಮಕ ಮಾಡಲು ಕ್ರಮ ಕೈಗೊಳ್ಳುವುದು.
- ಗಣತಿಗೆ ಅವಶ್ಯವಿರುವ ಸಿಬ್ಬಂದಿ ಗುರುತಿಸಿ, ನೇಮಕ ಮಾಡುವ ಅಧಿಕಾರವನ್ನು ಸಮಿತಿ ನಿರ್ಧರಿಸಿ ನಾಮಾಂಕಿತಗೊಳಿಸುವುದು.
- ರಾಜ್ಯ ಮಟ್ಟದಲ್ಲಿ ತರಬೇತಿ ಪಡೆಯುವ ಸಲುವಾಗಿ ಜಿಲ್ಲೆಯ ಇಬ್ಬರು ಮಾಸ್ಟರ್ ಟ್ರೈನರ್ ಫೆಸಿಲಿಟೇಟರ್ಸ್‌ಗಳನ್ನು ಗುರುತಿಸುವುದು.
- ಜಿಲ್ಲಾ ಮಟ್ಟದ ಸಮಿತಿ ಸದಸ್ಯರು ಆಯಾ ಹಂತಗಳಲ್ಲಿ ನಡೆಯುವ ಗಣತಿ ತರಬೇತಿ ಕಾರ್ಯಕ್ರಮದಲ್ಲಿ ತಪ್ಪದೇ ಭಾಗವಹಿಸುವಲ್ಲಿ ಕ್ರಮ ವಹಿಸುವುದು.

ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿ ನೇಮಕ ಮತ್ತು ಕರ್ತವ್ಯಗಳು

- ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಗಳ ನೋಡಲ್ ಅಧಿಕಾರಿಯಾಗಿ ನೇಮಿಸಿದೆ.
- ಸರ್ಕಾರಗಳು ನೀಡುವ ನಿರ್ದೇಶನದಂತೆ ಗಣತಿ ಕಾರ್ಯದ ಎಲ್ಲಾ ಪ್ರಾಸಂಗಿಕ ಕ್ರಮಗಳನ್ನು ನಿಗದಿತ ವೇಳಾ ಪಟ್ಟಿಯಂತೆ ಅನುಸರಿಸಿ, ಪ್ರಗತಿ ಪರಿಶೀಲನೆ ನಡೆಸುವುದು.
- ನಿಗದಿತ ಸಮಯದಲ್ಲಿ ಸರ್ಕಾರಕ್ಕೆ ಎಲ್ಲಾ ಮಾಹಿತಿಗಳನ್ನು ಪೂರೈಸುವುದು.
- ಎಲ್ಲಾ ಹಂತಗಳಲ್ಲಿ ಗಣತಿಗೆ ಬೇಕಾದ ಅಧಿಕಾರಿ/ನೌಕರರನ್ನು ನೇಮಕ ಮಾಡುವುದು.

ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರ ಕರ್ತವ್ಯಗಳು

- ಜಿಲ್ಲೆಯ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಗಣತಿ ಕಾರ್ಯಕ್ಕೆ ಬೇಕಾಗುವ ಮುದ್ರಣ ಮತ್ತು ಲೇಖನ ಸಾಮಗ್ರಿಗಳನ್ನು ಪೂರೈಸುವುದು.
- ಬಿಇಎಲ್ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಗಣತಿಗೆ ಅವಶ್ಯವಿರುವ ಟ್ಯಾಬ್ಲೆಟ್ ಪಿಸಿ ಸಮರ್ಪಕ ಸರಬರಾಜು ಆಗಿರುವ ಬಗ್ಗೆ ನಿಗಾ ವಹಿಸುವುದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಕರ್ತವ್ಯಗಳು

- ಗಣತಿ ಕಾರ್ಯಕ್ಕೆ ತಗಲುವ ವೆಚ್ಚವನ್ನು ಈಗಾಗಲೇ ಬಿಪಿಎಲ್ ಸೆನ್ಸಸ್‌ಗಾಗಿ ಬಿಡುಗಡೆ ಮಾಡಿರುವ ಅನುದಾನದಿಂದಲೇ ಭರಿಸುವುದು.

ತಾಲ್ಲೂಕು ಮಟ್ಟದ ಸಮಿತಿ:

ಕ್ರಮ ಸಂಖ್ಯೆ	ಅಧಿಕಾರಿಯ ಪದನಾಮ	
1	ಉಪ ವಿಭಾಗಾಧಿಕಾರಿಗಳು	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ	ಸದಸ್ಯರು
3	ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ	ಸದಸ್ಯರು
4	ಸಿಡಿಪಿಓ	ಸದಸ್ಯರು
5	ತಾಲ್ಲೂಕು ಆರೋಗ್ಯಾಧಿಕಾರಿಗಳು	ಸದಸ್ಯರು
6	ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು	ಸದಸ್ಯರು
7	ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್/ಸರ್ಕಲ್ ಇನ್‌ಸ್ಪೆಕ್ಟರ್ ಆಫ್ ಪೊಲೀಸ್	ಸದಸ್ಯರು
8	ಬ್ಲಾಕ್ ಶಿಕ್ಷಣಾಧಿಕಾರಿಗಳು	ಸದಸ್ಯರು
9	ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಪ್ರತಿನಿಧಿ	ಸದಸ್ಯರು
10	ತಹಶೀಲ್ದಾರರು	ಸದಸ್ಯ ಕಾರ್ಯದರ್ಶಿ

ತಾಲ್ಲೂಕು ಮಟ್ಟದ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿ:

- ಸರ್ಕಾರ ಮತ್ತು ಜಿಲ್ಲಾ ಸಮಿತಿಗಳು ಆಗಿಂದಾಗ್ಗೆ ನೀಡುವ ನಿರ್ದೇಶನದಂತೆ ನಿಗದಿತ ಅವಧಿಯೊಳಗೆ ಗಣತಿ ಕಾರ್ಯ ಸಮರ್ಪಕವಾಗಿ ನಡೆಯುತ್ತಿರುವ ಬಗ್ಗೆ ನಿಗಾ ವಹಿಸುವುದು.
- ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಸಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.
- ಮಾಹಿತಿಯನ್ನು ಜಿಲ್ಲಾ ಮಟ್ಟದಲ್ಲಿ ಕ್ರೋಢಿಕರಣವಾಗುವಲ್ಲಿ ಕ್ರಮ ವಹಿಸುವುದು.
- ತಾಲ್ಲೂಕಿನಲ್ಲಿರುವ 4 ಎನ್ಯೂಮರೇಷನ್ ಬ್ಲಾಕ್ (ಇ.ಬಿ) ನ ಆಧಾರದ ಮೇಲೆ ಒಬ್ಬ ಗಣತಿದಾರರನ್ನು ಹಾಗೂ 6 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ಅಥವಾ ಸಂದರ್ಭಕ್ಕೆ ಅನುಗುಣವಾಗಿ ಬೇಕಾಗುವ ಸಿಬ್ಬಂದಿಯ ಮಾಹಿತಿಯನ್ನು ಜಿಲ್ಲಾ ಸಮಿತಿಗೆ ಒದಗಿಸುವುದು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಣತಿಯ ಬಗ್ಗೆ ಆಗ್ಗಿಂದಾಗ್ಗೆ ನೀಡುವ ಎಲ್ಲಾ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸಿ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಾ: ಅಮಿತಾ ಪ್ರಸಾದ್
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿಆರ್.ನಂ. 2030

ಯುವಜನ ಸೇವಾ ಸಚಿವಾಲಯ

ವಿಷಯ : ಕೆ.ಎ.ಟಿ. ನಿಂದನಾ ಅರ್ಜಿ ಸಂಖ್ಯೆ: 393/2010ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿದ ದಿನಾಂಕ: 01-07-2011ರ ಆದೇಶವನ್ನು ಅನುಷ್ಠಾನಗೊಳಿಸಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ಶ್ರೀ ವಿ.ಕೆ. ಗುಡೋಡಗಿರವರಿಗೆ ತಡವಾಗಿ ಪಾವತಿಸಲಾದ ನಿವೃತ್ತ ಸೌಲಭ್ಯಗಳಿಗೆ ಬಡ್ಡಿ ಪಾವತಿಸುವ ಕುರಿತು.

ಓದಲಾಗಿದೆ :

1. ದಿನಾಂಕ: 06-12-2010ರ ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 77 ಯುಇಸೇ 2010.
2. ದಿನಾಂಕ: 23-12-2010ರ ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 77 ಯುಇಸೇ 2010.
3. ಕೆ.ಎ.ಟಿ. ನಿಂದನಾ ಅರ್ಜಿ ಸಂಖ್ಯೆ: 393/2010ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ದಿನಾಂಕ: 01-07-2011ರ ಆದೇಶ.
4. ದಿನಾಂಕ: 18-07-2011ರ ಡಿವೈಎಸ್‌ಎಸ್/ಸಿ3-94/2011-12ನೇ ಸಂಖ್ಯೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರ ಪತ್ರ.

ಪ್ರಸ್ತಾವನೆ:

ಶ್ರೀ ವಿ.ಕೆ. ಗುಡೋಡಗಿ, ನಿವೃತ್ತ ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು, ಇವರ ವಿರುದ್ಧ ಎರಡು ಇಲಾಖಾ ವಿಚಾರಣೆಗಳು ಬಾಕಿ ಇದ್ದ ಕಾರಣ ಸದರಿಯವರ ನಿವೃತ್ತ ಸೌಲಭ್ಯಗಳನ್ನು ತಡೆಹಿಡಿಯಲಾಗಿತ್ತು. ಈ ಕ್ರಮವನ್ನು ಪ್ರಮುಖವಾಗಿ ಪ್ರಶ್ನಿಸಿ ಸದರಿ ನಿವೃತ್ತ ಅಧಿಕಾರಿಯವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿದ ಅರ್ಜಿ ಸಂಖ್ಯೆ: 3219/2010ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿದ ದಿನಾಂಕ: 30-08-2010ರ ಆದೇಶವನ್ನು ಅನಷ್ಠಾನಗೊಳಿಸಿ, ಸದರಿಯವರ ನಿವೃತ್ತಿ ಸೌಲಭ್ಯಗಳ ಪೈಕಿ ರೂ. 2,50,000/- (ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳು)ಗಳನ್ನು ತಡೆ ಹಿಡಿದು ಗಳಿಕೆ ರಜೆ ನಗದೀಕರಣ ಸೌಲಭ್ಯವೂ ಸೇರಿದಂತೆ ಉಳಿದ ನಿವೃತ್ತಿ ಸೌಲಭ್ಯಗಳನ್ನು

ಮೇಲೆ (1)ರಲ್ಲಿ ಓದಲಾದ ದಿನಾಂಕ: 06–12–2010ರ ಆದೇಶದಲ್ಲಿ ಬಿಡುಗಡೆ ಮಾಡಲಾಯಿತು. ನಂತರ ಸದರಿಯವರು ಸರ್ಕಾರಕ್ಕೆ ಸಲ್ಲಿಸಿದ್ದ ಮನವಿಗಳನ್ನು ಪರಿಶೀಲಿಸಿದಾಗ ಇವರ ವಿರುದ್ಧ ಪ್ರಸ್ತುತ ಜಾರಿಯಲ್ಲಿರುವ ಎರಡು ಇಲಾಖಾ ವಿಚಾರಣೆಗಳು ಮುಕ್ತಾಯಗೊಳ್ಳುವವರೆಗೂ, ನಿವೃತ್ತಿ ಸೌಲಭ್ಯಗಳ ಪೈಕಿ ತಡೆಹಿಡಿಯಲಾದ ರೂ. 2.50 ಲಕ್ಷಗಳನ್ನು ತಡೆಹಿಡಿಯಲು ಮೇಲೆ (2)ರಲ್ಲಿ ಓದಲಾದ ದಿನಾಂಕ: 23–12–2010ರ ಆದೇಶವನ್ನು ಹೊರಡಿಸಲಾಯಿತು.

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 3219/2010 ರಲ್ಲಿ ನೀಡಿದ ದಿನಾಂಕ: 30–08–2010ರ ಆದೇಶವು ಪಾಲನೆಯಾಗಿಲ್ಲವೆಂದು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ಶ್ರೀ ವಿ.ಕೆ. ಗುಡೋಡಗಿರವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಕೆ.ಎ.ಟಿ. ನಿಂದನಾ ಅರ್ಜಿ ಸಂಖ್ಯೆ: 393/2010ನ್ನು ದಾಖಲಿಸಿರುತ್ತಾರೆ. ಈ ಅರ್ಜಿಯ ವಿಚಾರಣಾ ಸಂದರ್ಭದಲ್ಲಿ, ಸದರಿಯವರಿಗೆ ದಿನಾಂಕ: 06–12–2010ರ ಆದೇಶದ ಮೂಲಕ ರೂ. 2,50,000/–ಗಳನ್ನು ತಡೆಹಿಡಿದು ಗಳಿಕೆ ರಜೆ ನಗದೀಕರಣ ಸೌಲಭ್ಯ ಸೇರಿದಂತೆ ಉಳಿದ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡಿರುವುದನ್ನು ಕರ್ನಾಟಕ ಆಡಳಿತ ನ್ಯಾಮಂಡಳಿಯ ಗಮನಕ್ಕೆ ತರಲಾಯಿತು. ಈ ಪ್ರಕರಣವು ದಿನಾಂಕ: 01–07–2011 ರಂದು ವಿಚಾರಣೆಗೆ ಬಂದ ಸಂದರ್ಭದಲ್ಲಿ ತಡವಾಗಿ ಪಾವತಿಸಲಾಗಿರುವ ನಿವೃತ್ತಿ ಸೌಲಭ್ಯಗಳಿಗೆ ಸರ್ಕಾರದ ಆದೇಶಗಳಂತೆ ಬಡ್ಡಿಯನ್ನು ಪಾವತಿಸದೆ ಇರುವುದನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಗಮನಕ್ಕೆ ಸಲ್ಲಿಸಿರುತ್ತಾರೆ. ಇದನ್ನು ಪರಿಗಣಿಸಿ, ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಮೇಲೆ (3)ರಲ್ಲಿ ಓದಲದ ದಿನಾಂಕ: 01–07–2011ರ ಆದೇಶದ ಮೂಲಕ ನೀಡಿದ ನಿರ್ದೇಶನದ ಉದ್ಧೃತ ಭಾಗ ಈ ಮುಂದಿನಂತಿದೆ.

> "We may point out that the delayed payment on pensionary benefits is statutory in nature and it cannot be avoided and therefore to that extent the order of the Tribunal is still to be complied with. For that we give time to the respondents to comply with the same before 05-08-2011."

ದಿನಾಂಕ: 01–07–2011ರ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶದ ಹಿನ್ನೆಲೆಯಲ್ಲಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ಶ್ರೀ ವಿ.ಕೆ. ಗುಡೋಡಗಿರವರಿಗೆ ತಡವಾಗಿ ಪಾವತಿಸಲ್ಪಟ್ಟಿರುವ ನಿವೃತ್ತಿ ಸೌಲಭ್ಯಗಳ ಮೇಲೆ ಪಾವತಿಸಬೇಕಾದ ಬಡ್ಡಿ ಲೆಕ್ಕಾಚಾರದ ವಿವರಗಳನ್ನು ಮೇಲೆ (4)ರಲ್ಲಿ ಓದಲಾದ ದಿನಾಂಕ: 18–07–2011ರ ಪತ್ರದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ಶ್ರೀ ವಿ.ಕೆ. ಗುಡೋಡಗಿರವರಿಗೆ ತಡವಾಗಿ ಪಾವತಿಸಲಾದ ನಿವೃತ್ತ ಸೌಲಭ್ಯಗಳ ಮೇಲೆ ಬಡ್ಡಿಯನ್ನು ಪಾವತಿಸುವ ಕುರಿತು ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ : ಯುಸೇಇ 159 ಯುಇಸೆ 2010, ಬೆಂಗಳೂರು, ದಿನಾಂಕ: 03–08–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಶ್ರೀ ವಿ.ಕೆ. ಗುಡೋಡಗಿ, ನಿವೃತ್ತ ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆರವರಿಗೆ ರೂ. 2,50,000/–ಗಳನ್ನು ತಡೆಹಿಡಿದು ಗಳಿಕೆ ರಜೆ ನಗದೀಕರಣ ಸೌಲಭ್ಯ ಸೇರಿದಂತೆ ಉಳಿದ ನಿವೃತ್ತಿ ಸೌಲಭ್ಯಗಳನ್ನು ತಡವಾಗಿ ಪಾವತಿಸಿರುವ ನಿಮಿತ್ತ ತಡವಾಗಿ ಪಾವತಿಸಲಾಗಿರುವ ಈ ಸೌಲಭ್ಯಗಳಿಗೆ ಬಡ್ಡಿ ಮೊತ್ತವಾಗಿ ಒಟ್ಟು ರೂ. 78,507/– (ಎಪ್ಪತ್ತೆಂಟು ಸಾವಿರದ ಐದುನೂರ ಏಳು ಮಾತ್ರ)ಗಳನ್ನು ಪಾವತಿಸಲು ಸರ್ಕಾರವು ಈ ಮೂಲಕ ಆದೇಶಿಸಿದೆ.

ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)ರವರ ದಿನಾಂಕ: 27–07–2011ರ ಆಇ(ವಿ) 153 ಪಿಇಎನ್–1/2011ರ ಟಿಪ್ಪಣಿ ಹಾಗೂ ಯುವಜನ ಸೇವಾ ಮತ್ತು ಕಂದಾಯ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರವರ ದಿನಾಂಕ: 30–07–2011ರ ಯುಸೇಇ 2367 ಐಎಫ್ಎ 11ನೇ ಸಂಖ್ಯೆಯ ಟಿಪ್ಪಣಿಯ ಮೂಲಕ ನೀಡಿರುವ ಸಹಮತದ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಶ್ರೀನಿವಾಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ

ಪಿಆರ್.ನಂ. 2031

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದುಪಡಿ

ಸಂ: ಸಿಆಸುಇ 346 ಸಅಸೇ 2011, ಬೆಂಗಳೂರು ದಿನಾಂಕ: 09–08–2011

ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಗಣಿಸಲು ರಚಿಸಲಾಗಿರುವ ಅಧಿಕಾರಿ ವೇತನ ಸಮಿತಿಗೆ ಲಿಪಿಕ ಸಹಾಯ ನೀಡಲು ಹುದ್ದೆಗಳನ್ನು ಸೃಜಿಸುವ ಸಂಬಂಧದಲ್ಲಿ ಹೊರಡಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 346 ಸಅಸೇ 2011, ದಿನಾಂಕ: 30–06–2011ರ ಆದೇಶ ಭಾಗದ ಕಂಡಿಕೆ 2 ಅನ್ನು (ಕೊನೆ ಪ್ಯಾರಾವನ್ನು) ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು:–

"ಅಧಿಕಾರಿ ವೇತನ ಸಮಿತಿಯ ಅಧಿಕಾರಿ/ಸಿಬ್ಬಂದಿ ವರ್ಗದವರ ಸಂಬಳಕ್ಕೆ ಸಂಬಂಧಿಸಿದ ಖರ್ಚು ವೆಚ್ಚಗಳನ್ನು ಲೆಕ್ಕಶೀರ್ಷಿಕೆ 2052–00–090–0–01 ರಡಿಯಲ್ಲಿ ಹಾಗೂ ಇನ್ನಿತರೆ ಖರ್ಚು ವೆಚ್ಚಗಳನ್ನು ಸಚಿವಾಲಯದ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಲ್ಲಿ ಭರಿಸತಕ್ಕದ್ದು. ಈ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ಹಣ ತೆಗೆಯುವ ಮತ್ತು ವಿತರಿಸುವ ಅಧಿಕಾರವನ್ನು ಸರ್ಕಾರದ ಅಧೀನ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಲೆಕ್ಕಪತ್ರ) ಇವರಿಗೆ ವಹಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಪಿಆರ್.ನಂ. 2032

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಸುರೇಶ್ ಬಿ. ತುರಮುರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದರ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ : ಅಧಿಸೂಚನೆ ಸಂಖ್ಯೆ: ಸಿಆಸುಇ 76 ಸೇಲೋಯ 2011, ದಿನಾಂಕ: 04/06/2011

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ: 04/06/2011ರ ಅಧಿಸೂಚನೆಯಲ್ಲಿ ಶ್ರೀ. ಸುರೇಶ್ ಬಿ. ತುರಮುರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಅಪರ ನಿಬಂಧಕ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿದ್ದು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 76(2) ಸೇಲೋಯ 2011, ಬೆಂಗಳೂರು, ದಿನಾಂಕ: 16/08/2011.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿರುವ ಅಪರ ನಿಬಂಧಕರು (ವಿಚಾರಣೆಗಳು) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ದಿನಾಂಕ: 09/06/2011 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಸುರೇಶ್ ಬಿ. ತುರಮುರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತಿರುತ್ತವೆ:

1. ಶ್ರೀ ಸುರೇಶ್ ಬಿ. ತುರಮುರಿ ರವರ ಗುತ್ತಿಗೆ ನೇಮಕಾತಿ ಅವಧಿಯು ದಿನಾಂಕ: 09/06/2011 ರಿಂದ 08/06/2012ರ ಅವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.
2. ಶ್ರೀ ಸುರೇಶ್ ಬಿ. ತುರಮುರಿ ಇವರು ಪಡೆಯುತ್ತಿರುವ ನಿವೃತ್ತಿ ವೇತನದೊಂದಿಗೆ ರೂ. 20,352/– ಮರುನೇಮಕಾತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ವೇತನದ ಜೊತೆಗೆ ಅವರು ನಿವೃತ್ತಿ ಹೊಂದುವಾಗ ಪಡೆಯುತ್ತಿದ್ದ ಮೂಲ ವೇತನದ ಮೇಲೆ ಕಾಲಕಾಲಕ್ಕೆ ಲಭ್ಯವಾಗುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಅವರು ಪಡೆಯುತ್ತಿರುವ ನಿವೃತ್ತಿ ವೇತನದ ಮೇಲೆ ತುಟ್ಟಿಭತ್ಯೆ ಸೇರಿದಂತೆ ಯಾವುದೇ ಇತರ ಭತ್ಯೆಗಳು ಲಭ್ಯವಿರುವುದಿಲ್ಲ.
3. ಸದರಿ ಗುತ್ತಿಗೆ ನೌಕರರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಸದರಿ ಗುತ್ತಿಗೆ ನೌಕರರುಗಳು ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆ ಮತ್ತು ಕೆ.ಸಿ.ಎಸ್.ಆರ್ಸ್. ನಿಯಮ 150ರ ಪ್ರಕಾರ ಗಳಿಕೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.
5. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
6. ಸದರಿ ನೌಕರರು ದುರ್ವರ್ತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.
7. ಸದರಿ ಮರುನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ.
8. ಅವರ ಕರ್ತವ್ಯ, ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ಅವರು ನೆರವೇರಿಸುವುದು.
9. ಅವರು ಕರ್ತವ್ಯಗಳನ್ನು ಪಾಲಿಸುತ್ತಿರುವ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.
10. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.
11. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.
12. ಅವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷತೆ, ಉದಾಸೀನತೆಯಿಂದಾಗಲೀ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ್ದಲ್ಲಿ, ಅದನ್ನು ಸರ್ಕಾರಕ್ಕೆ ತುಂಬಿಕೊಡಲು ಅವರು ಹೊಣೆಯಾಗಿರುತ್ತಾರೆ.
13. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು (ರೂ. 50/–) ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 840 ಸೇ–3/11 ದಿನಾಂಕ: 28/07/2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ ಮತ್ತು ಅವರ ಹೆಸರಿನಲ್ಲಿ

ಪಿ. ಮಾರ್ಕಂಡೇಯ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವಾ ನಿಯಮಗಳು–2)

ಪಿ.ಆರ್. 2033

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎನ್.ಎಸ್. ನೇಗಿನಾಳ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದರ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ : ಅಧಿಸೂಚನೆ ಸಂಖ್ಯೆ: ಸಿಆಸುಇ 76 ಸೇಲೋಯ 2011, ದಿನಾಂಕ: 04/06/2011

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ: 04/06/2011ರ ಅಧಿಸೂಚನೆಯಲ್ಲಿ ಶ್ರೀ ಎನ್. ಎಸ್. ನೇಗಿನಾಳ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಅಪರ ನಿಬಂಧಕ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿದ್ದು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 76(1) ಸೇಲೋಯ 2011, ಬೆಂಗಳೂರು, ದಿನಾಂಕ: 16/08/2011.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿರುವ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ದಿನಾಂಕ: 06/06/2011 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಎನ್. ಎಸ್. ನೇಗಿನಾಳ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತಿರುತ್ತವೆ:

1. ಶ್ರೀ ಎನ್. ಎಸ್. ನೇಗಿನಾಳ್ ರವರ ಗುತ್ತಿಗೆ ಆಧಾರದ ನೇಮಕಾತಿಯು ದಿನಾಂಕ: 06/06/2011 ರಿಂದ 05/06/2012ರ ಅವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.
2. ಶ್ರೀ ಎನ್.ಎಸ್. ನೇಗಿನಾಳ್ ಇವರು ಪಡೆಯುತ್ತಿರುವ ನಿವೃತ್ತಿ ವೇನತದೊಂದಿಗೆ ರೂ. 22,488/– ಮರುನೇಮಕಾತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ವೇತನದ ಜೊತೆಗೆ ಅವರು ನಿವೃತ್ತಿ ಹೊಂದುವಾಗ ಪಡೆಯುತ್ತಿದ್ದ ಮೂಲ ವೇತನದ ಮೇಲೆ ಕಾಲಕಾಲಕ್ಕೆ ಲಭ್ಯವಾಗುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಅವರು ಪಡೆಯುತ್ತಿರುವ ನಿವೃತ್ತಿ ವೇತನದ ಮೇಲೆ ತುಟ್ಟಿಭತ್ಯೆ ಸೇರಿದಂತೆ ಯಾವುದೇ ಇತರ ಭತ್ಯೆಗಳು ಲಭ್ಯವಿರುವುದಿಲ್ಲ.
3. ಸದರಿ ಗುತ್ತಿಗೆ ನೌಕರರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಸದರಿ ಗುತ್ತಿಗೆ ನೌಕರರುಗಳು ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆ ಮತ್ತು ಕೆ.ಸಿ.ಎಸ್.ಆರ್ಸ್. ನಿಯಮ 150ರ ಪ್ರಕಾರ ಗಳಿಕೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.
5. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
6. ಸದರಿ ನೌಕರರು ದುರ್ವರ್ತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.
7. ಸದರಿ ಮರುನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ.
8. ಅವರ ಕರ್ತವ್ಯ, ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ಅವರು ನೆರವೇರಿಸುವುದು.
9. ಅವರು ಕರ್ತವ್ಯಗಳನ್ನು ಪಾಲಿಸುತ್ತಿರುವ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.
10. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.
11. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.
12. ಅವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷತೆ, ಉದಾಸೀನತೆಯಿಂದಾಗಲೀ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ್ದಲ್ಲಿ, ಅದನ್ನು ಸರ್ಕಾರಕ್ಕೆ ತುಂಬಿಕೊಡಲು ಅವರು ಹೊಣೆಯಾಗಿರುತ್ತಾರೆ.
13. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು (ರೂ. 50/–) ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 840 ಸೇ–3/11, ದಿನಾಂಕ: 28/07/2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ ಮತ್ತು ಅವರ ಹೆಸರಿನಲ್ಲಿ

ಪಿ. ಮಾರ್ಕಂಡೇಯ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವಾ ನಿಯಮಗಳು–2)

ಪಿ.ಆರ್. 2034

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮೂಲ ಸೌಲಭ್ಯ ಅಭಿವೃದ್ಧಿ ಯೋಜನೆಗಳಿಗಾಗಿ ಐಡೆಕ್ ಸಂಸ್ಥೆಗೆ ಒದಗಿಸಿರುವ ಯೋಜನಾ ಅಭಿವೃದ್ಧಿ ನಿಧಿಗೆ (PDF) ಹಣ ಒದಗಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಆರ್ಥಿಕ ಅಧಿಕಾರಿ ಹಾಗೂ ಕಂಪನಿ ಕಾರ್ಯದರ್ಶಿ, ಐಡೆಕ್, ಇವರ ಪತ್ರ ಸಂ. iDeCK/2011-12/657, ದಿನಾಂಕ: 01/08/2011.

ಪ್ರಸ್ತಾವನೆ :

ಖಾಸಗಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ಹಾಗೂ ಪಿಪಿಪಿ ಆಧಾರದ ಮೇಲೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಐಡೆಕ್‌ನ್ನು ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿಯಾಗಿ ನೇಮಿಸಿದೆ. ಇದರಂತೆ ಯೋಜನಾ ಅಭಿವೃದ್ಧಿಗೆ ಬಂಡವಾಳ ಹಾಗೂ ಯೋಜನಾ ಬಂಡವಾಳ ಹೂಡಿಕೆಗೆ ರಾಜ್ಯ ಸರ್ಕಾರವು ಐಡೆಕ್‌ಗೆ ಹಣ ಒದಗಿಸಲು ಬದ್ಧವಾಗಿದೆ. ಐಡೆಕ್‌ನ ಒಟ್ಟಾರೆ ಬಂಡವಾಳ ಹೂಡಿಕೆಯಲ್ಲಿ ರಾಜ್ಯ ಸರ್ಕಾರದ ಪಾಲು ಶೇಕಡಾ 49ರಷ್ಟಿದೆ. ಕರ್ನಾಟಕ ರಾಜ್ಯದ ಮೂಲ ಸೌಲಭ್ಯ ಯೋಜನೆಗಳನ್ನು ಅಭಿವೃದ್ಧಿ ಪಡಿಸಲು ಯೋಜನಾ ಅಭಿವೃದ್ಧಿ ನಿಧಿ (ಪಿ.ಡಿ.ಎಫ್)ಗಾಗಿ ಲೆ.ಶೀ.5465–01–190–1–01–211– iDeCK investments ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ರೂ.200.00 ಲಕ್ಷಗಳನ್ನು ಒದಗಿಸಲಾಗಿದೆ.

ಮೇಲೆ ಓದಲಾದ ದಿನಾಂಕ: 01/08/2011ರ ಪತ್ರದಲ್ಲಿ ಮುಖ್ಯ ಆರ್ಥಿಕ ಅಧಿಕಾರಿ ಹಾಗೂ ಕಂಪನಿ ಕಾರ್ಯದರ್ಶಿ, ಐಡೆಕ್ ಇವರು 2011–12ನೇ ಸಾಲಿನಲ್ಲಿ iDeCK investments ಅಡಿಯಲ್ಲಿ ಒದಗಿಸಿರುವ ರೂ. 200.00 ಲಕ್ಷಗಳನ್ನು (ರೂಪಾಯಿ ಎರಡು ನೂರು ಲಕ್ಷಗಳು ಮಾತ್ರ) ಮಾಸಿಕ ಯೋಜನಾ ಅನುಷ್ಠಾನ ಕ್ಯಾಲೆಂಡರ್ (MPIC) 2011-12 ರಲ್ಲಿ ಪ್ರಸ್ತಾಪಿಸಿರುವ 4 ಯೋಜನೆಗಳಾದ:

1. Development of Solar Power plants (2 to 3 locations) across the State.
2. Development of 24/7 water supply (2 to 3 locations) across the State.
3. Development of Educational Infrastructure (2 to 3 locations) across the State.
4. Development of Health Infrastructure (2 to 3 locations) across the State.

ಗಳಿಗೆ ಸಂಬಂಧಿಸಿದ ಯೋಜನಾ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ರೂ. 200.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿದ್ದಾರೆ. iDeCKನ ಈಗಿನ ಅಗತ್ಯವನ್ನು ಗಮನದಲ್ಲಿರಿಸಿಕೊಂಡು ಈ ಸಾಲಿನಲ್ಲಿ ಒದಗಣೆ ಮಾಡಿರುವ ರೂ.200.00 ಲಕ್ಷಗಳನ್ನು ಬಿಡುಗಡೆ ಮಾಡಲು ಪ್ರಸ್ತಾಪಿಸಲಾಗಿದೆ.

ಮೇಲಿನ ಅಂಶಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮೂಅಇ 180 ಮೂಇವಿ 2011 ಬೆಂಗಳೂರು, ದಿನಾಂಕ: 16/08/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಎಂಪಿಕ್ ಕ್ಯಾಲೆಂಡರ್ 2011–12ರಲ್ಲಿ ಪ್ರಸ್ತಾಪಿಸಿರುವ 4 ಯೋಜನೆಗಳಾದ:

1. Development of Solar Power plants (2 to 3 locations) across the State.
2. Development of 24/7 water supply (2 to 3 locations) across the State.
3. Development of Educational Infrastructure (2 to 3 locations) across the State.
4. Development of Health Infrastructure (2 to 3 locations) across the State.

ಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ಯೋಜನಾ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ರೂ. 200.00 ಲಕ್ಷಗಳನ್ನು (ರೂಪಾಯಿ ಎರಡು ನೂರು ಲಕ್ಷಗಳು ಮಾತ್ರ) iDeCKನ PDF ಗೆ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

2. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "5465–01–190–1–01–211– iDeCK investments" ಇದರಡಿ 2011-12ನೇ ಸಾಲಿನ ಆಯವ್ಯಯದಲ್ಲಿ ಒದಗಣೆ ಮಾಡಿರುವ ರೂ.200.00 ಲಕ್ಷಗಳಿಂದ ಭರಿಸತಕ್ಕದ್ದು.

3. ಸದರಿ ಮೊತ್ತವನ್ನು ಚೀಫ್ ಫೈನಾನ್ಷಿಯಲ್ ಅಫೀಸರ್ ಮತ್ತು ಕಂಪನಿ ಕಾರ್ಯದರ್ಶಿ, ಐಡೆಕ್ ಇವರು ಪೇಯಿಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ದಿನಾಂಕ: 16/05/2008ರ ಆದೇಶ ಸಂ. FD 01TFP 2008 ರಡಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್. ಶಿವಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್: 2035

COMMERCE AND INDUSTRIES SECRETARIAT
ADDENDUM

No.CI: 484 SPI 2010(P), Date: 17/08/2011

Sub :- The Project Proposal of M/s. Star Panel Boards Ltd., to Establish Particle Boards. High Pressure Laminates etc at Malur Industrial Area, Malur Taluk, Kolar District – Enhancement of Production capacity investment approval for order – reg.

Read :- Govt. Order No: CI 244 SPI 2009, dated: 01/10/2009.

In the G.O read above, in the order portion, after the line "**Incentives and Concessions:-** As applicable under New Industrial Policy 2009-14 of the State" the following shall be inserted.

" The request of the promoters to give extra incentives can be examined separately".

By Order and in the Name of the Governor of Karnataka
A.V. Srinivasa Dikshit
Desk Officer (Technical Cell)
Commerce & Industries Department

P.R. No: 2036

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಸಿಐ 164 ಎಸ್‌ಪಿಐ 2010, ಬೆಂಗಳೂರು, ದಿನಾಂಕ: 17/08/2011

ವಿಷಯ : ಕರ್ನಾಟಕ ರಾಜ್ಯದಲ್ಲಿ "ಆಹಾರ ಸಂಸ್ಕರಣಾ ಘಟಕಗಳಿಗೆ ಬಂಡವಾಳ ಹೂಡಿಕೆ" ಯೋಜನೆಗೆ ಅನುದಾನ ಬಿಡುಗಡೆ ಬಗ್ಗೆ

ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ: ಸಿಐ 164 ಎಸ್‌ಪಿಐ 2010, ದಿನಾಂಕ: 21/09/2010.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ: ಸಿಐ 164 ಎಸ್‌ಪಿಐ 2010, ದಿನಾಂಕ: 21/09/2010ರ ಆದೇಶದ ಭಾಗದಲ್ಲಿ ಕ್ರಮ ಸಂಖ್ಯೆ (1)ರಲ್ಲಿನ **"ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ) ಸಂಸ್ಥೆಯನ್ನು"** ಎಂಬುದರ ಬದಲಾಗಿ **"ಕರ್ನಾಟಕ ಆಹಾರ ನಿಯಮಿತ ಸಂಸ್ಥೆಯನ್ನು"** ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ವಿ. ಶ್ರೀನಿವಾಸ ದೀಕ್ಷಿತ್
ಪೀಠಾಧಿಕಾರಿ(ತಾಂತ್ರಿಕ ಕೋಶ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 2037

ಒಳಾಡಳಿತ ಸಚಿವಾಲಯ

ವಿಷಯ : ಕುಮಾರಿ ಭಾಗ್ಯಶ್ರೀ ನಾಯಕ, ಮಹಿಳಾ ಪಿ.ಎಸ್.ಐ. ರವರ ಖಾಯಂ ಪೂರ್ವ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ : ಡಿ.ಜಿ. ಮತ್ತು ಐ.ಜಿ.ಪಿ. ರವರ ಪತ್ರ ಸಂಖ್ಯೆ 86/ಸಿಬ್ಬಂದಿ-1/2009-10, ದಿನಾಂಕ 07-04-2010 ಮತ್ತು 18-06-2011.

ಪ್ರಸ್ತಾವನೆ :

ಕುಮಾರಿ ಭಾಗ್ಯಶ್ರೀ ನಾಯಕ ರವರು ಮಹಿಳಾ ಪಿ.ಎಸ್.ಐ. ಹುದ್ದೆಗೆ ದಿನಾಂಕ 01-09-2005 ರಂದು ನೇಮಕಗೊಂಡಿದ್ದು 2 1/2 ವರ್ಷಗಳ ಖಾಯಂ ಪೂರ್ವ ಅವಧಿಯು ದಿನಾಂಕ 01-03-2008 ರಂದು ಪೂರ್ಣ ಗೊಂಡಿದ್ದು ಈ ಅವಧಿಯಲ್ಲಿ ಇಲಾಖಾ ಪರೀಕ್ಷೆಗಳನ್ನು ಪೂರ್ಣಗೊಳಿಸಿರುತ್ತಾರೆ.

ಸದರಿಯವರ ವಿರುದ್ಧ ಚಾಲ್ತಿ ಶಿಕ್ಷೆ ಇದುದರಿಂದ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಗಳು, 1977ರ ನಿಯಮ 4(1)(ii) ರನ್ವಯ ದಿನಾಂಕ 01-03-2008 ರಿಂದ 01-06-2009 ರವರೆಗೆ ಐ.ಜಿ.ಪಿ. ಉತ್ತರ ವಲಯ, ಬೆಳಗಾಂ ರವರು ತಮ್ಮ ಆದೇಶ ದಿನಾಂಕ 18-07-2009 ರಲ್ಲಿ ಖಾಯಂ ಪೂರ್ವ ಅವಧಿಯನ್ನು ವಿಸ್ತರಿಸಿರುತ್ತಾರೆ. ಇವರ ಖಾಯಂ ಪೂರ್ವ ಅವಧಿಯನ್ನು ಕರ್ನಾಟಕ ಸಿವಿಲ್ ಸೇವೆಗಳು (ಪರಿವೀಕ್ಷಣೆ) ನಿಯಮ 1977ರ ನಿಯಮಾವಳಿ 4(1)(i) ರನ್ವಯ ದಿನಾಂಕ 02.06.2009 ರಿಂದ 01-09.2009 ರವರೆಗೆ ವಿಸ್ತರಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಸರ್ಕಾರವನ್ನು ಡಿ.ಜಿ. ಮತ್ತು ಐ.ಜಿ.ಪಿ. ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 11 ಪೊಸಇ 2010, ಬೆಂಗಳೂರು, ದಿನಾಂಕ 16ನೇ ಆಗಸ್ಟ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿಗಳು, 1977ರ ನಿಯಮ 4(1)(i) ರನ್ವಯ ಕುಮಾರಿ ಭಾಗ್ಯಶ್ರೀ ನಾಯಕ, ಮಹಿಳಾ ಪಿ.ಎಸ್.ಐ. ರವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ 02-06-2009 ರಿಂದ 01-09-2009 ರವರೆಗೆ ವಿಸ್ತರಿಸಿ ಸರ್ಕಾರವು ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ. (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗದಿಪಡಿಸುವುದು. ಹೀಗೆ ನಿಗದಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್.ನಂ. 2038

ಕಂದಾಯ ಸಚಿವಾಲಯ

ವಿಷಯ : ಕಾವೇರಿ ಯೋಜನೆ ನಿರ್ವಹಣೆ ಮಾಡುತ್ತಿರುವ ಮೆ॥ ಇ.ಸಿ.ಐ.ಎಲ್., ಮೆ॥ ಸಿ.ಎಂ.ಎಸ್. ಕಂಪ್ಯೂಟರ್ಸ್ ಮತ್ತು ಮೆ॥ ಸಿ-ಡಾಕ್, ಪುಣೆ ಇವರ ಗುತ್ತಿಗೆ ಅವಧಿಯನ್ನು ಮುಂದುವರಿಸುವ ಕುರಿತು.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಕಂಇ 172 ಮುನೋಮು 2009, ದಿನಾಂಕ 14-07-2010.
2. ಸರ್ಕಾರದ ಆದೇಶ ಸಂಖ್ಯೆ : ಕಂಇ 192 ಮುನೋಮು 2009, ದಿನಾಂಕ 13-07-2010.
3. ಸರ್ಕಾರದ ಆದೇಶ ಸಂಖ್ಯೆ : ಕಂಇ 02 ಮುನೋಮು 2011, ದಿನಾಂಕ 24-01-2011.
4. ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ : Comp/09/2007-08, ದಿನಾಂಕ 31-03-2011 ಹಾಗೂ 01-08-2011.

ಪ್ರಸ್ತಾವನೆ :

ಮೇಲೆ ಓದಲಾದ (1) ರ ದಿನಾಂಕ 14-07-2010ರ ಆದೇಶದಲ್ಲಿ ಮೆ॥ ಇ.ಸಿ.ಐ.ಎಲ್. ಮತ್ತು ಮೆ॥ ಸಿ.ಎಂ.ಎಸ್. ಕಂಪ್ಯೂಟರ್ಸ್ ಲಿಮಿಟೆಡ್ ರವರೊಂದಿಗೆ ಕಾವೇರಿ ಯೋಜನೆ ನಿರ್ವಹಣಾ ಗುತ್ತಿಗೆ ಅವಧಿಯನ್ನು ದಿನಾಂಕ 30-06-2003ರ ಗುತ್ತಿಗೆ ಕರಾರಿಗೊಳಪಟ್ಟು ದಿನಾಂಕ 01-01-2010

ರಿಂದ 30–06–2010 ರವರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಸಿ) ರನ್ವಯ ಮುಂದುವರೆಸಿ ಹಾಗೂ ಮುಂದುವರೆಸಲ್ಪಟ್ಟ ಗುತ್ತಿಗೆ ಅವಧಿಯಲ್ಲಿ ನಿರ್ವಹಣಾ ವೆಚ್ಚದ ದರಗಳಲ್ಲಿ ಯಾವುದೇ ರೀತಿಯ ಹೆಚ್ಚಳ ಇರುವುದಿಲ್ಲ ಎಂದು ಆದೇಶಿಸಿದೆ.

ಮೇಲೆ ಓದಲಾದ (2) ರ ದಿನಾಂಕ 13–07–2010 ರ ಆದೇಶದಲ್ಲಿ ಮೆ॥ ಸಿ–ಡಾಕ್, ಪುಣೆಯವರೊಂದಿಗೆ ಕಾವೇರಿ ತಂತ್ರಾಂಶ ನಿರ್ವಹಣಾ ಗುತ್ತಿಗೆ ಅವಧಿಯನ್ನು ದಿನಾಂಕ 05–05–2005ರ ಗುತ್ತಿಗೆ ಕರಾರಿಗೊಳಪಟ್ಟು ದಿನಾಂಕ 01.01.2010 ರಿಂದ 30–06–2010 ರವರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಸಿ) ರನ್ವಯ ಮುಂದುವರೆಸಿ ಹಾಗೂ ಮುಂದುವರೆಸಲ್ಪಟ್ಟ ಗುತ್ತಿಗೆ ಅವಧಿಯಲ್ಲಿ ನಿರ್ವಹಣಾ ವೆಚ್ಚವೆಂದು 4 ಇಂಜಿನೀಯರ್‌ಗಳಿಗೆ ತಿಂಗಳೊಂದಕ್ಕೆ ತಲಾ ರೂ.90,000/– ಮತ್ತು ಅನ್ವಯಿಸುವ ತೆರಿಗೆ ಸೇರಿಸಿ ಪಾವತಿಸಲು ಅನುಮತಿ ನೀಡಿದೆ. ಗುತ್ತಿಗೆ ಮುಂದುವರಿಸಲ್ಪಡುವ ಅವಧಿಯಲ್ಲಿ ನಿರ್ವಹಣಾ ವೆಚ್ಚದ ದರಗಳಲ್ಲಿ ಯಾವುದೇ ರೀತಿಯ ಹೆಚ್ಚಳ ಇರುವುದಿಲ್ಲ ಎಂದು ಆದೇಶಿಸಿದೆ.

ಮೇಲೆ ಓದಲಾದ (3) ರ ದಿನಾಂಕ 24–01–2011ರ ಆದೇಶದಲ್ಲಿ ಮೆ॥ ಸಿ–ಡಾಕ್, ಪುಣೆಯವರೊಂದಿಗೆ ಕಾವೇರಿ ತಂತ್ರಾಂಶ ನಿರ್ವಹಣಾ ಗುತ್ತಿಗೆ ಅವಧಿಯನ್ನು ಕ್ರಮವಾಗಿ ದಿನಾಂಕ 30–06–2003 ಹಾಗೂ 05–05–2005ರ ಗುತ್ತಿಗೆ ಕರಾರಿಗೊಳಪಟ್ಟು ದಿನಾಂಕ 01–07–2010 ರಿಂದ 31–03–2011 ರವರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಸಿ) ರನ್ವಯ ಕೆಲವು ಷರತ್ತಿಗೊಳಪಟ್ಟು ಮುಂದುವರೆಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ (4) ರ ಪತ್ರದಲ್ಲಿ ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಕಾವೇರಿ ಯೋಜನೆಗೆ ಸಂಬಂಧಿಸಿದಂತೆ M/s ECIL ಹಾಗೂ M/s CMS Computers Ltd. ರವರ ಗುತ್ತಿಗೆ ಅವಧಿಯನ್ನು ಹಾಗೂ ಕಾವೇರಿ ತಂತ್ರಾಂಶದ ನಿರ್ವಹಣೆಗಾಗಿ M/s C-DAC ಪುಣೆರವರ ಗುತ್ತಿಗೆ ಅವಧಿಯನ್ನು ದಿನಾಂಕ 01–04–2011 ರಿಂದ 30–09–2011 ರವರೆಗೆ ವಿಸ್ತರಿಸುವ ಆದೇಶ ನೀಡಲು ಹಾಗೂ 2003–04ನೇ ಸಾಲಿನಲ್ಲಿ ಅಳವಡಿಸಲಾಗಿರುವ ಕಾವೇರಿ ಯೋಜನೆಯ ಹಾರ್ಡ್‌ವೇರ್‌ಗಳು ಸತತ ಉಪಯೋಗದಿಂದ ಕಾರ್ಯಕ್ಷಮತೆ ಕಳೆದುಕೊಂಡಿದ್ದು ಅವುಗಳಲ್ಲಿ ಆಗಿಂದಾಗ್ಗೆ ತೊಂದರೆ ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅವುಗಳನ್ನು ತುರ್ತಾಗಿ ಹೊಸ ಹಾರ್ಡ್‌ವೇರ್ ಹಾಗೂ ಹೊಸ ಸಿಸ್ಟಮ್ ತಂತ್ರಾಂಶಗಳಿಂದ ಬದಲಾಯಿಸುವುದು ಅತ್ಯವಶ್ಯವಿರುತ್ತದೆ ಎಂದು ದಿನಾಂಕ 31–03–2011ರ ಪತ್ರದಲ್ಲಿ ಕೋರಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಕಾವೇರಿ ಯೋಜನೆಗೆ ಸದರಿ ಗುತ್ತಿಗೆದಾರರಿಂದ ದೊರೆಯುತ್ತಿರುವ ಸೇವಾ ಗುಣಮಟ್ಟವನ್ನೇ ನೂತನ ಗುತ್ತಿಗೆದಾರರು ಆಯ್ಕೆಗೊಂಡು ಕಾರ್ಯ ಪ್ರಾರಂಭಿಸುವವರೆಗೆ ಮುಂದುವರೆಸಿಕೊಂಡು ಹೋಗುವುದು ಅತ್ಯವಶ್ಯವಿರುತ್ತದೆ ಎಂದು ಇಲ್ಲದಿದ್ದಲ್ಲಿ ಸಾರ್ವಜನಿಕರ ಸೇವೆಗೆ ತೊಂದರೆಯುಂಟಾಗಿ ಇಲಾಖೆಯ ಕಾರ್ಯವು ಸಂಪೂರ್ಣ ಸ್ಥಗಿತಗೊಳ್ಳುವ ಸಾಧ್ಯತೆ ಇರುತ್ತದೆ ಎಂದು ಈ ಹಿನ್ನೆಲೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಸಿ) ರನ್ವಯ ಸದರಿ ಗುತ್ತಿಗೆದಾರರ ಗುತ್ತಿಗೆ ಅವಧಿಯನ್ನು ಮುಂದುವರೆಸಲು ಕೋರಿರುತ್ತಾರೆ.

ಮುಂದುವರೆದಂತೆ, ದಿನಾಂಕ 31–03–2011ರ ಪ್ರಸ್ತಾವನೆಯನ್ವಯ ಗುತ್ತಿಗೆ ಅವಧಿಯನ್ನು ದಿನಾಂಕ 01–04–2011 ರಿಂದ 30–09–2011 ರವರೆಗೆ ವಿಸ್ತರಿಸಲು ಕೋರಲಾಗಿತ್ತೆಂದು, ಆದರೆ ಹಲವಾರು ಕಾರಣಗಳಿಂದ ಹಾರ್ಡ್‌ವೇರ್ ಗುತ್ತಿಗೆ ಟೆಂಡರ್‌ನ್ನು ಈವರೆಗೂ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ಸದರಿ ಪ್ರಕ್ರಿಯೆ ಪೂರ್ಣಗೊಂಡು ನೂತನ ಗುತ್ತಿಗೆದಾರರು ಹಾರ್ಡ್‌ವೇರ್‌ಗಳನ್ನು ಪೂರೈಸಲು ಕನಿಷ್ಠವೆಂದರೂ 4 ರಿಂದ 6 ತಿಂಗಳು ಕಾಲಾವಕಾಶ ಬೇಕಾಗುತ್ತದೆಂದು, ಆದ್ದರಿಂದ ಪ್ರಸ್ತುತ ಗುತ್ತಿಗೆದಾರರ ಗುತ್ತಿಗೆ ಅವಧಿಯನ್ನು 01–04–2011 ರಿಂದ 31–12–2011 ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ವೆಬ್ ಆಧಾರಿತ ನೂತನ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಈಗಾಗಲೇ ಕ್ರಮ ಕೈಗೊಂಡಿರುವುದರಿಂದ ಹಾಗೂ ನೂತನ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇರುವುದರಿಂದ ಅಲ್ಲಿಯವರೆಗೆ ಪ್ರಸ್ತುತ ಕಾವೇರಿ ತಂತ್ರಾಂಶ ನಿರ್ವಹಣೆಗೆ ದೊರಕುತ್ತಿರುವ ಸೇವಾ ಗುಣಮಟ್ಟವನ್ನೇ ಮುಂದುವರಿಸುವುದು ಅವಶ್ಯವೆಂದು ಕಂಡುಬಂದಿರುವ ಹಿನ್ನೆಲೆಯಲ್ಲಿ ಮೆ॥ ಇ.ಸಿ.ಐ.ಎಲ್., ಮೆ॥ ಸಿ.ಎಂ.ಎಸ್. ಕಂಪ್ಯೂಟರ್ಸ್ ಲಿಮಿಟೆಡ್ ಹಾಗೂ ಮೆ॥ ಸಿ–ಡಾಕ್, ಪುಣೆ ಇವರೊಂದಿಗೆ ಕಾವೇರಿ ಯೋಜನೆಯ ನಿರ್ವಹಣಾ ಗುತ್ತಿಗೆ ಅವಧಿಯನ್ನು ಮುಂದುವರಿಸಲು ತೀರ್ಮಾನಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 79 ಮುನೋಮು 2011, ಬೆಂಗಳೂರು, ದಿನಾಂಕ 08ನೇ ಆಗಸ್ಟ್ 2011

ಮೆ॥ ಇ.ಸಿ.ಐ.ಎಲ್., ಮೆ॥ ಸಿ.ಎಂ.ಎಸ್. ಕಂಪ್ಯೂಟರ್ಸ್ ಲಿಮಿಟೆಡ್ ಹಾಗೂ ಮೆ॥ ಸಿ–ಡಾಕ್, ಪುಣೆ ಇವರೊಂದಿಗೆ ಕಾವೇರಿ ತಂತ್ರಾಂಶ ನಿರ್ವಹಣಾ ಗುತ್ತಿಗೆ ಅವಧಿಯನ್ನು ದಿನಾಂಕ 01–04–2011 ರಿಂದ 15–10–2011 ರವರೆಗೆ ಗುತ್ತಿಗೆ ಕರಾರಿಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಸಿ) ರನ್ವಯ ಮುಂದುವರೆಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮುಂದುವರೆಸಿ ಆದೇಶಿಸಿದೆ :–

1) ಮೆ॥ ಇ.ಸಿ.ಐ.ಎಲ್., ಮೆ॥ ಸಿ.ಎಂ.ಎಸ್. ಕಂಪ್ಯೂಟರ್ಸ್ ಲಿಮಿಟೆಡ್ ಹಾಗೂ ಮೆ॥ ಸಿ–ಡಾಕ್, ಪುಣೆ ಇವರೊಂದಿಗಿನ ಗುತ್ತಿಗೆ ಅವಧಿಯನ್ನು ದಿನಾಂಕ 15–10–2011 ರ ನಂತರ ಯಾವುದೇ ಕಾರಣಕ್ಕೂ ಮುಂದುವರಿಸಲಾಗುವುದಿಲ್ಲ.

2) ಅಷ್ಟರಲ್ಲಿ ಟೆಂಡರ್ ಕರೆದು ಬೇರೆಯವರಿಗೆ ಗುತ್ತಿಗೆ ನೀಡಲು ಶೀಘ್ರ ಕ್ರಮ ತೆಗೆದುಕೊಳ್ಳುವುದು.

ಮುಂದುವರೆಸಲ್ಪಟ್ಟ ಗುತ್ತಿಗೆ ಅವಧಿಯಲ್ಲಿ ಈ ಕೆಳಕಂಡಂತೆ ನಿರ್ವಹಣಾ ವೆಚ್ಚದ ದರ ಪಾವತಿಸಲು ಅನುಮತಿ ನೀಡಿದೆ.

ಕ್ರ ಸಂ.	ಗುತ್ತಿಗೆದಾರರ ಹೆಸರು	ಸೇವಾ ವೆಚ್ಚದ ದರಗಳು ರೂ.ಗಳಲ್ಲಿ	ವಿವರ
1	2	3	4
1	ಮೆ॥ ಇ.ಸಿ.ಐ.ಎಲ್., ಬೆಂಗಳೂರು	ರೂ. 22.50 ಸ್ಕ್ಯಾನ್ ಮಾಡಿದ ದಸ್ತಾವೇಜಿನ ಪ್ರತಿ ಪುಟಕ್ಕೆ	ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಳಗಾವಿ, ರಾಮನಗರ ಹಾಗೂ ತುಮಕೂರು ಜಿಲ್ಲೆಗಳನ್ನು ಹೊರತುಪಡಿಸಿ ಇತರೆ 25 ಜಿಲ್ಲೆಗಳು.
2	ಮೆ॥ ಸಿ.ಎಂ.ಎಸ್. ಕಂಪ್ಯೂಟರ್ಸ್ ಲಿಮಿಟೆಡ್, ಬೆಂಗಳೂರು	ರೂ. 22.50 ಸ್ಕ್ಯಾನ್ ಮಾಡಿದ ದಸ್ತಾವೇಜಿನ ಪ್ರತಿ ಪುಟಕ್ಕೆ	ಬೆಂಗಳೂರು ಗ್ರಾಮಾಂತರ, ಬೆಳಗಾವಿ, ರಾಮನಗರ ಹಾಗೂ ತುಮಕೂರು ಜಿಲ್ಲೆಗಳು
		ರೂ. 15.50 ಸ್ಕ್ಯಾನ್ ಮಾಡಿದ ದಸ್ತಾವೇಜಿನ ಪ್ರತಿ ಪುಟಕ್ಕೆ	ಬೆಂಗಳೂರು ನಗರ ಜಿಲ್ಲೆ
3	ಮೆ॥ ಸಿ–ಡಾಕ್, ಪುಣೆ	ಒಬ್ಬ ಇಂಜಿನಿಯರಿಗೆ ರೂ.90,000/– ಮತ್ತು ಅನ್ವಯಿಸುವ ತೆರಿಗೆಗಳು	ನಾಲ್ಕು ಜನ ಇಂಜಿನಿಯರ್‌ಗಳು

ಮೆ॥ ಇ.ಸಿ.ಐ.ಎಲ್., ಮೆ॥ ಸಿ.ಎಂ.ಎಸ್. ಕಂಪ್ಯೂಟರ್ಸ್ ಲಿಮಿಟೆಡ್ ಹಾಗೂ ಮೆ॥ ಸಿ–ಡಾಕ್, ಪುಣೆ ಇವರು ಕಾವೇರಿ ಯೋಜನೆ ನಿರ್ವಹಣೆ ಮಾಡುತ್ತಿರುವ ದಿನಾಂಕ 01–04–2011 ರಿಂದ 15–10–2011 ರ ಗುತ್ತಿಗೆ ಅವಧಿಯಲ್ಲಿ ನಿರ್ವಹಣೆಯಲ್ಲಿ ತೊಡಕು ಉಂಟಾದಲ್ಲಿ ಈ ಕೆಳಗಿನಂತೆ ಜುಲ್ಮಾನೆಯನ್ನು ವಿಧಿಸಲಾಗುವುದು.

Service Disruption details

A) Where there is only service disruption but not loss of data

i)	If the disruption in service does not exceed 6 hours	No fine
ii)	If the disruption in service exceed 6 hours but not exceeding more than 8 hours (1 day)	5% of the previous month's scanning charges of that Sub-registrar office.
iii)	If the disruption in services is more than 1 day – For each days disruptions	10% of the previous month's scanning charges of that Sub-registrar office.

B) Where there is disruption in service along with loss of data

i)	Disruption along with loss of 1 day data	10% of the previous month's scanning charges of that Sub-registrar office.
ii)	Disruption along with loss of data for more than 1 day but less than 7 days – For each days disruption and data loss	15% of the previous month's scanning charges of that Sub-registrar office.
iii)	Disruption along with loss of data for more than 7 days but less than 30 days – For each days disruption and data loss	20% of the previous month's scanning charges of that Sub-registrar office.

Note : The recovery of lost data shall be made by the vendors at their own cost. In case of failure to do so, the cost will be recovered from the maintenance charges due to the vendors.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2030–03–001–2–04 Charges of Supply of Registered Documents-051, General Expenses ಅಡಿಯಲ್ಲಿ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ.

(ನೋಂದಣಿ ಮತ್ತು ಮುದ್ರಾಂಕ).

ಪಿ.ಆರ್.ನಂ. 2039

ಕಂದಾಯ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಸಲು ಅರಣ್ಯ ಜಮೀನನ್ನು ಅರಣ್ಯೇತರ ಜಮೀನೆಂದು ನಿರಾಕ್ಷೇಪಣಾ ಪತ್ರ ನೀಡಲು ಕಾರಣರಾದ ಅಧಿಕಾರಿ/ನೌಕರರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಪ್ರಸ್ತಾವನೆ :

ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ಕುರಿತು ಸ್ಥಳ ತನಿಖೆ ನಡೆಸಿ ವರದಿ ಸಲ್ಲಿಸಲು ಸರ್ವೋಚ್ಚ ನ್ಯಾಯಾಲಯವು ನೇಮಕ ಮಾಡಿದ್ದ ಕೇಂದ್ರೀಯ ಅಧಿಕಾರಸ್ಥ ಸಮಿತಿಯು ಸಲ್ಲಿಸಿದ ವರದಿಯಲ್ಲಿನ ಶಿಫಾರಸ್ಸುಗಳ ಮೇಲೆ ಕ್ರಮ ಕೈಗೊಳ್ಳುವ ಉದ್ದೇಶದಿಂದ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ರಾಮಮಲೈ ಮತ್ತು ಸ್ವಾಮಿಮಲೈ ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸಲು ಪರವಾನಗಿ ನೀಡುವ ಸಲುವಾಗಿ ಅರಣ್ಯ ಜಮೀನನ್ನು ಅರಣ್ಯೇತರ ಜಮೀನೆಂದು ತಪ್ಪಾಗಿ ನಿರಾಕ್ಷೇಪಣಾ (ಎನ್.ಓ.ಸಿ.) ಪತ್ರ ನೀಡಲು ಕಾರಣರಾದ ಅಧಿಕಾರಿ/ನೌಕರರುಗಳನ್ನು ಗುರುತಿಸಿ ವರದಿ ಸಲ್ಲಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಸಿಐ 111 ಎಂಎಂಎಂ 2011 ದಿನಾಂಕ 30–04–2011 ರಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಸಭೆ ನಡೆಸಿ ದಾಖಲೆಗಳನ್ನು ಪರಿಶೀಲಿಸಿ ರಾಮಮಲೈ ಮತ್ತು ಸ್ವಾಮಿಮಲೈ ಅರಣ್ಯ ಪ್ರದೇಶಗಳಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸಲು ಪರವಾನಗಿ ನೀಡಲು ಕಾರಣರಾದ ಕಂದಾಯ ಇಲಾಖೆ, ಅರಣ್ಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳ ಅಧಿಕಾರಿ/ನೌಕರರುಗಳನ್ನು ಗುರುತಿಸಿರುತ್ತದೆ. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿ ಮತ್ತು ನೌಕರರು ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸಲು ಅನುವಾಗುವಂತೆ ಪರವಾನಿಗೆ ನೀಡಲು ಎನ್.ಓ.ಸಿ. ದೃಢೀಕರಣ ಪತ್ರ ಹಾಗೂ ಸರ್ವೆಸ್ಕೆಚ್‌ಗಳನ್ನು ನೀಡಲು ಕಾರಣರಾಗಿರುತ್ತಾರೆ. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ನಷ್ಟ ಉಂಟಾಗಿರುತ್ತದೆ.

ಕ್ರಮ ಸಂಖ್ಯೆ	ಅಧಿಕಾರಿ ಹೆಸರು ಮತ್ತು ಹುದ್ದೆ	ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ
1	ಶ್ರೀ ಎಂ. ಪುಷ್ಪರಾಜ್, ತಹಸೀಲ್ದಾರ್, ಸಂಡೂರು	ವಯೋನಿವೃತ್ತಿ ಹೊಂದಿರುತ್ತಾರೆ
2	ಶ್ರೀ ಸಲ್ಲಾವುದ್ದೀನ್, ತಹಸೀಲ್ದಾರ್, ಸಂಡೂರು	ವಯೋನಿವೃತ್ತಿ ಹೊಂದಿರುತ್ತಾರೆ
3	ಶ್ರೀ ಎಸ್. ವೀರೇಶ್, ಕಂದಾಯ ನಿರೀಕ್ಷಕರು (ಪ್ರಭಾರ)	ಗ್ರಾಮ ಲೆಕ್ಕಿಗರು, ಲಕ್ಷ್ಮೀಪುರ ವೃತ್ತ, ಸಂಡೂರು ತಾಲ್ಲೂಕು
4	ಶ್ರೀ ಎಂ. ಈಶ್ವರಪ್ಪ, ಗ್ರಾಮ ಲೆಕ್ಕಿಗರು	ಗ್ರಾಮ ಲೆಕ್ಕಿಗರು, ಸೋಗಿ ವೃತ್ತ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ
5	ಶ್ರೀ ರಾಮರಾವ್ ಶರಾಫ್, ಸರ್ವೆಯರ್	ವಯೋನಿವೃತ್ತಿ ಹೊಂದಿರುತ್ತಾರೆ
6	ಶ್ರೀ ವಿಜಯಕುಮಾರ್ ಸರ್ವೆಯರ್	ತಾಲ್ಲೂಕು ಕಛೇರಿ, ಸಂಡೂರು

ಈ ಅಧಿಕಾರಿಗಳು/ನೌಕರರುಗಳು ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡು ಸರ್ಕಾರಿ ಸೇವೆಯಲ್ಲಿ ತೀವ್ರತರವಾದ ಕರ್ತವ್ಯ ನಿರ್ಲಕ್ಷತೆ ಹಾಗೂ ದುರ್ನಡತೆ ನಡೆಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಆದುದರಿಂದ ಇವರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವುದು ಅವಶ್ಯಕವೆಂದು ಅಭಿಪ್ರಾಯ ಪಡಲಾಗಿದೆ. ಕ್ರಮ ಸಂಖ್ಯೆ : 1, 2, ಮತ್ತು 5 ರಲ್ಲಿನ ಅಧಿಕಾರಿ/ನೌಕರರು ಈಗಾಗಲೇ ಸೇವೆಯಿಂದ ನಿವೃತ್ತರಾಗಿರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮದ ಬಗ್ಗೆ ಪ್ರತ್ಯೇಕವಾಗಿ ಕ್ರಮ ಜರುಗಿಸಲಾಗುವುದು. ಉಳಿದಂತೆ ಸೇವೆಯಲ್ಲಿರುವ ಕ್ರಮ ಸಂಖ್ಯೆ : 3, 4 ಮತ್ತು 6 ರಲ್ಲಿನ ನೌಕರರುಗಳ ಬಗ್ಗೆ ಶಿಸ್ತಿನ ಕ್ರಮ ಕೈಗೊಳ್ಳಲು ನಿರ್ಧರಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 202 ಭೂದಾಸ 2011, ಬೆಂಗಳೂರು, ದಿನಾಂಕ 11ನೇ ಆಗಸ್ಟ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 10(1)(ಡಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು (1) ಶ್ರೀ ಎಸ್. ವೀರೇಶ್, ಹಾಲಿ ಗ್ರಾಮ ಲೆಕ್ಕಿಗರು, ಲಕ್ಷ್ಮೀಪುರ ವೃತ್ತ, ಸಂಡೂರು ತಾಲ್ಲೂಕು (2) ಶ್ರೀ ಎಂ. ಈಶ್ವರಪ್ಪ, ಗ್ರಾಮ ಲೆಕ್ಕಿಗರು, ಸೋಗಿ ವೃತ್ತ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಮತ್ತು (3) ಶ್ರೀ ವಿಜಯಕುಮಾರ್, ಸರ್ವೆಯರ್, ತಾಲ್ಲೂಕು ಕಛೇರಿ, ಸಂಡೂರು ಇವರುಗಳನ್ನು ಅವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಮೂಲಕ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ (1) ಶ್ರೀ ಎಸ್. ವೀರೇಶ್, ಹಾಲಿ ಗ್ರಾಮ ಲೆಕ್ಕಿಗರು, ಲಕ್ಷ್ಮೀಪುರ ವೃತ್ತ, ಸಂಡೂರು ತಾಲ್ಲೂಕು, (2) ಶ್ರೀ ಎಂ. ಈಶ್ವರಪ್ಪ, ಗ್ರಾಮ ಲೆಕ್ಕಿಗರು, ಸೋಗಿ ವೃತ್ತ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಮತ್ತು (3) ಶ್ರೀ ವಿಜಯಕುಮಾರ್, ಸರ್ವೆಯರ್, ತಾಲ್ಲೂಕು ಕಛೇರಿ, ಸಂಡೂರು ಇವರುಗಳು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98ರ ರನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಈ ನೌಕರರು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಅಶೋಕ್ ಕುಮಾರ್ ಸಿ. ಮನೋಳಿ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,

ಕಂದಾಯ ಇಲಾಖೆ.

ಪಿ.ಆರ್.ನಂ. 2040

ಕಂದಾಯ ಸಚಿವಾಲಯ

ವಿಷಯ : 2011ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಆಗಿರುವ ಹಾನಿಗಳಿಗೆ ತುರ್ತು ಪರಿಹಾರ ಕ್ರಮ ಕೈಗೊಳ್ಳಲು, ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರಿಂದ ಬಂದಿರುವ ಬೇಡಿಕೆ ಪತ್ರ.

ಪ್ರಸ್ತಾವನೆ :

2011ನೇ ಸಾಲಿನಲ್ಲಿ ಮುಂಗಾರು ಮಳೆಯಿಂದ, ಉಡುಪಿ ಜಿಲ್ಲೆಯಲ್ಲಿ ಉಂಟಾಗಿರುವ ಹಾನಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಉಡುಪಿ ಜಿಲ್ಲಾಧಿಕಾರಿಗಳು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮುಂಗಾರು ಮಳೆಯಿಂದ ಉಡುಪಿ ಜಿಲ್ಲೆಯಲ್ಲಿ ಉಂಟಾಗಿರುವ ಹಾನಿಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 190 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ 10ನೇ ಆಗಸ್ಟ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂಗಾರು ಮಳೆಯಿಂದ ಉಡುಪಿ ಜಿಲ್ಲೆಯಲ್ಲಿ ಉಂಟಾಗಿರುವ ಹಾನಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ ಇವರಿಗೆ ರೂ. 50.00 ಲಕ್ಷ (ರೂಪಾಯಿ ಐವತ್ತು ಲಕ್ಷ ಮಾತ್ರ) ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

1) ಮೇಲಿನಂತೆ ಬಿಡುಗಡೆ ಮಾಡಿದ ಹಣವನ್ನು ಈ ಕೆಳಕಂಡಂತೆ ಆದ್ಯತೆಯ ಮೇರೆಗೆ ಉಪಯೋಗಿಸುವುದು.
   (ಅ) ಮಾನವ/ಪ್ರಾಣಿ ಜೀವಹಾನಿ.
   (ಆ) ಮನೆ ಹಾನಿ
   (ಇ) ಬೆಳೆ ಹಾನಿ
   (ಈ) ಕುಡಿಯುವ ನೀರಿನ ವ್ಯವಸ್ಥೆ
   (ಉ) ಜಾನುವಾರುಗಳ ಸಂರಕ್ಷಣೆ
   (ಊ) ಹಾನಿಗೊಳಗಾದ ಮೂಲಭೂತ ಸೌಕರ್ಯಗಳಿಗೆ ತುರ್ತು ರಿಪೇರಿ.
2) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು.
3) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್./ ಎನ್.ಸಿ.ಸಿ.ಎಫ್. ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.
4) ಪ್ರಕೃತಿ ವಿಕೋಪದಿಂದ ಆದಂತಹ ವಿಪತ್ತು ಹಾನಿಗೆ ಮಾತ್ರ ಪರಿಹಾರ ನೀಡುವುದು.
   ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಮೊತ್ತವನ್ನು ವಿಧಾನಸೌಧದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿನ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಎಸ್. ಮದ್ಭಾವಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ.
(ವಿ.ನಿ. ಮತ್ತು ಸೇವೆಗಳು–2).

ಪಿ.ಆರ್.ನಂ. 2041

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಸುರಪುರ ತಾಲ್ಲೂಕು, ಕಲ್ಲದೇವನಹಳ್ಳಿ ಗ್ರಾಮದ ಹತ್ತಿರ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1. ದಿನಾಂಕ 08–02–2011ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವ/ಬಿಜೆಪಿ/ಎಇ–5/2009–10/603.
2. ಸರ್ಕಾರದ ಆದೇಶ ಸಂಖ್ಯೆ : ಸನೀಇ 29 ನಯೋಕಾ 2005, ದಿನಾಂಕ 02.12.2005.

ಪ್ರಸ್ತಾವನೆ :

ಮೇಲ್ಕಂಡ ಕಾಮಗಾರಿಯ ರೂ. 83.00 ಲಕ್ಷ ಮೊತ್ತದ ಮೂಲ ಅಂದಾಜಿಗೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯ ಅನುಷ್ಠಾನಕ್ಕಾಗಿ 2006–07ನೇ ಸಾಲಿನಲ್ಲಿ ಟೆಂಡರ್ ಆಧಾರದ ಮೇಲೆ ಗುತ್ತಿಗೆ ಕರಾರನ್ನು ಮಾಡಿಕೊಂಡು ಗುತ್ತಿಗೆದಾರರಿಗೆ ವಹಿಸಲಾಗಿತ್ತು. ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದುದರಿಂದಾಗಿ ಇವರ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಆಧಾರದ ಮೇಲೆ ರದ್ದುಗೊಳಿಸಲಾಗಿರುತ್ತದೆ.

ನಂತರ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕರೆಯಲಾದ ಮರು ಟೆಂಡರ್ ಮೂಲಕ ಭೂ ಸ್ವಾಧೀನ ಇತ್ಯಾದಿ ಅಂಶಗಳನ್ನು ಹೊರತುಪಡಿಸಿ 2007–08ನೇ ಸಾಲಿನ ದರಪಟ್ಟಿಯ ದರಗಳ ಮೇಲೆ ಶೇ. 5.00 ರಷ್ಟು ಹೆಚ್ಚುವರಿ ಟೆಂಡರ್ ಪ್ರೀಮಿಯಮ್‌ನೊಂದಿಗೆ

ರೂ.1,24,31,045/– ಮೊತ್ತಕ್ಕೆ ಗುತ್ತಿಗೆದಾರರಿಗೆ ವಹಿಸಲಾಯಿತು. ಅದರಂತೆ ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ. ಕಾಮಗಾರಿಯ ಒಟ್ಟು ಮೊತ್ತ ರೂ. 1,20,10,585/– ಆಗಿರುತ್ತದೆ. ಕಾಮಗಾರಿಯಲ್ಲಿ ಉಂಟಾದ ಹೆಚ್ಚಳವು ಬಹುತೇಕ ದರಪಟ್ಟಿಯ ದರಗಳ ಪರಿಷ್ಕರಣೆ ಹಾಗೂ ಟೆಂಡರ್ ಪ್ರೀಮಿಯಮ್‌ನಿಂದ ಆಗಿರುತ್ತದೆ. ಅದರಂತೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ರೂ. 120.106 ಲಕ್ಷಗಳಿಗೆ ತಯಾರಿಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಅಪಿಬಂ (ತಾಂತ್ರಿಕ) 2011 ಬೆಂಗಳೂರು, ದಿನಾಂಕ: 11ನೇ ಆಗಸ್ಟ್ 2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆ, ಸುರಪುರ ತಾಲ್ಲೂಕು, ಕಲ್ಲದೇವನಹಳ್ಳಿ ಗ್ರಾಮದ ಹತ್ತಿರ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ. 120.106 ಲಕ್ಷ (ರೂ. ಒಂದು ನೂರ ಇಪ್ಪತ್ತು ಲಕ್ಷ ಹತ್ತು ಸಾವಿರ ಮಾತ್ರ) ಮೊತ್ತದ ಪರಿಷ್ಕೃತ ಅಂದಾಜು ಪಟ್ಟಿಗೆ ಮೂಲ ಗುತ್ತಿಗೆದಾರರಿಂದ ನಿಯಮಾನುಸಾರ ಕಾಮಗಾರಿಯಲ್ಲಿ ಉಂಟಾಗಿರುವ ಹೆಚ್ಚುವರಿ ವೆಚ್ಚವನ್ನು ವಸೂಲು ಮಾಡಲು ಕ್ರಮ ಕೈಗೊಳ್ಳುವ ಷರತ್ತಿಗೆ ಒಳಪಡಿಸಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಲೋ.ಇ. 479 ಆಕೋ–1/11 ದಿನಾಂಕ 22–07–2011 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,

ಪಿ.ಆರ್.ನಂ. 2042

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

WATER RESOURCES SECRETARIAT

Sub :- According Administrative Approval to the Minor Irrigation Projects under Accelerated Irrigation Benefit Programme-Regarding.

Read:- Letter No. CE/MI (N) Zone/BJP/AIBP/PB-3/2011-12/3864/dt. 19.07.2011 from the Chief Engineer, Minor Irrigation North Zone, Bijapur.

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category states are eligble for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category states. 81 taluks in the State are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such Schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following schemes in DPAP taluks are being considered for according administrative approval.

Head of Account: 4702-00-101-1-10-139 AIBP Major Works

Sl. No.	Name of Project	District	Taluk	Estimated Cost	Potential planned (in Ha.)	Cost per Ha. (Rs. In Lakhs)
1	Construction of Bridge cum Barrage across Markandeya river near Kallahole in Belgaum Taluk, Belgam Dist.	Belgaum	Belgaum	90.00	55	1.64
2	Constuction of Bridge cum Barrage in between Umachagiand Yaraguppa Village.	Dharwad	Hubli	160.00	81	1.98
3	Construction of Bridge cum Barrage across Yarnahalla near Koliwad-Bhadrapur Road.	Dharwad	Hubli	139.00	79	1.76
4	Construction of Bandhara across Local nala near Timmasagar Village.	Dharwad	Hubli	65.00	59	1.1
			TOTAL	**454.00**		

Government Order No. SANEEYEE 12 MASAVI 2011 (19) (tech) Bangalore, dated: 11.08.2011

In view of the above, Administrative approval is hereby accorded for taking up the above works with an estimated cost totaling to Rs. 454.00 lakhs (Rupees four hundred and fifty four lakhs only) subject to the following conditions

1. Implementation of these projects should be taken up only after receipt of necessary approval from the GOI.
2. The projects are to be completed within a period of 2 years after receipt of approval of Government of India to these schemes.

3. The funding of the scheme is in the ratio of 90:10 between the Central Govt and State Govt.
4. The Central Share is in the form of grant to the state.
5. The projects will be implemented by the Water Resoures Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs
8. Water users association shall be formed for post construction maintenance and the scheme shall be handed over to the same after its construction for the O&M.

This Order is issued with the concurrence of Finace Department in note No. PWD-890-FC-1/2009 dated 09.12.2009.

By Order and in the name of the Governor of Karnataka

P.R. 2043

Rudramurthy

Ex Officio Under Secretary to Government

Water Resources Department (Minor Irrigation)

WATER RESOURCES SECRETARIAT

Sub :- According Administrative Approval to the Minor Irrigation Projects under Accelerated Irrigation Benefit Programme-Regarding

Read:- Letter No. CEMI(S)/ TA-2/ AE-2/AIBP/ 2010-11/ 2538/, dt.04.07.2011. from the Chief Engineer, Minor Irrigation South Zone, Bangalore

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category states are eligble for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category states. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Government of Karnataka has identified new Minor Irrigation Schemes in these taluks to seeking Government of India approval under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such Schemes. The Chief Engineer, Minor Irrigation South Zone, in the letter read above has requested for according administrative approval to the estimates of the works proposed under AIBP. Accordingly the following schemes in DPAP taluks is being considered for according administrative approval.

Head of Account: 4702-00-101-1-10-139 AIBP Major Works

Sl. No.	Name of Project	District	Taluk	Estimated Cost	Potential planned in Ha.	Cost per Ha. Rs. In Lakhs
1	Construction of Tanagali Anicut channel (Uttara nala)	Chickmagalur	Kadur	235.00	160.00	1.47
2	Constuction of Causeway cum check dam across halla near Lakkanahalli village	Tumkur	Sira	112.00	65.00	1.72
3	Construction of Causeway cum check dam across halla near Sira Kasaba survey no. 154,155 and 174	Tumkur	Sira	72.00	55.00	1.31
	TOTAL			**419.00**		

Government Order No. SANEEYEE 12 MASAVI (Tech) 2011(13), Bangalore, dated: 11.08.2011

In view of the above the Administrative approval is hereby accorded for taking up the above works with an estimated cost totaling to Rs. 419.00 lakhs (Rupees four hundred and ninteen lakhs only) subject to the following conditions

1. Implementation of these projects should be taken up only after receipt of necessary approval from the GOI.
2. The projects are to be completed within a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central Share is in the form of grant to the state.
5. The projects will be implemented by the Water Resoures Department (Minor Irrigation) as per the KTPP act.

6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs
8. Water users association shall be formed for post construction maintenance and the scheme shall be handed over to the same after its construction for the O&M.

This Order is issued with the concurrence of Finace Department in their note No. PWD-890-FC-1/2009 dated 09.12.2009.

By Order and in the name of the Governor of Karnataka

P.R. 2044

RUDRA MURTHY

Ex Officio Under Secretary to Government

Water Resources Department (Minor Irrigation)

WATER RESOURCES SECRETARIAT

Sub :- According Administrative Approval to the Minor Irrigation Projects under Accelerated Irrigation Benefit Programme-Regarding

Read:- Letter No. CEMI(S)/ TA-2/ AE-2/AIBP/ 2010-11/2538/, dt.04.07.2011. from the Chief Engineer, Minor Irrigation South Zone, Bangalore

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category states are eligble for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category states. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the from of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Government of Karnataka has identified the Minor Irrigation Schemes in these taluks for seeking Government of India approval under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation South Zone in the letter read above has requested for according administrative approval to the estimate of the works proposed under AIBP. Accordingly the following schemes in DPAP taluk is being considered for according administrative approval.

Head of Account: 4702-00-101-1-10-139 AIBP Major Works

Sl. No.	Name of the Project	District	Taluk	Estimated Cost	Potential planned (in Ha.)	Cost per Ha. (Rs. In Lakhs)
1	Construction of Causeway cum check dam across Kallambella tank feeder halla near Hunjinalu village	Tumkur	Sira	95.00	60.00	1.58
2	Construction of Percolation tank near Muttugadur	Chitradurga	Holalkere	90.00	105.00	0.86
3	Construction of Bridge Cum Barrage near Dibbadahalli	Davanagere	Jagalur	200.00	105.00	1.90
				385.00		

Government Order No. SANEEYEE 12 MASAVI (Tech) 2011(14) Bangalore, dated: 11.08.2011

In view of the above, Administrative approval is hereby accorded for taking up the above works with an estimated cost totaling to Rs. 385.00 lakhs (Rupees Three hundred and eighty five lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed within a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central Share is in the form of grant to the state.
5. The projects will be implemented by the Water Resoures Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs

8. Water users association shall be formed for post construction maintenance and the scheme shall be handed over to the same after its construction for the O&M.

This Order is issued with the concurrence of Finace Department in their note No. PWD-890-FC-1/2009 dated 09.12.2009.

By Order and in the name of Governor of Karnataka

P.R. 2045

Rudramurthy

Ex Officio Under Secretary to Government

Water Resources Department (Minor Irrigation)

WATER RESOURCES SECRETARIAT

Sub :- According Administrative Approval to the Minor Irrigation Projects under Accelerated Irrigation Benefit Programme-Regarding.

Read:- Letter No. CEMI(S)/ TA-2/ AE-2/AIBP/ 2010-11/2538/, dt.04.07.2011. from the Chief Engineer, Minor Irrigation South Zone, Bangalore.

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category states are eligble for inclusion under Accelerated Irrigation Benefit Programme (AIBP) effective form December 2006. Karnataka State is classified as one of the non-special category states. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Government of Karnataka has identified new Minor Irrigation Schemes in these taluks to seeking Government of India approval under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation South Zone in the letter read above has requested for according administrative approval to the estimate of the works proposed under AIBP. Accordingly the following schemes in DPAP taluk is being considered for according administrative approval.

Head of Account: 4702-00-101-1-10-139 AIBP Major Works

Sl. No.	**Name of the Project**	**District**	**Taluk**	**Estimated Cost**	**Potential planned in Ha.**	**Cost per Ha. Rs. In Lakhs**
1	Construction of barrage across halla near Melekote village	Tumkur	Sira	528.00	285.00	1.85
				528.00		

Government Order No. SANEEYEE 12 MASAVI (Tech) 2011(14) Bangalore, dated: 11.08.2011

In view of the above, Administrative approval is hereby accorded for taking up the above work with an estimated cost totaling to Rs.528.00 lakhs (Rupees five hundred and twenty eight lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed within a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central Share is in the form of grant to the state.
5. The projects will be implemented by the Water Resoures Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs
8. Water users association shall be formed for post construction maintenance and the scheme shall be handed over to the same after its construction for the O&M.

This Order is issued with the concurrence of Finance Department in their note No. PWD-890-FC-1/2009 dated 09.12.2009.

By Order and in the name of Governor of Karnataka

P.R. 2046

Rudramurthy

Ex Officio Under Secretary to Government

Water Resources Department (Minor Irrigation)

WATER RESOURCES SECRETARIAT

Sub :- According Administrative Approval to the Minor Irrigation Projects under Accelerated Irrigation Benefit Programme-Regarding.

Read:- Letter No. CEMI(S)/ TA-2/ AE-2/AIBP/ 2010-11/ 2538/, dt.04.07.2011. from the Chief Engineer, Minor Irrigation South Zone, Bangalore .

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category states are eligble for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category states. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Government of Karnataka has identified new Minor Irrigation Schemes in these taluks for seeking Government of India approval under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation South Zone in the letter read above has requested for according administrative approval to the estimate of the works proposed under AIBP. Accordingly the following scheme in DPAP taluk is being considered for according administrative approval.

Head of Account: 4702-00-101-1-10-139 AIBP Major Works

Sl. No.	Name of the Project	District	Taluk	Estimated Cost	Potential planned in Ha.	Cost per Ha. Rs. In Lakhs
1	Construction of barrage across chinnahagari halla near chikumti village	Chitradurga	Molakalmur	415.00	215.00	1.93
2	Construction of Percolation tank near Tumbadihalli	Davanagere	Jagalur	83.56	50.00	1.67
				498.56		

Government Order No. SANEEYEE 12 MASAVI (Tech) 2011(6) Bangalore, dated: 11.08.2011

In view of the above, the Administrative approval is hereby accorded for taking up the above works with an estimated cost totaling to Rs. 498.56. lakhs (Rupees four Hundred ninty eight and fifty six thousand only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central Share is in the form of grant to the state.
5. The projects will be implemented by the Water Resoures Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs
8. Water users association shall be formed for post construction maintenance and the scheme shall be handed over to the same after its construction for the O&M.

This Order is issued with the concurrence of Finace Department in their note No.PWD-890-FC-1/2009 dated 09.12.2009.

By Order and in the name of Governor of Karnataka

P.R. 2047

Rudramurthy
Ex Officio Under Secretary to Government
Water Resources Department (Minor Irrigation)

WATER RESOURCES SECRETARIAT

Sub : According Administrative Approval to the Minor Irrigation Projects under Accelerated Irrigation Benefit Programme-Regarding.

Read : Letter No. CEMI(S)/ TA-2/ AE-2/AIBP/ 2010-11/ 2538/. Date 04-07-2011, from the Chief Engineer, Minor Irrigation Sourth Zone, Bangalore.

Preamble:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category states are eligible for inclusion under Accelerated Irrigation Benefit Programme (AIBP) effective from December 2006, Karnataka State is classified as one of the non-special category states. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation. Benefit Programme (AIBP). Central Assistance will be in the form of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Government of Karnataka has identified new Minor Irrigation Schemes in these taluks for seeking Government of India approval under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation South Zone in the letter read above has requested for according administrative approval to the estimate of the works proposed under AIBP. Accordingly the following scheme in DPAP taluk is being considered for according administrative approval.

Head of Account: 4702-00-101-1-10-139 AIBP Major Works

Sl. No.	Name of project	District	Taluka	Estimated cost	Potential planned (in Ha.)	Cost per Ha. (Rs. In Lakhs)
1	2	4	5	8	17	23
1	Construction of barrage across halla near Yeliyur village	Tumkur	Sira	420.00	230.00	1.83
2	Construction of Causeway cum check dam across halla near Veerapura village	Tumkur	Sira	70.00	60.00	1.17
				490.00		

Government Order No. SANEEYEE 12 MASAVI (Tech) 2011 (5) Bangalore, Dated 11th August 2011

In view of the above, the Administrative approval is hereby accorded for taking up the above works with an estimated cost totaling to Rs. 490.00 lakhs (Rupees Four hundred and ninty lakhs only) subject to the following conditions.

1. Implementation of these projects should be taken-up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Government and State Government.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This order is issued with the concurrence of Finance Department in their note No. PWD-890-FC-1/2009 dated 09-12-2009.

By order and in the name of the Governor of Karnataka,

RUDRAMURTHY

Ex officio Under Secretary to Government

P.R.2048 Water Resources Department (Minor Irrigation)

WATER RESOURCES SECRETARIAT

Sub : According Administrative Approval to the Minor Irrigation Projects under Accelerated Irrigation Benefit Programme-Regarding.

Read : Letter No. CE/MI (N) Zone/BJP/AIBP/PB-3/2011-12/3864/ Date 19-07-2011, from the Chief Engineer, Minor Irrigation North Zone, Bijapur.

Preamble:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category states are eligible for inclusion under Accelerated Irrigation Benefit Programme (AIBP) effective from December 2006, Karnataka state is classified as one of the non-special category states. 81 taluks in the state are approved under Drought prone Area Programme (DPAP). Hence Minor Irrigation

schemes with potential more than 50 hectares in these 81 taluks are eligible for inclusion under Accelerated Irrigation. Benefit Programme (AIBP). Central Assistance will be in the form of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Government of Karnataka has identified new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone Bijapur in the letter read above has requested for according administrative approval to the estimate of the works proposed under AIBP. Accordingly the following scheme in DPAP taluk are being considered for according administrative approval.

Head of Account: 4702-00-101-1-10-139 AIBP Major Works

Sl.No.	Name of the project	District	Taluka	Estimated cost	Potential planned in Ha.	Cost per Ha. Rs. In Lakhs
1	Construction of Barrage across local nala near Ganganhatti village	Belgaum	Bailhongal	50.00	57	0.87
2	Construction of Barrage across local nala near Tegur village	Belgaum	Bailhongal	45.00	56	0.8
3	Construction of Barrage across local nala near Galaginamada village	Belgaum	Bailhongal	50.00	56	0.89
4	Construction of Barrage across local nala near Kadorali village	Belgaum	Bailhongal	50.00	53	0.94
5	Construction of Barrage across local nala near Sampgaon village	Belgaum	Bailhongal	80.00	68	1.17
6	Construction of Barrage across local nala near Mallapur village	Belgaum	Bailhongal	65.00	63	1.03
7	Construction of Bridge cum Barrage across Markandeya river near Rakkasakoppa	Belgaum	Bailhongal	100.00	55	1.82
			Total	**440.00**		

Government Order No. SANEEYEE 12 MASAVI 2011 (16) (tech) Bangalore, Dated 11th August 2011

In view of the above, the Administrative approval is hereby accorded for taking up the above works with an estimated cost totaling to Rs. 440.00 lakhs (Rupees Four hundred and fourty lakhs only) subject to the following conditions.

1. Implementation of these projects should be taken-up only after receipt of necessary approval from the GOI.
2. The projects are to be completed within a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Government and State Government.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This order is issued with the concurrence of Finance Department in note No. PWD-890-FC-1/2009 dated 09-12-2009.

By Order and in the name of the Governor of Karnataka,

RUDRAMURTHY

Ex officio Under Secretary to Government

Water Resources Department (Minor Irrigation)

P.R.2049

WATER RESOURCES SECRETARIAT

Sub : According Administrative Approval to the Minor Irrigation Projects under Accelerated Irrigation Benefit Programme-Regarding.

Read : Letter No. CE/MI (N) Zone/BJP/AIBP/PB-3/2011-12/3864/ Date 19-07-2011, from the Chief Engineer, Minor Irrigation North Zone, Bijapur.

Preamble:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category states are eligible for inclusion under Accelerated Irrigation Benefit Programme (AIBP) effective from December 2006, Karnataka state is classified as one of the non-special category states. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation. Benefit Programme (AIBP). Central Assistance will be in the form of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone Bijapur in the letter read above has requested for according administrative approval to the estimates of the works proposed under AIBP. Accordingly the following schemes in DPAP taluk are being considered for according administrative approval.

Head of Account: 4702-00-101-1-10-139 AIBP Major Works

Sl. No.	Name of the project	District	Taluk	Estimated cost	Potential planned (in Ha.)	Cost per Ha.(Rs. In Lakhs)
1	Construction of Bridge Cum Barrage across Nalla near Dori-Kogilgeri Road	Dharwad	Dharwad	152.00	81	1.88
2	Construction of Barrage across local Nalla near Aravatagi (Site No. 2) village	Dharwad	Dharwad	95.00	76	1.25
3	Construction of Bandhara across local Nalla near Kotur village	Dharwad	Dharwad	45.00	50	0.9
4	Construction of Barrage across Tuppari Nalla near Agasanalli village	Dharwad	Dharwad	155.50	86	1.72
			Total	**447.50**		

Government Order No. SANEEYEE 12 MASAVI 2011 (22) (tech) Bangalore, Dated 11th August 2011

In view of the above, Administrative approval is hereby accorded for taking up the above works with an estimated cost totaling to Rs. 447.50 lakhs (Rupees Four hundred and fourty Seven lakhs fifty thousand only) subject to the following conditions.

1. Implementation of these projects should be taken-up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Government and State Government.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This order is issued with the concurrence of Finance Department in their note No. PWD-890-FC-1/2009 dated 09-12-2009.

By Order and in the name of the Governor of Karnataka,

RUDRAMURTHY

Ex-officio Under Secretary to Government

P.R.2050

Water Resources Department (Minor Irrigation)